ವಿಶ್ವವಾಣಿ
ವಿಶ್ವಾಸವೇ ವಿಶ್ವ

ವಿಶ್ವ ಅಥ್ಲೆಟಿಕ್ಸ್ ನೀರಜ್ ಸಾರಥ್ಯ

ಸೆಪ್ಟೆಂಬರ್ 13ರಿಂದ 21ರ ವರೆಗೆ ಟೋಕಿಯೋದಲ್ಲಿ ನಡೆಯಲಿರುವ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್ ಶಿಪ್‌ನಲ್ಲಿ ಭಾರತದ ಜಾವೆಲಿನ್ ಎಸೆತಗಾರ ನೀರಜ್ ಚೋಪ್ರಾ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ಸೊಂಪಾದ ಪುಟಗಳು

ಎಲ್ಲದಕ್ಕೂ ಸಿಬಿಐ ತನಿಖೆಯೊಂದೇ ಪರಿಹಾರವೇ?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ಇದು ಜಾಗತಿಕ ಯಜಮಾನಿಕೆ ಬದಲಾಗುವ ಸಮಯ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ನಾವು ಈಗಿರುವುದಕ್ಕಿಂತ ಇನ್ನೂ ಉತ್ತಮವಾಗಬೇಕು ಎಂದು ನಿರ್ಧರಿಸಿ, ಆ ದಿಸೆಯಲ್ಲಿ ಕಾರ್ಯೋನ್ಮುಖರಾಗುತ್ತಿದ್ದಂತೆ, ನಮ್ಮ ಸುತ್ತಮುತ್ತಲು ಇರುವುದೆಲ್ಲ ಉತ್ತಮವಾಗಿಯೇ ಕಾಣಲಾರಂಭಿಸುತ್ತದೆ.

ವಕ್ರತುಂಡೋಕ್ತಿ

ಯಾವ ಊರಿನ ಜನ ಗುಂಡಿ ಬಿದ್ದ ರಸ್ತೆಯನ್ನು ನೋಡಿಯೂ ಪ್ರತಿಭಟಿಸದೇ ಇರುತ್ತಾರೋ, ಅವರನ್ನು ಸಹಿಷ್ಣುಗಳು ಎಂದು ಕರೆಯಬಹುದು.

ರಾಜ್ಯದಲ್ಲಿ ಸದ್ಯಕ್ಕೆ ಮಳೆ ಅಬ್ಬರ ನಿಲ್ಲದು

ಬೆಂಗಳೂರು: ರಾಜ್ಯದಲ್ಲಿ ವಾರಾಂತ್ಯದವರೆಗೂ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದ ಕಾರಣ ರಾಜ್ಯದಲ್ಲಿ ಮಳೆ ಪ್ರಮಾಣ ಹೆಚ್ಚಾಗಲಿದೆ. ಕರಾವಳಿ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ವ್ಯಾಪಕ ಮಳೆಯಾಗಲಿದೆ ಎಂದು'ು ಹವಾಮಾನ ಇಲಾಖೆಯ ಬೆಂಗಳೂರು ಕೇಂದ್ರದ ನಿರ್ದೇಶಕ ಸಿ.ಎಸ್.ಪಾಟೀಲ್ ತಿಳಿಸಿದ್ದಾರೆ.

ವಾಣಿಜ್ಯ ಸಿಲಿಂಡರ್ ಬೆಲೆ 51 ರೂ. ಇಳಿಕೆ

ದೆಹಲಿ: ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ (19 ಕೆಜಿ) ದರ ಸೋಮವಾರ 51.50 ರೂ. (ದೆಹಲಿ) ಇಳಿಕೆಯಾಗಿದೆ. ಬೆಂಗಳೂರಿನಲ್ಲಿ 51 ರೂ. ಬೆಲೆ ಇಳಿದಿದೆ. ರಾಜ್ಯ ರಾಜಧಾನಿಯಲ್ಲಿ ಇದುವರೆಗೆ 1653 ರೂ. ಇದ್ದ ಬೆಲೆ ಸೋಮವಾರದಿಂದಲೇ 1602 ರೂ.ಗೆ ಬದಲಾಗಿದೆ. ಇನ್ನು ಗೃಹಬಳಕೆ ಅನಿಲ ಸಿಲಿಂಡರ್‌ಗಳ ಬೆಲೆಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಪಿಡಿಒ ವರ್ಗ ಪ್ರಕ್ರಿಯೆ

ಬೆಂಗಳೂರು: ಒಂದೇ ಸ್ಥಳದಲ್ಲಿ 5 ವರ್ಷಕ್ಕಿಂತ ಹೆಚ್ಚು ವರ್ಷ ಸೇವೆ ಸಲ್ಲಿಸಿದ ಎಲ್ಲಾ ಪಿಡಿಒಗಳನ್ನು ಕೌನ್ಸೆಲಿಂಗ್ ಮೂಲಕ ವರ್ಗಾಯಿಸುವ ಪ್ರಕ್ರಿಯೆ ಆರಂಭ ಆಗಿದೆ. ಸೆ.10 ರಿಂದ ಸೆ.20ರ ವರೆಗೆ ಕಡ್ಡಾಯ ವರ್ಗ ಹಾಗೂ 23,24ರಂದು ಸಾಮಾನ್ಯ ಕೋರಿಕೆ ವರ್ಗ ಕೌನ್ಸೆಲಿಂಗ್ ನಡೆಯಲಿವೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಮತಗಳ್ಳತನದ 'ಹೈಡ್ರೋಜನ್ ಬಾಂಬ್' ಹೊರತರುತ್ತೇವೆ – ಕೈ ನಾಯಕನ ಹೇಳಿಕೆ



ಭಾನುವಾರ ತಡರಾತ್ರಿ ಆಫ್ಘನ್ ಪೂರ್ವಭಾಗಕ್ಕೆ ಕಂಪನದ ಹೊಡೆತ

ಜಲಬಾದ್, ನೂರ್ ಗುಲ್, ಸೋಕಿ, ವತ್ಪುರ ಜಿಲ್ಲೆಗಳಲ್ಲಿ ಭಾರೀ ಹಾನಿ

ಆಫ್ಘನ್ ಗಡಿಭಾಗ ಪಾಕಿಸ್ತಾನದ ಖೈಬರ್ ಫಖ್ತುಂಖ್ವದಲ್ಲೂ ನಡುಕ

2500ಕ್ಕೂ ಹೆಚ್ಚು ಮಂದಿಗೆ ಗಾಯ, 7 ಜಿಲ್ಲೆಗಳಲ್ಲಿ ಭಾರೀ ಹಾನಿ

ಆಫ್ಘನ್ ಭೂಕಂಪಕ್ಕೆ 800 ಬಲಿ

ಆಫ್ಘನ್ ಪೂರ್ವ ಭಾಗದ ಜಲಾಬಾದ್‌ನಲ್ಲಿ ಭೂಕಂಪದಲ್ಲಿ ಕುಸಿದು ಬಿದ್ದ ಅವಶೇಷ.

ಕಾಬೂಲ್: ಅಫ್ಘಾನಿಸ್ತಾನದಲ್ಲಿ ಭಾನುವಾರ ತಡರಾತ್ರಿ ಸಂಭವಿ ಸಿದ ಭಾರೀ ಭೂಕಂಪದಲ್ಲಿ 800ಕ್ಕೂ ಅಧಿಕ ಮಂದಿ ಮೃತ ಪಟ್ಟಿದ್ದಾರೆ. 2500ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಆಫ್ಘನ್ ಪೂರ್ವ ಭಾಗದಲ್ಲಿರುವ ನಂಗಾರ್ಹಾರ್ ಪ್ರಾಂತ್ಯದ ಜಲಾಬಾದ್‌ಗೆ 27 ಕಿ.ಮೀ. ದೂರದಲ್ಲಿ ಭೂಕಂಪ ಸಂಭವಿಸಿದೆ. ಪಾಕಿಸ್ತಾನ ಕೆಲಭಾಗ ಮತ್ತು ಉತ್ತರ ಭಾರತದ ಕೆಲವೆಡೆ ಕಂಪನದ ಅನುಭವವಾಗಿದೆ.

ಬಹುತೇಕ ಸಾವುಗಳು ಕುನಾರ್, ನಂಗಾರ್ಹಾರ್ ಪ್ರಾಂತ್ಯಗಳಲ್ಲಾಗಿದೆ ಎಂದು ಅಫ್ಘಾನಿಸ್ತಾನದ ವಾರ್ತಾ ಇಲಾಖೆ ತಿಳಿಸಿದೆ. ನೂರ್ ಗುಲ್, ಸೋಕಿ, ವತ್ಪುರ, ಮನೋಗಿ, ಚಪಾದಾರೆ ಜಿಲ್ಲೆಗಳಲ್ಲಿ ತೀವ್ರ ಕಂಪನವಾಗಿದೆ. 2 ಲಕ್ಷ ಜನಸಂಖ್ಯೆಯಿರುವ ಜಲಾಬಾದ್ ಸನಿಹ ತೀವ್ರ ಹಾನಿ ಸಂಭವಿಸಿ, ಜನರು ಕಂಗಲಾಗಿದ್ದಾರೆ. ಸಾವು ಸಂಭವಿಸಿರುವ ಪ್ರದೇಶಕ್ಕೆ ತಲುಪುವುದು ಭಾರೀ ಕಷ್ಟದ ಸ್ಥಿತಿಯಿರುವುದರಿಂದ ಸಹಾಯಕ ಸಿಬ್ಬಂದಿ ಸ್ಥಳದಲ್ಲೇ ಇದ್ದು ಕಟ್ಟೆಚ್ಚರ ವಹಿಸಿದ್ದಾರೆ.

ಕಲ್ಲಿನ ಮನೆಗಳನ್ನು ಮುಚ್ಚಿದೆ ಮಣ್ಣಿನ ರಾಶಿ: ಭೂಮಿ ದೊಡ್ಡ ಪ್ರಮಾಣದಲ್ಲಿ ಬಾಯ್ಬಿಟ್ಟಿರುವುದರಿಂದ ಕಲ್ಲು, ಮಣ್ಣಿನಿಂದ ನಿರ್ಮಾಣಗೊಂಡಿರುವ ಮನೆಗಳು ನೆಲಸಮಗೊಂಡಿವೆ. ಅವುಗಳ ಮೇಲೆ ಮಣ್ಣು ಮುಚ್ಚಿಕೊಂಡಿದೆ. ಹಲವು ಕಡೆ ಭೂಮಿಯಲ್ಲಿ ಭಾರೀ ಬಿರುಕು ಸಂಭವಿಸಿರುವುದರಿಂದ ತೀವ್ರ ಭಯದ ವಾತಾವರಣ ಕಂಡುಬಂದಿದೆ.

ನೆರವಿಗೆ ಸಿದ್ಧ: ಮೋದಿ

ಭೂಕಂಪದಿಂದ ಹಾನಿಗೊಳಗಾಗಿರುವ ಆಫ್ಘನ್‌ಗೆ ನೆರವು ನೀಡಲು ಸಿದ್ಧ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಟ್ವೀಟ್ ಮಾಡಿರುವ ಅವರು, ಆಫ್ಘನ್‌ನಲ್ಲಿ ಸಂಭವಿಸಿರುವ ಭೂಕಂಪನದಿಂ ಆಗಿರುವ ಸಾವು ನೋವುಗಳನ್ನು ಕೇಳಿ ತೀವ್ರ ದುಃಖಕ್ಕೊಳಗಾಗಿದ್ದೇನೆ. ಭಾರತ ಆಫ್ಘನ್‌ಗೆ ಎಲ್ಲ ರೀತಿಯ ನೆರವು ನೀಡಲು ಸಿದ್ಧ ಎಂದು ಮೋದಿ ಹೇಳಿದ್ದಾರೆ. ವಿದೇಶಾಂಗ ಸಚಿವ ಎಸ್.ಜೈಶಂಕರ್ ಕೂಡ ಪ್ರತಿಕ್ರಿಯಿಸಿ, ಭಾರತ ಅಗತ್ಯ ನೆರವು ನೀಡಲಿದೆ ಎಂದಿದ್ದಾರೆ.

ಭೂಕಂಪಕ್ಕೆ ಕಾರಣ?

ಭಾರತ ಮತ್ತು ಯುರೇಷ್ಯಾದ (ಯೂರೋಪ್-ಏಷ್ಯಾ ಖಂಡಗಳು ಸಂಧಿಸುವ ಭಾಗಗಳು) ಭೂಭಾಗಗಳು ಸಂಧಿಸುವ ಜಾಗದ ಮೇಲ್ಭಾಗದಲ್ಲಿ ಆಫ್ಘನ್ ಇದೆ. ಇದು ಬಹುತೇಕ ಬೆಟ್ಟ, ಗುಡ್ಡಗಳು ತುಂಬಿಕೊಂಡಿರುವ ಬಯಲು ಪ್ರದೇಶ. ಸಹಜ ಭೌಗೋಳಿಕ ಚಲನೆ ಪ್ರಕಾರ ಭಾರತ ಪ್ರತಿ ವರ್ಷ 44 ಎಂಎಂನಷ್ಟು ಯುರೇಷ್ಯಾ ಕಡೆ ಚಲಿಸುತ್ತಿದೆ. ಇಂತಹ ಕಡೆಯೇ ಆಫ್ಘನ್ ಇದೆ. ಇಲ್ಲಿ ಸಹಜವಾಗಿ ಕಂಪನಗಳು ಸಂಭವಿಸುತ್ತವೆ. ವಿಶ್ವದ ಎಲ್ಲೆಡೆ ಸಂಭವಿಸುವ ಕಂಪನಗಳಲ್ಲಿ ಶೇ.15ರಷ್ಟು ಇಲ್ಲೇ ಆಗುತ್ತದೆ ಎಂದು ಬ್ರಿಟನ್ ಭೌಗೋಳಿಕ ವಿಜ್ಞಾನಿ ಬ್ರಿಯಾನ್ ಬ್ಯಾಪ್ಟಿ ಹೇಳಿದ್ದಾರೆ.

ಧರ್ಮಸ್ಥಳ ವಿರುದ್ಧ ವಿದೇಶಿ ಷಡ್ಯಂತ್ರ: ಬಿಜೆಪಿ ಆರೋಪ | ಕೇಸರಿ ಪಡೆ ಬೃಹತ್ ಸಮಾವೇಶ

ಎನ್‌ಐಎ ತನಿಖೆಗೆ ಪಟ್ಟು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಧರ್ಮಸ್ಥಳ ವಿರುದ್ಧದ ಅಪಪ್ರಚಾರ ಖಂಡಿಸಿ ನಡೆಸಿದ ಧರ್ಮ ರಕ್ಷಣಾ ಸಮಾವೇಶದಲ್ಲಿ ಬಿಜೆಪಿ ನಾಯಕರು ರಾಜ್ಯ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಷಡ್ಯಂತ್ರದ ಪ್ರಕರಣವನ್ನು ಎನ್‌ಐಎ ಇಲ್ಲವೇ ಸಿಬಿಐ ತನಿಖೆಗೆ ವಹಿಸಬೇಕೆಂದು ಆಗ್ರಹಿಸಿದರು.

ಧರ್ಮಸ್ಥಳ ಯಾತ್ರೆ

ಮಂಜುನಾಥಸ್ವಾಮಿ ಸನ್ನಿಧಿಗೆ ಹೊಂದಿಕೊಂಡಿರುವ ಮೈದಾನದಲ್ಲಿ ನಡೆದ ಧರ್ಮಸ್ಥಳ ಅಭಿಯಾನಕ್ಕೆ ನಿರೀಕ್ಷೆಗೂ ಮೀರಿದ ಸ್ಪಂದನೆ ವ್ಯಕ್ತವಾಯಿತು. ಮೊದಲಿಗೆ ದೇಗುಲಕ್ಕೆ ಭೇಟಿ ನೀಡಿದ ಮುಖಂಡರು, ನಂತರ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರನ್ನು ಭೇಟಿ ಯಾದರು. ಧರ್ಮಸ್ಥಳ ಮುಖ್ಯದ್ವಾರದಿಂದ ಸಮಾವೇಶ ನಡೆಯುವ ಸ್ಥಳದವರೆಗೆ ಪಾದಯಾತ್ರೆ ನಡೆಯಿತು. ಮಂಗಳೂರು, ಉಡುಪಿ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ, ಬೆಳಗಾವಿ, ಧಾರವಾಡ, ಹಾವೇರಿ, ಗದಗ ಸೇರಿದಂತೆ ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಕಾರ್ಯಕರ್ತರು ಧರ್ಮಸ್ಥಳದ ಪರವಾಗಿ ನಾವಿದ್ದೇವೆ ಎಂಬ ಸಂದೇಶ ರವಾನಿಸಿದರು.

ಸಮಾವೇಶದಲ್ಲಿ ಧರ್ಮಸ್ಥಳ ವಿರುದ್ಧದ ಅಪಪ್ರಚಾ ರಕ್ಕೆ ರಾಜ್ಯ ಕಾಂಗ್ರೆಸ್ ಸರಕಾರ ಕಾರಣ ಎಂದು ದೂರಿದ ನಾಯಕರು, ಸೌಜನ್ಯ ಮನೆಗೂ ಭೇಟಿ ನೀಡಿ ತಾಯಿ ಕುಸುಮಾವತಿ ಅವರೊಂದಿಗೆ ಮಾತುಕತೆ ನಡೆಸಿ ಬೆಂಬಲ ವ್ಯಕ್ತಪಡಿಸಿದರು.

ಧರ್ಮಸ್ಥಳ ಚಲೋ ಸಮಾವೇಶದಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಧರ್ಮ ಸ್ಥಳದ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ ಅಪಪ್ರಚಾರ ತಡೆದಿಲ್ಲ. ಕಾಂಗ್ರೆಸ್ ಸರಕಾರ ಕಿತ್ತೊಗೆಯುವವರೆಗೆ ಹಿಂದೂ ಕಾರ್ಯಕರ್ತರು ವಿರಮಿಸುವುದಿಲ್ಲ. ಧರ್ಮಸ್ಥಳದ ಭಕ್ತರ ಸಹನೆ ಕಟ್ಟೆ ಒಡೆದಿದೆ. → 4

ಮಳೆ ಮಧ್ಯೆ, ಬಿಜೆಪಿ ಧರ್ಮಸ್ಥಳ ಅಭಿಯಾನಕ್ಕೆ ನಿರೀಕ್ಷೆಗೂ ಮೀರಿದ ಸ್ಪಂದನೆ ವ್ಯಕ್ತವಾಯಿತು. ▸▸ ಚಿತ್ರ: ಸುಧಾಕರ ದೇವರಾಜ್

ಸೌಜನ್ಯ ಮನೆಗೆ ನಾಯಕರ ಭೇಟಿ

ಸಮಾವೇಶ ಮುಗಿದ ನಂತರ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ, ಸೌಜನ್ಯ ನಿವಾಸಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸೌಜನ್ಯ ತಾಯಿ ಕುಸುಮಾವತಿ ಜೊತೆ ಮಾತುಕತೆ ನಡೆಸಿ, ಸೌಜನ್ಯಳ ಪರ ಹೋರಾಟದಲ್ಲಿ ಜೊತೆಗಿರುವುದಾಗಿ ಭರವಸೆ ನೀಡಿದರು. ಇದೇ ವೇಳೆ 'ನನ್ನ ಮಗಳ ಸಾವಿಗೆ ಇನ್ನೂ ನ್ಯಾಯ ಸಿಕ್ಕಿಲ್ಲ' ಎಂದು ಕುಸುಮಾವತಿ ಕಣ್ಣೀರು ಹಾಕಿದ ಘಟನೆಯೂ ನಡೆಯಿತು.

ಸಿಎಂ ಸುತ್ತ ನಗರ ನಕ್ಸಲ್ ಗ್ಯಾಂಗ್

ವಿರೋಧ ಪಕ್ಷದ ನಾಯಕ ಆರ್.ಅಶೋಕ ಮಾತನಾಡಿ, ಧರ್ಮಸ್ಥಳದ ಪ್ರಕರಣದ ಹಿಂದೆ ದೊಡ್ಡ ತಿಮಿಂಗಿಲಗಳಿವೆ. ಬುರುಡೆ ಹಿಂದೆ ಕೇರಳ, ತಮಿಳುನಾಡು, ದೆಹಲಿಯ ಕೆಲವರಿದ್ದಾರೆ. ಎನ್‌ಐಎ ತನಿಖೆ ಮೂಲಕ ಈ ಪ್ರಕರಣದ ಹಿಂದಿನ ಷಡ್ಯಂತ್ರ ಬಯಲಿಗೆ ತರಬೇಕು ಎಂದು ಒತ್ತಾಯಿಸಿದರು. ಡಿಸಿಎಂ ಶಿವಕುಮಾರ್ ಚಾಮುಂಡಿ ಬೆಟ್ಟ ಹಿಂದೂಗಳದ್ದಲ್ಲ ಎನ್ನುತ್ತಾರೆ. ಸಿದ್ದರಾಮಯ್ಯನವರ ಸುತ್ತ ನಗರ ನಕ್ಸಲರ ಗ್ಯಾಂಗ್, ತಿಮರೋಡಿ ಗ್ಯಾಂಗ್ ಸೇರಿಕೊಂಡಿದೆ. ಇದು ಮತಾಂತರದ ಟೂಲ್ ಕಿಟ್ ಎಂದು ದೂರಿದರು.

ನಾವು ಸತ್ಯದ ಕಡೆ ನಡೆಯುವವರು, ನಮಗೆ ಭಯ ಇಲ್ಲ. ಎಸ್‌ಐಟಿ ಮೇಲೆ ನಂಬಿಕೆ ಇದೆ ಸತ್ಯ ಹೊರಗೆ ಬರುತ್ತೆ.
-ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿ ಧರ್ಮಸ್ಥಳ

ಭಯೋತ್ಪಾದನೆ ವಿರುದ್ಧ ನಿರ್ಣಯ, ಭಾರತಕ್ಕೆ ಸದಸ್ಯ ರಾಷ್ಟ್ರಗಳ ಬೆಂಬಲ

ಶಾಂಘೈ ಶೃಂಗದಲ್ಲಿ ಪಾಕಿಸ್ತಾನಕ್ಕೆ ಚಾಟಿ

ದೆಹಲಿ: ಅಮೆರಿಕದ ಸುಂಕ ಸಮರದ ನಡುವೆ ಚೀನಾದ ಟಿಯಾಂಜಿನ್‌ನಲ್ಲಿ ನಡೆದ ಶಾಂಘೈ ಸಹಕಾರ ಸಂಘಟನೆ ಶೃಂಗಸಭೆಯಲ್ಲಿ ರಷ್ಯಾ, ಚೀನಾ ಸೇರಿದಂತೆ ಸದಸ್ಯ ರಾಷ್ಟ್ರಗಳಿಂದ ಭಾರತಕ್ಕೆ ಅಭೂತಪೂರ್ವ ಬೆಂಬಲ ದೊರೆತಿದೆ. ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಶರೀಫ್ ಅವರ ಸಮ್ಮುಖದಲ್ಲಿಯೇ ಭಯೋತ್ಪಾದನೆ ವಿರುದ್ಧ ನಿರ್ಣಯ ಅಂಗೀಕರಿಸಿದ್ದು ಭಾರತಕ್ಕೆ ಅತಿ ದೊಡ್ಡ ರಾಜತಾಂತ್ರಿಕ ಗೆಲುವು ಸಿಕ್ಕಿದೆ.

ಶೃಂಗಸಭೆಯ ನಡುವೆಯೇ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಜತೆ ಆತ್ಮೀಯ ಮಾತುಕತೆ ನಡೆಸಿದ ಪ್ರಧಾನಿ ಮೋದಿ, ಜಾಗತಿಕ ಬಿಕ್ಕಟ್ಟಿಗೆ ಕಾರಣವಾಗಿರುವ ಉಕ್ರೇನ್ ಯುದ್ಧವನ್ನು ನಿಲ್ಲಿಸುವಂತೆ ಮಿತ್ರ ರಾಷ್ಟ್ರಕ್ಕೆ ಮನವಿ ಮಾಡಿದರು. ಶೃಂಗಸಭೆಯನ್ನುದ್ದೇಶಿಸಿ ಮಾತನಾಡಿದ ಮೋದಿ, ಪಹಲ್ಗಾಮ್ ದಾಳಿಯನ್ನು ಉಲ್ಲೇಖಿಸಿ, ಭಯೋತ್ಪಾದನೆಯ ವಿರುದ್ಧ ಎಲ್ಲ ರಾಷ್ಟ್ರಗಳು ದೃಢ ನಿಲುವು ತಾಳುವ ಅಗತ್ಯವನ್ನು ಒತ್ತಿಹೇಳಿದರು.

''ಪಹಲ್ಗಾಮ್‌ನಲ್ಲಿ ಭಯೋತ್ಪಾದನೆಯ ಕೆಟ್ಟ ಮುಖವನ್ನು ನಾವು ನೋಡಿದ್ದೇವೆ. ಭಯೋತ್ಪಾದಕ ದಾಳಿಯು ಮಾನವೀಯತೆಯಲ್ಲಿ ನಂಬಿಕೆ ಇಡುವ ಪ್ರತಿಯೊಂದು ದೇಶಕ್ಕೂ ಸವಾಲು. ಯಾವುದೇ ದೇಶ, ಯಾವುದೇ ಸಮಾಜ, ಯಾವುದೇ ನಾಗರಿಕರು ಇದರಿಂದ ಸುರಕ್ಷಿತರೆಂದು ಪರಿಗಣಿಸಲು ಸಾಧ್ಯವಿಲ್ಲ. ಇದು ಕೇವಲ ಒಂದು ದೇಶದ ಭದ್ರತೆಗೆ ಸವಾಲಲ್ಲ, ಬದಲಾಗಿ ಮಾನವೀಯತೆಗೇ ದೊಡ್ಡ ಕಳಂಕ'' ಎಂದು ಪಾಕ್ ಪ್ರಧಾನಿ ಸಮ್ಮುಖದಲ್ಲಿಯೇ ಮೋದಿ ಹೇಳಿದರು.

ಅಲ್ ಖೈದಾ ಮತ್ತು ಇತರ ಉಗ್ರ ಸಂಘಟನೆಗಳ ವಿರುದ್ಧ ಹೋರಾಟಕ್ಕೆ ಭಾರತ ಕೈಜೋಡಿಸಿದೆ. ಈ ವಿಚಾರದಲ್ಲಿ ಯಾವುದೇ ದ್ವಿಮುಖ ನೀತಿ ಸ್ವೀಕಾರಾರ್ಹವಲ್ಲ. → 4

ಪುಟಿನ್ ಕಾರಿನಲ್ಲಿ ಮೋದಿ ಪಯಣ

ಚೀನಾದ ರಾಜಧಾನಿ ಬೀಜಿಂಗ್‌ನಿಂದ 135ಕಿ.ಮೀ ದೂರದ ಶೃಂಗಸಭೆಯ ಸ್ಥಳ ಟಿಯಾಂಜಿನ್‌ಗೆ ಮೋದಿ ಮತ್ತು ಪುಟಿನ್ ಜತೆಯಾಗಿ ಒಂದೇ ಕಾರಿನಲ್ಲಿ ಪ್ರಯಾಣಿಸಿ, ಉಭಯ ರಾಷ್ಟ್ರಗಳ ಸ್ನೇಹ ಸಂಬಂಧವನ್ನು ಮತ್ತೊಮ್ಮೆ ಸಾರಿದರು. ಪುಟಿನ್ ಅವರ ಲಿಮೋಸಿನ್ ಕಾರಿನಲ್ಲಿ ಪಯಣಿಸಿದ ಫೋಟೋವನ್ನು ಮೋದಿ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಮೈಸೂರು ಆಯಿಷ್ ಸಂಸ್ಥೆ ವಜ್ರ ಮಹೋತ್ಸವದಲ್ಲಿ ರಾಷ್ಟ್ರಪತಿ ಭಾಗಿ

ಶ್ರವಣ ಸಾಧನಗಳ ದೇಶಿ ಉತ್ಪಾದನೆಗೆ ದ್ರೌಪದಿ ಕರೆ

ಮೈಸೂರು: ನವತಂತ್ರಜ್ಞಾನಗಳ ಬಳಕೆಯಿಂದ ದೇಶದಲ್ಲಿ ವಾಕ್ ಮತ್ತು ಶ್ರವಣ ಸಮಸ್ಯೆಯುಳ್ಳವರ ನೆರವಿಗೆ ಮುಂದಾಗಿ ಶಾಶ್ವತವಾಗಿ ಸಮಸ್ಯೆ ಪರಿಹಾರಕ್ಕೆ ಮುಂದಾಗುವಂತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಕರೆ ನೀಡಿದರು.

ವಿಶ್ವ ಸಂಕೇತ ಭಾಷಾ ದಿನವನ್ನು ಸೆಪ್ಟೆಂಬರ್ 23ರಂದು ಆಚರಿಸಲಾಗುತ್ತದೆ. ಸಂಕೇತ ಭಾಷೆಯ ಬಗ್ಗೆ ಜಾಗೃತಿ ಮೂಡಿಸುವುದು. ಸಂಕೇತ ಭಾಷೆಯನ್ನು ಹೆಚ್ಚು ಸಮೃದ್ಧಗೊಳಿಸಲು ನಾವು ಈ ದಿನವನ್ನು ಸಂಕಲ್ಪ ದಿನವಾಗಿ ಬಳಸಬೇಕು.
-ದ್ರೌಪದಿ ಮುರ್ಮು, ರಾಷ್ಟ್ರಪತಿ

ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ವಜ್ರಮಹೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ವಾಕ್ ಮತ್ತು ಶ್ರವಣ ಸಮಸ್ಯೆಯುಳ್ಳವರಿಗೆ ಅನೇಕ ನೂತನ ತಂತ್ರಜ್ಞಾನ ಈ ಕಾಲಘಟ್ಟದಲ್ಲಿ ಜಾರಿಗೆ ಬಂದಿದೆ. ಆದರೆ, ಅಂತಹ ತಂತ್ರಜ್ಞಾನಗಳನ್ನು ಸಾಮಾನ್ಯ ವರ್ಗದ ಜನತೆಗೂ ತಲುಪಿಸಲು ಹೆಚ್ಚಿನ ಪರಿಶ್ರಮ ವಹಿಸಬೇಕಾದ ಅಗತ್ಯವಿದೆ. → 4

ಆಯಿಷ್ ನಿರ್ದೇಶಕಿ ಎಂ.ಪುಷ್ಪಾವತಿ ರಾಷ್ಟ್ರಪತಿ ಮುರ್ಮು ಅವರಿಗೆ ಸ್ಮರಣಿಕೆ ನೀಡಿ ಗೌರವಿಸಿದರು.

ಈಗ ಶ್ರವಣ ಸಮಸ್ಯೆ ಇಲ್ಲ: ಸಿಎಂ

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಭಾಷಣದಲ್ಲಿ, ನನಗೆ ಕಿವಿಯ ಸಮಸ್ಯೆ ಎದುರಾದಾಗ ಈ ಸಂಸ್ಥೆಗೆ ಬಂದು ಸಮಸ್ಯೆ ಪರಿಹರಿಸಿಕೊಂಡಿದ್ದೆ. ಮತ್ತೆ ಸಮಸ್ಯೆ ಕಂಡುಬಂದರೆ ಬನ್ನಿ ಎಂದಿದ್ದರು. ಆದರೆ ಸಮಸ್ಯೆ ಬರಲಿಲ್ಲ. ಹೀಗಾಗಿ ನಾನು ಮತ್ತೆ ಈ ಸಂಸ್ಥೆಗೆ ಭೇಟಿ ನೀಡಲಿಲ್ಲ ಎಂದು ಹಾಸ್ಯ ಚಟಾಕಿ ಹಾರಿಸಿದರು.

5 ಸೀಟರ್ ಹೆಲಿಕಾಪ್ಟರ್, 13 ಸೀಟರ್ ಜೆಟ್ ಖರೀದಿಗೆ ಶೀಘ್ರ ಟೆಂಡರ್

ಸ್ವಂತ ವಿಮಾನ ಖರೀದಿಗೆ ಸರಕಾರ ಚಿಂತನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಹಲವು ವರ್ಷಗಳಿಂದ ಆಗ್ಗಾಗೆ ಚರ್ಚೆ ಬರುತ್ತಿದ್ದ ವಿಮಾನ, ಹೆಲಿಕಾಪ್ಟರ್ ಖರೀದಿ ಪ್ರಕ್ರಿಯೆ ಅಂತಿಮ ಹಂತ ತಲುಪಿದ್ದು, ಶೀಘ್ರದಲ್ಲಿಯೇ ಟೆಂಡರ್ ಕರೆಯುವ ಪ್ರಕ್ರಿಯೆ ನಡೆಸುವ ಸಾಧ್ಯತೆಯಿದೆ. ಸಾಮಾನ್ಯವಾಗಿ ಮುಖ್ಯಮಂತ್ರಿ, ಉಪಮುಖ್ಯ ಮಂತ್ರಿಗಳು ಸರಕಾರಿ ಕಾರ್ಯಕ್ರಮಗಳಲ್ಲಿ ಭಾಗವಹಿ ಸಲು ರಸ್ತೆ ಮಾರ್ಗಕ್ಕಿಂತ ಹೆಚ್ಚಾಗಿ ವಾಯು ಮಾರ್ಗವನ್ನು ಬಳಸುತ್ತಿದ್ದಾರೆ. ಆದರೆ ಈ ಸಮಯದಲ್ಲಿ ಖಾಸಗಿ ಜೆಟ್ ಅಥವಾ ಹೆಲಿಕಾಪ್ಟರ್‌ನ ಬಾಡಿಗೆಯನ್ನು ಸರಕಾರವೇ ಭರಿಸಬೇಕು. ಈ ರೀತಿ ಬಾಡಿಗೆ ಪಡೆದು ಪ್ರಯಾಣಿಸುವುದಕ್ಕಿಂತ ಸ್ವಂತ ವಿಮಾನ ಹಾಗೂ ಹೆಲಿಕಾಪ್ಟರ್ ಖರೀದಿಸಿದರೆ ಆರ್ಥಿಕ ಹೊರೆ ತಪ್ಪಿಸಬಹುದು ಎನ್ನುವ ಲೆಕ್ಕಾಚಾರಗಳಿವೆ. → 4

ಸರಕಾರದ ಅಧಿಕೃತ ಕೆಲಸಗಳಿಗೆ ಹೆಲಿಕಾಪ್ಟರ್ ಮತ್ತು ವಿಮಾನ ಖರೀದಿ ವಿಷಯ ಅನೇಕ ವರ್ಷದಿಂದಲೂ ಸರಕಾರದ ಮುಂದೆ ಬಾಕಿ ಉಳಿದಿತ್ತು. ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಹಾಗೂ ಟೆಂಡರ್ ಕರೆಯುವ ವಿಚಾರವಾಗಿ ಮುಖ್ಯಮಂತ್ರಿಯವರು ನನಗೆ ಜವಾಬ್ದಾರಿ ನೀಡಿದ್ದರು. ಆದ್ದರಿಂದ ಬೇರೆ ರಾಜ್ಯ ಗಳಲ್ಲಿನ ವ್ಯವಸ್ಥೆಯನ್ನು ತಿಳಿದುಕೊಳ್ಳುವಂತೆ ಹಾಗೂ ಎಚ್‌ಎಎಲ್ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಹೆಲಿಕಾಪ್ಟರ್ ಖರೀದಿ ಪ್ರಕ್ರಿಯೆ ಟೆಂಡರ್ ಸಂಬಂಧ ಡಿಸಿಎಂ ಡಿ.ಕೆ. ಶಿವಕುಮಾರ್ ಮತ್ತು ಇಂಧನ ಸಚಿವ ಜಾರ್ಜ್ ಅಧಿಕಾರಿಗಳ ಜತೆ ಮಾತುಕತೆ ನಡೆಸಿದರು.

- ಉ.ಪ್ರ ಸೇರಿ ಹಲವು ರಾಜ್ಯಗಳಲ್ಲಿ ಸ್ವಂತ ವಿಮಾನ ಬಳಕೆ
- ಬಾಡಿಗೆ ವಿಮಾನ, ಹೆಲಿಕಾಪ್ಟರ್‌ಗಿಂತ ಖರೀದಿ ಯಿಂದ ಮಿತವ್ಯಯ
- ಎಚ್‌ಎಎಲ್‌ನಂತಹ ಸಂಸ್ಥೆಗಳಿಗೆ ನಿರ್ವಹಣೆ ಹೊಣೆ ಸಾಧ್ಯತೆ
- ಸಚಿವರು ಬಳಕೆಗೆ ಸಿಎಂ ಅನುಮತಿ ಕಡ್ಡಾಯ ಗೊಳಿಸಲು ಚಿಂತನೆ

ಕಾರ್ಯನಿರ್ವಹಣೆ ಬಗ್ಗೆ ಸ್ಪಷ್ಟತೆ ಇಲ್ಲ

ಸದ್ಯ ವಿಮಾನ ಖರೀದಿಗೆ ಸರಕಾರ ಉತ್ಸುಕತೆ ತೋರಿದರೂ, ಯಾವ ರೀತಿ ನಿರ್ವಹಣೆ ಮಾಡಬೇಕು ಎನ್ನುವ ಸ್ಪಷ್ಟನೆ ಇಲ್ಲ. ಯಾವ ಇಲಾಖೆ ಈ ವಿಮಾನಗಳ ನಿರ್ವಹಣೆ ಮಾಡಬೇಕು? ಎನ್ನುವ ಬಗ್ಗೆ ಮತ್ತೊಂದು ಸುತ್ತಿನ ಸಭೆ ನಡೆಸುವ ಸಾಧ್ಯತೆಯಿದೆ. ಮೇಲ್ನೋಟಕ್ಕೆ ರಾಜ್ಯ ಖರೀದಿಸಿದರೂ, ಎಚ್‌ಎಎಲ್ ಜತೆ ನಿರ್ವಹಣೆಯ ಒಪ್ಪಂದ ಮಾಡಿಕೊಳ್ಳಬಹುದು ಅಥವಾ ಜಕ್ಕೂರು ಏರೋಡ್ರೋಮ್‌ನಿಂದ ನಿರ್ವಹಣೆ ಸಾಧ್ಯವೇ ಎನ್ನುವ ಬಗ್ಗೆಯೂ ಪರಿಶೀಲನೆ ನಡೆಸಲಾಗುತ್ತಿದೆ ಎನ್ನುವ ಮಾತುಗಳು ಕೇಳಿಬಂದಿದೆ.

ವಿರಾಮ

ಪ್ರತಿ ಭಾನುವಾರ

ಮಣ್ಣು ಕುಸಿದು ಕಾರ್ಮಿಕ ಸಾವು

- ನಿರ್ಮಾಣ ಹಂತದಲ್ಲಿದ್ದ ಯಲಹಂಕದ ಎಂಬೆಸ್ಸಿ ಗ್ರೂಪ್ ಸಂಸ್ಥೆಯ ಕಟ್ಟಡದಲ್ಲಿ ಅವಘಡ
- ಇಬ್ಬರು ಕಾರ್ಮಿಕರಿಗೆ ಗಾಯ

ಬೆಂಗಳೂರು: ನಗರದಲ್ಲಿ ಸೋಮವಾರ ರಾತ್ರಿ ಸುರಿದ ಧಾರಾಕಾರ ಮಳೆಗೆ ಯಲಹಂಕದಲ್ಲಿ ನಿರ್ಮಾಣ ಹಂತದ ಕಟ್ಟಡದ ಸ್ಥಳದಲ್ಲಿ ಮಣ್ಣು ಕುಸಿದು ಕಾರ್ಮಿಕರೊಬ್ಬರು ಮೃತಪಟ್ಟಿದ್ದಾರೆ. ಮತ್ತೊಬ್ಬರು ಗಂಭೀರವಾಗಿ ಗಾಯ ಗೊಂಡಿದ್ದಾರೆ.

ಯಲಹಂಕದಲ್ಲಿ ಎಂಬೆಸ್ಸಿ ಗ್ರೂಪ್ ಸಂಸ್ಥೆಯ ಕಟ್ಟಡ ನಿರ್ಮಾಣವಾಗುತ್ತಿದ್ದು, ಕಾರ್ಮಿಕರು ಕಟ್ಟಡದ ಅಡಿ ಪಾಯಕ್ಕೆ ಗುಂಡಿ ಅಗೆಯುತ್ತಿದ್ದರು. ಈ ವೇಳೆ ಧಾರಾಕಾರ ಮಳೆ ಸುರಿದಿದ್ದರಿಂದ ಗುಂಡಿಯಲ್ಲಿ ಮಳೆ ನೀರು ತುಂಬಿಕೊಂಡು ಮಣ್ಣು ಕುಸಿದಿದೆ. ಕೆಲವರು ಮೇಲೆ ಬಂದು ಪಾರಾದರು. ಇಬ್ಬರು ಮಣ್ಣಿನ ಅಡಿ ಸಿಲುಕಿದ್ದರು. ನಂತರ ಇತರೆ ಕಾರ್ಮಿಕರು, ಸ್ಥಳೀಯರ ನೆರವಿನಿಂದ ಮಣ್ಣು ತೆರವುಗೊಳಿಸಲು ಯತ್ನಿಸಿದ್ದರು.

ಆದರೆ, ಆ ವೇಳೆಗಾಗಲೇ ಆಂಧ್ರ ಪ್ರದೇಶದ ಒಬ್ಬ ಕಾರ್ಮಿಕ ಮಣ್ಣಿನ ಅಡಿಯೇ ಮೃತಪಟ್ಟಿದ್ದರು ಎಂದು ಪೊಲೀಸರು ತಿಳಿಸಿದರು.

ಮಣ್ಣಿನಡಿ ಸಿಲುಕಿದ್ದ ಮತ್ತೊಬ್ಬ ಕಾರ್ಮಿಕನನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದರು. ಯಲಹಂಕ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅನೈತಿಕ ಸಂಬಂಧ ಶಂಕೆ | 26 ವರ್ಷದ ಯುವತಿಯ ಹತ್ಯೆಗೈದ 52 ವಯಸ್ಸಿನ ಅಂಕಲ್

ಬೆಂಕಿ ಹಚ್ಚಿ ಲಿವ್‌ಇನ್ ಗೆಳತಿಯ ಕೊಲೆ



- ಮೂರ್ನಾಲ್ಕು ವರ್ಷಗಳಿಂದ ಲಿವಿಂಗ್
- ಇನ್ನೊಬ್ಬನ ಜತೆ ಸಂಬಂಧ ಎಂದು ಕೊಲೆಗೈದ ವಿಠ್ಠಲ್

ಬೆಂಗಳೂರು: ಇಬ್ಬರು ಹೆಂಡತಿಯರ ಗಂಡನೊಬ್ಬ 26 ವರ್ಷದ ವಿಧವೆ ಜತೆ ಲಿವಿಂಗ್ ಟುಗೆದರ್‌ನಲ್ಲಿದ್ದು, ಕೊನೆಗೆ ಆ ಯುವತಿ ಬೇರೊಬ್ಬರೊಂದಿಗೆ ಸಲುಗೆ ಬೆಳೆಸಿರುವುದನ್ನು ಕಂಡು ಪೆಟ್ರೋಲ್ ಎರಚಿ ಬೆಂಕಿ ಹಚ್ಚಿ ಭೀಕರವಾಗಿ ಕೊಲೆ ಮಾಡಿದ ಘಟನೆ ಆನೇಕಲ್ ಬಳಿ ನಡೆದಿದೆ.

ಆರೋಪಿ ವಿಠ್ಠಲ 52 ವರ್ಷ ವಯಸ್ಸಿನ ವ್ಯಕ್ತಿ. ವೃತ್ತಿಯಲ್ಲಿ ಕ್ಯಾಬ್ ಚಾಲಕನಾಗಿರುವ ವಿಠ್ಠಲನನ್ನು ಪೊಲೀಸರು ಬಂಧಿಸಿದ್ದಾರೆ. ಹುಳಿಮಾವು ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಿಸಲಾಗಿದೆ.

ಮೃತ ಯುವತಿ ವನ ಜಾಕ್ಷಿ ಎಂದು ಗುರುತಿಸಲಾಗಿದೆ. ಇವರಿ ಬ್ಬರೂ ಆನೇಕಲ್ ಬಳಿಯ ಮಳೆನಲ್ಲಸಂದ್ರ ಗ್ರಾಮದ ನಿವಾಸಿಗಳಾಗಿದ್ದಾರೆ. ಆರೋಪಿ ವಿಠ್ಠಲನಿಗೆ ಈಗಾಗಲೇ ಎರಡು ಮದುವೆ ಯಾಗಿದೆ. ಮೊದಲ ಪತ್ನಿ ಮೃತಪಟ್ಟಿದ್ದು ನಂತರ ಮತ್ತೊಂದು ಮದುವೆಯಾಗಿದ್ದ. ಎರಡನೇ ಪತ್ನಿ ಬೇರೊಬ್ಬನ ಜತೆ ಪರಾರಿ ಯಾಗಿದ್ದಳು. ವನಜಾಕ್ಷಿಗೆ ಮದುವೆ ಯಾಗಿದ್ದು, ಗಂಡ ಮೃತಪಟ್ಟಿದ್ದ. ಈ ನಡುವೆ ವಿಠ್ಠಲ ವಿಧವೆ ವನಜಾಕ್ಷಿಯ ಸಾಂಗತ್ಯ ಬೆಳೆಸಿದ್ದ. ಕಳೆದ ಮೂರ್ನಾಲ್ಕು ವರ್ಷಗಳಿಂದ ವನಜಾಕ್ಷಿ ಜತೆ ಲಿವಿಂಗ್ ಟುಗೆದರ್‌ಲ್ಲಿದ್ದ.

ವಿಠ್ಠಲ್‌ನ ನಿರ್ಲಕ್ಷ್ಯ: ಆಕ್ರೋಶಕ್ಕೆ ಕೊಲೆ

ಕಳೆದ ಕೆಲವು ದಿನಗಳಿಂದ ವನಜಾಕ್ಷಿ ಆತನನ್ನು ಕಡೆಗಣಿಸುತ್ತಿದ್ದಳು. ಅಲ್ಲದೆ, ಅದೇ ಗ್ರಾಮದ ಮತ್ತೊಬ್ಬರ ಜತೆ ಸಲುಗೆ ಬೆಳೆಸಿಕೊಂಡಿದ್ದಳು. ಕಳೆದೊಂದು ತಿಂಗಳಿನಿಂದ ಇದೇ ವಿಚಾರಕ್ಕೆ ವಿಠ್ಠಲ ಹಾಗೂ ವನಜಾಕ್ಷಿ ನಡುವೆ ಜಗಳವಾಗುತ್ತಿತ್ತು. ಕಳೆದ ಶನಿವಾರ ವನಜಾಕ್ಷಿ ತನ್ನ ಮತ್ತೊಬ್ಬ ಸ್ನೇಹಿತನ ಜತೆ ಬನ್ನೇರುಘಟ್ಟದಿಂದ ಬಸವನಪುರಕ್ಕೆ ಹೊಸ ಸ್ನೇಹಿತನ ಜತೆ ಕಾರಲ್ಲಿ ತೆರಳುತ್ತಿದ್ದಳು. ಇದನ್ನು ನೋಡಿದ ವಿಠ್ಠಲ, ಹುಳಿಮಾವು ಠಾಣೆ ವ್ಯಾಪ್ತಿಯ ಹೊಮ್ಮದೇವನ ಹಳ್ಳಿ ಬಳಿ ಕಾರನ್ನು ಹಿಂಬಾಲಿಸಿದ್ದ. ವನಜಾಕ್ಷಿ ಹೋಗುತ್ತಿದ್ದ ಸ್ಯಾಂಟ್ರೋ ಕಾರನ್ನು ಅಡ್ಡಗಟ್ಟಿ ನಿಲ್ಲಿಸಿದ್ದ. ಕಾರು ನಿಲ್ಲಿಸುತ್ತಿದ್ದಂತೆಯೇ 5 ಲೀಟರ್ ಪೆಟ್ರೋಲ್ ಅನ್ನು ಕಾರಿನ ಮೇಲೆ ಸುರಿಯಲು ಯತ್ನಿಸಿದ್ದಾನೆ. ಅಷ್ಟರಲ್ಲಿ ಸ್ನೇಹಿತನ ಜತೆ ಕಾರಿನಿಂದ ಇಳಿದ ವನಜಾಕ್ಷಿ ಓಡಿ ಹೋಗಲು ಶುರು ಮಾಡಿದ್ದಾಳೆ. ಇಬ್ಬರನ್ನೂ ಹಿಂಬಾಲಿಸಿಕೊಂಡು ಹೋಗಿದ್ದ ವಿಠ್ಠಲ, ಆ ಬಳಿಕ ವನಜಾಕ್ಷಿ ಮೇಲೆ ಪೆಟ್ರೋಲ್ ಎರಚಿ ಲೈಟರ್‌ನಿಂದ ಬೆಂಕಿ ಹಚ್ಚಿದ್ದ. ಗಂಭೀರವಾಗಿ ಗಾಯಗೊಂಡಿದ್ದ ವನಜಾಕ್ಷಿಯನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶೇ. 60ರಷ್ಟು ಸುಟ್ಟ ಗಾಯಗಳಿಂದ ಬಳಲುತ್ತಿದ್ದ ಆಕೆ, ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾಳೆ.

ಗಂಡನಿಗೆ ಅನೈತಿಕ ಸಂಬಂಧ: ಹೆಂಡತಿ ಆತ್ಮಹತ್ಯೆ

ಬೆಂಗಳೂರು: ಗಂಡನ ಅನೈತಿಕ ಸಂಬಂಧ ಪ್ರಶ್ನಿಸಿದ್ದಕ್ಕೆ ಹೆಂಡತಿಗೆ ಕಿರುಕುಳ ನೀಡಿದ್ದರಿಂದ ಬೇಸತ್ತ ಪತ್ನಿ ದುರಂತ ಸಾವು ಕಂಡಿದ್ದಾಳೆ.

ಗಂಡನ ಅನೈತಿಕ ಸಂಬಂಧ ಹಾಗೂ ಕಿರುಕುಣದಿಂದ ಬೇಸತ್ತು ಗೃಹಿಣಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಅಘಾತಕಾರಿ ಘಟನೆಯೊಂದು ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯ ಸಿಡೇದಹಳ್ಳಿಯಲ್ಲಿ ನಡೆದಿದೆ. ಗಂಡನ ಕಿರುಕುಳಕ್ಕೆ ಬೇಸತ್ತು 28 ವರ್ಷದ ಪತ್ನಿ ಪೂಜಾಶ್ರೀ ನೇಣಿಗೆ ಶರಣಾಗಿದ್ದಾಳೆ. ಇದರಿಂದ ಪುಟ್ಟ ಹೆಣ್ಣು ಮಗು ಅನಾಥವಾಗಿದೆ.

ಪೂಜಾಶ್ರೀ ಮೂರು ವರ್ಷದ ಹಿಂದೆ ಪೋಷಕರು ನಿಶ್ಚಯಿಸಿದ್ದ ನಂದೀಶ್ ಜತೆ ವಿವಾಹವಾಗಿದ್ದರು. ಪೂಜಾಶ್ರೀ ಹಾಗೂ ನಂದೀಶ್ ದಾಂಪತ್ಯಕ್ಕೆ ಒಂದು ಹೆಣ್ಣು ಮಗು ಕೂಡ ಇದೆ. ಪತಿ ನಂದೀಶ್ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರೇ, ಪೂಜಾಶ್ರೀ ಕೂಡ ಖಾಸಗಿ ಬ್ಯಾಂಕ್‌ನಲ್ಲಿ ಕ್ಯಾಷಿಯರ್ ಆಗಿ ಕೆಲಸ ಮಾಡುತ್ತಿದ್ದರು. ಆದರೇ, ಕಳೆದ ಒಂದು ವರ್ಷದಿಂದ ಪತಿ ನಂದೀಶ್‌ಗೆ ಅನೈತಿಕ ಸಂಬಂಧ ಇರುವುದು ಪೂಜಾಶ್ರೀಗೆ ಗೊತ್ತಾಗಿದೆ. ಈ ಬಗ್ಗೆ ಪೂಜಾ ಪತಿ ನಂದೀಶ್ ಅವರನ್ನು ಪ್ರಶ್ನಿಸಿದ್ದಾಳೆ. ಬಳಿಕ ನಂದೀಶ್, ಪೂಜಾಳಿಗೆ ಕಿರುಕುಳ ಕೊಡಲಾರಂಭಿಸಿದ್ದಾನೆ.

ಈ ವೇಳೆ ನಂದೀಶ್ ತಾಯಿ, ನಿಮ್ಮ ಮನೆಯಿಂದ ವರದಕ್ಷಿಣೆ ತೆಗೆದುಕೊಂಜು ಬಾ ಎಂದು ಪೂಜಾಶ್ರೀಗೆ ಹೇಳಿದ್ದಾರೆ. ಬಳಿಕ ಸೊಸೆಗೆ ವರದಕ್ಷಿಣೆ ಕಿರುಕುಳ ನೀಡಿದ್ದಾರೆ. ಬಳಿಕ ಪೂಜಾಶ್ರೀ ಗಂಡನ ಮನೆಯನ್ನು ಬಿಟ್ಟು ತವರು ಮನೆಗೆ ಹೋಗಿದ್ದರು. ಈ ಬಗ್ಗೆ ಮನೆಯಲ್ಲಿ ಎರಡು ಮೂರು ಭಾರಿ ರಾಜೀ ಪಂಚಾಯಿತಿ ನಡೆದಿದ್ದು, ಮತ್ತೆ ವರದಕ್ಷಿಣೆ ಕಿರುಕುಳ ನೀಡಲ್ಲ. ಅನೈತಿಕ ಸಂಬಂಧ ಬೆಳೆಸಲ್ಲ ಎಂದು ಪತ್ನಿಯನ್ನು ತನ್ನ ಮನೆಗೆ ಕರೆದುಕೊಂಡು ಬಂದಿದ್ದ. ಆದರೆ 3 ದಿನಗಳ ಹಿಂದೆ ನಂದೀಶ್ ಮತ್ತೆ ಜಗಳ ತೆಗೆದು ಪತ್ನಿ ಪೂಜಾಶ್ರೀ ಮೇಲೆ ಹಲ್ಲೆ ಮಾಡಿದ್ದ. ಇದರಿಂದ ಪೂಜಾಶ್ರೀ ಮತ್ತೆ ತಾಯಿ ಮನೆಗೆ ಹೋಗಿದ್ದಳು. ಮರು ದಿನ ಬೆಳಗ್ಗೆ ಪೂಜಾಶ್ರೀ ತವರು ಮನೆಗೆ ಹೋಗಿ ಹೊಸ ಕಥೆ ಕಟ್ಟಿ ಕರೆದುಕೊಂಡು ಹೋಗಿದ್ದ. ಆದರೆ ಭಾನುವಾರ ಪೂಜಾಶ್ರೀ ಶವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾಳೆ.

VISHWAVANI TV SPECIAL

ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಅವಹೇಳನಕಾರಿ ಕಾಮೆಂಟ್ಸ್‌ಗೆ ಖಾಕಿ ಎಚ್ಚರಿಕೆ

KARNATAKA STATE POLICE

ಬೆಂಗಳೂರು: ಸಾಮಾಜಿಕ ಜಾಲತಾಣದಲ್ಲಿ ಅವಹೇಳನಾಕಾರಿ ಪೋಸ್ಟ್, ಕಾಮೆಂಟ್ ಮಾಡುವುದನ್ನು ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಿದೆ. ಸಾರ್ವಜನಿಕ ಶಾಂತಿ ಸುವ್ಯವಸ್ಥೆಗೆ ಭಂಗ ತರುವ ಪೋಸ್ಟ್, ಕಾಮೆಂಟ್ ಪ್ರಕಟಿಸುವವರ ವಿರುದ್ಧ ಇನ್ನುಮುಂದೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವುದಾಗಿ ಪೊಲೀಸರು ಕಠಿಣ ಎಚ್ಚರಿಕೆ ನೀಡಿದ್ದಾರೆ. ಪೊಲೀಸ್ ಇಲಾಖೆಯ ಅಧಿಕೃತ ಸಾಮಾಜಿಕ ಜಾಲತಾಣ ಖಾತೆಯಿಂದ ಸಂದೇಶ ನೀಡಿರುವ ಪೊಲೀಸರು, ಇನ್ನು ಮುಂದೆ ಅವಹೇಳನಕಾರಿ ಪೋಸ್ಟ್, ಕಾಮೆಂಟ್ ಹಾಕಿ ಕಾನೂನು ಸುವ್ಯವಸ್ಥೆಗೆ ತೊಡಕುಂಟು ಮಾಡಿದರೆ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಹೃದಯಾಘಾತ: ನಟ ಡೇವಿಡ್ ಸಾವು

ಬೆಂಗಳೂರು: ಖ್ಯಾತ ನಿರ್ದೇಶಕ, ನಟ ಎಸ್.ಎಸ್. ಡೇವಿಡ್ ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ. ಡೇವಿಡ್ ಅವರು ಭಾನುವಾರ ಮೆಡಿಕಲ್ ಶಾಪ್‌ಗೆ ತೆರಳಿ ಮನೆಗೆ ವಾಪಸ್ಸಾಗುವ ವೇಳೆ ಕುಸಿದು ಬಿದ್ದಿದ್ದರು. ಅವರನ್ನು ರಾಜರಾಜೇಶ್ವರಿ ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಿಸದೆ ನಿಧನರಾಗಿದ್ದಾರೆ. ನಿರ್ದೇಶನ, ಚಿತ್ರಕಥೆ ಹಾಗೂ ತಮ ವಿಶಿಷ್ಟ ಮ್ಯಾನರಿಸಂ ಸಂಭಾಷಣೆಯಿಂದಲೇ ಸ್ಯಾಂಡಲ್‌ವುಡ್‌ನಲ್ಲಿ ಹೆಸರು ಗಳಿಸಿದ್ದ ಡೇವಿಡ್ ಅವರು ಸಾಯಿಕುಮಾರ್ ನಟನೆಯ ಪೊಲೀಸ್ ಸ್ಟೋರಿ, ಅಗ್ನಿ ಐಪಿಎಸ್, ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿನಯದ ಮಂಡ್ಯ, ಕಿಚ್ಚ ಸುದೀಪ್ ನಟನೆಯ ತಿರುಪತಿ ಮುಂತಾದ ಚಿತ್ರಗಳಿಗೆ ಸಂಭಾಷಣೆ ರಚಿಸಿದ್ದರಲ್ಲದೆ, ಗಡಿಪಾರು, ಪೊಲೀಸ್ ಡಾಗ್ ಸೇರಿದಂತೆ ಹಲವು ಸಿನಿಮಾಗಳಿಗೆ ಆ್ಯಕ್ಷನ್ ಕಟ್ ಕೂಡ ಹೇಳಿದ್ದಾರೆ. ಎಸ್.ಎಸ್. ಡೇವಿಡ್ ಅವರ ನಿಧನಕ್ಕೆ ಸಾಹಸ ನಿರ್ದೇಶಕ ಥ್ರಿಲ್ಲರ್ ಮಂಜು ಸೇರಿ ಹಲವಾರು ಕಲಾವಿದರು, ಸಾಹಸ ಕಲಾವಿದರು ಹಾಗೂ ತಂತ್ರಜ್ಞರು ಸಂತಾಪ ಸೂಚಿಸಿದ್ದಾರೆ.

2.75 ಲಕ್ಷ ಆಸ್ತಿ ಸುಸ್ತಿದಾರರಿಗೆ ನೋಟಿಸ್

ಬೆಂಗಳೂರು: ಬಿಬಿಎಂಪಿಯು ತೆರಿಗೆ ಪಾವತಿಸದ 2.75 ಲಕ್ಷ ಆಸ್ತಿ ಸುಸ್ತಿದಾರರಿಗೆ 786 ಕೋಟಿ ರು.ಗಳಿಗೆ ಎಲೆಕ್ಟ್ರಾನಿಕ್ ಡಿಮ್ಯಾಂಡ್ ನೋಟಿಸ್ ಕಳುಹಿಸಲಾಗಿದೆ. ಆಸ್ತಿ ತೆರಿಗೆ ಪಾವತಿಸದ ಆಸ್ತಿ ತೆರಿಗೆ ಸುಸ್ತಿದಾರರನ್ನು BBMPtax.karnataka.gov.inನಲ್ಲಿ ಆನ್‌ಲೈನ್‌ನಲ್ಲಿ ಪಾವತಿಸಬೇಕಾಗುತ್ತದೆ. ಇಲ್ಲದಿದ್ದರೆ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು, ಚರ ಮತ್ತು ಸ್ಥಿರ ಆಸ್ತಿಗಳ ತುರ್ತು ಮಾರಾಟ ಸೇರಿದಂತೆ ವಸೂಲಿ ಮಾಡಲು ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ. ತೆರಿಗೆ ಸುಸ್ತಿದಾರರು ಕಾರಣಗಳೊಂದಿಗೆ ಮೇಲ್ಮನವಿ ಸಲ್ಲಿಸಬಹುದು https://BBMPeNyaya.karnataka.gov.inನಲ್ಲಿ ಆನ್‌ಲೈನ್‌ನಲ್ಲಿ ಲಭ್ಯವಿದೆ ಎಂದು ಬಿಬಿಎಂಪಿ ತಿಳಿಸಿದೆ.

ನಡು ರಸ್ತೆಯಲ್ಲಿ ಚಾಲಕರ ಗಲಾಟೆ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್‌ನ ಕಂಠೀರವ ಸ್ಟುಡಿಯೊ ರಸ್ತೆಯಲ್ಲಿ ಬಿಎಂಟಿಸಿ ಚಾಲಕರಿಬ್ಬರು ಬಸ್ ಅನ್ನು ನಡುರಸ್ತೆಯಲ್ಲೇ ನಿಲುಗಡೆ ಮಾಡಿ, ಗಲಾಟೆ ಮಾಡಿಕೊಂಡಿದ್ದಾರೆ.

ವಿದ್ಯುತ್ ಚಾಲಿತ ಬಸ್ ಚಾಲಕರ ನಡುವೆ ಗಲಾಟೆ ಆಗಿದೆ. ಬಸ್‌ನಲ್ಲಿದ್ದ ಪ್ರಯಾಣಿಕರು ಗಲಾಟೆ ಬಿಡಿಸಲು ಪ್ರಯತ್ನಿಸಿದರೂ ಯಾವುದೇ ಪ್ರಯೋಜನ ಆಗಿಲ್ಲ. ಮುಂದೆ ಸಾಗಲು ಅವಕಾಶ ನೀಡಲಿಲ್ಲ ಎನ್ನುವ ವಿಚಾರಕ್ಕೆ ಚಾಲಕರು ಗಲಾಟೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಚಾಲಕರು ಪರಸ್ಪರ ಆರೋಪ - ಪ್ರತ್ಯಾರೋಪ ಮಾಡಿಕೊಳ್ಳುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಬಸ್‌ನಲ್ಲಿದ್ದ ಪ್ರಯಾಣಿಕರು, ಗಲಾಟೆಯ ದೃಶ್ಯವನ್ನು ಸೆರೆಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಅಪ್ಲೋಡ್ ಮಾಡಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ರಾಜ್ಯ ಮಟ್ಟದ ಪರಿಸರ ಪರಿಣಾಮ ಮಾಲ್ಯಮಾಪನ ಪ್ರಾಧಿಕಾರವು ಮೆ॥ ರಂಜಿತ್‌ಪುರ ಇನ್‌ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್ ರವರು ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕಿನ, ರಂಜಿತ್‌ಪುರ ಗ್ರಾಮದ ಸರ್ವೆ ನಂ. 40, 41, 42, 43, 44, 45, 47, 53 ಮತ್ತು 54 ರಲ್ಲಿ ಪ್ರಸ್ತಾಪಿಸಿರುವ ಕಬ್ಬಿಣದ ಅದಿರು ಪುಡಿಮಾಡುವ ಸ್ಕ್ರೀನಿಂಗ್ ಮತ್ತು ಪುಡಿಮಾಡುವ ಘಟಕ, ಡಿಆರ್‌ಐ ಘಟಕ, WHRB ಆಧಾರಿತ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ದಿನಾಂಕ: 09.02.2022 ರಂದು ಪತ್ರ ಸಂಖ್ಯೆ SEIAA 07 IND 2020 ಪರಿಸರ ಅನುಮತಿ ನೀಡಿರುತ್ತಾರೆ.

ಈ ಪರಿಸರ ಅನುಮತಿ ಪತ್ರವನ್ನು ರಾಜ್ಯ ಮಟ್ಟದ ಪರಿಸರ ಪರಿಣಾಮ ಮಾಲ್ಯಮಾಪನ ಪ್ರಾಧಿಕಾರ, ಕರ್ನಾಟಕದವರ ವೆಬ್ಸೈಟ್ www.parivesh.nic.in. ಇಲ್ಲಿ ಲಭ್ಯವಿರುತ್ತದೆ.

IN THE COURT OF THE HON'BLE SMALL CAUSES COURT AT BANGALORE (SCCH - 14)

SC. NO. 26/2025

BETWEEN : THE STATE BANK OF INDIA MADAVARA Branch No.452, Bengaluru Tumakur Road, MADAVARA, Bengaluru Represented by its Branch Manger Mrs. Lavanya ...PLAINTIFF

AND : Ms. NEMA RAM, ...DEFENDANT

SUMMONS TO DEFENDANT BY WAY OF PAPER PUBLICATION

Ms.NEMA RAM, D/o. Ruparamji Aged about Major #479, 7TH MAIN ROAD, 10TH CROSS, BHUVANESHWARINAGAR, T. DASARAHALLI, BANGALORE -560057 Ph : 9141119711

Whereas, the Plaintiff has filed a suit Recovery of money instituted the present suit, for sum of Rs.1,89,725/- (Rupees One Lakh Eighty Nine Thousand Seven Hundred Twenty Five Only) and future interest at contractual rate together with other applicable expenses, charges from the date of NPA till closure of loan. Hence you are hereby summoned to appear before court, in person or through a Pleader on **26.9.25 at 11 A.M.** to answer the same failing which suit will be disposed of ex-parte.

Given under my hand and the seal of the court this 29th day of August 2025,

By Order of the Court
Sd/- Assistant Registrar
Court of Small Cause, Bangalore

Advocate for Plaintiff
J. SATHISIH KUMAR, (ADVOCATE)
EWS No,16/2, 1st Cross, 2nd Main, 2nd Stage, KHB (AD Halli), Basaveshwaranagar, Bengaluru-79, Mobile: 9740905079

IN THE COURT OF THE HON'BLE SMALL CAUSES COURT AT BANGALORE (SCCH - 14)

SC. NO. 25/2025

BETWEEN : THE STATE BANK OF INDIA MG Road Branch, NO 9/1, MAHALAKSHMI CHAMBERS, MG ROAD, BANGALORE-560001 Represented by its Manger Mr. Bhoma Ram Meena ...PLAINTIFF

AND : Mr. JAGADEESH, ...DEFENDANT

SUMMONS TO DEFENDANT BY WAY OF PAPER PUBLICATION

Mr. JAGADEESH, S/o Chikkavaeeraih Aged about: 56 years #11, 1ST FLOOR, 1ST CROSS, MARKAM ROAD, ASHOKNAGAR, BANGALORE -560025 Ph: 9380836291.

Whereas, the Plaintiff has filed a sult Recovery of money instituted the present suit, for sum of Rs.1,90,000/- (Rupees One Lakh Ninety Thousand Only) and future interest at contractual rate together with other applicable expenses, charges from the date of NPA till closure of loan. Hence you are hereby summoned to appear before court, in person or through a Pleader on **26.9.2025 at 11 A.M.** to answer the same failing which in suit will be disposed off ex-parte.

Given under my hand and the seal of the court this 29th day of August 2025,

By Order of the Court
Sd/- Assistant Registrar
Court of Small Cause, Bangalore

Advocate for Plaintiff
J. SATHISIH KUMAR, (ADVOCATE)
EWS No,16/2, 1st Cross, 2nd Main, 2nd Stage, KHB (AD Halli), Basaveshwaranagar, Bengaluru-79, Mobile: 9740905079

IN THE SUPREME COURT OF INDIA
EXTRA-ORDINARY APPELLATE JURISDICTION
SPECIAL LEAVE PETITION (CIVIL)
No. 7549 OF 2024
WITH PRAYER FOR INTERIM RELIEF

K. BASAVARAJ GOWDA @ K. BASAVARAJ ... Petitioner(s)

VERSUS

ANASUYAMMA (DEAD) AND OTHERS .....Respondent(s)

To: 1. V. NAGARAJ, S/o Veerabasappa Gowda, R/o. Sampige House, No. 8, 6th Cross Yajamanappa Layout, Nagashetty Halli, Sanjaya Nagar, Bangalore, Karnataka-560094
PID: 168689/2025 For R[7] IN SLP(C) No.7549/2024 (SEC IV-A)

2. SHYAMALA, W/o Puttappa Naika, R/o. Talluru, Soraba Taluk, Shivmoga District, Karnataka 577429
PID: 168690/2025 FOR R[8] IN SLP(C) NO.7549/2024 (SEC IV-A)

3. SUSHEELAMMA, W/o Manjunath, R/o. S. R. Layout, Near Railway Station, Tumkur Town, Tumkur District-572101, Karnataka.
PID: 168691/2025 FOR R[9] IN SLP(C) NO.7549/2024 (SEC IV-A)

WHEREAS the Petition for Special Leave to Appeal with prayer for interim relief along with application for **CONDONATION OF DELAY IN FILING, EXEMPTION FROM FILING O.T., CONDONATION OF DELAY IN REFILING / CURING THE DEFECTS, SUBSTITUTED SERVICE** above mentioned (copy enclosed) filed in the Registry by **Mr. RAJESH MAHALE,** Advocate on behalf of the Petitioner(s) above named was listed for hearing before this Court on **18th March, 2024,** when the Court was pleased to pass the following order:-

"Application for exemption from filing O.T. is allowed.
Delay Condoned.
Issue Notice.
Status quo, existing as on today, shall be maintained by the parties with respect to all aspects of the scheduled property."

AND WHEREAS, the matter above-mentioned was listed before **Hon'ble Court (In Chambers)** on **18th July, 2025,** When the following order was passed:-

"I.A. No. 152321/2025
1. The Interlocutory Application is allowed.
2. Learned counsel for the petitioner is permitted three weeks' time to take the appropriate steps in respect of deceased respondent no. 1.
3. List the matter after three weeks.

NOW, THEREFORE, TAKE NOTICE that the above petition with prayer for interim relief will be posted for hearing before this Court in due course and you may enter appearance before this Court either in person or through an advocate on record of this Court duly appointed by you in that behalf within 30 days from the date of service of notice. You may thereafter show cause to the Court on the day that may subsequently be specified as to why delay in filing SLP delay in filing/refiling SLP be not condoned and Special Leave Petition and interim relief as prayed be not granted and the resultant appeal be not allowed.

You may file your affidavit in opposition to the petition as provided under Rule 14(1) of Order XXI, S.C.R.2013 within 30 days from the date of receipt of notice or not later than 2 weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SLPs and may produce such pleadings and documents filed before the Court/Tribunal against whose order the SLP is filed and shall also set out the grounds for not granting interim order or for vacating interim order if already granted.

TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.

Dated: 23rd July, 2025

ASSISTANT REGISTRAR

Copy to :-
1 Mr. Rajesh Mahale (adv.)
2 Mr. Harisha S.r. (adv.)
3 M/s. Devasa & Co. (adv.)

ಕರ್ನಾಟಕ ಬ್ಯಾಂಕ್ ಲಿಮಿಟೆಡ್

(ನೋಂದಾಯಿತ ಹಾಗೂ ಕೇಂದ್ರ ಕಛೇರಿ: ಮಂಗಳೂರು-575002)

ದೂ: 080-28478864 ಮೊಬೈಲ್: 9449072235
ನಿಮ್ಮ ಕುಟುಂಬದ ಬ್ಯಾಂಕ್, ಭಾರತದಾದ್ಯಂತ

ಶಾಖೆ: ಹುಣಸೆಮಾರನಹಳ್ಳಿ
ಬಿ.ಬಿ. ಎನ್‌ಕ್ಲೇವ್, ನ್ಯೂ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ರಸ್ತೆ ಹುಣಸೆಮಾರನಹಳ್ಳಿ, ಬೆಂಗಳೂರು-562157.

ಇ-ಮೇಲ್: blr.hmhalli@ktkbank.com
ವೆಬ್ ಸೈಟ್: www.karnatakabank.com
CIN: L85110KA1924PLC001128

ಲಾಕರ್ ಒಡೆದು ತೆರೆಯುವ ಸಾರ್ವಜನಿಕ ಸೂಚನೆ

ಲಾಕರ್ ಸೌಲಭ್ಯವನ್ನು ಪಡೆದಿರುವ ಈ ಕೆಳಗಿನ ವ್ಯಕ್ತಿ ನಮ್ಮ ಬೇಡಿಕೆಯ ಸೂಚನೆಯ ಹೊರತಾಗಿಯೂ 4 (ನಾಲ್ಕು) ವರ್ಷಗಳಿಂದ ಲಾಕರ್ ಬಾಡಿಗೆಯನ್ನು ಬ್ಯಾಂಕಿಗೆ ಪಾವತಿಸಿಲ್ಲ. ಆದ್ದರಿಂದ ಲಾಕರ್ ಬಾಡಿಗೆಯನ್ನು **ದಿನಾಂಕ 11.09.2025 ರಂದು ಮಧ್ಯಾಹ್ನ 3.00 ಗಂಟೆಗೆ** ಅಥವಾ ಅದಕ್ಕೂ ಮೊದಲು ಪಾವತಿಸದಿದ್ದರೆ ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕೆಳಗೆ ನಮೂದಿಸಿರುವ ಶಾಖೆಯ ಆವರಣದಲ್ಲಿ ಸೂಚಿಸಲಾದ ದಿನಾಂಕದಂದು **ಮಧ್ಯಾಹ್ನ 3.00 ಗಂಟೆಗೆ** ಲಾಕರ್ ಅನ್ನು ಒಡೆದು ತೆರೆಯಲು ಬ್ಯಾಂಕ್ ನಿರ್ಧರಿಸಿರುತ್ತದೆ ಎಂಬುದನ್ನು ಗಮನಿಸಿ.
ಬ್ಯಾಂಕ್ ಯಾವುದೇ ಸೂಚನೆಯಿಲ್ಲದೆ ಮತ್ತು ಅದಕ್ಕೆ ಯಾವುದೇ ಕಾರಣಗಳನ್ನು ನೀಡದೆಯೇ ಯಾವುದೇ ಅನುಕೂಲಕರ ದಿನಾಂಕಕ್ಕೆ ಮುಂದೂಡುವ / ರದ್ದುಗೊಳಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

ಕ್ರಮ ಸಂಖ್ಯೆ	ಲಾಕರ್ ಸಂಖ್ಯೆ	ಲಾಕರ್ ಪಡೆದ ದಿನಾಂಕ	ಲಾಕರ್ ಪಡೆದವರ ಹೆಸರು	ಲಾಕರ್ ಬಾಡಿಗೆಯ ಬಾಕಿ + ಜಿ.ಎಸ್.ಟಿ. ಮೊತ್ತವು ಸೇರಿ (ರೂ.ಗಳಲ್ಲಿ)	ಸ್ಥಳ ಮತ್ತು ಲಾಕರ್ ಒಡೆಯುವ ದಿನಾಂಕ ಮತ್ತು ಸಮಯ ಮತ್ತು ಸಂಪರ್ಕಿಸಬೇಕಾದ ಸಂಖ್ಯೆ
01	ಲಾಕರ್ ಸಂಖ್ಯೆ 82	12.02.2020	ಶ್ರೀ ಶ್ರೀಧರ್ ಆರ್.	ರೂ.9,605.20	ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಶಾಖೆ: ಹುಣಸೆಮಾರನಹಳ್ಳಿ, ಬಿ.ಬಿ. ಎನ್‌ಕ್ಲೇವ್, ನ್ಯೂ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ರಸ್ತೆ, ಹುಣಸೆಮಾರನಹಳ್ಳಿ, ಬೆಂಗಳೂರು-562157. ಲಾಕರ್ ಒಡೆದು ತೆರೆಯುವ ದಿನಾಂಕ: 12.09.2025 ಮಧ್ಯಾಹ್ನ 3.00 ಗಂಟೆಗೆ ದೂರವಾಣಿ: 080-28478864 - ಮೊಬೈಲ್: 9449072235

ದಿನಾಂಕ: 02.09.2025
ಸ್ಥಳ: ಬೆಂಗಳೂರು

ಸಹಿ/- ಶಾಖಾ ವ್ಯವಸ್ಥಾಪಕರು
ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಹುಣಸೆಮಾರನಹಳ್ಳಿ ಶಾಖೆ, ಬೆಂಗಳೂರು.

KMF Builders & Developers Ltd.

Regd. Office: - Flat No. 508, Golf Manor, NAL Wind Tunnel Road, Murgeshpalya, Bangalore-560017, Ph: -25238007, 41486142-43
CIN: L45203KA1995PLC017422 www.kmfbuilders.com kmfbuilders95@gmail.com

NOTICE OF 30TH ANNUAL GENERAL MEETING, REMOTE E-VOTING INFORMATION AND BOOK CLOSURE

Notice is hereby given that the Thirtieth Annual General Meeting of the Members of KMF Builders and Developers Limited (CIN: L45203KA1995PLC017422) will be held at Hotel SAI Renaissance, Opp. State Bank of India SAI Colony (Whitefield Rly Stn.) Kadugudi, Bangalore 560067 Karnataka, on Tuesday the 23rd day of September 2025 at 09.00 A.M

The Members of the Company are hereby informed that pursuant to Regulation 36 of SEBI (LODR) Regulations, 2015 and Section 108 of the Companies Act, 2013 read with Rule 20 of the Companies (Management and Administration) Amendment Rules, 2015, the company has dispatched/e-mailed Annual Report, Notice along with the Attendance cum proxy slip's to all its members. The Company has engaged the services as provided by National Securities Depository Limited (NSDL) to provide remote e-voting facility to the Members of the company.

E-voting is optional and e-voting rights of the members will be reckoned on the Equity shares held by them 16th September, 2025. The remote E- voting period commences on 20th September 2025 Saturday (09.00 a.m.) and ends on 22nd September 2025, (05:00 p.m.) Monday. During this period, the member may cast their vote electronically. The remote *e-voting* module shall be disabled by National Securities Depository Limited (NSDL) thereafter.

E-voting will not be allowed beyond the aforesaid date. Any person, who acquires the shares of the company and becomes member of the company after dispatch of annual reports and holding shares as the cut off date i.e. 16th September 2025, may obtain the login ID and password by sending an email to **evoting@nsdl.co.in**, by mentioning their Folio No./DP ID Client ID or may contact on toll free no.1800222990.

Members who have not cast their vote by remote e-voting can exercise voting rights at the AGM. The company will make arrangements of Ballot Paper in this regard at the AGM Venue. A member may participate in the meeting even after exercising his/her right to vote through remote e-voting but shall not be allowed to vote again at the meeting. The member, whose names appear in the register of members / list of beneficial owners as on 16th September 2025 are entitled to vote on the Resolutions set forth in this notice.

In case of any queries, the members may refer the Frequently asked questions (FAQS) for members and e-voting user's manual for members available at the download sections of **https://www.evoting.nsdl.com** or contact on the above-mentioned toll-free number.

The results of the remote e-voting and poll at the AGM along with Scrutinizer report will be placed on the Company website ww.kmfbuilders.com and on the website of National Securities Depository Limited (NSDL) **www.evoting.nsdl.com** within Forty-Eight (48) hours of passing of the resolutions at the AGM to be held on 23 September 2025, for information to the members and communicated to the BSE Limited.

BOOK CLOSURE FOR AGM

Notice pursuant to the provisions of Section 91 of the Companies Act, 2013 and rules 10 Companies (Management and Administration) Amendments Rules, 2015 is also hereby given the Register of Members and the Share Transfer Book of the Company will remain closed from Monday, 15th September 2025, to Friday 19th September 2025, (both days inclusive) for the purpose of holding AGM.

Date: 29.08.2025
Place: Delhi

By order of the Board of Directors
KMF Builders & Developers ltd
sd/-
Gorve Chadha
Managing Director

ಇಜ್ಮೋ ಲಿಮಿಟೆಡ್

CIN-L72200KA1995PLC018734
ನೋಂದಾಯಿತ ಕಛೇರಿ: ನಂ.177/2ಸಿ, ಬಿಳೇಕಹಳ್ಳಿ ಕೈಗಾರಿಕಾ ಪ್ರದೇಶ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076,
E-Mail-info@izmoltd.com www.izmoltd.com

30ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ('ಎಂಸಿಎ') ಹೊರಡಿಸಿದ ಸುತ್ತೋಲೆ ಸಂಖ್ಯೆ 14/2020, ಏಪ್ರಿಲ್ 8, 2020 ಅನ್ನು ಓದಿಕೊಂಡಂತೆ ಸುತ್ತೋಲೆ ಸಂಖ್ಯೆ 09/2024 ದಿನಾಂಕ 19ನೇ ಸೆಪ್ಟೆಂಬರ್, 2024 ಕ್ರಮವಾಗಿ (ಮುಂದುವರಿದಂತೆ, "ಎಂಸಿಎ ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗುವುದು) ಓದಿಕೊಂಡಂತೆ ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2024/133 ದಿನಾಂಕ 03ನೇ ಅಕ್ಟೋಬರ್, 2024 ಅನ್ನು ಓದಿಕೊಂಡಂತೆ (ಇನ್ನು ಮುಂದೆ "ಸೆಬಿ ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗುವುದು) ಕಂಪನಿಗಳು ವಾರ್ಷಿಕ ಸಾಮಾನ್ಯ ಸಭೆಯನ್ನು ವೀಡಿಯೊ ಕಾನ್ಫರೆನ್ಸಿಂಗ್('ವಿಸಿ') ಮೂಲಕ ಅಥವಾ ಇತರ ಆಡಿಯೊ-ವಿಷುಯಲ್ ಸಾಧನಗಳು ('ಒಎವಿಎಂ') ಮೂಲಕ ನಡೆಸಲಾಗುವುದು, ಆ ಮೂಲಕ, ಸದಸ್ಯರ ಭೌತಿಕ ಹಾಜರಾತಿಯ ಬದಲಾಗಿ ಅದಕ್ಕೆ ಅನುಗುಣವಾಗಿ ಕಂಪೆನಿಗಳ ಕಾಯ್ದೆ, 2013 ರ (ತಿದ್ದುಪಡಿಯಂತೆ) ("ಕಾಯಿದೆ") ಸೆಬಿಯ ನಿಯಮಗಳು (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗ ಪಡಿಸುವಿಕೆ ಅವಶ್ಯಕತೆಗಳು) ನಿಯಮಗಳು, 2015 (ತಿದ್ದುಪಡಿಯಂತೆ) (ಲಿಸ್ಟಿಂಗ್ ವಿಧಾಯಕ) ಅಡಿಯಲ್ಲಿ ಇಜ್ಮೋ (ದಿ **"ಕಂಪೆನಿ") ಶುಕ್ರವಾರ ಸೆಪ್ಟೆಂಬರ್ 26ನೇ, 2025ರಂದು ಮಧ್ಯಾಹ್ನ 12.30ಗೆ (ಐಎಸ್‌ಟಿ)** ಸಭೆಯನ್ನು ವೀಡಿಯೊ ಕಾನ್ಫರೆನ್ಸಿಂಗ್('ವಿಸಿ') ಮೂಲಕ ಅಥವಾ ಇತರ ಆಡಿಯೊ-ವಿಷುಯಲ್ ಸಾಧನಗಳು ('ಒಎವಿಎಂ') ಮೂಲಕ ನಡೆಸಲಾಗುವುದೆಂದು ಈ ಮೂಲಕ ನೋಟೀಸ್ ನೀಡಲಾಗಿದೆ.

ಸುತ್ತೋಲೆ ಅನುಸಾರ ಸರ್ವಸದಸ್ಯರ ಸಾಮಾನ್ಯ ಸಭೆಯ ಸೂಚನೆಪತ್ರ ಮತ್ತು ವಾರ್ಷಿಕ ಸಾಮಾನ್ಯ ಸಭೆ **ಮಾರ್ಚ್ 31, 2025ರಂದು ಅಂತ್ಯವಾಗುವ** ಆರ್ಥಿಕ ವರ್ಷದ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಯನ್ನು, ರಿಜಿಸ್ಟ್ರಾರ್ ಹಾಗೂ ಷೇರು ವರ್ಗಾವಣೆ ಏಜೆಂಟ್ / ಕಂಪನಿ/ ಠೇವಣಿದಾರರು ಅವರೊಂದಿಗೆ ನೊಂದಾಯಿಸಲಾದ ಸದಸ್ಯರ ಇ-ಮೇಲ್ ಐಡಿಗಳಿಗೆ ರವಾನಿಸಲಾಗಿದೆ. ಷೇರುದಾರರ ಗಮನಕ್ಕೆ ತರುವುದೇನೆಂದರೆ **30ನೇ ಎಜಿಎಂ** ಸೂಚನೆ ಜೊತೆಗೆ ವಾರ್ಷಿಕ ವರದಿ, ಇ-ಮತದಾನದ ಸೂಚನೆಗಳು ಮತ್ತು ವಿಸಿ/ಒಎವಿಎಂ ಮೂಲಕ ಎಜಿಎಂ'ನಲ್ಲಿ ಭಾಗವಹಿಸುವಿಕೆ ಬಗ್ಗೆ ವಿವರಗಳು ಕಂಪೆನಿ ವೆಬ್‌ಸೈಟ್ **www.izmoltd.com** ಮತ್ತು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್,. ಅಂದರೆ **www.nseindia.com** ಮತ್ತು **www.bseindia.com** ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ (ಆರ್‌ಟಿಎ)'ರವರಾದ ಮೆ॥ ಕೆಮಿಯೋ ಕಾರ್ಪೊರೇಟ್ ಸರ್ವಿಸಸ್ ಲಿಮಿಟೆಡ್ ರಲ್ಲಿ ಲಭ್ಯವಿರುತ್ತದೆ ಎಂದು ಷೇರುದಾರರಿಗೆ ತಿಳಿಸಲಾಗಿದೆ ಮತ್ತು **ಶುಕ್ರವಾರ, ಆಗಸ್ಟ್, 29, 2025,** ರಂದು ಇದ್ದಂತೆ ಕಂಪನಿಯ ಷೇರುಗಳನ್ನು ಹೊಂದಿದೆ. ಸೂಚನೆಯು ಇ-ಮತದಾನದ ಸೇವಾದರರು ಅಂದರೆ ಸೆಂಟ್ರಲ್ ಸೆಕ್ಯೂರಿಟಿಸ್ ಡೆಪೊಸಿಟರಿಸ್ ಸರ್ವಿಸಸ್ ಲಿಮಿಟೆಡ್ ("ಸಿಡಿಎಸ್‌ಎಲ್")ರ ಇ-ಮತದಾನದ ವೆಬ್‌ಸೈಟ್ **www.cdslindia.com** ರಲ್ಲಿ ಲಭ್ಯವಿರುತ್ತದೆ.

ಸದಸ್ಯರ ಗಮನಕ್ಕೆ:

1. ಕಂಪೆನಿಗಳ ಕಾಯ್ದೆ, 20 ರ ಸೆಕ್ಷನ್ 108 ರ ಅನುಸಾರ, ಕಂಪೆನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014(ತಿದ್ದುಪಡಿ ಅನುಸಾರ), ಲಿಸ್ಟಿಂಗ್ ರೆಗುಲೇಷನ್ಸ್'ನ ರೆಗ್ಯುಲೇಶನ್ 44, 30ನೇ ಎಜಿಎಂನಲ್ಲಿ ವಹಿವಾಟು ನಡೆಸಬೇಕಾದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಕಂಪನಿಯು ತನ್ನ ಸದಸ್ಯರಿಗೆ ಸಿಡಿಎಸ್‌ಎಲ್ ಮೂಲಕ ಇ-ಮತದಾನ ಸೌಲಭ್ಯಗಳನ್ನು ಒದಗಿಸಲು ಬದ್ಧವಾಗಿರುತ್ತದೆ. ಸಭೆಯಲ್ಲಿ ದೂರಗಾಮಿ ಇ-ಮತದಾನದ ಮೂಲಕ ಮತ್ತು ಇ-ಮತದಾನ ವ್ಯವಸ್ಥೆಯ ಮೂಲಕ ಮತ ಚಲಾಯಿಸುವ ವಿಧಾನ ಮತ್ತು ಸೂಚನೆಗಳನ್ನು ನೋಟಿಸ್‌ನೊಂದಿಗೆ ಒದಗಿಸಲಾಗಿದೆ.
2. 30ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆಯಲ್ಲಿ ಸೂಚಿಸಲಾದ ವ್ಯವಹಾರಗಳನ್ನು ಇ-ವೋಟಿಂಗ್ ಮೂಲಕ ಮಾತ್ರ ವಹಿವಾಟು ನಡೆಸಬೇಕು. **ಸೆಪ್ಟೆಂಬರ್ 19, 2025 ರ ಶುಕ್ರವಾರ ರಂದು** ಸದಸ್ಯರ ರಿಜಿಸ್ಟರ್ ಅಥವಾ ಠೇವಣಿದಾರರು ನಿರ್ವಹಿಸುವ ಲಾಭದಾಯಕ ಮಾಲೀಕರ ರಿಜಿಸ್ಟರ್‌ನಲ್ಲಿ ಅವರ ಹೆಸರುಗಳು ಕಂಡುಬರುತ್ತವೆ, ಇ-ವೋಟಿಂಗ್ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಒಮ್ಮೆ ಯಾವುದೇ ಸದಸ್ಯರು ನಿರ್ಣಯ(ಗಳ) ಮೇಲೆ ಮತ(ಗಳನ್ನು) ಚಲಾಯಿಸಿದರೆ ಅದನ್ನು ನಂತರ ಬದಲಾಯಿಸಲಾಗುವುದಿಲ್ಲ. ರಿಮೋಟ್ ಇ-ವೋಟಿಂಗ್ **ಸೆಪ್ಟೆಂಬರ್ 23, 2025 ರ ಮಂಗಳವಾರ ರಂದು ಪ್ರಾರಂಭವಾಗುತ್ತದೆ (9:00 ಎ.ಎಂ. ಐಎಸ್‌ಟಿ) ಮತ್ತು ಸೆಪ್ಟೆಂಬರ್ 25, 2025 ರ ಗುರುವಾರ (5:00 ಪಿ.ಎಂ. ಐಎಸ್‌ಟಿ)** ನಂತರ ದೂರಸ್ಥ ಇ-ಮತದಾನದ ಮಾಡ್ಯೂಲ್ ಅನ್ನು ಮತದಾನಕ್ಕಾಗಿ ಸಿಡಿಎಸ್‌ಎಲ್ ನಿಷ್ಕ್ರಿಯಗೊಳಿಸುತ್ತದೆ. ಕಟ್-ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿ, ಅಂದರೆ, **ಸೆಪ್ಟೆಂಬರ್ 19, 2025, ಶುಕ್ರವಾರ,** ನೋಟಿಸ್ ಅನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಪರಿಗಣಿಸಬೇಕು.
3. ದೂರಗಾಮಿ ಇ-ಮತದಾನದ ಮೂಲಕ ಮತ ಚಲಾಯಿಸದ ಎಜಿಎಂಗೆ ಹಾಜರಾಗುವ ಸದಸ್ಯರು ಎಜಿಎಂ ಸಮಯದಲ್ಲಿ **www.cdslindia.com** ಮೂಲಕ ತಮ್ಮ ಮತದಾನದ ಹಕ್ಕನ್ನು **e-Voting system** ಮೂಲಕ ತಮ್ಮ ಮತದಾನದ ಹಕ್ಕುಗಳನ್ನು ಚಲಾಯಿಸಲು ಅರ್ಹರಾಗಿರುತ್ತಾರೆ.
   ಎಜಿಎಂಗೆ ಮುಂಚಿತವಾಗಿ ರಿಮೋಟ್ ಇ-ಮತದಾನದ ಮೂಲಕ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದ ಸದಸ್ಯರು ವಿಸಿ ಅಥವಾ ಒಎವಿಎಂ ಮೂಲಕ ಎಜಿಎಂಗೆ ಹಾಜರಾಗಬಹುದು ಆದರೆ ಎಜಿಎಂ ಸಮಯದಲ್ಲಿ ಮತ್ತೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.
4. ಕಂಪನಿಯ ಇಕ್ವಿಟಿ ಷೇರುಗಳನ್ನು ಸ್ವಾಧೀನಪಡಿಸಿಕೊಂಡ ಮತ್ತು 30ನೇ ಎಜಿಎಂನ ನೋಟಿಸ್ ರವಾನೆಯಾದ ನಂತರ ಸದಸ್ಯರಾಗುವ ಮತ್ತು ಕಟ್-ಆಫ್ ದಿನಾಂಕದಂದು ಷೇರುಗಳನ್ನು ಹೊಂದಿರುವ ಯಾವುದೇ ವ್ಯಕ್ತಿ, ಅಂದರೆ **ಸೆಪ್ಟೆಂಬರ್ 19, 2025** ಇ-ಮತದಾನಕ್ಕಾಗಿ ಲಾಗಿನ್ ಐಡಿ ಮತ್ತು ಪಾಸ್ವರ್ಡ್ ಅನ್ನು ಪಡೆಯಬಹುದು. helpdesk.evoting@cdslindia.com ನಲ್ಲಿ ಸಿಡಿಎಸ್‌ಎಲ್‌ಗೆ ಅಥವಾ ಕಂಪನಿ. secretary@izmoltd.com ನಲ್ಲಿ ಕಂಪನಿಗೆ ವಿನಂತಿಯನ್ನು ಕಳುಹಿಸಲಾಗುತ್ತಿದೆ.
   ದೂರಸ್ಥ ಇ-ಮತದಾನಕ್ಕಾಗಿ ಈಗಾಗಲೇ ಸಿಡಿಎಸ್‌ಎಲ್‌ನಲ್ಲಿ ನೋಂದಾಯಿಸಿಕೊಂಡಿರುವ ಸದಸ್ಯರು ತಮ್ಮ ಅಸ್ತಿತ್ವದಲ್ಲಿರುವ ಬಳಕೆದಾರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಇ-ಮತದಾನಕ್ಕಾಗಿ ಬಳಸಬಹುದು.
5. ನೋಟಿಸ್ ಮತ್ತು ಅದರ ವಿವರಣಾತ್ಮಕ ಹೇಳಿಕೆಯಲ್ಲಿ ಉಲ್ಲೇಖಿಸಲಾದ ಎಲ್ಲಾ ದಾಖಲೆಗಳನ್ನು ಕಂಪನಿಯ ಸದಸ್ಯರು ಶುಲ್ಕವನ್ನು ಪಾವತಿಸದೆ, ಎಜಿಎಂ ದಿನಾಂಕದವರೆಗೆ ಮತ್ತು ಪರಿಶೀಲನೆಗಾಗಿ ಲಭ್ಯವಾಗುವಂತೆ ಮಾಡುತ್ತಾರೆ. ಇದನ್ನು ಪರಿಶೀಲಿಸಲು ಬಯಸುವ ಸದಸ್ಯರು ತಮ್ಮ ನೋಂದಾಯಿತ ಇ-ಮೇಲ್ ವಿಳಾಸಗಳಿಂದ ತಮ್ಮ ಹೆಸರುಗಳು ಮತ್ತು ಫೋಲಿಯೊ ಸಂಖ್ಯೆಗಳು / ಡಿಮ್ಯಾಟ್ ಖಾತೆ ಸಂಖ್ಯೆಗಳನ್ನು ನಮೂದಿಸಿ ತಮ್ಮ ವಿನಂತಿಯನ್ನು **company.secretary@izmoltd.com** ಗೆ ಕಳುಹಿಸಬಹುದು.
6. ಇ-ಮತದಾನಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು / ವಿಚಾರಣೆಗಳಿದ್ದಲ್ಲಿ ಸದಸ್ಯರು ಇ-ಮತದಾನ (ಷೇರುದಾರರಿಗೆ) ಪಿಡಿಎಫ್ ಮತ್ತು "ಇ-ಮತದಾನ ಬಳಕೆದಾರರ ಕೈಪಿಡಿ-ಎಫ್‌ಎಕ್ಯೂ'ಗಳು ಅನ್ನು ಉಲ್ಲೇಖಿಸಬಹುದು. ಪಿಡಿಎಫ್ ಸಿಡಿಎಸ್‌ಎಲ್ ಇ-ಮತದಾನ ವೆಬ್‌ಸೈಟ್‌ನ" ಡೌನ್‌ಲೋಡ್ "ವಿಭಾಗದಲ್ಲಿ ಲಭ್ಯವಿದೆ, ಅಂದರೆ **www.evotingindia** ಅಥವಾ **helpdesk.evoting@ cdslindia.com** ಅಥವಾ **022-23058738 ಮತ್ತು 022-23058542/43** ನಲ್ಲಿ ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್‌ನ ಸಹಾಯಕ ವ್ಯವಸ್ಥಾಪಕರಾದ ಶ್ರೀಕಾಂತ್ ರೆಡ್ಡಿ ಅವರನ್ನು ಸಂಪರ್ಕಿಸಿ.

ಸ್ಥಳ : ಬೆಂಗಳೂರು
ದಿನಾಂಕ: 01.09.2025

ಇಜ್ಮೋ ಲಿಮಿಟೆಡ್ ಪರವಾಗಿ
ಸಹಿ/-
ವರುಣ್ ಕುಮಾರ್ ಎ ಎಸ್
ಕಂಪನಿ ಕಾರ್ಯದರ್ಶಿ & ಅನುಸರಣೆ ಅಧಿಕಾರಿ

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ.

ಪ್ರಕಟಣೆ

ವಿಷಯ: Inclusive Education for Disabled at Secondary Stage (IEDSS) ಯೋಜನೆಯಡಿ ಹೆಚ್ಚುವರಿಯಾಗಿ ಅನುದಾನ ಪಡೆದಿರುವ ರಾಜ್ಯದ 20 ವಿವಿಧ ಸ್ವಯಂ ಸೇವಾ ಸಂಸ್ಥೆಗಳ ವಿರುದ್ಧ ಕ್ರಮವಹಿಸುವ ಬಗ್ಗೆ.

Inclusive Education for Disabled at Secondary Stage (IEDSS) ಯೋಜನೆ ಅನುಷ್ಠಾನದಲ್ಲಿ ತೊಡಗಿಸಿಕೊಂಡ ಸ್ವಯಂ ಸೇವಾ ಸಂಸ್ಥೆಗಳು ತಾವು ಸಂಸ್ಥೆಗಳು ತಾವು ಒದಗಿಸಿದ ಸೇವೆಗೆ ಅರ್ಹದಾಯಕ ಮೊತ್ತಕ್ಕಿಂತ ಹೆಚ್ಚುವರಿಯಾಗಿ ಅನುದಾನವನ್ನು ಪಡೆದುಕೊಂಡಿರುವುದು ಕಂಡು ಬಂದಿರುವುದಾಗಿ ಹಾಗೂ ಈ ವಿಷಯವು ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮುಂದೆ ಚರ್ಚೆಗೆ ಬಂದಿದ್ದು, ಸದರಿ ಸಂಸ್ಥೆಗಳ ಮಾನ್ಯತೆ ರದ್ದುಗೊಳಿಸಲು ಕ್ರಮವಹಿಸುವಂತೆ ಸಮಿತಿ ಸೂಚಿಸಿರುವ ಹಿನ್ನಲೆಯಲ್ಲಿ **Vernekar Education Society**, #137, Nethaji Road, BTS Layout, Arckere, Bannerughatta Road, Bengaluru-560076 ವಿಳಾಸದಲ್ಲಿ ಕಾರ್ಯನಿರ್ವಹಿಸುತ್ತಿಲ್ಲದೇ ಇರುವುದು ಕಂಡು ಬಂದಿರುತ್ತದೆ. ಈ ಕಛೇರಿಯಿಂದ ನೀಡಿರುವ ನೋಟೀಸ್ NO SUCH ADDRESS ಎಂಬ ಅಂಚೆ ಷರಾದೊಂದಿಗೆ ವಾಪಸ್ ಬಂದಿದ್ದು ಕೂಡಲೇ ಈ ಸಂಸ್ಥೆಗೆ ಸಂಬಂಧಿಸಿರುವ ಅಧ್ಯಕ್ಷರು/ ಕಾರ್ಯದರ್ಶಿಯಾಗಲೀ, ಕಾರ್ಯಕಾರಿ ಸಮಿತಿ ಸದಸ್ಯರಾಗಲೀ, ಕೂಡಲೇ ಮೇಲ್ಕಂಡ ವಿಳಾಸದ ಕಛೇರಿಗೆ ಖುದ್ದು ಹಾಜರಾಗಿ ಈ ಸಂಘಕ್ಕೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಸಲ್ಲಿಸಿರುವ ವಿವರ, ಸಂಘದ ಮೂಲ ಬೈಲಾ ಪ್ರತಿ, ಲೆಕ್ಕ ಪರಿಶೋಧಿದತ ವರದಿಗಳು ಸರ್ಕಾರದಿಂದ ಅನುದಾನ ಪಡೆದಿರುವ ಮಾಹಿತಿ ಸಂಘದ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ. ತಪ್ಪಿದ್ದಲ್ಲಿ ಕಾನೂನು ರೀತ್ಯಾ ನಿಯಮಾನುಸಾರ ಕ್ರಮವಿಡುವುದು ಎಂಬುದನ್ನು ಈ ಮೂಲಕ ತಿಳಿಯಪಡಿಸಿದೆ.

ಸಹಿ/-
ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು
3ನೇ ವಲಯ, ಬೆಂಗಳೂರು ನಗರ ಜಿಲ್ಲೆ.

SUBEX

ಸುಬೆಕ್ಸ್ ಲಿಮಿಟೆಡ್

(ಸಿಐಎನ್: L85110KA1994PLC016663)
ನೋಂದಾಯಿತ ಕಚೇರಿ: ಪ್ರಿಟೆಕ್ ಪಾರ್ಕ್ - ಎಸ್‌ಇಝೆಡ್, ಬ್ಲಾಕ್-09, 4ನೇ ಮಹಡಿ, ಬಿ ವಿಂಗ್, ಸರ್ವೆ ನಂ. 51-64/4, ಹೊರವರ್ತುಲ ರಸ್ತೆ, ಬೆಳ್ಳಂದೂರು ವಿಲೇಜ್, ವರ್ತೂರು ಹೋಬಳಿ, ಬೆಂಗಳೂರು, ಕರ್ನಾಟಕ, ಭಾರತ-560103 ದೂರವಾಣಿ: 080 3745 1377
ಇಮೇಲ್: investorrelations@subex.com ಜಾಲತಾಣ: www.subex.com

ಸುಬೆಕ್ಸ್ ಲಿಮಿಟೆಡ್ 'ಕಂಪನಿ' ಯ ಸದಸ್ಯರ 31ನೇ ವಾರ್ಷಿಕ ಮಹಾ ಸಭೆಯನ್ನು ವಿಡಿಯೋ-ಕಾನ್ಫರೆನ್ಸ್ / ಇತರೆ ದೃಶ್ಯಶ್ರಾವ್ಯ ಮಾಧ್ಯಮದ ಮೂಲಕ ನಡೆಸುವ ಮತ್ತು ರಿಮೋಟ್ ಇ-ಮತದಾನ ವ್ಯವಸ್ಥೆ ಕುರಿತ ಸೂಚನೆ

ಸುಬೆಕ್ಸ್ ಲಿಮಿಟೆಡ್ ("ಕಂಪನಿ")ನ ಸದಸ್ಯರ 31ನೇ ವಾರ್ಷಿಕ ಮಹಾ ಸಭೆಯು ('ಎಜಿಎಂ') ಸೋಮವಾರ, ಸೆಪ್ಟೆಂಬರ್ 29, 2025ರಂದು ಬೆಳಿಗ್ಗೆ 11.00 ಗಂಟೆಗೆ (ಐಎಸ್‌ಟಿ) ನಿಗದಿಪಡಿಸಿದ್ದು, ವಿಡಿಯೋ-ಕಾನ್ಫರೆನ್ಸ್ / ಇತರೆ ದೃಶ್ಯಶ್ರಾವ್ಯ ಮಾಧ್ಯಮದ ("ವಿಸಿ / ಒಎವಿಎಂ") ಮೂಲಕ ನಡೆಸಲಾಗುವುದು. ಮಿನಿಸ್ಟ್ರಿ ಆಫ್ ಕಾರ್ಪೋರೇಟ್ ಅಫೇರ್ಸ್‌ನಿಂದ ಹೊರಡಿಸಲಾದ ಸಾಮಾನ್ಯ ಸುತ್ತೋಲೆ ಸಂಖ್ಯೆ 09/2024 ದಿನಾಂಕ ಸೆಪ್ಟೆಂಬರ್ 19, 2024 ಜೊತೆಗೆ ಇದೇ ವಿಷಯಕ್ಕೆ ಸಂಬಂಧಿಸಿದ ಸುತ್ತೋಲೆಗಳನ್ನು ಓದಿಕೊಂಡಂತೆ ("ಎಂಸಿಎ ಸುತ್ತೋಲೆಗಳು") ಮತ್ತು ಸೆಬಿಯಿಂದ ಹೊರಡಿಸಲಾದ ಸುತ್ತೋಲೆ ಸಂಖ್ಯೆ SEBI/HO/CFD/CFD-PoD2/P/CIR/2024/133 ದಿನಾಂಕ ಅಕ್ಟೋಬರ್ 3, 2024 ಜೊತೆಗೆ ಇದೇ ವಿಷಯಕ್ಕೆ ಸಂಬಂಧಿಸಿದ ಸುತ್ತೋಲೆಗಳನ್ನು ಓದಿಕೊಂಡಂತೆ ("SEBI ಸುತ್ತೋಲೆಗಳು") ಮತ್ತು ಕಂಪನಿಗಳ ಕಾಯ್ದೆ 2013 ("ಕಾಯ್ದೆ") ಮತ್ತು ಎಸ್‌ಇಬಿಐ (ಆಭಾರಗಳು ಮತ್ತು ಪ್ರಕಟಪಡಿಸುವಿಕೆಯ ಅಗತ್ಯತೆಯ ಸೇರ್ಪಡೆ) ನಿಯಮಗಳು 2015ರ ಮತ್ತು ಇತರೆ ಅನ್ವಯವಾಗುವ ಕಾನೂನುಗಳ ಅನುಸಾರ ಸೂಚನೆಯಲ್ಲಿ ತಿಳಿಸಿರುವಂತೆ ವ್ಯವಹಾರವನ್ನು ನಡೆಸಲು ವಾರ್ಷಿಕ ಮಹಾ ಸಭೆಯನ್ನು ಕರೆಯಲು ಸೂಚನೆ ನೀಡಲಾಗಿದೆ.

ಮೇಲಿನ ಸುತ್ತೋಲೆಗಳ ಅನುಸಾರವಾಗಿ ಕಂಪನಿ / ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ (ಆರ್‌ಟಿಎ) / ಡೆಪಾಸಿಟರಿ ಪಾರ್ಟಿಸಿಪೆಂಟ್ಸ್‌ರಲ್ಲಿ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿರುವ ಎಲ್ಲಾ ಷೇರುದಾರರಿಗೆ ವಾರ್ಷಿಕ ಮಹಾ ಸಭೆಯ ನೋಟೀಸ್ ಮತ್ತು 2024-25ನೇ ಸಾಲಿನ ವಾರ್ಷಿಕ ವರದಿಯು ವಿದ್ಯುನ್ಮಾನ ಮೂಲಕ ಸೂಕ್ತ ಸಮಯದಲ್ಲಿ ಕಳುಹಿಸಲಾಗುತ್ತದೆ. ವಾರ್ಷಿಕ ಮಹಾಸಭೆಯ ಸೂಚನೆ ಮತ್ತು ವಾರ್ಷಿಕ ವರದಿಯು ಕಂಪನಿಯ ಜಾಲತಾಣ https://www.subex.com/investors/shareholder-services/ ಮತ್ತು ಕಂಪನಿಯ ಷೇರುಗಳನ್ನು ಪಟ್ಟಿಮಾಡಿರುವ ಸ್ಟಾಕ್ ಎಕ್ಸ್‌ಚೇಂಜ್ ಜಾಲತಾಣಗಳಲ್ಲಿ ಅಂದರೆ ಬಿಎಸ್‌ಇ ಲಿಮಿಟೆಡ್ (www.bseindia.com) ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (www.nseindia.com) ಜಾಲತಾಣಗಳಲ್ಲಿ ಹಾಗೂ ಎನ್‌ಎಸ್‌ಡಿಎಲ್‌ರವರ ಜಾಲತಾಣ www.evoting.nsdl.comನಲ್ಲಿ ಲಭ್ಯವಿದೆ. ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರಿಗೆ, ವಾರ್ಷಿಕ ವರದಿ ಮತ್ತು ವಾರ್ಷಿಕ ಮಹಾಸಭೆಯ ಸೂಚನೆಯನ್ನು ಹೋಸ್ಟ್ ಮಾಡಲಾಗುವ ವೆಬ್‌ಸೈಟ್‌ನ ನಿಖರವಾದ ವೆಬ್‌ಲಿಂಕ್ ಅಂದರೆ https://www.subex.com/investors/shareholder-services/ ಅನ್ನು ಒಳಗೊಂಡಿರುವ ಪತ್ರವನ್ನು ಕಂಪನಿ/ಡೆಪಾಸಿಟರಿ/ಆರ್‌ಟಿಎ ದಾಖಲೆಗಳಲ್ಲಿ ನೋಂದಾಯಿಸಲಾದ ವಿಳಾಸಕ್ಕೆ ಕಳುಹಿಸಲಾಗುತ್ತದೆ.

ಕಂಪನಿಯು ವಾರ್ಷಿಕ ಮಹಾ ಸಭೆಯ ಸಂದರ್ಭದಲ್ಲಿ ಇ-ಮತದಾನ ಚಲಾಯಿಸುವ ವ್ಯವಸ್ಥೆಯನ್ನು ಒದಗಿಸುತ್ತಿದೆ. ಇ-ಮತದಾನವು ಗುರುವಾರ, ಸೆಪ್ಟೆಂಬರ್ 25, 2025ರ ಬೆಳಿಗ್ಗೆ 9.00ಕ್ಕೆ (ಐಎಸ್‌ಟಿ) ಪ್ರಾರಂಭವಾಗುವುದು ಮತ್ತು ಭಾನುವಾರ, ಸೆಪ್ಟೆಂಬರ್ 28, 2025ರ ಸಂಜೆ 5.00ಕ್ಕೆ (ಐಎಸ್‌ಟಿ) ಮುಕ್ತಾಯಗೊಳ್ಳುವುದು, ತದನಂತರ ರಿಮೋಟ್ ಇ-ಮತದಾನದ ಸೌಲಭ್ಯವನ್ನು ನಿಷ್ಕ್ರಿಯಗೊಳಿಸಲಾಗುವುದು. ಸದಸ್ಯರು ವಾರ್ಷಿಕ ಮಹಾ ಸಭೆಯ ಸಮಯದಲ್ಲಿ ರಿಮೋಟ್ ಇ-ಮತದಾನ ಮೂಲಕ ಮತ ಚಲಾಯಿಸಬಹುದು ಮತ್ತು ರಿಮೋಟ್ ಇ-ಮತದಾನ ಹಾಗೂ ವಾರ್ಷಿಕ ಮಹಾ ಸಭೆಯ ಸಮಯದಲ್ಲಿ ಇ-ಮತದಾನದ ಮೂಲಕ ಮತ ಚಲಾಯಿಸುವ ಕಾರ್ಯವಿಧಾನವನ್ನು ಸೂಚನೆಯಲ್ಲಿ ನೀಡಲಾಗುವುದು. ರಿಮೋಟ್ ಇ-ಮತದಾನದ ಮೂಲಕ ತನ್ನ ಮತದಾನದ ಹಕ್ಕನ್ನು ಚಲಾಯಿಸಿದ ನಂತರವೂ ಸಹ ಸದಸ್ಯರು 31ನೇ ವಾರ್ಷಿಕ ಮಹಾ ಸಭೆಯಲ್ಲಿ ಭಾಗವಹಿಸಬಹುದು ಆದರೆ ಸಭೆಯಲ್ಲಿ ಮತ್ತೆ ಮತ ಚಲಾಯಿಸಲು ಅನುಮತಿಸಲಾಗುವುದಿಲ್ಲ.

ಮುಂದುವರೆದು, ಇ-ಮತದಾನ / ವಾರ್ಷಿಕ ಮಹಾ ಸಭೆಯಲ್ಲಿ ಭಾಗವಹಿಸಲು ಅರ್ಹ ಷೇರುದಾರರನ್ನು ಖಚಿತಪಡಿಸುವ ನಿರ್ಣಾಯಕ ದಿನಾಂಕವು ಸೋಮವಾರ, ಸೆಪ್ಟೆಂಬರ್ 22, 2025 ಆಗಿರುತ್ತದೆ. ವಾರ್ಷಿಕ ಮಹಾ ಸಭೆಯ ಸೂಚನೆಯನ್ನು ರವಾನಿಸಿದ ನಂತರ ಕಂಪನಿಯ ಷೇರುಗಳನ್ನು ಸ್ವಾಧೀನಪಡಿಸಿಕೊಳ್ಳುವ ಮತ್ತು ನಿರ್ಣಾಯಕ ದಿನಾಂಕ ಅಂದರೆ, ಸೆಪ್ಟೆಂಬರ್ 22, 2025ರ ನಂತರ ಕಂಪನಿಯ ಷೇರುದಾರರಾಗುವ ಯಾವುದೇ ವ್ಯಕ್ತಿಯು, ಅವರ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಅನ್ನು ಪಡೆದುಕೊಳ್ಳುವ ವಿಧಾನವನ್ನು ವಾರ್ಷಿಕ ಮಹಾ ಸಭೆಯ ಸೂಚನೆಯಲ್ಲಿ ನೀಡಲಾಗುವುದು.

ಸದಸ್ಯರು (ಭೌತಿಕ / ವಿದ್ಯುನ್ಮಾನ ಸ್ವರೂಪ ಎರಡರಲ್ಲೂ ಷೇರುಗಳನ್ನು ಹೊಂದಿರುವವರು) ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸಿಕೊಳ್ಳುವುದನ್ನು ಕಂಪನಿಯು ಪ್ರೋತ್ಸಾಹಿಸುತ್ತದೆ. ಇಮೇಲ್ ವಿಳಾಸ, ಬ್ಯಾಂಕ್ ಖಾತೆ ವಿವರಗಳು ಮತ್ತು/ಅಥವಾ ಇತರೆ ಕೆವೈಸಿ ವಿವರಗಳ ನೋಂದಣಿ ವಿಧಾನ, ವಾರ್ಷಿಕ ಮಹಾ ಸಭೆಯ ಸೂಚನೆ ಮತ್ತು ವಾರ್ಷಿಕ ವರದಿಯನ್ನು ಪಡೆಯುವುದು, ರಿಮೋಟ್ ಇ-ಮತದಾನ, ವಾರ್ಷಿಕ ಮಹಾ ಸಭೆಯ ಸಂದರ್ಭದಲ್ಲಿ ಇ-ಮತದಾನ ಮತ್ತು/ಅಥವಾ ಇ-ಮತದಾನಕ್ಕಾಗಿ ಯೂಸರ್ ಐಡಿ/ಪಾಸ್‌ವರ್ಡ್ ಪಡೆಯುವುದು ಮತ್ತು ಪಾವತಿಸದ/ಕ್ಲೈಮ್ ಮಾಡದ ಲಾಭಾಂಶದ ಸ್ವೀಕೃತಿಗಾಗಿ ಬ್ಯಾಂಕ್ ಖಾತೆಯ ವಿವರಗಳನ್ನು ನವೀಕರಿಸುವ ಪ್ರಕ್ರಿಯೆಯನ್ನು ವಾರ್ಷಿಕ ಮಹಾ ಸಭೆಯ ಸೂಚನೆಯಲ್ಲಿ ನೀಡಿರುವ ವಿವರಗಳನ್ನು ಸದಸ್ಯರು ಅನುಸರಿಸತಕ್ಕದ್ದು.

ಕಂಪನಿಯ ಎಲ್ಲಾ ಸದಸ್ಯರ ಮಾಹಿತಿಗಾಗಿ ಮತ್ತು ಉಪಯೋಗಕ್ಕಾಗಿ ಹಾಗೂ ಹೇಳಲಾದ ಸುತ್ತೋಲೆಗಳಿಗೆ ಅನುಸಾರವಾಗಿ ಮೇಲಿನ ಮಾಹಿತಿಯನ್ನು ನೀಡಲಾಗುತ್ತಿದೆ. ಯಾವುದೇ ಪ್ರಶ್ನೆಗಳು / ಸ್ಪಷ್ಟೀಕರಣ / ಕುಂದುಕೊರತೆಗಳಿಗಾಗಿ ಸದಸ್ಯರು ಕೆಳಸಹಿದಾರರನ್ನು investorrelations@subex.com ಮೂಲಕ ಸಂಪರ್ಕಿಸಬಹುದು.

ಸ್ಥಳ : ಬೆಂಗಳೂರು
ದಿನಾಂಕ : ಸೆಪ್ಟೆಂಬರ್ 1, 2025

ಸುಬೆಕ್ಸ್ ಲಿಮಿಟೆಡ್ ಪರವಾಗಿ
ಸಹಿ/-
ರಾಮು ಅಕ್ಕಿಲಿ
ಕಂಪನಿ ಕಾರ್ಯದರ್ಶಿ ಮತ್ತು ಕಂಪ್ಲೈನ್ಸ್ ಅಧಿಕಾರಿ

ಸಮಾಚಾರ ಸಣ್ಣದಲ್ಲ

ಸೆ.6ಕ್ಕೆ ಪುಸ್ತಕ ಬಿಡುಗಡೆ

ಬೆಂಗಳೂರು: ಸ್ತ್ರೀವಾದಿ ಸಂಕಥನದ ಪುಸ್ತಕಗಳ ಬಿಡುಗಡೆ ಸಮಾರಂಭವನ್ನು ಸೆ.6ರಂದು ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ಆಯೋಜಿಸಲಾಗಿದೆ. ಡಾ. ಸುಮಿತ್ರಾಬಾಯಿ ಅವರ ಸಾಹಿತ್ಯ ಸಂಚಲನ, ಚಂಪಾವತಿ ಅವರ ನೋರಾಳಿಯಿಂದ ಗುಲಾಬಿ ಗ್ಯಾಂಗ್‌ವರೆಗೆ, ರಾಜೇಶ್ವರಿ ಎಚ್.ಎಸ್ ಅವರ ಮಹಿಳಾ ಸಂವೇದನೆ, ಡಾ.ವೆಂ ವಜನಾ ಅವರ ಮೌನ ಮಾತಾದಾಗ, ಡಾ.ಸರಸ್ವತಿ ದು ಅವರ ವಾಡೆ, ಮಾನಸ ಬಳಗ ಅವರ ಅಂತರಂಗದ ಪುಟಗಳು ಹಾಗೂ ಸಿ.ಜಿ. ಮಂಜುಳಾ ಅವರ ಸ್ತ್ರೀ ಅಸ್ಮಿತೆ ಸಂಕಥನ ಪುಸ್ತಕಗಳು ಬಿಡುಗಡೆಯಾಗಲಿದೆ. ಕಾರ್ಯಕ್ರಮದಲ್ಲಿ ಸಾಮಾಜಿಕ ಕಾರ್ಯಕರ್ತೆ ಲಕ್ಷ್ಮೀ ಮೂರ್ತಿ, ಡಾ.ರಾಜೇಂದ್ರ ಚೆನ್ನಿ, ಡಾ.ಆರ್. ಸುನಂದಮ್ಮ, ಡಾ. ಭಾರತಿದೇವಿ ಪಿ. ಅವರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೆಟ್ರೋ 2 ಬೋಗಿ ವಿಮಾನದಲ್ಲಿ ತರಿಸಿ

ಬೆಂಗಳೂರು: ನಮ್ಮ ಮೆಟ್ರೋದ ಹಳದಿ ಮಾರ್ಗಕ್ಕಾಗಿ ಚೀನಾದಿಂದ ಎರಡು ರೈಲು ಬೋಗಿಗಳನ್ನು ವಿಮಾಮನ ಮೂಲಕ ಸಾಗಣೆ ಮಾಡುವಂತೆ ಸಂಸದ ತೇಜಸ್ವಿ ಸೂರ್ಯ ಒತ್ತಾಯಿಸಿದ್ದಾರೆ. ಹಳದಿ ಮಾರ್ಗಕ್ಕೆ ಹೆಚ್ಚಿನ ರೈಲುಗಳನ್ನು ತ್ವರಿತವಾಗಿ ಪೂರೈಸುವ ಕುರಿತು ನಾನು ಟಿಟಾಘರ್‌ನ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ವಿವರವಾದ ಮಾತುಕತೆ ನಡೆಸಿದ್ದು,ಸೆ.30 ರೊಳಗೆ 8 ರೈಲುಗಳನ್ನು ತಲುಪಿಸಲು ಅವರು ಸಿದ್ಧರಿದ್ದಾರೆ ಎಂದು ನನಗೆ ತಿಳಿಸಿದರು. ಬೋಗಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಸಾಮಗ್ರಿಗಳು ಸಿದ್ಧವಾಗಿವೆ, ಇವುಗಳನ್ನು ಸಿಆರ್‌ಆರ್‌ಸಿ ಚೀನಾದಿಂದ ಪೂರೈಸಬೇಕು.

ಮಂತ್ರಾಲಯ, ತಿರುಪತಿ, ಶ್ರೀಶೈಲದಲ್ಲಿರುವ ಭೂಮಿ ಸಮಸ್ಯೆ ಬಗ್ಗೆ ಆಂಧ್ರ ರಾಜ್ಯಪಾಲ ಜತೆ ಚರ್ಚೆ

ತಕರಾರು ಶೀಘ್ರ ಇತ್ಯರ್ಥಕ್ಕೆ ಮನವಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಆಂಧ್ರ ಪ್ರದೇಶದಲ್ಲಿರುವ ತಿರುಪತಿ, ಮಂತ್ರಾಲಯ ಹಾಗೂ ಶ್ರೀಶೈಲದಲ್ಲಿ ಕರ್ನಾಟಕ ಹಾಗೂ ಆಂಧ್ರಪ್ರದೇಶ ಸರಕಾರಗಳ ನಡುವೆ ಇರುವ ಭೂಮಿ ಸಮಸ್ಯೆಯನ್ನು ಬಗೆಹರಿಸುವಂತೆ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಆಂಧ್ರ ರಾಜ್ಯಪಾಲ ಅಬ್ದುಲ್ ನಜೀರ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಕುಮಾರಕೃಪಾ ಗೆಸ್ಟ್ ಹೌಸ್‌ನಲ್ಲಿ ಆಂಧ್ರ ರಾಜ್ಯಪಾಲರನ್ನು ಭೇಟಿಯಾದ ಸಚಿವ ರಾಮಲಿಂಗಾರೆಡ್ಡಿ ಅವರು ಬಹುದಿನಗಳಿಂದ ಇರುವ ಈ ಭೂಮಿ ಸಮಸ್ಯೆಗೆ ಪರಿಹಾರ ನೀಡುವಂತೆ ಮನವಿ ಮಾಡಿದರು. ಇದಕ್ಕೆ ಅಬ್ದುಲ್ ನಜೀರ್ ಅವರು ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ. ಪ್ರಮುಖವಾಗಿ ಮಂತ್ರಾಲಯದಲ್ಲಿ ಜಾಗದ ಬಗ್ಗೆ ಇರುವ ತಕರಾರು ಶೀಘ್ರ ಇತ್ಯರ್ಥಕ್ಕೆ ಪ್ರಸ್ತಾವನೆ ಸಲ್ಲಿಸುವುದಾಗಿ ಸಾರಿಗೆ ಮತ್ತು ಮುಜರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ಅವರು ತಿಳಿಸಿದ್ದಾರೆ.

ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ಸೇರಿದ ಇನಾಮು ಜಮೀನು ಮಾರಾಟಕ್ಕೆ 2020ರಲ್ಲಿ ಅಂದಿನ ಆಂಧ್ರದ ಸಿಎಂ ಜಗನ್ ನೇತೃತ್ವದ ಸರಕಾರವು ಮುಂದಾಗಿತ್ತು. ಶ್ರೀ ಮಠದ ಮನವಿ ಮೇರೆಗೆ ಜಮೀನು ಮಾರಾಟಕ್ಕೆ ಮುಂದಾಗಿದ್ದರೂ ಚರ್ಚೆಗೆ ಗ್ರಾಸವಾಗಿತ್ತು. ಆಂಧ್ರ ಮತ್ತು ತೆಲಂಗಾಣದಲ್ಲಿ ಶ್ರೀಮಠಕ್ಕೆ ಸೇರಿದ ಒಟ್ಟು 5,182 ಎಕರೆ ಇನಾಮು ಜಮೀನಿದೆ. ಈ ಪೈಕಿ ಗದ್ವಾಲ್ ಜಿಲ್ಲೆಯ ಧರೂರು ಮಂಡಲಂ, ಮಲದಕಲ್ ಮಂಡಲಂ, ವಡ್ಡೆಪಲ್ಲಿ ಸೇರಿ ವಿವಿಧ ಮಂಡಲಂ ವ್ಯಾಪ್ತಿಯಲ್ಲಿರುವ ಜಮೀನು ಬಹುತೇಕ ಕಡೆ ಒತ್ತುವರಿಯಾಗಿದೆ. ಅದನ್ನು ವಾಪಸ್ ಪಡೆಯಲು ಶ್ರೀಮಠದಿಂದ ಸಾಧ್ಯವಾಗಿರಲಿಲ್ಲ. ಈ ಜಮೀನು ಮಾರಾಟ ಪ್ರಕ್ರಿಯೆ ನಡೆಸುವಂತೆ ಧಾರ್ಮಿಕ ದತ್ತಿ ಇಲಾಖೆಗೆ ಶ್ರೀಮಠ ಕೋರಿಕೆ ಸಲ್ಲಿಸಿತ್ತು. ಈ ಕೋರಿಕೆ ಆಧರಿಸಿ, ಆಂಧ್ರ ಸರಕಾರವು ಈಗ ಅನುಮತಿ ನೀಡಿ ಮಾರಾಟಕ್ಕೆ ಮುಂದಾಗಿರುವುದೇ ಸದ್ಯ ವಿವಾದಕ್ಕೆ ಕಾರಣವಾಗಿತ್ತು. ಮಠದ ಜಮೀನು ಮಾರಾಟಕ್ಕೆ ಬಿಡುವುದಿಲ್ಲ ಎಂದು ಹಿಂದೂಪರ ಸಂಘಟನೆಗಳು, ಆಂಧ್ರದಲ್ಲಿ ತೀವ್ರ ವಿರೋಧ ವ್ಯಕ್ತಪಡಿಸಿದ್ದವು. ಇದನ್ನು ಗಂಭೀರವಾಗಿ ಪರಿಗಣಿಸಿದ ಕಾಂಗ್ರೆಸ್ ಸರಕಾರ ಮಂತ್ರಾಲಯದಲ್ಲಿ ಜಾಗದ ಬಗ್ಗೆ ಇರುವ ತಕರಾರು ಶೀಘ್ರ ಇತ್ಯರ್ಥಗೊಳಿಸಲು ತೀರ್ಮಾನಿಸಿದೆ.

ತಿರುಪತಿ, ಮಂತ್ರಾಲಯ ಹಾಗೂ ಶ್ರೀಶೈಲದಲ್ಲಿ ಕರ್ನಾಟಕ ಹಾಗೂ ಆಂಧ್ರಪ್ರದೇಶ ಸರಕಾರಗಳ ನಡುವೆ ಇರುವ ಭೂಮಿ ಸಮಸ್ಯೆ ಬಗೆಹರಿಸುವಂತೆ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಆಂಧ್ರ ರಾಜ್ಯಪಾಲ ಅಬ್ದುಲ್ ನಜೀರ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

- ಮಂತ್ರಾಲಯದಲ್ಲಿ ಜಾಗದ ಬಗ್ಗೆ ಇರುವ ತಕರಾರು ಶೀಘ್ರ ಇತ್ಯರ್ಥಕ್ಕೆ ಪ್ರಸ್ತಾವನೆ
- ಆಂಧ್ರ ರಾಜ್ಯಪಾಲ ಅಬ್ದುಲ್ ನಜೀರ್ ಅವರು ಸಕರಾತ್ಮಕ ಸ್ಪಂದನೆ

ಗುತ್ತಿಗೆ ಅವಧಿ ವಿಸ್ತರಿಸಲು ಮನವಿ

ತಿರುಪತಿಯಲ್ಲಿ ಕರ್ನಾಟಕ ಸರಕಾರಕ್ಕೆ ವಸತಿ ಗೃಹ ನಿರ್ಮಿಸಲು 30 ವರ್ಷದ ಅವಧಿಗೆ ಭೂಮಿಯನ್ನು ಗುತ್ತಿಗೆ ಆಧಾರದಲ್ಲಿ ನೀಡಲಾಗಿದೆ. ಆದರೆ ಭಾರಿ ಅನುದಾನವನ್ನು ಹೂಡಿಕೆ ಮಾಡಿರುವುದರಿಂದ ಈ ಅವಧಿಯನ್ನು ನೂರು ವರ್ಷಕ್ಕೆ ವಿಸ್ತರಿಸಬೇಕು ಹಾಗೂ ಶ್ರೀ ಶೈಲಂನಲ್ಲಿ ಕರ್ನಾಟಕ ರಾಜ್ಯ ಸರಕಾರಕ್ಕೆ ಹಸ್ತಾಂತರಿಸಬೇಕಾದ ಜಾಗದ ಬಗ್ಗೆ ಶೀಘ್ರ ಇತ್ಯರ್ಥಗೊಳಿಸಲು ತೀರ್ಮಾನಿಸಲಾಯಿತು ಎಂದು ತಿಳಿದು ಬಂದಿದೆ.

ಜಮೀರ್‌ಗೆ ₹2.5 ಕೋಟಿ ಸಾಲ: ರಾಧಿಕಾ ವಿಚಾರಣೆ ನಡೆಸಿದ ಲೋಕಾ

ಬೆಂಗಳೂರು: ಸಚಿವ ಜಮೀರ್ ಅಹ್ಮದ್‌ಗೆ 2.5 ಕೋಟಿ ರು. ಸಾಲ ಕೊಟ್ಟ ವಿಚಾರ ಸಂಬಂಧ ನಟಿ ರಾಧಿಕಾ ಕುಮಾರಸ್ವಾಮಿ ಅವರು ಲೋಕಾಯುಕ್ತ ಪೊಲೀಸರ ವಿಚಾರಣೆ ಎದುರಿಸಿದ್ದಾರೆ.

ಅಕ್ರಮ ಆಸ್ತಿ ಸಂಪಾದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು, ವಸತಿ ಸಚಿವರ ಆದಾಯದ ಮೂಲಗಳನ್ನು ಪರಿಶೀಲಿಸಿದಾಗ ಸಾಲ ನೀಡಿದ ವ್ಯಕ್ತಿಗಳ ಪಟ್ಟಿ ಸಿಕ್ಕಿದೆ. ಈ ಪಟ್ಟಿಯಲ್ಲಿ ರಾಧಿಕಾ ಕುಮಾರಸ್ವಾಮಿ ಅವರ ಹೆಸರು ಇದ್ದ ಕಾರಣ ಪೊಲೀಸರು ವಿಚಾರಣೆ ನಡೆಸಿದ್ದಾರೆ. ವಿಚಾರಣೆ ವೇಳೆ ರಾಧಿಕಾ, ದಶಕದ ಹಿಂದೆ ತಾವು ಸಚಿವ ಜಮೀರ್ ಅವರಿಗೆ ಸಾಲ ಕೊಟ್ಟಿದ್ದನ್ನು ಒಪ್ಪಿಕೊಂಡು ಹೇಳಿಕೆ ದಾಖಲಿಸಿದ್ದಾರೆ.

ಏನಿದು ಪ್ರಕರಣ?: 2019ರಲ್ಲಿ ಐ ಮಾನಿಟರಿ ಅಡ್ವೈಸರಿ ಕಂಪನಿಯ ಬಹುಕೋಟಿ ವಂಚನೆ ಹಗರಣ ಬೆಳಕಿಗೆ ಬಂದಿತ್ತು. ಈ ವಂಚಕ ಕಂಪನಿ ಜತೆ ನಂಟು ಹೊಂದಿದ್ದ ಆರೋಪದ ಮೇರೆಗೆ ಜಮೀರ್ ಖಾನ್ ಅವರ ಮೇಲೆ ಜಾರಿ ನಿರ್ದೇಶನಾಲಯ ದಾಳಿ ನಡೆಸಿತ್ತು. ಇ.ಡಿ ವರದಿಯ ಅನ್ವಯ ಆಗ ಮೈತ್ರಿ ಸರಕಾರದಲ್ಲಿ ಸಚಿವರಾಗಿದ್ದ ಜಮೀರ್ ಖಾನ್ ವಿರುದ್ಧ ಅಕ್ರಮ ಆಸ್ತಿ ಸಂಪಾದನೆ ಆರೋಪದಡಿ ಅಂದು ಅಸ್ತಿತ್ವದಲ್ಲಿದ್ದ ಭ್ರಷ್ಟಾಚಾರ ನಿಗ್ರಹ ದಳವು (ಎಸಿಬಿ) ಪ್ರಕರಣ ದಾಖಲಿಸಿತ್ತು. ಎಸಿಬಿ ರದ್ದಾದ ಬಳಿಕ ಈ ಪ್ರಕರಣ ತನಿಖೆಯೂ ಲೋಕಾಯುಕ್ತ ಪೊಲೀಸರಿಗೆ ವರ್ಗಾವಾಗಿತ್ತು. ಈಗ ಸಚಿವರ ವಿರುದ್ಧ ಅಕ್ರಮ ಆಸ್ತಿ ಸಂಪಾದನೆ ಬಗ್ಗೆ ಲೋಕಾಯುಕ್ತ ಪೊಲೀಸರು ತನಿಖೆ ನಡೆಸುತ್ತಿದ್ದು ಹಲವರ ವಿಚಾರಣೆ ನಡೆಸುತ್ತಿದ್ದಾರೆ. ನಾನು ಯಾರ ಬಳಿ ಸಾಲ ಪಡೆದಿದ್ದೇನೆ ಎನ್ನುವುದರ ಬಗ್ಗೆ ಜಮೀರ್ ಲೋಕಾಯುಕ್ತ ಪೊಲೀಸರಿಗೆ ಲಿಖಿತವಾಗಿ ಪಟ್ಟಿ ನೀಡಿದ್ದರು. ಈ ಪಟ್ಟಿಯಲ್ಲಿ ರಾಧಿಕಾ ಕುಮಾರಸ್ವಾಮಿ ಬಳಿಯಿಂದ 2.5 ಕೋಟಿ ರು. ಸಾಲ ಪಡೆದಿರುವ ವಿಚಾರ ಹಂಚಿಕೊಂಡಿದ್ದರು. ವಿಚಾರಣೆ ಸಂದರ್ಭದಲ್ಲಿ, ನಾನು 2012ರಲ್ಲಿ ಶಮಿಕಾ ಎಂಟರ್‌ಪ್ರೈಸಸ್ ಹೆಸರಿನಲ್ಲಿ ಯಶ್ ಹಾಗೂ ರಮ್ಯಾ ಅಭಿನಯದ ಲಕ್ಕಿ ಸಿನಿಮಾ ನಿರ್ಮಾಣ ಮಾಡಿದ್ದೆ. ಮನರಂಜನಾ ಚಾನೆಲ್‌ಗಳಿಗೆ ಈ ಸಿನಿಮಾದ ಸ್ಯಾಟಲೈಟ್ ಹಕ್ಕು ಹಾಗೂ ಚಲನಚಿತ್ರದ ಯಶಸ್ವಿನಿಂದ ಸಂಪಾದಿಸಿದ ಹಣದಲ್ಲಿ ಆರ್ಥಿಕ ಸಂಕಷ್ಟದಲ್ಲಿದ್ದ ಜಮೀರ್ ಅಹ್ಮದ್ ಅವರಿಗೆ 2.5 ಕೋಟಿ ರು. ಸಾಲವಾಗಿ ನೀಡಿದ್ದೆ ಎಂದು ರಾಧಿಕಾ ತಿಳಿಸಿರುವ ವಿಚಾರ ಮೂಲಗಳಿಂದ ತಿಳಿದು ಬಂದಿದೆ.



- ದಶಕದ ಹಿಂದೆ ಸಚಿವ ಜಮೀರ್ ಅವರಿಗೆ ಸಾಲ ಕೊಟ್ಟಿದ್ದ ಹೇಳಿಕೆ ದಾಖಲಿಸಿದ ರಾಧಿಕಾ ಕುಮಾರಸ್ವಾಮಿ

ರಜತ ಭವನದಲ್ಲಿ ಪೌರ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ

ಸ್ವಚ್ಛತೆ ಕಾಪಾಡುವಲ್ಲಿ ಕಾರ್ಮಿಕರ ಪಾತ್ರ ಹಿರಿದು: ಡಿಸಿಎಂ ಡಿಕೆಶಿ

ಜಲಮಂಡಳಿಯ ರಜತ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಲಮಂಡಳಿ ಅನ್ನಪೂರ್ಣ ಯೋಜನೆ ಅಡಿಯಲ್ಲಿ ಸ್ಮಾರ್ಟ್ ಕಾರ್ಡ್‌ಗಳನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿತರಿಸಿದರು.

ಬೆಂಗಳೂರು: ನಗರದ ಸ್ವಚ್ಛತೆ ಕಾಪಾಡುವಲ್ಲಿ ಜಲಮಂಡಳಿಯ ನೈರ್ಮಲ್ಯೀಕರ ಕಾರ್ಮಿಕರ ಪಾತ್ರ ಹಿರಿದಾಗಿದ್ದು, ಇವರ ಸೇವೆ ಹಾಗೂ ತ್ಯಾಗವನ್ನು ಗೌರವಿಸುವ ನಿಟ್ಟಿನಲ್ಲಿ ಬೆಂಗಳೂರು ಜಲಮಂಡಳಿ ಐತಿಹಾಸಿಕ ಜಲಮಂಡಳಿ ಅನ್ನಪೂರ್ಣ ಯೋಜನೆಯನ್ನು ಅನುಷ್ಠಾನಗೊಳಿಸಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಜಲಮಂಡಳಿಯ ರಜತ ಭವನದಲ್ಲಿ ಜಲಮಂಡಳಿ ಅನ್ನಪೂರ್ಣ ಯೋಜನೆ ಅಡಿಯಲ್ಲಿ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಿ ಮಾತನಾಡಿ, ಈ ಯೋಜನೆಯಡಿ 700 ಕ್ಕೂ ಹೆಚ್ಚು ನೈರ್ಮಲ್ಯೀಕರಣ ಕಾರ್ಮಿಕರಿಗೆ ಪ್ರತಿ ತಿಂಗಳು 1500 ರು. ನೇರವಾಗಿ ಅವರ ಖಾತೆಗೆ ವರ್ಗಾವಣೆ ಮಾಡಲಿದ್ದು, ಆರೋಗ್ಯಕರ ಉಪಾಹಾರವನ್ನು ಖಚಿತಪಡಿಸುವ ಜತೆಗೆ ಆರ್ಥಿಕ ಭದ್ರತೆ ಮತ್ತು ಸಾಮಾಜಿಕ ಗೌರವವನ್ನೂ ನೀಡಲಿದೆ. ಜಲಮಂಡಳಿಗೆ ದೊಡ್ಡ ಇತಿಹಾಸವಿದೆ. ಜನಸಾಮಾನ್ಯರ ಸೇವೆಯಲ್ಲಿ ತೊಡಗಿರುವ ಈ ಸಂಸ್ಥೆ ಮಾನವ ಸೇವೆಯ ಪ್ರತೀಕವಾಗಿದೆ ಎಂದು ಅಭಿಪ್ರಾಯಪಟ್ಟರು. ನೈರ್ಮಲ್ಯೀಕರಣ ಕಾರ್ಮಿಕರ ಜೀವನಮಟ್ಟವನ್ನು ಸುಧಾರಿಸುವುದು ಸರಕಾರದ ಪ್ರಮುಖ ಗುರಿಯಾಗಿದ್ದು, ಅವರ ಮಕ್ಕಳೂ ಡಾಕ್ಟರ್, ಎಂಜಿನಿಯರ್, ಕೆಎಎಸ್ ಅಧಿಕಾರಿಗಳಾಗಿ ಬೆಳೆವ ಕನಸು ನನಸಾಗುವಂತೆ ಸರಕಾರ ನಿಂತಿದೆ ಎಂದರು. ಕಾರ್ಯಕ್ರಮದಲ್ಲಿ ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ ಮದನ್ ಮೋಹನ್, ಪ್ರಧಾನ ಮುಖ್ಯ ಎಂಜನಿಯರ್ ಬಿ.ಎಸ್. ದಲಾಯತ್, ಮುಖ್ಯ ಎಂಜಿನಿಯರ್‌ಗಳಾದ ಎಸ್.ವಿ.ವೆಂಕ ಟೇಶ, ರಾಜೀವ್, ದೇವರಾಜ್, ಜಯಶಂಕರ್, ಪರಮೇಶ, ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರಾದ ಸುಬ್ಬರಾಮಯ್ಯ, ಜಲಮಂಡಳಿ ನೌಕರ ಸಂಘದ ಅಧ್ಯಕ್ಷ ಗೋವಿಂದರಾಜು, ಬೆಂಗ ಳೂರು ವಾಟರ್ ಸಪ್ಲೆ ಹಾಗೂ ಸ್ಯಾನಿಟರಿ ಅಸೋಸಿಯೇ ಷನ್ ವರ್ಕರ್ಸ್ ಯೂನಿಯನ್ ಅಧ್ಯಕ್ಷ ಸಿದ್ದಪ್ಪ , ಅಧಿಕಾರಿಗಳು ಇದ್ದರು.

ಉತ್ತಮ ಉಪಾಹಾರ ಸೇವಿಸಲಿ:ರಾಮ್ ಪ್ರಸಾತ್

ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ಮಾತನಾಡಿ, ನೈರ್ಮಲ್ಯೀಕರಣ ಕಾರ್ಮಿಕರು ನಮ್ಮ ನಗರವನ್ನು ಸ್ವಚ್ಛವಾಗಿ ಇಡಲು ಹಗಲು-ರಾತ್ರಿ ಶ್ರಮಿಸುತ್ತಿದ್ದಾರೆ. ಈ ಯೋಜನೆಯ ಮೂಲಕ ನಾವು ಅವರ ಶ್ರಮವನ್ನು ಗೌರವಿಸುತ್ತಿದ್ದೇವೆ. ಅವರು ಉತ್ತಮ ಉಪಾಹಾರ ಸೇವಿಸಲಿ ಎನ್ನುವುದು ಈ ಯೋಜನೆಯ ಉದ್ದೇಶವಾಗಿದೆ. ಪ್ರತಿದಿನದ ಉಪಾಹಾರಕ್ಕಾಗಿ ನೇರ ಹಣ ಪಾವತಿಸುವ ಈ ವ್ಯವಸ್ಥೆ ಕಾರ್ಮಿಕರ ಗೌರವವನ್ನು ಹೆಚ್ಚಿಸುವುದ ರೊಂದಿಗೆ ಇತರೆ ನಗರಗಳಿಗೆ ಮಾದರಿಯಾಗಲಿದೆ ಎಂದು ಅಭಿಪ್ರಾಯಪಟ್ಟರು. ಬಳಿಕ ಯೋಜನೆಯ ತಾಂತ್ರಿಕ ಅಂಶಗಳನ್ನು ವಿವರಿಸಿದರು.

ಕಾವೇರಿ 6 ನೇ ಹಂತದ ಯೋಜನೆ ಪ್ರಾರಂಭ

ನಗರದ ನೀರು ಮತ್ತು ಒಳಚರಂಡಿ ಸೇವೆಗಳಲ್ಲಿ ನಷ್ಟದಿಂದ ಲಾಭದತ್ತ ಸಾಗುತ್ತಿರುವ ಬದಲಾವಣೆಯನ್ನು ಉಲ್ಲೇಖಿಸಿದ ಡಿಸಿಎಂ, ಟ್ಯಾಂಕರ್ ಮಾಫಿಯಾಗೆ ಕಡಿವಾಣ ಹಾಕಿದ ಪರಿಣಾಮವಾಗಿ ಇಂದು ನಾಗರಿಕರಿಗೆ ಸರಳವಾಗಿ ನೀರು ದೊರೆಯುತ್ತಿದೆ. ಐದನೇ ಹಂತದ ಕಾವೇರಿ ಯೋಜನೆ ಯಶಸ್ವಿಯಾಗಿ ಜಾರಿಯಾಗಿದೆ, ಇದೀಗ ಬೆಳೆಯುತ್ತಿರುವ ನಗರಕ್ಕೆ ನೀರು ಪೂರೈಸಲು ಕಾವೇರಿ 6 ನೇ ಹಂತದ ಯೋಜನೆಯನ್ನು ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು.

ಒಂದು ದಿನಕ್ಕೆ 60,000 ಜನರ ಪ್ರಯಾಣ

ಮೆಟ್ರೋ ಹಳದಿ ಮಾರ್ಗದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಳ

ಬೆಂಗಳೂರು: ನಮ್ಮ ಮೆಟ್ರೋ ಹಳದಿ ಮಾರ್ಗದಲ್ಲಿ ರೈಲುಗಳ ಸಂಖ್ಯೆ ಕಡಿಮೆಯಿದ್ದರೂ ಕೂಡಾ ಪ್ರಯಾಣಿಕರು ಸಂಖ್ಯೆ ಹೆಚ್ಚಾಗುತ್ತಿದ್ದು, ಮೊದಲ ದಿನವೇ 52,000 ಜನರು ಪ್ರಯಾಣಿಸುವ ಮೂಲಕ ಮೆಟ್ರೋ ಮೇಲಿನ ಅವಲಂಬನೆ ಹೆಚ್ಚಾಗುತ್ತಿದೆ ಎಂದು ಮೆಟ್ರೋ ಮೂಲಕಗಳು ಮಾಹಿತಿ ನೀಡಿದೆ.

ಆಗಸ್ಟ್ 10 ಪ್ರಧಾನಿ ನರೇಂದ್ರ ಮೋದಿಯವರು ಬೆಂಗಳೂರಿನಲ್ಲಿ ಈ ಮೆಟ್ರೋ ಹಳದಿ ಮಾರ್ಗ ಉದ್ಘಾಟಿಸಿದ್ದು, ಅಂದಿನಿಂದ ಈವರೆಗೆ 20 ದಿನಗಳ ಚಾಲಕರಹಿತ ಮೆಟ್ರೋ ಸೇವೆ ಮುಂದುವರಿದಿದೆ. ಪ್ರತಿ 25 ನಿಮಿಷಕ್ಕೆ ಒಂದಂತೆ 3 ರೈಲುಗಳು ಸಂಚಾರ ನಡೆಸುತ್ತಿದ್ದು, ನಾಲ್ಕನೇ ರೈಲು ಪರೀಕ್ಷೆ ಹಂತದಲ್ಲಿದೆ. ಈ ಮೆಟ್ರೋ ಲೈನ್‌ನಿಂದ ಸಿಲ್ಕ್ ಬೋರ್ಡ್ ಹಾಗೂ ಎಲೆಕ್ಟ್ರಾನಿಕ್ ಸಿಟಿಯ ಭಾಗದಲ್ಲಿದ್ದ ಸಂಚಾರ ದಟ್ಟಣೆ ಪ್ರಮಾಣ ಕಡಿಮೆ ಆಗಿದೆ. ಕೇವಲ ಮೂರೇ ರೈಲುಗಳ ಸಂಚಾರದಿಂದಾಗಿ ಪ್ರಯಾಣಿಕರ ಸಂಖ್ಯೆ ಕ್ಷೀಣಿಸಬಹುದೆಂದು ಅಂದಾಜಿಸಲಾಗಿತ್ತು. ಇಲ್ಲವೇ ಅರ್ಧದಷ್ಟು ಜನರ ಮೆಟ್ರೋ ಅವಲಂಬನೆ ಕಡಿಮೆ ಆಗಬಹುದು ಅಂತಲೂ ಹೇಳಲಾಗಿತ್ತು. ಇದೀಗ ಪ್ರಯಾಣಿಕರ ಸಂಖ್ಯೆ ಸ್ಥಿರವಾಗಿದೆ. ಒಂದು ದಿನಕ್ಕೆ 60,000 ಜನರು ಪ್ರಯಾಣ ಮಾಡುತ್ತಿದ್ದಾರೆ. ಈ ಪೈಕಿ ಸಂಜೆ ಸಮಯದಲ್ಲಿ ಹೆಚ್ಚಿನ ದಟ್ಟಣೆ ಕಂಡು ಬರುತ್ತಿದೆ. ಏಕೆಂದರೆ ಎಲೆಕ್ಟ್ರಾನಿಕ್ ಸಿಟಿ ಮತ್ತು ಸುತ್ತಮುತ್ತಲಿನ ಕೈಗಾರಿಕಾ ಕೇಂದ್ರಗಳಲ್ಲಿ ನೆಲೆಸಿದವರು ಬೆಳಗ್ಗೆ ಕ್ಯಾಬ್‌ಗಳಿಗೆ ಹೋದರೂ ಸಹಿತ ಸಂಜೆ ಮನೆಗೆ ಬೇಗ ತೆರಳಲು ಮೆಟ್ರೋ ಸಾರಿಗೆ ಬಳಸುತ್ತಿದ್ದಾರೆ. ಇದರಿಂದಾಗಿ ರಸ್ತೆ ಸಾರಿಗೆಗಿಂತ ಮೆಟ್ರೋ ಸಾರಿಗೆಯು ಕನಿಷ್ಠ 30 ನಿಮಿಷಗಳ ಸಂಚಾರ ಸಮಯ ಕಡಿಮೆ ಮಾಡಿದೆ. ಕೇವಲ ಈ ಭಾಗಗಳಲ್ಲಿ ಮಾತ್ರವಲ್ಲದೇ ಬೊಮ್ಮಸಂದ್ರ, ಎಂ.ಜಿ. ರಸ್ತೆ ಸಂಪರ್ಕಿಸುವ ರಸ್ತೆಗಳ ಸಂಚಾರವು ಕಡಿಮೆ ಮಾಡಿದೆ ಎಂದು ತಿಳಿದು ಬಂದಿದೆ.

ಸಿಲ್ಕ್ ಬೋರ್ಡ್ ಜಂಕ್ಷನ್ ಮತ್ತು ಎಲೆಕ್ಟ್ರಾನಿಕ್ ಸಿಟಿಯ ಸುತ್ತಲಿನ ದಟ್ಟಣೆ ಕಡಿಮೆಯಾಗಿದ್ದು, ಮುಂದಿನ ದಿನಗಳಲ್ಲಿ ರೈಲು ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಈ ಭಾಗದಲ್ಲಿ ಓಡಾಡುವವರು ಖಾಸಗಿ ವಾಹನ ಮೇಲಿನ ಅವಲಂಬನೆ ಕಡಿಮೆ ಮಾಡಲಿದೆ. ಪ್ರಯಾಣಿಕರ ಸಂಖ್ಯೆ ಇನ್ನಷ್ಟು ಹೆಚ್ಚಾಗಬಹುದು ಎಂದು ಸಾರಿಗೆ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ನಾಲ್ಕನೇ ರೈಲಿನ ಸಂಚಾರ ಯಾವಾಗ?

ಆ.14ರಂದು ನಾಲ್ಕನೇ ರೈಲಿನ ಆರು ಬೋಗಿಗಳು ಬೆಂಗಳೂರಿನ ಹೆಬ್ಬಗೋಡಿ ಡಿಪೋಗೆ ಬಂದಿದ್ದು, ಅವುಗಳನ್ನು ಹಳಿ ಮೇಲೆ ಜೋಡಿಸಿ ವಿವಿಧ ಪ್ರಾಯೋಗಿಕ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಈಗಾಗಲೇ ಪರೀಕ್ಷೆ ಆರಂಭವಾಗಿದೆ. ಸದ್ಯ ರಾತ್ರಿ ಹೊತ್ತು ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಇನ್ನೇನು ವಾರಗಳಲ್ಲಿ ಆ ರೈಲು ಸಹ ಹಳದಿ ಮಾರ್ಗದಲ್ಲಿ ಸೇವೆ ಆರಂಭಿಸುವ ನಿರೀಕ್ಷೆ ಇದೆ. ಇದು ಸಾಧ್ಯವಾದಲ್ಲಿ 25 ನಿಮಿಷಗಳಿಗೆ ಇರುವ ಮೆಟ್ರೋ ರೈಲಿನ ಆವರ್ತನವು ಸುಮಾರು 18-20 ನಿಮಿಷಗಳಿಗೆ ಇಳಿಕೆ ಆಗಲಿದೆ. ಆಗ ಒಂದು ರೈಲಿನಿಂದ ಮತ್ತೊಂದು ರೈಲು ಹತ್ತಲು ಇರುವ ಸಮಯ ತಗ್ಗಲಿದೆ. ಪ್ರಯಾಣಿಕರ ಕಾಯುವಿಕೆ ಕಡಿಮೆ ಆಗಲಿದೆ ಎಂದು ಸಾರಿಗೆ ತಜ್ಞರು ಮಾಹಿತಿ ನೀಡಿದ್ದಾರೆ.

ಸೆಪ್ಟೆಂಬರ್ ತಿಂಗಳ ಮೊದಲ ದಿನವೇ ಭರ್ಜರಿ ಮಳೆ | ರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೆ

ನಗರದಲ್ಲಿ ಭಾರೀ ಮಳೆ: ಸವಾರರ ಪರದಾಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಉದ್ಯಾನ ನಗರಿ ಬೆಂಗಳೂರಿನಲ್ಲಿ ಸಂಜೆಯಾಗುತ್ತಿದ್ದಂತೆ ಭಾರೀ ಮಳೆ ಸುರಿದಿದ್ದು, ವಾಹನಗಳ ಸಂಚಾರಕ್ಕೆ ಅಡಚಣೆಯುಂಟಾಗಿದೆ.

ದಿಢೀರ್ ಸುರಿದ ಭಾರೀ ಮಳೆಗೆ ಚರಂಡಿಗಳು ತುಂಬಿ ರಸ್ತೆಯ ಮೇಲೆ ನೀರು ಹರಿದಿದ್ದು, ರಸ್ತೆಗಳೆಲ್ಲಾ ನೀರು ನಿಂತಿದ್ದರಿಂದಾಗಿ ವಾಹನ ಸವಾರರು ಹಾಗೂ ಪಾದಚಾರಿಗಳು ಸಂಚಾರ ನಡೆಸಲು ಪರದಾಡುವಂತಾಗಿದೆ. ಕಳೆದ ಎರಡು ಮೂರು ದಿನ ಆಗೊಮ್ಮೆ ಈಗೊಮ್ಮೆ ಬಂದು ಹೋಗುತ್ತಿದ್ದ ಮಳೆ, ಸೆಪ್ಟೆಂಬರ್‌ನ ಮೊದಲ ದಿನವೇ ಭರ್ಜರಿ ಆರಂಭ ಮಾಡಿದ್ದು, ಮೊದಲ ದಿನವೇ ಜೋರು ಮಳೆ ಸುರಿಯುವ ಮೂಲಕ ತಿಂಗಳಿಡೀ ಅಬ್ಬರಿಸುವ ಮುನ್ಸೂಚನೆ ನೀಡಿದೆ. ನಗರದ ಬಹುತೇಕ ಬದಲಾವಣೆಗಳಲ್ಲಿ ಮಳೆ ಸುರಿಯುತ್ತಿದ್ದು, ಏಕಾಏಕಿ ಆರಂಭವಾದ್ದರಿಂದ ಜನ ರಸ್ತೆ ಮಧ್ಯದಲ್ಲೆ ಮಳೆಯಲ್ಲಿ ಸಿಲುಕಿ ಪರದಾಡಿದರು.

ಸೋಮವಾರ ಸಂಜೆ ಸುರಿದ ಮಳೆಯು ಮಳೆಗಾಲದ ಮಳೆಗಿಂತ ಬಿರುಸಾಗಿದ್ದು, ರಸ್ತೆಯಲ್ಲಿ ಜನ, ವಾಹನ ಸಂಚಾರ ಸಾಧ್ಯವಾಗದಂತೆ ಮಾಡಿತ್ತು. ಭಾರೀ ಮಳೆಗೆ ವಾಹನ ಸವಾರರು ಸಂಚಾರ ನಡೆಸುವ ಬದಲಾಗಿ ರಸ್ತೆ ಬದಿಯಲ್ಲಿ ವಾಹನಗಳನ್ನು ನಿಲ್ಲಿಸಿ ಮರ, ಕಟ್ಟಡಗಳ ಬಳಿ ಆಶ್ರಯ ಪಡೆದರು. ಮಳೆ ಆರ್ಭಟಕ್ಕೆ ಬೆಂಗಳೂರು ಕೇಂದ್ರ ಭಾಗದ ರಸ್ತೆಗಳಲ್ಲಿ ನೀರು ನಿಂತು ಸಂಚಾರ ಅಸ್ತವ್ಯಸ್ತವಾಗಿತ್ತು. ಟ್ರಾಫಿಕ್ ಜನತೆಗೆ ವಾಹನ ಸವಾರರು ಪರದಾಟ ನಡೆಸಿದರು. ರಿಚ್‌ಮಂಡ್ ಟೌನ್, ಕೆ.ಆರ್ ಮಾರ್ಕೆಟ್, ಬಿನ್ನಿಮಿಲ್ ರಸ್ತೆ, ಜೆಸಿ ರಸ್ತೆ, ಆರ್ ಆರ್ ನಗರದ ಪ್ರಮುಖ ರಸ್ತೆ, ಮೆಜೆಸ್ಟಿಕ್ ಸೇರಿದಂತೆ ಪ್ರಮುಖ ರಸ್ತೆಯಲ್ಲಿ ಮಳೆ ನೀರು ನಿಂತು ರಸ್ತೆಗಳು ಕೆಲ ಕಾಲ ನದಿಯಂತಾಗಿದ್ದವು.

ಬೆಂಗಳೂರಿನಲ್ಲಿ ಸೋಮವಾರ ರಾತ್ರಿ ಸುರಿದ ಮಳೆಯಿಂದ ವಾಹನ ಸವಾರರು, ಪಾದಚಾರಿಗಳು ಪರದಾಡಿದರು.

ಎಲ್ಲೆಲ್ಲಿ ಮಳೆ

ಜಯನಗರ 4ನೇ ಬ್ಲಾಕ್, ರಾಜಾಜಿನಗರ, ಶಾಂತಿನಗರ, ಯಶವಂತಪುರ, ಕೆ.ಆರ್.ಮಾರುಕಟ್ಟೆ, ಮೈಸೂರು ರಸ್ತೆ, ವಿಜಯನಗರ, ಬಸವನಗುಡಿ, ಶ್ರೀನಿವಾಸನಗರ, ಕತ್ರಿಗುಪ್ಪೆ, ವಿದ್ಯಾಪೀಠ, ನಾಗರಬಾವಿ, ಬನಶಂಕರಿ, ಆರ್ ಆರ್ ನಗರ, ಉತ್ತರಹಳ್ಳಿ, ಪದ್ಮನಾಭ ನಗರ, ಗಾಂಧಿನಗರ, ಕಬ್ಬನ್ ರಸ್ತೆ, ಎಂಜಿ ರಸ್ತೆ, ಹಲಸೂರು, ಹೆಬ್ಬಾಳ, ಆರ್.ಟಿ ನಗರ, ಸದಾಶಿವನಗರ, ಇಟ್ಟಮಡು, ಮೈಸೂರು ರಸ್ತೆ, ಮೆಜೆಸ್ಟಿಕ್ ಸುತ್ತಮುತ್ತ, ಶೇಷಾದ್ರಿಪುರ, ಚಾಮರಾಜಪೇಟೆ, ಇಂದಿರಾ ನಗರ, ಚಿಕ್ಕಪೇಟೆ, ಬಸವನಗುಡಿ, ಬನಶಂಕರಿ, ನಾಗರಬಾವಿ, ರಾಜಾಜಿನಗರ, ವಿಜಯ ನಗರ, ಯಶವಂತಪುರ, ಮಲ್ಲೇಶ್ವರದಲ್ಲಿ ಭಾರೀ ಮಳೆಯಾಗಿದೆ. ಜತೆಗೆ ಬೆಂಗಳೂರು ಹೊರ ವಲಯಗಳಾದ ಕೆಂಗೇರಿ, ಕೆಆರ್ ಪುರಂ, ವಿಮಾನ ನಿಲ್ದಾಣ ರಸ್ತೆ, ಯಲಹಂಕದಲ್ಲಿಯೂ ಮಳೆ ಸುರಿದಿದೆ.

PRESIDENT

ಸ್ನೇಯ್ಡರ್ ಎಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್

CIN: L32109KA1984PLC079103

ನೋಂ.ಕಚೇರಿ: 5ಸಿ/1, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಅತ್ತಿಬೆಲೆ, ಬೆಂಗಳೂರು ಗ್ರಾಮಾಂತರ, ಬೆಂಗಳೂರು–562107, ಕರ್ನಾಟಕ, ಭಾರತ; **ದೂರವಾಣಿ:** 08067888300 ; 08045540000
ವೆಬ್‌ಸೈಟ್: www.schneiderelectricpresident.com; **ಇ-ಮೇಲ್:** companysecretary@se.com

ಸದಸ್ಯರಿಗೆ ಸೂಚನೆ – ನಲವತ್ತೊಂದನೇ (41ನೇ) ವಾರ್ಷಿಕ ಮಹಾಸಭೆ, ರಿಮೋಟ್ ಇ-ವೋಟಿಂಗ್ ಮತ್ತು ಬುಕ್ ಕ್ಲೋಸರ್ ಬಗ್ಗೆ ಮಾಹಿತಿ

ಸದಸ್ಯರು ಗಮನಿಸಬೇಕಾದುದೇನೆಂದರೆ, ಸ್ನೇಯ್ಡರ್ ಎಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್ (**"ದಿ ಕಂಪನಿ"**) ಯ ನಲವತ್ತೊಂದನೇ (**41ನೇ**) ವಾರ್ಷಿಕ ಮಹಾ ಸಭೆಯು (**ಎಜಿಎಂ**) ದಿನಾಂಕ **ಸೆಪ್ಟಂಬರ್ 24, 2025 ಬುಧವಾರದಂದು** ಮಧ್ಯಾಹ್ನ 3.30ಕ್ಕೆ (ಭಾ.ಕಾ.) ವಿಡಿಯೋ ಕಾನ್ಫರೆನ್ಸಿಂಗ್ (**"ವಿಸಿ"**)/ ಇತರೆ ಆಡಿಯೊ ವಿಷುಯಲ್ ಮೀನ್ಸ್ (**"ಒಎವಿಎಂ"**) ಮೂಲಕ ಕಂಪನಿ ಕಾಯಿದೆ 2013 (**"ಕಾಯಿದೆ"**) ಮತ್ತು ಇತರೆ ಅನ್ವಯವಾಗುವ ಅನ್ವಯವಾಗುವ ಎಲ್ಲಾ ನಿಯಂತ್ರಣಗಳು, ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ (ಲಿಸ್ಟಿಂಗ್ ಅಬ್ಲಿಗೇಷನ್ಸ್ ಮತ್ತು ಡಿಸ್‌ಕ್ಲೋಸರ್ ರಿಕ್ವಯರ್‌ಮೆಂಟ್ಸ್) ನಿಯಂತ್ರಣಗಳು, 2015 (**"ಸೆಬಿ ಲಿಸ್ಟಿಂಗ್ ರೆಗ್ಯುಲೇಶನ್ಸ್"**), ಮತ್ತು ಕ್ರಮವಾಗಿ ಸಾಮಾನ್ಯ ಸುತ್ತೋಲೆಗಳ ಸಂ. 20/2020 ದಿನಾಂಕ ಮೇ 05, 2020 ಮತ್ತು 09/2024 ದಿನಾಂಕ ಸೆಪ್ಟಂಬರ್ 19, 2024 ರಂದು ಕಾರ್ಪೋರೇಟ್ ವ್ಯಹಾರಗಳ ಸಚಿವಾಲಯ (**"ಎಂಸಿಎ ಸುತ್ತೋಲೆಗಳು"**) ಮತ್ತು ಸುತ್ತೋಲೆ ಸಂ. SEBI/HO/CFD/CFD-PoD-2/P/CIR/2024/133 ದಿನಾಂಕ ಅಕ್ಟೋಬರ್ 03, 2024 ಸೆಕ್ಯೂರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ (**"ಸೆಬಿ ಸುತ್ತೋಲೆಗಳು"**) (ಎಲ್ಲವನ್ನೂ ಒಟ್ಟಾಗಿ **"ಸೂಕ್ತ ಸುತ್ತೋಲೆಗಳು"** ಎನ್ನಲಾಗುವುದು) ಅನ್ವಯ ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿ ಇಲ್ಲದೆ ಹೇಳಲಾದ ವ್ಯವಹಾರಗಳನ್ನು ನಡೆಸಲಾಗುವುದು.

ಸದಸ್ಯರಿಗೆ ಈ ಮೂಲಕ ಮಾಹಿತಿ ನೀಡುವುದೇನೆಂದರೆ,

1. ಎಜಿಎಂನ ಸೂಚನೆ ಮತ್ತು 2024–25ರ ವಾರ್ಷಿಕ ವರದಿ ಮತ್ತು ಆರ್ಥಿಕ ಹೇಳಿಕೆಗಳನ್ನು (**"ವಾರ್ಷಿಕ ವರದಿ"**) ಯನ್ನು ಎಲೆಕ್ಟ್ರಾನಿಕ್ ವಿಧಾನದಲ್ಲಿ ಯಾವ ಸದಸ್ಯರ ಇ-ಮೇಲ್ ಐಡಿ ಯು ಕಂಪನಿ/ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ (**"ಆರ್‌ಟಿಎ"**) ಅಥವಾ ಅವರ ಡೆಪಾಸಿಟರಿ ಪಾರ್ಟಿಸಿಪೆಂಟ್ (ಟ್ಸ್) (**"ಡಿಪಿಗಳು"**) ಬಳಿ ಶುಕ್ರವಾರ, ಆಗಸ್ಟ್ 15, 2025 ರವರೆಗೆ ಸೂಕ್ತ ಸುತ್ತೋಲೆಗಳಂತೆ ನೋಂದಾಯಿಸಿಕೊಂಡಿದ್ದವರಿಗೆ ಮಾತ್ರ ಇ-ಮೇಲ್ ಮೂಲಕ ಕಳುಹಿಸಿಕೊಡಲಾಗಿದೆ. ವಿದ್ಯುನ್ಮಾನ ಮಾದರಿಯಲ್ಲಿ ಸೂಚನೆ ಮತ್ತು ವಾರ್ಷಿಕ ವರದಿಯನ್ನು ಕಳುಹಿಸಿಕೊಡುವ ಪ್ರಕ್ರಿಯೆಯು ಸೋಮವಾರ, ಸೆಪ್ಟಂಬರ್ 01, 2025 ರಂದೇ ಮುಕ್ತಾಯಗೊಂಡಿದೆ.
   2024–25 ರ ವಾರ್ಷಿಕ ವರದಿಯು ಮತ್ತು ಎಜಿಎಂ ಸೂಚನೆ ಸೇರಿದಂತೆ (**"ವಾರ್ಷಿಕ ವರದಿ"**) ಕಂಪನಿಯ ವೆಬ್‌ಸೈಟ್, www.schneiderelectricpresident.com, ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್ (**"ಎನ್‌ಎಸ್‌ಡಿಎಲ್"**) ಅಂದರೆ www.evoting.nsdl.com ಮತ್ತು ಮೆಟ್ರೋಪಾಲಿಟನ್ ಸ್ಟಾಕ್ ಎಕ್ಸ್‌ಚೇಂಜ್ ಇಂಡಿಯ ಲಿಮಿಟೆಡ್ (**"ಎಂಎಸ್‌ಇಐ"**) www.msei.in ನಲ್ಲಿ ಸಹ ಲಭ್ಯವಿರುತ್ತದೆ.
2. ಸೆಕ್ಷನ್ 108 ರ ಕಾಯಿದೆಯ ನಿಯಮ 20 ನ್ನು ಓದಿಕೊಂಡಂತೆ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ತಿದ್ದುಪಡಿಯಾದಂತೆ ನಿಯಮತ್ರಣ 44 ರ ಸೆಬಿ ಲಿಸ್ಟಿಂಗ್ ನಿಯಂತ್ರಣಗಳು ಮತ್ತು ಸೂಕ್ತ ಸುತ್ತೋಲೆಗಳು ಮತ್ತು ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯ (**"ಐಸಿಎಸ್‌ಐ"**) ಇದರಿಂದ ಸಾಮಾನ್ಯ ಸಭೆಗಳಿಗೆ ನೀಡಲಾದ ಸೆಕ್ರೆಟ್ರಿಯಲ್ ಸ್ಟ್ಯಾಂಡರ್ಡ್–2 ರಂತೆ ಕಂಪನಿಯು ವಿದ್ಯುನ್ಮಾನ ಮೂಲಕ ಮತಚಲಾವಣೆಗೆ ಎನ್‌ಎಸ್‌ಡಿಎಲ್ ನ ಸೌಲಭ್ಯವನ್ನು ಬಳಸಿಕೊಳ್ಳಲಿದೆ. ಅದರಂತೆ ಸದಸ್ಯರು ಎಜಿಎಂ ಗೆ ಮೊದಲು ರಿಮೋಟ್ ಇ-ವೋಟಿಂಗ್ ನಲ್ಲಿ ಮತಚಲಾಯಿಸಲು ಮತ್ತು ಎಜಿಎಂ ಸಂದರ್ಭದಲ್ಲಿ ಇ-ಮತದಾನಕ್ಕೆ ಎನ್‌ಎಸ್‌ಡಿಎಲ್ ಸೌಲಭ್ಯವನ್ನು ಬಳಸಿಕೊಳ್ಳಬಹುದಾಗಿದೆ. ಎಜಿಎಂ ಗೆ ಕಂಪನಿಯ ಇ-ಮತದಾನದ ಈವೆಂಟ್ ಸಂಖ್ಯೆ 135323 (**"ಈವನ್"**) ಆಗಿರುತ್ತದೆ
3. ಎಜಿಎಂ ಗೆ ಮೊದಲು ರಿಮೋಟ್ ಇ-ಮತದಾನ ಸೌಲಭ್ಯವು ಈ ಕೆಳಗಿನ ಮತದಾನದ ಅವಧಿಯಲ್ಲಿ ಲಭ್ಯವಿರುತ್ತದೆ (ಎರಡೂ ದಿನಗಳು ಸೇರಿದಂತೆ)

ಕಟ್–ಆಫ್ ದಿನಾಂಕ (ಇ–ಮತದಾನ)	ಬುಧವಾರ, ಸೆಪ್ಟಂಬರ್ 17, 2025
ರಿಮೋಟ್ ಇ–ಮತದಾನ ಆರಂಭ	ಭಾನುವಾರ, ಸೆಪ್ಟಂಬರ್ 21, 2025 ರಂದು ಬೆಳಿಗ್ಗೆ 09:00 (ಭಾ.ಕಾ) ರಿಂದ
ರಿಮೋಟ್ ಇ–ಮತದಾನದ ಮುಕ್ತಾಯ	ಮಂಗಳವಾರ, ಸೆಪ್ಟಂಬರ್ 23, 2025 ರಂದು ಸಂಜೆ 05:00 (ಭಾ.ಕಾ) ರವರೆಗೆ

   ಮೇಲೆ ಹೇಳಿದ ದಿನಾಂಕ ಮತ್ತು ಸಮಯದ ಅವಧಿ ಮುಗಿದ ನಂತರ ರಿಮೋಟ್ ಇ-ಮತದಾನ ಮಾಡ್ಯೂಲ್ ನ್ನು ಎನ್‌ಎಸ್‌ಡಿಎಲ್ ನಿಷ್ಕ್ರಿಯಗೊಳಿಸಲಿದೆ ಮತ್ತು ಮೇಲೆ ಹೇಳಲಾದ ದಿನಾಂಕ ಮತ್ತು ಸಮಯದ ನಂತರ ರಿಮೋಟ್ ಇ-ಮತದಾನಕ್ಕೆ ಅವಕಾಶವಿರುವುದಿಲ್ಲ. ಸದಸ್ಯರು ಒಮ್ಮೆ ನಡಾವಳಿಯ ಮೇಲೆ ಮತ ಚಲಾಯಿಸಿದ ನಂತರ ಸದಸ್ಯರಿಗೆ ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ. ಎಜಿಎಂ ಗೆ ಹಾಜರಾಗಲು ಮತ್ತು ಎಜಿಎಂ ಗೆ ಮೊದಲು ಮತ್ತು ಎಜಿಎಂ ಸಂದರ್ಭದಲ್ಲಿ ರಿಮೋಟ್ ಇ-ಮತದಾನದಲ್ಲಿ ಭಾಗವಹಿಸುವುದು ಇವುಗಳ ವಿವರವಾದ ಸೂಚನೆಗಳನ್ನು ಸೂಚನೆಯಲ್ಲಿ ನೀಡಲಾಗಿದೆ.
4. ಯಾವ ವ್ಯಕ್ತಿಯ ಹೆಸರು ಸದಸ್ಯರ ಪಟ್ಟಿ ಮತ್ತು ಡೆಪಾಸಿಟರಿಗಳಿಂದ ನಿರ್ವಹಿಸಲ್ಪಡುವ ಲಾಭದಾಯಕ ಮಾಲೀಕರ ಪಟ್ಟಿಯಲ್ಲಿ **ಬುಧವಾರ, ಸೆಪ್ಟಂಬರ್ 17, 2025 ("ಕಟ್ –ಆಫ್ ದಿನಾಂಕ")** ದವರೆಗೆ ಇರುತ್ತದೆಯೋ ಅಂಥವರು ಮಾತ್ರ ರಿಮೋಟ್ ಇ-ಮತದಾನ ಸೌಲಭ್ಯ ಮತ್ತು ಎಜಿಎಂ ಸಂದರ್ಭದಲ್ಲಿ ಇ-ಮತದಾನಕ್ಕೆ ಅರ್ಹರಾಗಿರುತ್ತಾರೆ. ಯಾವ ವ್ಯಕ್ತಿ ಕಟ್ ಆಫ್ ದಿನಾಂಕದವರೆಗೆ ಸದಸ್ಯರಾಗಿರುವುದಿಲ್ಲವೋ ಅಂಥವರು ಇದನ್ನು ಕೇವಲ ಮಾಹಿತಿ ಉದ್ದೇಶದ ಸೂಚನೆ ಎಂದು ಮಾತ್ರ ಪರಿಗಣಿಸತಕ್ಕದ್ದು. ಕಟ್ ಆಫ್ ದಿನಾಂಕದವರೆಗೆ ಕಂಪನಿಯಲ್ಲಿ ಸದಸ್ಯರ ಪಾವತಿಸಿದ ಇಕ್ವಿಟಿಷೇರು ಬಂಡವಾಳದ ಪಾಲಿಗೆ ಮತದಾನದ ಹಕ್ಕು ಸಮನಾಗಿರುತ್ತದೆ. ಯಾವುದೇ ವ್ಯಕ್ತಿ ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿದ್ದು ಅಥವಾ ಷೇರುಗಳನ್ನು ಸೂಚನೆಯನ್ನು ಎಲೆಕ್ಟ್ರಾನಿಕ್ ಮಾದರಿಯ ಮೂಲಕ ಕಳುಹಿಸಿದ ನಂತರ ಸದಸ್ಯರಾಗಿ, ಕಟ್ ಆಫ್ ದಿನಾಂಕದ ನಂತರ ಷೇರುಗಳನ್ನು ಪಡೆದುಕೊಂಡಿದ್ದರೆ, ಅಂಥವರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳಿಗಾಗಿ evoting@nsdl.com ಗೆ ಅಥವಾ ಆರ್‌ಟಿಎ ಗೆ rnt.helpdesk@in.mpms.mufg.com ಗೆ ಅಥವಾ ಕಂಪನಿಗೆ companysecretary@se.com ಗೆ ವಿನಂತಿಯನ್ನು ಕಳುಹಿಸಬೇಕು. ಆದಾಗ್ಯೂ, ನೀವು ಈಗಾಗಲೇ ಎನ್‌ಎಸ್‌ಡಿಎಲ್ ಜೊತೆ ಇ-ಮತದಾನಕ್ಕಾಗಿ ನೊಂದಾಯಿಸಿಕೊಂಡಿದ್ದರೆ, ನಿಮ್ಮ ಮತ ಚಲಾಯಿಸಲು ಈಗಾಗಲೇ ಇರುವ ಯೂಸರ್ ಐಡಿ ಮತ್ತು ಪಾಸ್‌ವಡ್ ್‌ಗಳನ್ನು ಬಳಸಬಹುದಾಗಿದೆ.
5. ಕಂಪನಿಯ ಸದಸ್ಯರ ರಿಜಿಸ್ಟರ್ ಮತ್ತು ಷೇರು ವರ್ಗಾವಣೆ ಪುಸ್ತಕಗಳು ಗುರುವಾರ, ಸೆಪ್ಟಂಬರ್ 18, 2025 ರಿಂದ ಬುಧವಾರ, ಸೆಪ್ಟಂಬರ್ 24, 2025 (ಎರಡೂ ದಿನಗಳು ಸೇರಿದಂತೆ) ಮುಚ್ಚಿರುತ್ತವೆ.
6. ಶ್ರೀ ಕಪಿಲ್ ತನೇಜ, ಪಾಲುದಾರ, (ಸ.ಸಂ.ಎಫ್4019, ಸಿಪಿ ನಂ. 22944) ತಪ್ಪಿದಲ್ಲಿ ಶ್ರೀ ಸುಜೀತ್ ಕುಮಾರ್, (ಸ.ಸಂ. ಎಫ್12562, ಸಿಪಿ ನಂ. 22684), ಪಾಲುದಾರ, ಮೆ॥ ಸಂಜಯ್ ಗ್ರೋವರ್ ಆಂಡ್ ಅಸೋಸಿಯೇಟ್ಸ್, ಕಂಪನಿ ಕಾರ್ಯದರ್ಶಿಗಳು ಇವರನ್ನು ರಿಮೋಟ್ ಇ-ಮತದಾನ ಮತ್ತು ಎಜಿಎಂ ಸಂಧರ್ಭದಲ್ಲಿ ಇ-ಮತದಾನ ಪ್ರಕ್ರಿಯೆಯನ್ನು ಸೂಕ್ತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಪರಿಶೀಲಕರನ್ನಾಗಿ ನೇಮಿಸಿದೆ.
7. ಎಜಿಎಂ ಸಂದರ್ಭದಲ್ಲಿ ಹೇಳಲಾದ ವ್ಯವಹಾರಗಳನ್ನು ನಡೆಸಲು ಸಂಬಂಧಿಸಿದಂತೆ ಸೂಕ್ತ ದಾಖಲೆಗಳು ವಿದ್ಯುನ್ಮಾನವಾಗಿ ಪರಿಶೀಲಿಸಲು ಎಜಿಎಂ ಸಂದರ್ಭದಲ್ಲಿ ಲಭ್ಯವಿರುತ್ತದೆ.
8. ಎಜಿಎಂ ನ ಮತದಾನದ ಫಲಿತಾಂಶಗಳು ಮತ್ತು ಪರಿಶೀಲಕರ ವರದಿಯನ್ನು ಶಾಸನಬದ್ಧ ಸಮಯದಂತೆ ಕಂಪನಿಯ ವೆಬ್‌ಸೈಟ್ www.schneiderelectricpresident.com ರಲ್ಲಿ, ಸ್ಟಾಕ್ ಎಕ್ಸ್‌ಚೇಂಜ್ ಅಂದರೆ www.msei.in ಹಾಗೂ ಎನ್‌ಎಸ್‌ಡಿಎಲ್ ವೆಬ್‌ಸೈಟ್ https://www.evoting.nsdl.com/ಗಳಲ್ಲಿ ಘೋಷಿಸಲಾಗುವುದು.
9. ಒಂದು ವೇಳೆ ಎಜಿಎಂ ಸಂದರ್ಭದಲ್ಲಿ ಅಥವಾ ಮೊದಲು ಇ-ಮತದಾನದ ಬಗ್ಗೆ ಅಥವಾ ಯಾವುದೇ ವಿಚಾರಣೆಗಳು/ಕುಂದುಕೊರತೆಗಳು ಇದ್ದಲ್ಲಿ ಅಥವಾ ಸಹಾಯಕ್ಕಾಗಿ ಕಂಪನಿಯ ಫ್ರೀಕ್ವೆಂಟ್ಲಿ ಆಸ್ಕ್‌ಡ್ ಕ್ವೆಶ್ಚನ್ಸ್ (ಎಫ್ ಎಕ್ಯು) ಗಳನ್ನು ನ್ನು ಆಧಾರ ಮಾಡಿಕೊಳ್ಳಿ ಮತ್ತು ಷೇರುದಾರರ ಮತ್ತು ಇ-ಮತದಾನ ಬಳಕೆದಾರರ ಕೈಪಿಡಿಯನ್ನು https://www.evoting.nsdl.com/ ನ ಡೌನ್‌ಲೋಡ್ ವಿಭಾಗದಿಂದ ಡೌನ್‌ಲೋಡ್ ಮಾಡಿಕೊಳ್ಳಿ ಅಥವಾ ಕರೆಮಾಡಿ ದೂರವಾಣಿ ಸಂ. 022 – 4886 7000 ಅಥವಾ ಶ್ರೀಮತಿ ಪಲ್ಲವಿ ಮಹಾತ್ರೆ, ಹಿರಿಯ ವ್ಯವಸ್ಥಾಪಕರು, ಎನ್‌ಎಸ್‌ಡಿಎಲ್ ಇವರಿಗೆ evoting@nsdl.com ಗೆ ವಿನಂತಿಯನ್ನು ಕಳುಹಿಸಬಹುದಾಗಿದೆ.
10. ಯಾವುದೇ ವಿಚಾರಣೆ/ಕುಂದುಕೊರತೆಗಳಿದ್ದಲ್ಲಿ, ಸದಸ್ಯರು ಮುಂದುವರಿದು, ಕಂಪನಿ ಕಾರ್ಯದರ್ಶಿ ರವರನ್ನು companysecretary@se.com ಮೂಲಕ ಸಂಪರ್ಕಿಸಲು ಕೋರಲಾಗಿದೆ.
11. ಸದಸ್ಯರು ತಮ್ಮ ಕೆವೈಸಿ ವಿವರಗಳು ಅಂದರೆ ಪ್ಯಾನ್, ವಿಳಾಸ, ಮೊಬೈಲ್ ಸಂಖ್ಯೆ, ಬ್ಯಾಂಕ್ ಖಾತಾ ವಿವರಗಳು, ಇ-ಮೇಲ್ ವಿಳಾಸ ಮತ್ತು ನಾಮಿನೇಶನ್ ಇವುಗಳನ್ನು ಅಪ್‌ಡೇಟ್ ಮಾಡಲು ಕೋರಲಾಗಿದೆ. ಭೌತಿಕ ರೂಪದಲ್ಲಿ ಕಂಪನಿಯ ಷೇರುಗಳನ್ನು ಹೊಂದಿರುವ ಎಲ್ಲಾ ಷೇರುದಾರರು ತಮ್ಮ ಕೆವೈಸಿ ವಿವರಗಳನ್ನು ಅಪ್‌ಡೇಟ್ ಮಾಡಲು ಮತ್ತು ಎಲೆಕ್ಟ್ರಾನಿಕ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಕೆವೈಸಿ ವಿವರಗಳನ್ನು ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್ (ಟ್ಸ್) ಬಳಿ ಸಲ್ಲಿಸಲು ಕೋರಲಾಗಿದೆ.

ಎಜಿಎಂ ನಲ್ಲಿ ಭಾಗವಹಿಸುವುದು, ರಿಮೋಟ್ ಇ-ಮತದಾನ ಮತ್ತು ಎಜಿಎಂ ಸಂದರ್ಭದಲ್ಲಿ ಮತದಾನ ಮಾಡುವುದು ಇತ್ಯಾದಿಗಳ ವಿವರವಾದ ಸೂಚನೆ ಮತ್ತು ವಿಧಾನಗಳಿಗಾಗಿ ಎಜಿಎಂ ಸೂಚನೆಯನ್ನು ಆಧಾರ ಮಾಡಿಕೊಳ್ಳಿ

ಮಂಡಳಿಯ ಆದೇಶದ ಮೇರೆಗೆ
ಸ್ನೇಯ್ಡರ್ ಎಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಸ್ವಪ್ನ ಭಾಟಿಯಾ
ಕಂಪನಿ ಕಾರ್ಯದರ್ಶಿ ಮತ್ತು ಕಾಂಪ್ಲಯನ್ಸ್ ಅಧಿಕಾರಿ
ಸ. ಸಂ.ಎ32349

ದಿನಾಂಕ: ಸೆಪ್ಟಂಬರ್ 01, 2025
ಸ್ಥಳ: ಬೆಂಗಳೂರು

Life Is On | Schneider Electric

ಸಮಾಚಾರ ಸಣ್ಣದಲ್ಲ

ಜಿಲ್ಲಾ ಮಟ್ಟದ ಅಧಿಕಾರಿ ಅಮಾನತು

ಚಿಕ್ಕಬಳ್ಳಾಪುರ: ಬಾಗೇಪಲ್ಲಿ ಶಾಸಕ ಸುಬ್ಬಾರೆಡ್ಡಿ ಫೋನ್ ಕರೆಯನ್ನು ಸ್ವೀಕರಿಸದೆ ಕರ್ತವ್ಯ ನಿರ್ಲಕ್ಷ್ಯತೆ ತೋರಿಸಿದ ಜಿಲ್ಲಾ ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆಯ ಅಧಿಕಾರಿ ಬಿಂದುಮಣಿ ಎಂ.ಎಲ್. ಅವರನ್ನು ಅಮಾನತು ಮಾಡಲಾಗಿದೆ. ಬಾಗೇಪಲ್ಲಿ ಶಾಸಕ ಸುಬ್ಬಾರೆಡ್ಡಿ ಅವರು ಕ್ಷೇತ್ರಕ್ಕೆ ಸಂಬಂಧಿಸಿದ ಅಲ್ಪ ಸಂಖ್ಯಾತರ ಇಲಾಖೆಯ ಕಾರ್ಯಗಳ ಬಗ್ಗೆ ಮಾತನಾಡಲು ಬಿಂದುಮಣಿ ಎಂ.ಎಲ್ ಅವರಿಗೆ ದೂರವಾಣಿ ಕರೆ ಮಾಡಿದ್ದರು. ಆದ್ರೆ, ಕರೆ ಸ್ವೀಕರಿಸಿಲ್ಲವೆಂದು ಅಮಾನತು ಆದೇಶ ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ. ಸತತ ಮೂರು ದಿನ ಫೋನ್ ಕರೆ ಮಾಡಿದರೂ ಸಹ ಶಾಸಕರ ಕರೆಯನ್ನು ಅಧಿಕಾರಿ ಸ್ವೀಕರಿಸಲಿಲ್ಲ, ಕರೆ ಸ್ವೀಕರಿಸದೆ ಕರ್ತವ್ಯ ನಿರ್ಲಕ್ಷ್ಯತೆ ತೋರಿಸಿದ ಅಧಿಕಾರಿ ಬಿಂದುಮಣಿ ಎಂ.ಎಲ್. ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳುವಂತೆ ಶಾಸಕ ಸುಬ್ಬಾರೆಡ್ಡಿ ಅಲ್ಪಸಂಖ್ಯಾತರ ನಿರ್ದೇಶನಾಲಯ ನಿರ್ದೇಶಕರಿಗೆ ದೂರು ನೀಡಿದ್ದರು.

ತಮ್ಮನಿಂದ ಅಣ್ಣನ ಕೊಲೆ

ಮೈಸೂರು: ಆಸ್ತಿ ವಿಚಾರಕ್ಕೆ ಅಣ್ಣನನ್ನೇ ತಮ್ಮ ಸೋಮವಾರ ಹಾಡಹಗಲೇ ಬರ್ಬರವಾಗಿ ಕೊಂದು ಹಾಕಿದ್ದಾನೆ. ಮೈಸೂರು ತಾಲೂಕಿನ ಬೋರೆ ಆನಂದೂರು ಗ್ರಾಮದಲ್ಲಿ ಘಟನೆ ನಡೆದಿದ್ದು, ರವಿ (43) ಎಂಬಾತನೇ ತನ್ನ ಒಡಹುಟ್ಟಿದ ಅಣ್ಣ ಮಹೇಶ್ (45) ಅವರನ್ನು ಹತ್ಯೆ ಮಾಡಿದ್ದಾನೆ.ಮಾತ್ರವಲ್ಲ, ತಂದೆ ಕೃಷ್ಣೇಗೌಡ, ಅತ್ತಿಗೆ ಲಕ್ಷ್ಮಿ ಮೇಲೂ ಮಾರಣಾಂತಿಕ ಹಲ್ಲೆ ಮಾಡಿ ನಂತರ ಪರಾರಿಯಾಗಿದ್ದಾನೆ. ಹಿರಿಯ ಮಗ ಮಹೇಶ್‌ಗೆ ತಂದೆ ಕೃಷ್ಣೇಗೌಡ 6 ಗುಂಟೆ ಆಸ್ತಿ ಬರೆದಿದ್ದರು ಎನ್ನಲಾಗಿದೆ. ಇದರಿಂದ ಕುಪಿತಗೊಂಡಿದ್ದ ತಮ್ಮ ರವಿ ಕೊಲೆ ಮಾಡಿದ್ದಾನೆ ಎಂದು ಹೇಳಲಾಗಿದೆ.

ವಿಶ್ವವಾಣಿ ಕ್ಲಬ್ ಹೌಸ್
02.09.2025
ಸಂಜೆ: 06.55 ರಿಂದ 08.05 ರವರೆಗೆ
ಮಂಗಳವಾರದ ಅತಿಥಿ

ಶ್ರೀಮತಿ ಗಿರ್ವಾಣಿ ಎಂ.ಹೆಚ್
ವಿಷಯ
ಮನಸೇ ಮನಸೇ ಥ್ಯಾಂಕ್ಯು
vishwavani.news

ಹಿಂದೂ ಧಾರ್ಮಿಕ ಕೇಂದ್ರದ ವಿರುದ್ಧ ಷಡ್ಯಂತ್ರ ಎಂದು ಆಕ್ರೋಶ | ಎನ್‌ಐಎ ತನಿಖೆಗೆ ವಹಿಸಲು ಬಿಜೆಪಿ ಆಗ್ರಹ

ಬುರುಡೆ ವಿರುದ್ಧ ಧರ್ಮಸ್ಥಳದಲ್ಲಿ ಬಿಜೆಪಿ ಕಹಳೆ

ಉಜಿರೆ: ಧರ್ಮಸ್ಥಳ ಬುರುಡೆ ಪ್ರಕರಣಕ್ಕೆ ಬಿಜೆಪಿ ಭಾರೀ ಖಂಡನೆ ವ್ಯಕ್ತಪಡಿಸಿದೆ. ಪ್ರಕರಣ ತನಿಖೆಗೆ ಸರಕಾರ ರಚಿಸಿರುವ ಎಸ್‌ಐಟಿ ಅಸಂಬದ್ಧ ಎಂದು ವಾದಿಸಲಾಗುತ್ತಿದೆ. ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಮಾಡುವ ಹುನ್ನಾರ ಎಂದು ಬಿಜೆಪಿ ಆರೋಪಿಸಿದೆ.

ಈ ಸಂಬಂಧ ಬಿಜೆಪಿ ಸೋಮವಾರ ಧರ್ಮಸ್ಥಳ ದಲ್ಲಿ ಬೃಹತ್ ಸಮಾವೇಶ ನಡೆಸಿತು. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಬಿ.ವೈ.ವಿಜಯೇಂದ್ರ, ಆರ್.ಅಶೋಕ, ಸಿ.ಟಿ.ರವಿ, ಜನಾರ್ದನ್ ರೆಡ್ಡಿ ಸೇರಿ ಸಾವಿರಾರು ಮಂದಿ ಬಿಜೆಪಿ ಕಾರ್ಯಕರ್ತರು ಸಮಾವೇಶಗೊಂಡು ರಾಜ್ಯ ಸರಕಾರದ ವಿರುದ್ಧ ಕಿಡಿಕಾರಿದರು.

ಸಮಾವೇಶದಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ರಾಜ್ಯ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಸಿಬಿಐ ಅಥವಾ ಎನ್‌ಐಎ ತನಿಖೆ ಮೂಲಕ ಧರ್ಮಸ್ಥಳ ಬುರುಡೆ ಪ್ರಕರಣವನ್ನು ಇತ್ಯರ್ಥಗೊಳಿಸಬೇಕು. ಇಲ್ಲವಾದಲ್ಲಿ ನ್ಯಾಯ ಸಿಗಲು ಸಾಧ್ಯವಿಲ್ಲ ಎಂದರು ಹೇಳಿದರು.

ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡುತ್ತಿರುವುದು ಕೋಟ್ಯಂತರ ಭಕ್ತರಿಗೆ ತೀವ್ರ ನೋವು ಮಾಡಿಸಿದೆ. ಹಿಂದೂಗಳ ತಾಳ್ಮೆಯ ಪರೀಕ್ಷೆ ಮಾಡಬೇಡಿ. ಧರ್ಮಸ್ಥಳ ಚಲೋ ಕಾರ್ಯಕ್ರಮವನ್ನು ಹಗುರವಾಗಿ ಪರಿಗಣಿಸ ಬೇಡಿ. ಧಾರ್ಮಿಕ ಸ್ಥಳದ ವಿರುದ್ಧ ಅಪಪ್ರಚಾರ ಬಿಜೆಪಿ ಎಂದಿಗೂ ಸಹಿಸುವುದಿಲ್ಲ ಎಂದು ಹೇಳಿದರು.

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಮಾತನಾಡಿ, ಬುರುಡೆ ಸರಕಾರಕ್ಕೆ ಧಿಕ್ಕಾರ, ಷಡ್ಯಂತ್ರ ಮಾಡಿದ ಕಾಂಗ್ರೆಸ್ ಸರಕಾರಕ್ಕೆ ಧಿಕ್ಕಾರ ಎಂದು ಕೂಗಿದರು. ಅಲ್ಪಸಂಖ್ಯಾತರನ್ನು ಕಡೆಗಣಿಸಿ, ಬಹುಸಂಖ್ಯಾತರ ಪರವಾಗಿ ಸರಕಾರ ಹಿಂದೂಗಳ ವಿರುದ್ಧವಾಗಿ ಷಡ್ಯಂತ್ರ ಮಾಡುತ್ತಿದೆ. ಸಮಗ್ರ ಸಮಾಜವೇ ಇದನ್ನು ತಿರಸ್ಕಾರ ಮಾಡಬೇಕು ಎಂದು ಹೇಳಿದರು. ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಮಾತ ನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಜಾತ್ಯಾತೀತ ಹೆಸರಿನಲ್ಲಿ ಹಿಂದೂ ಧರ್ಮವನ್ನು ಒಡೆಯುವ ಕೆಲಸ ಮಾಡಿದ್ದಾರೆ. ಅವರು ಧರ್ಮಸ್ಥಳದ ಭಕ್ತರ ಕ್ಷಮೆ ಕೇಳ ಬೇಕು. ನಾಡಿನ ಜನತೆಯ ಶಾಪದಿಂದ ರಾಜ್ಯ ಸರಕಾರ ಸದ್ಯದಲ್ಲೆ ಪತನವಾಗುವುದು ಖಚಿತ ಎಂದು ಭವಿಷ್ಯ ನುಡಿದರು.

ಈ ವೇಳೆ ಸುಧಾಕರ ರೆಡ್ಡಿ, ಛಲವಾದಿ ನಾರಾಯಣ ಸ್ವಾಮಿ, ಮಾಜಿ ಸಚಿವ ಶ್ರೀರಾಮುಲು ಕೂಡಾ ಎಸ್.ಐ.ಟಿ. ತನಿಖೆ ಹಾಗೂ ಅನಾಮಿಕನ ವರ್ತನೆಯನ್ನು ಖಂಡಿಸಿದರು. ಸುನಿಲ್ ಕುಮಾರ್ ಕಾರ್ಕಳ, ದೊಡ್ಡಣ್ಣ ಗೌಡ ಪಾಟೀಲ್, ಮುನಿರತ್ನ, ಭಾರತಿ ಶೆಟ್ಟಿ, ರೇಣುಕಾಚಾರ್ಯ, ಭಾಗೀರಥಿ ಮುರುಳ್ಯ, ಭರತ್ ಶೆಟ್ಟಿ, ವೇದವ್ಯಾಸ ಕಾಮತ್, ತೇಜಸ್ವಿಸೂರ್ಯ, ವಿಶ್ವೇಶ್ವರ ಹೆಗಡೆ ಕಾಗೇರಿ, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ, ನಳಿನ್ ಕುಮಾರ್ ಕಟೀಲ್, ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಬಿಜೆಪಿ ದ.ಕ.ಜಿಲ್ಲಾ ಅಧ್ಯಕ್ಷ ಸತೀಶ್ ಕುಂಪಲ ಉಪಸ್ಥಿತರಿದ್ದರು.

ಹಿಂದೂ ಧಾರ್ಮಿಕ ಶ್ರದ್ಧಾ ಕೇಂದ್ರ ಧರ್ಮಸ್ಥಳದ ವಿರುದ್ಧ ಅಪ್ರಪಚಾರ ಎಂದು ಬಿಜೆಪಿ ನಾಯಕರು ಸೋಮವಾರ ನಡೆಸಿದ ಬೃಹತ್ ಸಮಾವೇಶದಲ್ಲಿ ಒಗ್ಗಟ್ಟು ಪ್ರದರ್ಶಿಸಿದರು.

ಸಮಾವೇಶ ಆರಂಭಕ್ಕೂ ಮುನ್ನ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಮಂಜುನಾಥಸ್ವಾಮಿ ದರ್ಶನ ಪಡೆದರು.

> ದೇಶದ ಹಿತಕ್ಕಾಗಿ ಹಿಂದೂ ಸಮಾಜದ ಸಂಘಟನೆಯೊಂದಿಗೆ ಎಲ್ಲರೂ ಸದಾ ಜಾಗೃತರಾಗಿರಬೇಕು. ದೇಶ ವಿಭಜನೆಯ ಕಾಲದಿಂದಲೂ ಕಾಂಗ್ರೆಸ್ ವೋಟ್ ಬ್ಯಾಂಕ್‌ಗಾಗಿ ರಾಜಕಾರಣ ಮಾಡುತ್ತಿದೆ. ಸಮಾಜವನ್ನು ಒಡೆಯುವ ಹುನ್ನಾರ ಮಾಡುತ್ತಿದೆ.
> -ಪ್ರಲ್ಹಾದ್ ಜೋಶಿ, ಕೇಂದ್ರ ಸಚಿವ

> ಹಿಂದೂ ಧಾರ್ಮಿಕ ಶ್ರದ್ಧಾಕೇಂದ್ರದ ವಿರುದ್ಧ ನಡೆಯುತ್ತಿರುವ ಷಡ್ಯಂತ್ರವನ್ನು ಖಂಡಿಸಿ ಧರ್ಮಸ್ಥಳದಲ್ಲಿ ಬೃಹತ್ ಸಮಾವೇಶ ಮಾಡಿದ್ದೇವೆ. ದೂರುದಾರನ ಪ್ರಾಥಮಿಕ ವಿಚಾರಣೆ ಹಾಗೂ ತನಿಖೆಯನ್ನೂ ಮಾಡದೆ ರಾಜ್ಯ ಸರಕಾರ ಎಸ್‌ಐಟಿ ರಚಿಸಿದೆ. ಸೌಜನ್ಯ ಹತ್ಯೆ ಪ್ರಕರಣ ಮರುತನಿಖೆ ನಡೆಸಿ ಆಕೆಯ ಕುಟುಂಬಕ್ಕೆ ನ್ಯಾಯ ಒದಗಿಸುವಲ್ಲಿ ಬಿಜೆಪಿ ಬೆಂಬಲ ನೀಡುತ್ತದೆ.
> ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

> ಶವಗಳನ್ನು ಹೂತಿಟಿದ್ದೇನೆ ಎಂದು ಹೇಳಿದ ತಕ್ಷಣ ದೂರುದಾರನ ಹಿನ್ನೆಲೆ ತಿಳಿಯದೆ ಪ್ರಕರಣ ದಾಖಲಿಸಿಕೊಂಡಿರುವುದು ತಪ್ಪು. ದೂರುದಾರನ ಮಂಪರುಪರೀಕ್ಷೆ ಮಾಡದೆ ಎಡಪಂಥೀಯರ ಮಾತುಕೇಳಿ ಎಸ್‌ಐಟಿಗೆ ಪ್ರಕರಣ ಒಪ್ಪಿಸಿರುವುದೂ ಸರಿಯಲ್ಲ.
> -ಸಿ.ಟಿ.ರವಿ, ಎಂಎಲ್‌ಸಿ

> ಸಿದ್ದರಾಮಯ್ಯ ಸುತ್ತ ನಕ್ಸಲ್ ಗ್ಯಾಂಗ್ ಹಾಗೂ ನಗರ ನಕ್ಸಲರ ಕೈವಾಡವಿದೆ. ಎಸ್‌ಐಟಿ ಕೇವಲ ಕೆರೆಯ ಮೀನುಗಳನ್ನು ಹಿಡಿದಿದೆ. ಸಮುದ್ರ ತಿಮಿಂಗಿಲಗಳನ್ನು ಹಿಡಿಯಬೇಕು. ಎಸ್‌ಐಎಗೆ ಪ್ರಕರಣ ಹಸ್ತಾಂತರಿಸಿದರೆ ಮಾತ್ರ ನ್ಯಾಯ ಸಿಗಲಿದೆ.
> -ಆರ್.ಅಶೋಕ, ಪ್ರತಿಪಕ್ಷ ನಾಯಕ

ಕಾನೂನು ಹೋರಾಟದ ಖರ್ಚು ವೆಚ್ಚ ಭರಿಸುವ ಭರವಸೆ

ಧರ್ಮಸ್ಥಳ: ರಾಜ್ಯ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ದಕ್ಷಿಣ ಕನ್ನಡ ಸಂಸದ ಬ್ರಿಜೇಶ್ ಚೌಟ ಸೇರಿ ವಿವಿಧ ನಾಯಕರು, ಧರ್ಮಸ್ಥಳದ ಸೌಜನ್ಯ ನಿವಾಸಕ್ಕೆ ಭೇಟಿ, ಮಾತುಕತೆ ನಡೆಸಿದ್ದಾರೆ. ಸೌಜನ್ಯಪರ ಹೋರಾಟ ದಲ್ಲಿ ಜತೆಗಿರುವುದಾಗಿ ಭರವಸೆ ನೀಡಿದ್ದಾರೆ. ಈ ವೇಳೆ ಬಿ.ವೈ. ವಿಜಯೇಂದ್ರ ಮುಂದೆ, ನನ್ನ ಮಗಳ ಸಾವಿಗೆ ಇನ್ನೂ ನ್ಯಾಯ ಸಿಕ್ಕಿಲ್ಲ ಎಂದು ತಾಯಿ ಕುಸುಮಾವತಿ ಕಣ್ಣೀರು ಹಾಕಿದ್ದಾರೆ.

ಹತಭಾಗ್ಯೆ ಹೆಣ್ಣುಮಗಳು ಸೌಜನ್ಯಳ ಮೇಲೆ ನಡೆದಿರುವ ಭೀಕರ ಅತ್ಯಾಚಾರದ ಪೈಶಾಚಿಕ ಕೃತ್ಯ ಅತ್ಯಂತ ಖಂಡನೀಯ. ಘಟನೆ ನಡೆದು 12 ವರ್ಷಗಳಾದರೂ ಅಟ್ಟಹಾಸ ಮೆರೆದ ದುರುಳರು ಶಿಕ್ಷೆಯಿಂದ ತಪ್ಪಿಸಿಕೊಂಡು ತಿರುಗುತ್ತಿರುವುದು ಬಹುದೊಡ್ಡ ವಿಪರ್ಯಾಸ. ನ್ಯಾಯಕ್ಕಾಗಿ ಸುಪ್ರೀಂ ಕೋರ್ಟಿಗೆ ಹೋದರೆ ಕಾನೂನು ಹೋರಾಟದ ಎಲ್ಲಾ ಖರ್ಚು ವೆಚ್ಚ ಬಯಸುವುದಾಗಿ ವಿಜಯೇಂದ್ರ ಭರವಸೆ ನೀಡಿದ್ದಾರೆ.

ಸೌಜನ್ಯ ಪ್ರಕರಣ ಮರು ತನಿಖೆಗೆ ಒತ್ತಾಯ: ಧರ್ಮಸ್ಥಳ ಚಲೋ ವೇದಿಕೆಯಲ್ಲಿಯೂ ಸೌಜನ್ಯ ಸಾವಿಗೆ ನ್ಯಾಯ ಸಿಗಲು, ಪ್ರಕರಣ ಮರು ತನಿಖೆ ನಡೆಸುವಂತೆ ಸರಕಾರ ವನ್ನು ಒತ್ತಾಯಿಸಲಾಗಿದೆ. ಈ ನಿಟ್ಟಿನಲ್ಲಿ ಬಿಜೆಪಿ ತನ್ನ ಸಹಾನುಭೂತಿ ಹಾಗೂ ಬೆಂಬಲ ವ್ಯಕ್ತಪಡಿಸಲು ಸೌಜನ್ಯ ಅವರ ಮನೆಗೆ ತೆರಳಿ ಅವರ ತಾಯಿ ಕುಸುಮಾವತಿ ಅವರನ್ನು ಭೇಟಿಯಾಗಿ ನಿಮ್ಮೊಂದಿಗೆ ನಾವಿದ್ದೇವೆ ಎಂಬ ಅಭಯ ನೀಡಲಾಯಿತು ಎಂದು ರಾಜ್ಯ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಧರ್ಮಯಾತ್ರೆ, ಬೃಹತ್ ಸಮಾವೇಶದ ಬಳಿಕ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಸೌಜನ್ಯ ಮನೆಗೆ ಭೇಟಿ ನೀಡಿದರು. ಈ ಸಂದರ್ಭ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಶಾಸಕ ಹರೀಶ್ ಪೂಂಜಾ, ಮಾಜಿ ಶಾಸಕ ಪ್ರೀತಮ್ ಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಮತ್ತಿತರರು ಉಪಸ್ಥಿತರಿದ್ದರು.

ಸಹೋದರನಿಂದಲೇ ಕೃತ್ಯ | ಪ್ರಕರಣ ದಾಖಲು

ಮಗುವಿಗೆ ಜನ್ಮ ನೀಡಿದ ಅಪ್ರಾಪ್ತೆ

ಶಿವಮೊಗ್ಗ: ಮನೆಯ ಶೌಚಾಲಯದಲ್ಲಿ 15 ವರ್ಷದ ಬಾಲಕಿಯೊಬ್ಬಳು ಗಂಡು ಮಗುವಿಗೆ ಜನ್ಮ ನೀಡಿದ ಘಟನೆ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದಿದೆ. ಬಾಲಕಿಗೆ ಹೆರಿಗೆಯಾದ ನಂತರ ಬಾಲಕಿಗೆಯನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಾಗ ಪ್ರಕರಣ ಬೆಳಕಿಗೆ ಬಂದಿದೆ. ಈ ಕುರಿತು ಬಾಲಕಿಯ ಪೋಷಕರು ದೂರು ನೀಡಿರುವ ದೂರಿನ ಅನ್ವಯ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

15 ವರ್ಷದ ಬಾಲಕಿಯು ಗರ್ಭ ಧರಿಸಲು ಆಕೆಯ 16 ವರ್ಷದ ಅಣ್ಣನೇ ಕಾರಣ ಎಂದು ಪೋಷಕರು ದೂರು ನೀಡಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಆತನನ್ನು ಬಂಧಿಸಲಾಗಿದೆ. ಬಾಲಕಿಯು 9ನೇ ತರಗತಿ ಓದಿದ್ದು, ಶಾಲೆ ಬಿಟ್ಟು ಮನೆಯಲ್ಲಿಯೇ ಇರುತ್ತಿದ್ದಳು. ಪೋಷಕರು ಕೆಲಸಕ್ಕೆ ಹೋದಾಗ ಸಹೋದರ ದುಷ್ಕೃತ್ಯ ಎಸಗಿದ್ದಾನೆ. ಈ ಬಗ್ಗೆ ಪೋಷಕರಿಗೆ ಹೇಳದಂತೆ ಬಾಲಕಿಗೆ ಬೆದರಿಕೆ ಹಾಕಿದ್ದ ಎಂದು ತಿಳಿದು ಬಂದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಬಾಲಕಿಯು ಏಳೂವರೆ ತಿಂಗಳಿಗೇ ಮಗುವಿಗೆ ಜನ್ಮ ನೀಡಿದ್ದಾಳೆ. ಈ ಹಿನ್ನೆಲೆಯಲ್ಲಿ ಮಗುವನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯ ಮಕ್ಕಳ ವಿಭಾಗಕ್ಕೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಪೋಷಕರು ನೀಡಿದ ದೂರಿನಂತೆ, ಬಾಲಕನ ಬಂಧಿಸಿ, ಕೋರ್ಟ್‌ಗೆ ಹಾಜರು ಪಡಿಸಲಾಗಿದೆ.

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟ
ಆಸ್ತಿ ಅಧಿಕಾರಿಗಳ ಕಛೇರಿ, ಸೀಮಿಕೇರಿ ಕ್ರಾಸ್ ಹತ್ತಿರ, ಹುಬ್ಬಳ್ಳಿ ಬೈಪಾಸ್ ರಸ್ತೆ, ಉದ್ಯಾನಗಿರಿ ಬಾಗಲಕೋಟ – 587104.
ಸಂ : ಆ.ಅ./ತೋವಿವಿಬಾ/ಸಖಕ/ಟೆ.ನಂ–204/2025–26 ದಿನಾಂಕ:01–09–2025

ಟೆಂಡರ ಪ್ರಕಟಣೆ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಡಿಯಲ್ಲಿ ಬರುವ ಕೃಷಿ ವಿಜ್ಞಾನ ಕೇಂದ್ರ (ಕೆ.ವಿ.ಕೆ.), ಕೋಲಾರಗೆ ಬೇಕಾಗಿರುವ ವೈಜ್ಞಾನಿಕ ಉಪಕರಣಗಳು & ಯಂತ್ರೋಪಕರಣಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಬಿಡ್‌ದಾರರು ಟೆಂಡರ ಪ್ರಕಟಣೆ, ವಿವರಣೆ ಮತ್ತು ಷರತ್ತುಗಳಿಗಾಗಿ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಂಡು ಟೆಂಡರನ್ನು ಸಲ್ಲಿಸುವುದು.

ಟೆಂಡರನ ಘಟಣಾವಳಿಗಳು (ವೇಳಾಪಟ್ಟಿ)

1	ಟೆಂಡರ ಅಂಶಗಳ ಸ್ಪಷ್ಟಿಕರಣಕ್ಕಾಗಿ ಕೊನೆಯ ದಿನಾಂಕ	12–09–2025	@	14.00 ಘಂ
2	ಪೂರ್ವ ಬಿಡ್ ಸಭೆಯ ದಿನಾಂಕ (ಕ್ರಮ ಸಂಖ್ಯೆ 2 ರ ಸರಕಿಗೆ ಮಾತ್ರ ಅನ್ವಯಿಸುತ್ತದೆ)	15–09–2025	@	11.00 ಘಂ
3	ಟೆಂಡರ ಸಲ್ಲಿಸುವ ಕೊನೆಯ ದಿನಾಂಕ	03–10–2025	@	16.00 ಘಂ
4	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	06–10–2025	@	11.00 ಘಂ
5	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಸಾಧ್ಯವಾದಲ್ಲಿ)	08–10–2025	@	12.00 ಘಂ

ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಗೆ ಕಾಲಕಾಲಕ್ಕೆ ಭೇಟಿ ನೀಡಿ ಯಾವುದಾದರೂ ತಿದ್ದುಪಡಿ corrigendum/ addendum ಬಗ್ಗೆ ಮಾಹಿತಿ ಪಡೆಯಬೇಕು.. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಫೋ : 08354–230258.

ಸಹಿ/–ಆಸ್ತಿ ಅಧಿಕಾರಿಗಳು
ತೋ.ವಿ.ವಿ, ಬಾಗಲಕೋಟ
DIPR/BGK/RO-NO-251/KSMCA/2025-26

ಧರ್ಮಸ್ಥಳ ವಿಚಾರದಲ್ಲಿ ಬಿಜೆಪಿಯಿಂದ ರಾಜಕೀಯ

ವಿಜಯಪುರ: ವಿಜಯೇಂದ್ರನಿಗೆ ಬೇರೆ ಬಂಡವಾಳವಿಲ್ಲ, ಧರ್ಮಸ್ಥಳ ವಿಚಾರದಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಯತ್ನಿಸು ತ್ತಿದ್ದಾನೆ ಎಂದು ಸಚಿವ ಎಂ.ಬಿ ಪಾಟೀಲ್ ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳ ವಿಚಾರದಲ್ಲಿ ನಾವು ಮೊದಲು ಎಸ್‌ಐಟಿ ರಚಿಸಿ ದಾಗ ಬಿಜೆಪಿಯವರು ಸ್ವಾಗತ ಮಾಡಿದ್ದರು. ಆದರೆ ಮುಸುಕುಧಾರಿ ತೋರಿಸಿದ ಜಾಗದಲ್ಲಿ ಏನೂ ಸಿಗದೇ ಇದ್ದ ಕಾರಣ ಇದೀಗ ತಿರುಗಿ ಬಿದ್ದಿದ್ದಾರೆ. ವಿಜಯೇಂದ್ರನಿಗೆ ಬೇರೆ ಬಂಡವಾಳ ಇಲ್ಲ. ಅಪಪ್ರಚಾರ ಮಾಡಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಯತ್ನಿಸುತ್ತಿದ್ದಾನೆ ಎಂದರು. ನಮ್ಮ ಜಾಗದಲ್ಲಿ ಬಿಜೆಪಿಯವರೇನಾದರೂ ಇದ್ದರೆ ಅವರೂ ಎಸ್‌ಐಟಿ ರಚಿಸುತ್ತಿದ್ದರು. ಆದರೆ ಇದೀಗ ದುರುಪಯೋಗಪಡಿಸಿಕೊಳ್ಳಲು ಹೊರಟಿ ದ್ದಾರೆ. ನಾವು ಎಸ್‌ಐಟಿ ರಚನೆ ಮಾಡುವ ಮೂಲಕ ಮಂಜುನಾಥ ಸ್ವಾಮಿ ಸನ್ನಿಧಾನ ಹಾಗೂ ಧರ್ಮದರ್ಶಿಗಳ ಮೇಲೆ ಇದ್ದಂತಹ ಕಳಂಕವನ್ನು ತೆಗೆದುಹಾಕಿದ್ದೇವೆ. ಜನರ ನಂಬಿಕೆ ಯನ್ನು ಹೆಚ್ಚಿಸಿದ್ದೇವೆ. ಎಸ್‌ಐಟಿ ಅವರು ಈಗಲೂ ಪಾರದರ್ಶಕವಾಗಿ ಕೆಲಸ ಮಾಡುತ್ತಿದ್ದಾರೆ. ಇದೀಗ ದೆಹಲಿಗೆ ಹೋಗಿ ಯಾರೆಲ್ಲ ಇದ್ದಾರೆ ಎನ್ನುವ ತನಿಖೆ ಮಾಡ್ತಿದೆ ಎಂದು ಹೇಳಿದರು.

ಕೆರೆಯಲ್ಲಿ ಮೊಸಳೆ ಪ್ರತ್ಯಕ್ಷ

ಕಲಬುರಗಿ: ಹಳ್ಳದ ನೀರಿನ ಮೂಲಕ ಗ್ರಾಮಕ್ಕೆ ನುಗ್ಗಿದ ಮೊಸಳೆಯನ್ನು ಸ್ಥಳೀಯರು ಸೇರಿ ಸೆರೆ ಹಿಡಿದ ಅಪರೂಪದ ಘಟನೆ ಜೇವರ್ಗಿ ತಾಲೂಕಿನ ಮಲ್ಲಾ(ಬಿ) ಗ್ರಾಮದಲ್ಲಿ ನಡೆದಿದೆ. ಸೋಮವಾರ ಬೆಳಗಿನ ಜಾವ ಹಳ್ಳದ ಬಳಿ ನೀರು ತರಲು ಹೋದ ಗ್ರಾಮಸ್ಥರು ಮೊಸಳೆ ಕಾಣಿಸಿಕೊಂಡಿದ್ದು, ಮೊಸಳೆಯನ್ನು ನೋಡಿ ಭಯಭೀತರಾಗಿದರು. ಬಳಿಕ ಗ್ರಾಮಸ್ಥರು ಒಟ್ಟಾಗಿ ಸೇರಿ ಬಲವಾದ ಹಾಕಿ ಮೊಸಳೆಯನ್ನು ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಈ ವಿಷಯ ತಿಳಿಯುತ್ತಿದ್ದಂತೆಯೇ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಗ್ರಾಮಸ್ಥರ ವಶದಲ್ಲಿದ್ದ ಮೊಸಳೆಯನ್ನು ಸ್ವಾಧೀನಕ್ಕೆ ಪಡೆದರು. ಗ್ರಾಮದಲ್ಲಿ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾದರೂ ಯಾವುದೇ ಅಪಾಯ ಸಂಭವಿಸಲಿಲ್ಲ, ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಶ್ರವಣ ಸಾಧನಗಳ ದೇಶಿ ಉತ್ಪಾದನೆಗೆ ದ್ರೌಪದಿ ಕರೆ

← ಮೊದಲಪುಟದಿಂದ

ಈ ನಿಟ್ಟಿನಲ್ಲಿ ಆತ್ಮನಿರ್ಭರ್ ಭಾರತದಂಥ ಯೋಜನೆಯನ್ನು ಪರಿಗಣಿಸಿ ಉದ್ದೇಶಿತ ಗುರಿ ತಲುಪಬೇಕಾದ ಅವಶ್ಯಕತೆ ಇದೆ ಎಂದು ಪ್ರತಿಪಾದಿಸಿದರು.

ಇತ್ತೀಚಿನ ತಂತ್ರಜ್ಞಾನಗಳ ಬಳಕೆ ಮಾತು ಮತ್ತು ಶ್ರವಣಕ್ಕೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ನಿವಾರಿಸುವಲ್ಲಿ ಸಹಾಯಕವಾಗಿದೆ. ಆದರೆ ದೇಶದಲ್ಲಿಯೇ ಇವುಗಳ ಅಭಿವೃದ್ಧಿ ಮತ್ತು ಉತ್ಪಾದನೆ ಅತ್ಯಗತ್ಯ. ಕಾಂಕ್ಲಿಯರ್, ಇಂಪ್ಲಾಂಟ್‌ಗಳಂತಹ ಸಾಧನಗಳು ಕಡಿಮೆ ವೆಚ್ಚದಲ್ಲಿ ಲಭ್ಯವಾಗಬೇಕಾದರೆ, ಅವುಗಳ ಉತ್ಪಾದನೆಯಲ್ಲಿ ನಾವು ಸ್ವಾವಲಂಬಿಗಳಾಗುವುದು ಅವಶ್ಯಕ. ಆಯಿಷ್ ನಂತಹ ಸಂಸ್ಥೆಗಳು ಈ ದಿಕ್ಕಿನಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ಸಲಹೆ ನೀಡಿದರು.

ದೇಶದ ವಿಶೇಷ ಚೇತನ ಮಾನವ ಸಂಪನ್ಮೂಲವನ್ನು ಸಬಲೀಕರಣಗೊಳಿಸುವಲ್ಲಿ ಹೆಚ್ಚಿನ ಕೊಡುಗೆ ನೀಡಲು ಇಲ್ಲಿ ಶ್ರೇಷ್ಠತಾ ಕೇಂದ್ರವನ್ನು ಸ್ಥಾಪಿಸಿದೆ. ಶಿಕ್ಷಣ ತಜ್ಞರು, ವೈದ್ಯರು, ತಾಂತ್ರಿಕ ತಜ್ಞರು ಮತ್ತು ಸಂಶೋಧಕರನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸುವ ಮೂಲಕ ಅಂಗವಿಕಲ ಮಾನವ ಸಂಪನ್ಮೂಲವನ್ನು ಸಬಲೀಕರಣಗೊಳಿಸುವತ್ತ ಈ ಕೇಂದ್ರವು ಕೆಲಸ ಮಾಡುತ್ತಿದೆ. ದೇಶ ಮತ್ತು ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿರುವ ಈ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳನ್ನು ಈ ಕೆಲಸದಲ್ಲಿ ತೊಡಗಿಸಿಕೊಳ್ಳುವುದು ಸಹ ಒಂದು ಸಕಾರಾತ್ಮಕ ಹೆಜ್ಜೆಯಾಗಲಿದೆ ಎಂದು ತಿಳಿಸಿದರು.

ರಾಜಮನೆತನದ ಕೊಡುಗೆ ಸ್ಮರಣೆ: ಮೈಸೂರಿನಲ್ಲಿ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಇರುವುದು ಹೆಮ್ಮೆಯ ವಿಚಾರವಾಗಿದ್ದು, 6 ದಶಕಗಳ ಹಿಂದೆಯೇ ಇಂಥಹದ್ದೊಂದು ಸಂಸ್ಥೆಗೆ ಉದಾರವಾಗಿ ಜಾಗ ನೀಡಿದ ಅಂದಿನ ಮಹಾರಾಜ ಜಯಚಾಮರಾಜ ಒಡೆಯರ್ ಅವರ ಕೊಡುಗೆ ಅನನ್ಯ. ಇದೇ ವೇದಿಕೆಯಲ್ಲಿರುವ ರಾಜಮನೆತನದ ಸಂಸದ ಯದುವೀರ್ ಅವರ ಪೂರ್ವಜರನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾಗಿದೆ ಎಂದರು.

> 1965 ರಲ್ಲಿ ರಾಮಮಂದಿರದಲ್ಲಿ ಪ್ರಾರಂಭವಾದ ಈ ಸಂಸ್ಥೆ ಆರಂಭದಲ್ಲಿ 65 ಮಕ್ಕಳನ್ನು ಹೊಂದಿತ್ತು. ಪ್ರಸ್ತುತ 650 ರೋಗಿಗಳಿಗೆ ಆಸರೆ ನೀಡಿದೆ. ಈವರೆಗೂ ವಾಕ್ ಮತ್ತು ಶ್ರವಣ ಸಮಸ್ಯೆಯುಳ್ಳ 78 ಸಾವಿರ ಮಂದಿಗೆ ಚಿಕಿತ್ಸೆ ನೀಡಿದೆ. ಅನೇಕ ಕಾರ್ಯಕ್ರಮಗಳನ್ನು ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳುವ ಮೂಲಕ ಏಷ್ಯಾ ಖಂಡದಲ್ಲಿಯೇ ಮೊದಲ ಸ್ಥಾನ ಗಳಿಸಿಕೊಂಡಿದೆ.
> -ಡಾ.ಎಂ. ಪುಷ್ಪಾವತಿ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕಿ

ನಿಮಗೆ ಕನ್ನಡ ಗೊತ್ತೆ ?

ಕನ್ನಡದಲ್ಲಿಯೇ ಮಾತು ಪ್ರಾರಂಭಿಸಿದ ಮುಖ್ಯ ಮಂತ್ರಿ ಸಿದ್ದರಾಮಯ್ಯ ವೇದಿಕೆಯಲ್ಲಿದ್ದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಉದ್ದೇಶಿಸಿ ನಿಮಗೆ ಕನ್ನಡ ಗೊತ್ತೆ ಎಂದು ಪ್ರಶ್ನಿಸಿದರು. ಅನಂತರ ತಮ್ಮ ಭಾಷಣದ ಕೊನೆಯಲ್ಲಿ ಮುಖ್ಯ ಮಂತ್ರಿಗಳಿಗೆ ಉತ್ತರಿಸಿ, ಕನ್ನಡ ಸೇರಿದಂತೆ ಭಾರತದ ಎಲ್ಲಾ ಭಾಷೆಗಳೂ, ಎಲ್ಲಾ ಸಂಸ್ಕೃತಿ ಗಳನ್ನೂ ನಾನು ಅನುಸರಿಸು ತ್ತೇನೆ, ಗೌರವಿಸು ತ್ತೇನೆ. ಕನ್ನಡವನ್ನು ಸ್ವಲ್ಪ ಮಟ್ಟಿಗಾದರೂ ಕಲಿ ಯುವ ಪ್ರಯತ್ನ ಮಾಡುತ್ತೇನೆ ಎಂದರು.

ಶಾಂಘೈ ಶೃಂಗದಲ್ಲಿ ಪಾಕಿಸ್ತಾನಕ್ಕೆ ಚಾಟಿ

← ಮೊದಲಪುಟದಿಂದ

ಇದನ್ನು ನಾವೆಲ್ಲರೂ ಒಂದಾಗಿ ಎದುರಿಸಬೇಕಾಗಿದೆ ಎಂದು ಮೋದಿ ಕರೆ ನೀಡಿದರು. ಅಂತಿಮವಾಗಿ ಉಗ್ರವಾದದ ವಿರುದ್ಧ ನಿರ್ಣಯ ಅಂಗೀಕರಿಸುವ ಮೂಲಕ ಭಾರತದ ಜತೆ ಇಡೀ ಸಂಘಟನೆ ಧ್ವನಿಗೂಡಿಸಿದೆ.

ಯುದ್ಧ ನಿಲ್ಲಿಸಿ: ಪುಟಿನ್‌ಗೆ ಮನವಿ

ಬೀಜಿಂಗ್: ಶಾಂಘೈ ಶೃಂಗಸಭೆಯ ಮಧ್ಯೆ ಸೋಮವಾರ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಜತೆ ಮೋದಿ ಮಾತುಕತೆ ನಡೆಸಿದರು. ಈ ವೇಳೆ 'ಉಕ್ರೇನ್ ನಲ್ಲಿ ಸಾಧ್ಯವಾದಷ್ಟು ಬೇಗ ಸಂಘರ್ಷವನ್ನು ಕೊನೆಗೊಳಿಸಲು ಮತ್ತು ಶಾಶ್ವತ ಶಾಂತಿಯನ್ನು ಸ್ಥಾಪಿಸಲು ಒಂದು ಮಾರ್ಗವನ್ನು ಕಂಡುಹಿಡಿಯಬೇಕು' ಎಂದು ಪ್ರಧಾನಿ ಮೋದಿ ತನ್ನ ನಿಲುವನ್ನು ಸ್ಪಷ್ಟಪಡಿಸಿದರು.

ಭಾರತ ಮತ್ತು ರಷ್ಯಾ ಅತ್ಯಂತ ಕಠಿಣ ಸಂದರ್ಭಗಳಲ್ಲಿಯೂ ಹೆಗಲಿಗೆ ಹೆಗಲು ಕೊಟ್ಟು ನಿಂತಿವೆ. ನಮ್ಮ ನಿಕಟ ಸಹಕಾರವು ಎರಡೂ ದೇಶಗಳ ಜನರಿಗೆ ಮಾತ್ರವಲ್ಲದೆ ಜಾಗತಿಕ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಗೂ ಮುಖ್ಯವಾಗಿದೆ. ಪುಟಿನ್ ಅವರೊಂದಿಗಿನ ಭೇಟಿ ಯಾವಾಗಲೂ ಸ್ಮರಣೀಯವಾಗಿದ್ದು, ವಿಶ್ವಾಸ ವನ್ನು ಬಲಪಡಿಸಲು ಅದು ಅವಕಾಶಗಳನ್ನು ಒದಗಿಸುತ್ತವೆ ಎಂದು ಮೋದಿ ಹೇಳಿದರು.

'ನಿಮ್ಮನ್ನು ಭೇಟಿಯಾಗುವುದು ಸ್ಮರಣೀಯ ಅನುಭವ ಎಂದು ನಾನು ಯಾವಾಗಲೂ ಭಾವಿಸುತ್ತೇನೆ. ಅನೇಕ ವಿಷಯಗಳ ಕುರಿತು ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಲು ಅವಕಾಶ ಸಿಗುತ್ತದೆ. ಈ ವರ್ಷದ ಡಿಸೆಂಬರ್‌ನಲ್ಲಿ ನಡೆಯಲಿರುವ 23ನೇ ಶೃಂಗಸಭೆಗಾಗಿ 140 ಕೋಟಿ ಭಾರತೀಯರು ನಿಮಗಾಗಿ ಕಾತರದಿಂದ ಕಾಯುತ್ತಿದ್ದಾರೆ' ಎಂದು ರಷ್ಯಾ ಅಧ್ಯಕ್ಷರ ಬಳಿ ಮೋದಿ ಹೇಳಿದರು.

ಸ್ವಂತ ವಿಮಾನ ಖರೀದಿಗೆ ಸರಕಾರ ಚಿಂತನೆ

← ಮೊದಲಪುಟದಿಂದ

ಆದ್ದರಿಂದ ಇದೀಗ ಸರಕಾರ ವಿಮಾನ ಹಾಗೂ ಹೆಲಿಕಾಪ್ಟರ್ ಖರೀದಿಗೆ ಮುಂದಾಗಿದೆ. ಮೂಲಗಳ ಪ್ರಕಾರ 13 ಸೀಟರ್‌ನ ಖಾಸಗಿ ಜೆಟ್ ಹಾಗೂ ಐದು ಸೀಟರ್‌ನ ಹೆಲಿಕಾಪ್ಟರ್ ಅನ್ನು ಖರೀದಿ ಸಲು ಕರ್ನಾಟಕ ಸರಕಾರ ಉತ್ಸಾಹ ತೋರಿದೆ. ಇವು ಗಳನ್ನು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳ ಅಧಿಕೃತ ಪ್ರವಾಸಕ್ಕೆ ಮಾತ್ರ ಬಳಸಲು ತೀರ್ಮಾನಿಸ ಲಾಗಿದೆ. ಒಂದು ವೇಳೆ ಯಾವುದಾದರೂ ಸಚಿವರಿಗೆ ಸರಕಾರಿ ಕೆಲಸಕ್ಕೆ ಅಗತ್ಯವಿದೆ ಎನಿಸಿದರೆ, ಮುಖ್ಯಮಂತ್ರಿ ಗಳ ಅನುಮತಿಯೊಂದಿಗೆ ಬಳಸಿಕೊಳ್ಳಲು ಒಪ್ಪಿಗೆ ನೀಡಲು ನಿರ್ಧರಿಸಲಾಗಿದೆ.

ಸಭೆ ನಡೆಸಿದ ಡಿಸಿಎಂ: ಇನ್ನು ವಿಮಾನ, ಹೆಲಿಕಾಪ್ಟರ್ ಖರೀದಿಸುವ ವಿಷಯಕ್ಕೆ ಸಂಬಂಧಿಸಿದಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸೋಮವಾರ ವಿಧಾನಸೌಧದಲ್ಲಿ ಸಭೆ ನಡೆಸಿದರು. ಸಭೆಯಲ್ಲಿ ಸಚಿವರಾದ ಕೆ.ಜೆ. ಜಾರ್ಜ್, ಬೈರತಿ ಸುರೇಶ್ ಸೇರಿದಂತೆ ಹಿರಿಯ ಅಧಿಕಾರಿಗಳಿದ್ದರು. ಸಭೆಯಲ್ಲಿ ವಿಮಾನ ಹಾಗೂ ಹೆಲಿಕಾಪ್ಟರ್‌ಗಳನ್ನು ಈ ಹಿಂದೆ ಯಾವೆಲ್ಲ ರಾಜ್ಯ ಸರಕಾರಗಳು ಖರೀದಿಸಿವೆ? ಬಳಕೆಯನ್ನು ಯಾವ ರೀತಿ ಮಾಡಲಾಗುತ್ತಿದೆ? ಸರಕಾರ ಸ್ವಂತಕ್ಕೆ ಖರೀದಿಸಿದರೆ, ಸರಕಾರಕ್ಕೆ ಆಗುವ ಲಾಭವೇನು? ಎನ್ನುವ ಬಗ್ಗೆ ಚರ್ಚಿಸಿದ್ದಾರೆ. ಖರೀದಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಮತ್ತೊಂದು ಸುತ್ತಿನ ಸಭೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳಲು ನಿರ್ಧರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಎನ್‌ಐಎ ತನಿಖೆಗೆ ಪಟ್ಟು

← ಮೊದಲಪುಟದಿಂದ

ಆದರೆ, ಮುಖ್ಯಮಂತ್ರಿಗಳು ಎಸ್‌ಐಟಿ ತನಿಖೆ ಮಾತ್ರ ಎನ್ನುತ್ತಿದ್ದಾರೆ. ಷಡ್ಯಂತ್ರದ ತನಿಖೆ ಸಿಬಿಐ ಅಥವಾ ಎನ್‌ಐಎಯಿಂದ ಆಗಲಿ ಎಂದು ಆಗ್ರಹಿಸಿದರು. ಹಿಂದೂ ಕಾರ್ಯಕರ್ತರಿಗೆ ಅಪಮಾನ ಮಾಡುವ ದುಷ್ಟ ಕಾಂಗ್ರೆಸ್ ಸರಕಾರ ರಾಜ್ಯದಲ್ಲಿದ್ದು ಅವರಿಗೆ ಎಚ್ಚರಿಕೆಯ ಸಮಾವೇಶವಿದು. ಧರ್ಮಸ್ಥಳ ವಿಚಾರದಲ್ಲಿ ದಿನನಿತ್ಯ ಅಪಪ್ರಚಾರ ನಡೆದಿದೆ. ಅಯೋಗ್ಯನ ಹಿನ್ನೆಲೆ ಅರ್ಥ ಮಾಡದೆ ಎಸ್‌ಐಟಿ ರಚಿಸಿದ ರಾಜ್ಯ ಸರಕಾರಕ್ಕೆ ಒಳ್ಳೆಯದು ಮಾಡಲು ಸಾಧ್ಯವಿಲ್ಲ. ಅಪಪ್ರಚಾರ ಮಾಡುವವರನ್ನು 24 ಗಂಟೆಯಲ್ಲಿ ಒದ್ದು ಒಳಗೆ ಹಾಕ ಬೇಕಿತ್ತು. ಆ ಕೆಲಸವನ್ನು ಕಾಂಗ್ರೆಸ್ ಮಾಡಿಲ್ಲ. ಸೌಜನ್ಯ ಹತ್ಯೆ ಪ್ರಕರಣದ ಮರುತನಿಖೆ ಘೋಷಣೆ ಮಾಡಿ. ಆ ಕುಟುಂಬಕ್ಕೆ ನ್ಯಾಯ ಕೊಡಿ ಎಂದು ಆಗ್ರಹಿಸಿದರು.

ಕಾಂಗ್ರೆಸ್ ಅಲ್ಪಸಂಖ್ಯಾತರ ತುಷ್ಟೀಕರಣದ ಪರ- ಪ್ರಲ್ಹಾದ ಜೋಶಿ: ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, ಮುಸುಕುಧಾರಿ ಕಾಂಗ್ರೆಸಿಗರ ಸ್ನೇಹಿತ. ಕಾಂಗ್ರೆಸ್ ಪಕ್ಷ ಹಿಂದೂಗಳ ವಿರುದ್ಧ, ಅಲ್ಪಸಂಖ್ಯಾತರ ತುಷ್ಟೀಕರಣದ ಪರವಾಗಿದ್ದು ಅದು ಅವರ ರಕ್ತದಲ್ಲಿ ಬಂದಿದೆ. ಆಪರೇಷನ್ ಸಿಂದೂರದ ವೇಳೆ ಪಾಕಿಸ್ತಾನ ಕೇಳುವಂಥ ಪ್ರಶ್ನೆ ಕಾಂಗ್ರೆಸಿಗರು ಕೇಳುತ್ತಿದ್ದರು. ಭಯೋತ್ಪಾದಕರ ದಾಳಿ ತಡೆಯಲಾರದ ಕಾಂಗ್ರೆಸ್ ಸರಕಾರ ದೇಶದಲ್ಲಿತ್ತು. ಈಗ ಪಾಕಿಸ್ತಾನಕ್ಕೆ ನುಗ್ಗಿ ಭಯೋತ್ಪಾದಕರನ್ನು ಮುಗಿಸಿ ಬಂದ ಸರಕಾರ ದೇಶದಲ್ಲಿದೆ. ಬಹುಸಂಖ್ಯಾತರ ವಿರುದ್ಧ ಕಾಂಗ್ರೆಸ್ ಷಡ್ಯಂತ್ರ ಮಾಡುತ್ತ ಬಂದಿದೆ. ಅದರ ಭಾಗವಾಗಿಯೇ ಇಲ್ಲಿ ಷಡ್ಯಂತ್ರ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು. ಸಮಾವೇಶದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಡಿ.ವಿ.ಸದಾನಂದ ಗೌಡ, ಜಗದೀಶ ಶೆಟ್ಟರ್, ಬಿಜೆಪಿ ಕರ್ನಾಟಕ ರಾಜ್ಯ ಸಹ ಉಸ್ತುವಾರಿ ಸುಧಾಕರ್ ರೆಡ್ಡಿ, ಸಂಸದ ತೇಜಸ್ವಿ ಸೂರ್ಯ, ವಿಧಾನಸಭೆ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ, ವಿಧಾನಪರಿಷತ್ ವಿಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, ಪಕ್ಷದ ಸಿ.ಎನ್.ಅಶ್ವತ್ಥನಾರಾಯಣ, ನಳಿನ್ ಕುಮಾರ್ ಕಟೀಲ್, ಬಿ. ಶ್ರೀರಾಮುಲು, ಸಿ.ಟಿ. ರವಿ ಸೇರಿದಂತೆ ಶಾಸಕರು, ವಿಧಾನಪರಿಷತ್ ಸದಸ್ಯರು ಉಪಸ್ಥಿತರಿದ್ದರು.

ಕ್ಷೇತ್ರದ ಪಾವಿತ್ರ್ಯತೆಗೆ ಧಕ್ಕೆ ತರುವ ಕೆಲಸ ಆಗುತ್ತಿದೆ: ಬಿಜೆಪಿ ಸಮಾವೇಶಕ್ಕೆ ಸಂಬಂಧಿಸಿದಂತೆ ಸಂದೇಶ ರವಾನಿಸಿದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು, ನಾವು ಸತ್ಯದ ಕಡೆ ನಡೆಯುವವರು, ನಮಗೆ ಭಯ ಇಲ್ಲ. ಎಸ್‌ಐಟಿ ಮೇಲೆ ನಂಬಿಕೆ ಇದೆ ಸತ್ಯ ಹೊರಗೆ ಬರುತ್ತೆ. ನೀವೆಲ್ಲಾ ಕ್ಷೇತ್ರದ ಪರ ನಿಂತಿರುವುದು ತುಂಬಾ ಖುಷಿ ಕೊಟ್ಟಿದೆ. ನೀವೇ ಈ ಕ್ಷೇತ್ರದ ಸಂಪತ್ತು, ನೀವೆಲ್ಲರೂ ಈ ಕ್ಷೇತ್ರದ ಮೇಲಿನ ಅಭಿಮಾನದಿಂದ ಬಂದಿದ್ದೀರ. ನಿಮಗೆ ಮಂಜುನಾಥಸ್ವಾಮಿ, ಅಣ್ಣಪ್ಪ ಸ್ವಾಮಿ ಒಳ್ಳೆಯದು ಮಾಡಲಿ ಎಂದು ತಿಳಿಸಿದರು.

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ–2271200, 2272200, ಫ್ಯಾಕ್ಸ್: 2275106,
ಇ–ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in
ಸಂ:ತುಮಪಾ:ತಾಂಶಾ:ವಿ&ನೀ:ಟೆಂಡರ್;ಸಿಆರ್:10/2025–26
ದಿನಾಂಕ: 28.08.2025

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2025–26ನೇ ಸಾಲಿನ ಮಹಾನಗರ ಪಾಲಿಕೆ ನಿಧಿಯಡಿ 01 ಸಂಖ್ಯೆ ವಿದ್ಯುತ್ ಸಂಬಂಧಿತ (ಅಲ್ಪಾವಧಿ), 01 ಸಂಖ್ಯೆ ನೀರು ಸರಬರಾಜು ಸಂಬಂಧಿತ (ಅಲ್ಪಾವಧಿ–ಮರುಟೆಂಡರ್) ಮತ್ತು ಎಸ್.ಎಫ್.ಸಿ ನಿಧಿಯಡಿ 01 ಸಂಖ್ಯೆ ನೀರು ಸರಬರಾಜು ಸಂಬಂಧಿತ (ಅಲ್ಪಾವಧಿ ಮರು ಟೆಂಡರ್) ಕಾಮಗಾರಿಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಡಬಲ್ ಕವರ್ ಪದ್ಧತಿಯಲ್ಲಿ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು(ವಿದ್ಯುತ್/ ನೀರುಸರಬರಾಜು) ರವರು ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು/ ಏಜನ್ಸಿದಾರರು/ ಸರಬರಾಜು ದಾರರು ಕೆಪಿಪಿ ಪೋರ್ಟಲ್ ವೆಬ್ ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಕಛೇರಿ ಸಮಯದಲ್ಲಿ ಮಹಾನಗರ ಪಾಲಿಕೆಯ ಕಛೇರಿಯ ವಿದ್ಯುತ್ ಶಾಖೆಗೆ ಭೇಟಿ ನೀಡಿ ಪಡೆಯಬಹುದಾಗಿದೆ. ಮಹಾನಗರ ಪಾಲಿಕೆಯ ಸಹಾಯಕ ದೂರವಾಣಿ ಸಂಖ್ಯೆ: 9449872599 ರಿಂದ ಮಾಹಿತಿ ಪಡೆಯಬಹುದು.

ಸೂಚನೆ : 1) ಈ ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿದ ಅಂದಾಜು ಮೊತ್ತ ಹಾಗೂ ಟೆಂಡರ್‌ಗಿಟ್ಟ ಮೊತ್ತ ದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತವು ಅಂತಿಮವಾಗಿರುತ್ತದೆ. 2) ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಅದಲ್ಲಿ ಆ ದಿನಾಂಕಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪ್ರತ್ಯೇಕ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಅಲ್ಪಾವಧಿ ಟೆಂಡರ್: ಟೆಂಡರ್ ಆಕ್ಷೇಪಣೆ ಸಲ್ಲಿಸುವ ದಿನಾಂಕ ಮತ್ತು ವೇಳೆ : 04–09–2025 ಸಮಯ : 17.15 ನಂತರ. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ :09–09–2025 ಸಮಯ : 17.00. ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ :10–09–2025 ಸಮಯ : 17.15 ನಂತರ.

ಸಹಿ/–ಕಾರ್ಯಪಾಲಕ ಅಭಿಯಂತರರು,
ತುಮಕೂರು ಮಹನಗರ ಪಾಲಿಕೆ, ತುಮಕೂರು.
DIPR/TUM/286/KSMCA/2025-26

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜನಿಯರಿಂಗ್ ಘಟಕ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಆ&ಕು.ಕ.ಇ.ಇಂ ವಿಭಾಗ, ಫೋರ್ಟ್ ರೋಡ್, ಧಾರವಾಡ–580008
ದೂರವಾಣಿ ಸಂ : 0836 – 2955800
(e-mail : eehfwedvndwd1@gmail.com)
ಸಂಖ್ಯೆ: ಕಾನಿಅ/ಆಕುಕಇಇಂ/ವಿಭಾಗ–ಧಾ/ಆಅಕೇಂ/615/25–26
ದಿನಾಂಕ : 01.09.2025

ಟೆಂಡರ ಪ್ರಕಟಣೆ
(Through KPP portal only)

ಕಾರ್ಯನಿರ್ವಾಹಕ ಅಭಿಯಂತರರು, ಆ&ಕು.ಕ.ಇ.ಇಂ., ವಿಭಾಗ, ಧಾರವಾಡ ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಕಾಮಗಾರಿವಾರು ಸಂಬಂಧಿಸಿದ ಗುತ್ತಿಗೆ ವರ್ಗದ ಗುತ್ತಿಗೆದಾರರಿಂದ ಈ ವಿಭಾಗದಡಿಯಲ್ಲಿ ಧಾರವಾಡ – **2** ಸಂಖ್ಯೆ, ಗದಗ–**1** ಸಂಖ್ಯೆ, ಬೆಳಗಾವಿ – **1** ಸಂಖ್ಯೆ., ಬಾಗಲಕೋಟ–**1** ಸಂಖ್ಯೆ, ವಿಜಯಪುರ – **8** ಸಂಖ್ಯೆ ಕಾಮಗಾರಿಗಳಿಗೆ [ಕನಿಷ್ಟ ಮೊತ್ತದ ಕಾಮಗಾರಿ ರೂ. **55.00** ಲಕ್ಷಗಳು] ಕೆ.ಪಿ.ಪಿ. ಪೋರ್ಟಲ್‌ನಲ್ಲಿರುವಂತೆ ಕಾಮಗಾರಿವಾರು **Double cover system** ಐಟಂವಾರು ದರದ ಟೆಂಡರ್‌ಗಳನ್ನು ಕೆ.ಪಿ.ಪಿ.ಪೋರ್ಟಲ್ ಮೂಲಕ ಕರೆಯಲಾಗಿದೆ. ಸದರಿ ಟೆಂಡರ್‌ಗಳನ್ನು ದಿನಾಂಕ : **01.09.2025** ರಿಂದ **08.09.2025**ರ ಸಾಯಂಕಾಲ 4.00 ಘಂಟೆಯುವರೆಗೆ **www.kppp.karnataka.gov.in** ನಲ್ಲಿ ವೀಕ್ಷಿಸಿ ಟೆಂಡರ್ ಡಾಕುಮೆಂಟಗಳನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ, ಹಾಗೂ ಸದರಿ ಕಾಮಗಾರಿಯ ಬಿಡ್‌ಗಳನ್ನು ದಿನಾಂಕ : **10.09.2025** ರಂದು ತೆರೆಯಲಾಗುವುದು.

ಆಸಕ್ತ ಗುತ್ತಿಗೆದಾರರು ಒಂದು ವೇಳೆ ಮಾಹಿತಿ ಹಾಗೂ ದಿನಾಂಕಗಳಲ್ಲಿ ಬದಲಾವಣೆಯಾದಲ್ಲಿ, ನಿಖರವಾದ ಮಾಹಿತಿ ಹಾಗೂ ದಿನಾಂಕಗಳನ್ನು ಕೆ.ಪಿ.ಪಿ.ಪೋರ್ಟಲ್ ವೆಬ್‌ಸೈಟ್ **www.kppp.karnataka.gov.in** ನಲ್ಲಿ ಬಿಡ್‌ಗಳನ್ನು ಪಡೆದು, ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಇನ್ನೂ ಹೆಚ್ಚಿನ ಮಾಹಿತಿಯುನ್ನು **www.kppp.karnataka.gov.in** ನಲ್ಲಿ ವೀಕ್ಷಿಸಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಆ.&ಕು.ಕ.ಇ. ಇಂಜಿನೀಯರಿಂಗ್ ವಿಭಾಗ,
ವಾಸಾಸಂಇ/ಧಾ/ಕೆಎಸ್‌ಎಂಸಿಎ/611/2025–26 ಧಾರವಾಡ.

ಸಮಾಚಾರ ಸಣ್ಣದಲ್ಲ

ಬೋಟ್ ಮುಳುಗಡೆ: 25 ಮೀನುಗಾರರ ರಕ್ಷಣೆ

ಕಾರವಾರ: ಅರಬ್ಬಿ ಸಮುದ್ರದಲ್ಲಿ ಮೀನುಗಾರಿಕೆಗೆ ತೆರಳಿದ್ದ ಪರ್ಷಿಯನ್ ಬೋಟ್ ಅಲೆಗಳ ಹೊಡೆತಕ್ಕೆ ಭಟ್ಕಳ ತಾಲೂಕಿನ ನೇತ್ರಾಣಿ ಬಳಿ ಮುಳುಗಿದೆ. ಅದರಲ್ಲಿದ್ದ 25 ಜನ ಮೀನುಗಾರರನ್ನು ಸ್ಥಳೀಯ

ಮೀನುಗಾರರು ರಕ್ಷಣೆ ಮಾಡಿದ್ದಾರೆ. ಭಟ್ಕಳದ ಅಣ್ಣಪ್ಪ ಮೊಗೇರ್ ಎಂಬವರಿಗೆ ಸೇರಿದ ಮಹಾ ಮುರುಡೇಶ್ವರ ಹೆಸರಿನ ಪರ್ಷಿಯನ್ ಬೋಟ್ ಇದಾಗಿದೆ. ಮೀನುಗಾರಿಕೆಗೆ ಅರಬ್ಬಿ ಸಮುದ್ರ ದಲ್ಲಿ ಹೋಗುತ್ತಿರುವಾಗ ಅಲೆಗಳ ಅಬ್ಬರಕ್ಕೆ ಬೋಟ್ ಮುಳುಗಡೆಯಾಗಿದೆ. ತಕ್ಷಣ ಕರಾವಳಿ ಕಾವಲುಪಡೆ ಕಂಟ್ರೋಲ್ ರೂಮ್‌ಗೆ ಕರೆಮಾಡಿದ್ದು, ಸ್ಥಳೀಯ ವೆಲಂಕಣಿ ಮತ್ತು ಮಚ್ಚೆದುರ್ಗ ಎಂಬ 2 ಬೋಟ್ ಸಹಾಯಕ್ಕೆ ಆಗಮಿಸಿ 25 ಜನ ಮೀನುಗಾರರ ರಕ್ಷಣೆ ಮಾಡಲಾಗಿದೆ. ಬೋಟ್ ಮುಳುಗಿದ್ದರಿಂದ 80 ಲಕ್ಷಕ್ಕೂ ಹೆಚ್ಚು ನಷ್ಟವಾಗಿದೆ. ಈ ಸಂಬಂಧ ಭಟ್ಕಳ ಗ್ರಾಮೀಣ ಠಾಣೆಯಲ್ಲಿ ದೂರು ನೀಡಲಾಗಿದೆ.

ವಿರಾಮ
ಪ್ರತಿ ಭಾನುವಾರ

ಬಿಜೆಪಿ ರಾಜಕೀಯವಾಗಿ ಯಾತ್ರೆ ಮಾಡುತ್ತಿದೆ: ಮುಖ್ಯಮಂತ್ರಿ ಸಿದ್ದರಾಮಯ್ಯ

ಚಾಮುಂಡಿ ಬೆಟ್ಟ ಚಲೋ: ಹಿಂದುತ್ವ ಗಟ್ಟಿಯಾಗಲ್ಲ

ಮೈಸೂರು: ಚಾಮುಂಡಿ ಬೆಟ್ಟ ಚಲೋದಿಂದ ಹಿಂದುತ್ವ ಗಟ್ಟಿಯಾಗಲ್ಲ ಎಂದು ಸಿಎಂ ಸಿದ್ದರಾಮಯ್ಯ ಮಾರ್ಮಿಕವಾಗಿ ನುಡಿದರು.

ಸಿದ್ದರಾಮನಹುಂಡಿಯಲ್ಲಿ ಸುದ್ದಿಗಾರರೊಂದಿಗೆ ಜತೆ ಮಾತನಾಡಿದ ಅವರು, ಹಿಂದುತ್ವ ಗಟ್ಟಿಯಾಗುತ್ತದೆ ಎಂದು ಬಿಜೆಪಿಯವರು ಚಾಮುಂಡಿ ಬೆಟ್ಟ ಚಲೋ ಪ್ಲಾನ್ ಮಾಡಿದ್ದಾರೆ. ಆದರೆ ಇದರಿಂದ ಏನೂ ಆಗಲ್ಲ ಎಂದು ಹೇಳಿದರು. ಅಮಾನವೀಯ ನಡವಳಿಕೆ ತೋರುವವರು ಹಿಂದೂಗಳಲ್ಲ.

ಮನುಷ್ಯತ್ವ ತೋರುವವರು ಹಿಂದೂ ಗಳು. ಬಿಜೆಪಿಯವರು ದಸರಾದಲ್ಲೂ ರಾಜಕೀಯ ಮಾಡುತ್ತಿ ದ್ದಾರೆ. ಅವರ ಮನೆಯನ್ನೂ ರಾಜಕೀಯಕ್ಕೆ ಬೇಕಾದರೆ ಬಳಸಿಕೊಳ್ಳುತ್ತಾರೆ. ಸುಳ್ಳು ಹೇಳುವುದು ಬಿಟ್ಟು ಬಿಜೆಪಿಗೆ ಏನು ಗೊತ್ತು. ಬಿಜೆಪಿ ಹೋರಾಟದಿಂದ ದಸರಾ ಮೇಲೆ ಕೆಟ್ಟ ಪರಿ ಣಾಮ ಬೀರಲ್ಲ, ಹಿಂದೂಗಳೆಲ್ಲಾ ಬಿಜೆಪಿ ಜತೆ ಇಲ್ಲ ಎಂದರು.

ಧರ್ಮಸ್ಥಳ ಕ್ಷೇತ್ರದ ಬಗ್ಗೆ ಅಪಾರ ನಂಬಿಕೆ ಇಟ್ಟುಕೊಂಡಿದ್ದೇವೆ. ಹಿಂದೂ ಅಂದರೆ ಅಪಪ್ರಚಾರ ಮಾಡುವುದಲ್ಲ, ಸುಳ್ಳು ಹೇಳುವುದಲ್ಲ. ಧರ್ಮಸ್ಥಳ ವಿಚಾರದಲ್ಲಿ ರಾಜ ಕಾರಣ ಮಾಡಿದವರು ಯಾರು? ಬಿಜೆಪಿಯವರಿಗೆ ಸುಳ್ಳು ಹೇಳುವುದು ಬಿಟ್ಟು ಬೇರೇನು ಬರಲ್ಲ ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿ ರಾಜಕೀಯವಾಗಿ ಯಾತ್ರೆ ಮಾಡುತ್ತಿದೆ, ಮಾಡಲಿ ಬಿಡಿ. ಅವರಿಗೆ ಇದರಿಂದ ರಾಜಕೀಯ ಲಾಭ ಸಿಗೋದಿಲ್ಲ. ಎಸ್ ಐ ಟಿ ರಚನೆ ಆದಾಗ ಯಾಕೆ ಇವರು ಯಾತ್ರೆ ಮಾಡಲಿಲ್ಲ. ಇದು ಡೋಂಗಿತನ ಅಲ್ವಾ? ಎಂದು ಟೀಕಿಸಿದರು.

ಬಾನು ಮುಷ್ತಾಕ್ ಅವರಿಗೆ ಉದ್ಘಾಟನೆಗೆ ಆಹ್ವಾನ: ಬಾನು ಮುಷ್ತಾಕ್ ಅವರಿಗೆ ಬುಕರ್ ಪ್ರಶಸ್ತಿ ದೊರಕಿದ್ದು, ಎಷ್ಟು ಜನಕ್ಕೆ ಈ ಪ್ರಶಸ್ತಿ ಲಭಿಸಿದೆ. ಅವರನ್ನು ಗೌರವಿಸಲು ದಸರಾ ಉದ್ಘಾಟನೆಗೆ ಅವಕಾಶ ನೀಡಲಾಗಿದೆ ಎಂದು ಹೇಳಿದರು.

ನಾನೂ ಕೂಡ ಹಿಂದೂ

ನಾನು ಕೂಡ ಹಿಂದೂ, ನಾವೆಲ್ಲರೂ ಕೂಡ ಹಿಂದೂ. ನಾನು ನಮ್ಮ ಊರಲ್ಲಿ ರಾಮಮಂದಿರ ಕಟ್ಟಿಸಿದ್ದೇನೆ. ಹಿಂದೂಗಳು ಎಂದರೆ ಸುಳ್ಳು ಹೇಳುವುದು, ಅಪಪ್ರಚಾರ, ಮಾಡುವುದಲ್ಲ. ಹಾಗಾಗಿ ಹಿಂದೂಗಳೆಲ್ಲಾ ಬಿಜೆಪಿ ಜತೆ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಜೆಪಿಗೆ ತಿರುಗೇಟು ನೀಡಿದರು.

- ಬಿಜೆಪಿಯವರಿಂದ ದಸರಾದಲ್ಲೂ ರಾಜಕೀಯ
- ಅವರ ಮನೆಯನ್ನೂ ರಾಜಕೀಯಕ್ಕೆ ಬೇಕಾದರೆ ಬಳಸಿಕೊಳ್ಳುತ್ತಾರೆ.
- ಸುಳ್ಳು ಹೇಳುವುದು ಬಿಟ್ಟು ಬಿಜೆಪಿಗೆ ಏನು ಗೊತ್ತು?
- ಬಿಜೆಪಿ ಹೋರಾಟದಿಂದ ದಸರಾ ಮೇಲೆ ಕೆಟ್ಟ ಪರಿಣಾಮ ಬೀರಲ್ಲ
- ಬಿಜೆಪಿ ವಿರುದ್ಧ ಸಿಎಂ ಸಿದ್ದರಾಮಯ್ಯ ಕಿಡಿ

ಬಿಜೆಪಿಯಿಂದ ದಸರಾ ಹಬ್ಬದಲ್ಲೂ ರಾಜಕಾರಣ

ಮೈಸೂರಿಗೂ ಚಾಮುಂಡಿ ಚಲೋ ಕಾರ್ಯಕ್ರಮ ಹಮ್ಮಿಕೊಂಡಿರುವ ಬಗ್ಗೆ ಮಾತನಾಡಿ ಬಿಜೆಪಿಯವರು ಹಿಂದುತ್ವ ಗಟ್ಟಿಯಾಗುತ್ತದೆ, ಹಿಂದೂಗಳೆಲ್ಲ ಒಟ್ಟಾಗುತ್ತಾರೆ ಎಂದು ತಿಳಿದಿದ್ದಾರೆ. ನಾನೂ ಕೂಡ ಹಿಂದೂವೇ. ನಮ್ಮೂರಿನಲ್ಲಿ ನಾವು ರಾಮಮಂದಿರ ಕಟ್ಟಿಲ್ಲವೇ? ಎಂದು ಪ್ರಶ್ನಿಸಿದರು. ಹಿಂದುಗಳೆಂದರೆ ರಾಜಕೀಯ, ಅಪಪ್ರಚಾರ ಮಾಡುವುದಲ್ಲ, ಸುಳ್ಳು ಹೇಳುವುದಲ್ಲ. ಯಾರೇ ಆದರೂ ಮನಷ್ಯತ್ವವಿರಬೇಕು ಎಂದರು. ಬಿಜೆಪಿ ದಸರಾ ಹಬ್ಬದಲ್ಲೂ ರಾಜಕಾರಣ ಮಾಡುತ್ತಿದ್ದಾರೆ. ಸುಳ್ಳು ಹೇಳುವುದು ಬಿಟ್ಟು ಬೇರೇನಾದರೂ ಅವರಿಗೆ ಬರುತ್ತದೆಯೇ ಎಂದರು.

ದಸರಾ ನಾಡಹಬ್ಬ ಎಲ್ಲರಿಗೂ ಸೇರಿದ್ದು

ಚಾಮುಂಡಿ ಬೆಟ್ಟ ಹಿಂದೂಗಳದ್ದಲ್ಲ ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಸಿಎಂ, ಚಾಮುಂಡಿ ಬೆಟ್ಟ ಹಿಂದೂಗಳ ಆಸ್ತಿನೇ ಇರಬಹುದು. ಈಗ ವಿಚಾರ ಇರುವುದು ದಸರಾ, ಚಾಮುಂಡಿ ಬೆಟ್ಟದ್ದು ಅಲ್ಲ. ದಸರಾ ನಾಡಹಬ್ಬ, ಅದು ಎಲ್ಲರಿಗೂ ಸೇರಿದ್ದು. ಡಿ.ಕೆ. ಶಿವಕುಮಾರ್ ಹೇಳಿದ್ದು ನನಗೆ ಗೊತ್ತಿಲ್ಲ. ದಸರಾ ವಿಚಾರ ಮಾತ್ರ ಈಗ ಚರ್ಚೆಯಲ್ಲಿದೆ. ಚಾಮುಂಡಿ ಬೆಟ್ಟದ್ದು ಅಲ್ಲ ಎಂದು ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಕೈದಿಗಳ ಮಾರಾಮಾರಿ: 23 ಮಂದಿ ವಿರುದ್ಧ ಎಫ್‌ಐಆರ್

ರಾಮನಗರ: ರಾಮನಗರ ಜಿಲ್ಲಾ ಕಾರಾಗೃಹ ದಲ್ಲಿ ಕೈದಿಗಳ ನಡುವೆ ಮಾರಾಮಾರಿ ನಡೆದಿದ್ದು, ಎರಡು ಗುಂಪುಗಳು ಪರಸ್ಪರ ಬಡಿದಾಡಿಕೊಂಡಿವೆ. ಈ ಹಿನ್ನೆಲೆ ಜಿಲ್ಲಾ ಕಾರಾಗೃಹದ 23 ಕೈದಿಗಳ ಎಫ್‌ಐಆರ್ ದಾಖಲಾಗಿದೆ.

ಶನಿವಾರ ಈ ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ರೌಡಿಶೀಟರ್ ಹರ್ಷ ಹಾಗೂ ಮತ್ತೋರ್ವ ರೌಡಿಶೀಟರ್ ದೇವರಾಜು ನಡುವೆ ಹಳೇ ವೈಷಮ್ಯಕ್ಕೆ ಗಲಾಟೆ ಆರಂಭವಾಗಿದೆ. ಜೈಲಿನಲ್ಲಿದ್ದ ಹಲವು ಕೈದಿಗಳು ಎರಡು ಗುಂಪುಗಳಾಗಿ ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಕೂಡಲೇ ಜೈಲಿನ ಅಧಿಕಾರಿಗಳು ಹಾಗೂ ಸಿಬ್ಬಂದಿ ಮಧ್ಯಪ್ರವೇಶ ಮಾಡಿ ಗಲಾಟೆ ನಿಯಂತ್ರಿಸಿ ಕೈದಿಗಳ ಸಮಾಧಾನ ಮಾಡಿದ್ದಾರೆ. ಗಲಾಟೆ ತಡೆಯುವ ವೇಳೆ ಜೈಲು ಸಿಬ್ಬಂದಿಗೂ

ಸಣ್ಣಪುಟ್ಟ ಗಾಯಗಳಾಗಿವೆ. ಬಳಿಕ ಗುಂಪು ಚದುರಿಸಿ ಎರಡೂ ಗುಂಪಿನ ಕೈದಿಗಳನ್ನು ಪ್ರತ್ಯೇಕ ಬ್ಯಾರಾಕ್‌ಗೆ ಕಳುಹಿಸಲಾಗಿದೆ. ಈ ಬಗ್ಗೆ ರಾಮನಗರ ಟೌನ್ ಠಾಣೆಯಲ್ಲಿ ಕಾರಾಗೃಹ ಅಧೀಕ್ಷಕ ರಾಕೇಶ್ ಕಾಂಬಳೆ ದೂರು ದಾಖಲು ಮಾಡಿದ್ದು, ಕಾರಾ ಗೃಹ ನಿಯಮ ಉಲ್ಲಂಘನೆ ಹಾಗೂ ಗುಂಪುಕಟ್ಟಿ ಕೊಂಡು ಗಲಾಟೆ ಮಾಡಿದ ಆರೋಪದಡಿ 23 ಕೈದಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಅನ್ನದ ಅಗುಳು ಸಿಲುಕಿ ಯುವಕ ಸಾವು

ಕಾರವಾರ: ಊಟ ಮಾಡುವಾಗ ಅನ್ನದ ಅಗುಳು ಗಂಟಲಲ್ಲಿ ಸಿಲುಕಿಕೊಂಡು ಯುವಕ ಸಾವನ್ನಪ್ಪಿದ್ದ ಘಟನೆ ಉತ್ತರಕನ್ನಡ ಜಿಲ್ಲೆಯ

ಕಾರವಾರ ತಾಲೂಕಿನ ಬಿಣಗಾದಲ್ಲಿ ನಡೆದಿದೆ. ಬಿಣಗಾ ಮಾಳಸವಾಡ ನಿವಾಸಿ ಅಮಿತ್ ಮಾಳಸೇರ್ (38) ಮೃತ ವ್ಯಕ್ತಿ. ಘಟನೆ ಸಂಬಂಧ ಕಾರವಾರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದ ಅಮಿತ್, ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದು, ವೈದ್ಯರಿಂದ ಚಿಕಿತ್ಸೆ ಪಡೆಯುತ್ತಿದ್ದ. ಭಾನುವಾರ ಊಟ ಮಾಡುವಾಗ ಅನ್ನದ ಅಗುಳು ಗಂಟಲಲ್ಲಿ ಸಿಲುಕಿದೆ. ಕೂಡಲೇ ಅಮಿತ್ ಮನೆಯವರು ಅಮಿತ್‌ಗೆ ನೀರು ಕುಡಿಸಿದ್ದಾರೆ. ಆದರೆ ಕೂಡಲೇ ಆತ ಅಲ್ಲೇ ಕುಸಿದು ಬಿದ್ದಿದ್ದು, ಆತನನ್ನು ಆಂಬ್ಯುಲೆನ್ಸ್ ಮೂಲಕ ಕಾರವಾರದ ಕ್ರಿಮ್ಸ್ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿದೆ. ವೈದ್ಯರು ಪರಿಶೀಲನೆ ಮಾಡಿದಾಗ ಗಂಟಲಲ್ಲಿ ಅನ್ನದ ಅಗುಳು ಸಿಲುಕಿ ಅಮಿತ್ ಮೃತಪಟ್ಟಿದ್ದಾರೆ ಎಂದು ಘೋಷಣೆ ಮಾಡಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (KSOU)

ಮುಕ್ತಗಂಗೋತ್ರಿ, ಮೈಸೂರು – 570006, ಕರ್ನಾಟಕ.
ಕಚೇರಿ ದೂರವಾಣಿ ಸಂಖ್ಯೆ: 0821-2500981, 2519941 / 43 / 48 / 52, ಸಹಾಯವಾಣಿ: 86905 44544.
ಇ–ಮೇಲ್: techsupport@ksouportal.com, ಅಂತರ್ಜಾಲ : www.ksoumysuru.ac.in

NAAC A+ — KARNATAKA STATE OPEN UNIVERSITY

ಪರಿಷ್ಕೃತ ಅಧಿಸೂಚನೆ ಸಂಖ್ಯೆ : ಕರಾಮುವಿ/ಪ್ರವಿ/ಎಡಿಎಂ–1/143/2025–26/1 ದಿನಾಂಕ: 01–09–2025

ಪರಿಷ್ಕೃತ ಅಧಿಸೂಚನೆ

ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ

ಯುಜಿಸಿ ನಿಯಮಗಳ ಪ್ರಕಾರ ಎರಡು ಶೈಕ್ಷಣಿಕ ಕಾರ್ಯಕ್ರಮಗಳನ್ನು (ಪ್ರೋಗ್ರಾಂಗಳನ್ನು) ಏಕ ಕಾಲದಲ್ಲಿ ಓದಲು ಅವಕಾಶವಿದ್ದು ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳುವುದು.

ಯುಜಿಸಿ ಮಾನ್ಯತೆ ಹೊಂದಿದ ಶಿಕ್ಷಣಕ್ರಮಗಳಿಗೆ 2025-26 ರ ಜುಲೈ ಆವೃತ್ತಿಗೆ ನೇರ ಪ್ರವೇಶಾತಿಯನ್ನು ಒಳಗೊಂಡಂತೆ ಪ್ರಥಮ ವರ್ಷದ ಒಡಿಎಲ್ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸ್ನಾತಕ (ಯುಜಿ) ಶಿಕ್ಷಣ ಕಾರ್ಯಕ್ರಮಗಳು
- ಬಿ.ಎ. • ಬಿ.ಕಾಂ.
- ಬಿ.ಎಲ್‌ಐ.ಎಸ್‌ಸಿ.
- ಬಿ.ಬಿ.ಎ.
- ಬಿ.ಎಸ್.ಡಬ್ಲ್ಯೂ
- ಬಿ.ಇಡಿ (ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ)
- ಬಿ.ಎಸ್‌ಸಿ ಜನರಲ್ – ಸಂಯೋಜನೆಗಳು
(• PCM • PMCs • CBZ • CZEs • CBEs
[• P-Physics • C-Chemistry • M-Mathematics • Cs-Computer Science • B-Botany • Z-Zoology • Es-Environmental Science
- ಬಿ.ಎಸ್‌ಸಿ. – ಇನ್‌ಫರ್‌ಮೇಷನ್ ಟೆಕ್ನಾಲಜಿ (ಬಿ.ಎಸ್‌ಸಿ–ಐಟಿ)
- ಬಿ.ಸಿ.ಎ. – ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್

ಸ್ನಾತಕೋತ್ತರ (ಪಿಜಿ) ಶಿಕ್ಷಣ ಕಾರ್ಯಕ್ರಮಗಳು:
- ಎಂ.ಎ. — • ಕನ್ನಡ • ಇಂಗ್ಲಿಷ್ • ಸಂಸ್ಕೃತ • ಉರ್ದು • ಹಿಂದಿ • ತೆಲುಗು • ಶಿಕ್ಷಣ • ಇತಿಹಾಸ • ರಾಜ್ಯಶಾಸ್ತ್ರ • ಅರ್ಥಶಾಸ್ತ್ರ • ಸಾರ್ವಜನಿಕ ಆಡಳಿತ • ಸಮಾಜಶಾಸ್ತ್ರ • ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ • ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ
- ಎಂ.ಎಸ್.ಡಬ್ಲ್ಯೂ
- ಎಂ.ಬಿ.ಎ. – ಆನ್‌ಲೈನ್ ಪ್ರವೇಶ ಪರೀಕ್ಷೆ ಮೂಲಕ
ಸ್ಪೆಷಲೈಜೇಷನ್: • ಫೈನಾನ್ಸ್ • ಮಾರ್ಕೆಟಿಂಗ್ • ಹೆಚ್‌ಆರ್ • ಆಪರೇಷನ್ಸ್ • ಟೂರಿಸಂ • ಕಾರ್ಪೊರೇಟ್ ಲಾ • ಇನ್‌ಫರ್‌ಮೇಷನ್ ಟೆಕ್ನಾಲಜಿ • ಆಸ್ಪತ್ರೆ ಮತ್ತು ಆರೋಗ್ಯ ರಕ್ಷಣೆ ನಿರ್ವಹಣೆ.
- ಎಂ.ಕಾಂ.
ಡ್ಯುಯೆಲ್ ಸ್ಪೆಷಲೈಜೇಷನ್: • ಅಕೌಂಟಿಂಗ್ ಮತ್ತು ಫೈನಾನ್ಸ್/ಹೆಚ್‌ಆರ್‌ಎಂ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಮತ್ತು ಹೆಚ್‌ಆರ್‌ಎಂ/ಫೈನಾನ್ಸ್
- ಎಂ.ಸಿ.ಎ.
- ಎಂ.ಎಲ್‌ಐ.ಎಸ್‌ಸಿ.
- ಎಂ.ಎಸ್‌ಸಿ. — • ಭೌತಶಾಸ್ತ್ರ • ರಸಾಯನ ಶಾಸ್ತ್ರ • ಗಣಿತ ಶಾಸ್ತ್ರ • ಪರಿಸರ ವಿಜ್ಞಾನ • ಭೂಗೋಳ ಶಾಸ್ತ್ರ • ಸಸ್ಯಶಾಸ್ತ್ರ • ಪ್ರಾಣಿಶಾಸ್ತ್ರ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಸೈನ್ಸ್ • ಡಾಟಾ ಸೈನ್ಸ್ • ಅರ್ಥ್ ಸೈನ್ಸ್ • ಜೀವ ವಿಜ್ಞಾನ

ಪಿಜಿ ಸರ್ಟಿಫಿಕೇಟ್ ಕಾರ್ಯಕ್ರಮಗಳು–(ಪದವಿ ಆಧಾರಿತ) (ಒಂದು ವರ್ಷ)
• ಇಂಗ್ಲಿಷ್ • ಕಮ್ಯುನಿಕೇಟಿವ್ ಇಂಗ್ಲಿಷ್ • ಪತ್ರಿಕೋದ್ಯಮ & ಸಮೂಹ ಸಂವಹನ • ಕುವೆಂಪು ಸಾಹಿತ್ಯ • ಹಣಕಾಸು ನಿರ್ವಹಣೆ • ಮಾನವ ಸಂಪನ್ಮೂಲ ನಿರ್ವಹಣೆ • ಬಿಸಿನೆಸ್ ಲಾ • ಬಿಸಿನೆಸ್ ಅಡ್ಮಿನಿಸ್ಟ್ರೇಷನ್ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ • ಅಂಬೇಡ್ಕರ್ ಅಧ್ಯಯನಗಳು • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್ • ಭಾಷಾ ವಿಜ್ಞಾನ

ಡಿಪ್ಲೋಮ ಶಿಕ್ಷಣ ಕಾರ್ಯಕ್ರಮಗಳು–(10+2 ಆಧಾರಿತ) (ಒಂದು ವರ್ಷ)
• ಕನ್ನಡ • ಪತ್ರಿಕೋದ್ಯಮ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್ • ಅರ್ಲಿ ಚೈಲ್ಡ್‌ಹುಡ್ ಕೇರ್ ಅಂಡ್ ಎಜುಕೇಷನ್ • ಭಾಷಾಂತರ ಅಧ್ಯಯನ • ಪಲ ಜ್ಯೋತಿಷ್ಯ • ಮೇಧಿನಿ ಜ್ಯೋತಿಷ್ಯ • ವಾಸ್ತು ಶಾಸ್ತ್ರ

ಸರ್ಟಿಫಿಕೇಟ್ ಶಿಕ್ಷಣ ಕಾರ್ಯಕ್ರಮಗಳು (ಆರು ತಿಂಗಳು)
• ಪಂಚಾಯತ್ ರಾಜ್ • ಮಾಹಿತಿ ಸಂವಹನ ತಂತ್ರಜ್ಞಾನ (ಐಸಿಟಿ) • ಭಾಷಾಂತರ ಅಧ್ಯಯನ • ಜ್ಯೋತಿರ್ ವಿಜ್ಞಾನ

ONLINE PROGRAMMES • B.A. • B.Com
• M.A. ♦ Kannada ♦ Hindi ♦ Sanskrit ♦ Economics ♦ English
• M.Com • M.B.A. • M.Sc Mathematics

ಉನ್ನತ ಶಿಕ್ಷಣ ಎಲ್ಲರಿಗೂ, ಎಲ್ಲೆಡೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು NAAC A+ ಮಾನ್ಯತೆ ಪಡೆದಿದೆ, UGC-DEB ಪತ್ರ ಸಂಖ್ಯೆ. F.No.39-2/2023 (DEB-1) ದಿನಾಂಕ: 17-08-2023, F.No.30-30/2023 (DEBIII) ದಿನಾಂಕ: 11-09-2023, ಮತ್ತು ಕರ್ನಾಟಕ ರಾಜ್ಯದಲ್ಲಿ ಅಧಿಕಾರ ಹೊಂದಿರುವ ಏಕೈಕ ಸಾರ್ವಜನಿಕ ವಿಶ್ವವಿದ್ಯಾನಿಲಯವಾಗಿದ್ದು, ಉನ್ನತ ಶಿಕ್ಷಣ ಕಾರ್ಯಕ್ರಮಗಳನ್ನು ದೂರ ಶಿಕ್ಷಣ (ಒ.ಡಿ.ಎಲ್) ಪದ್ಧತಿಯಲ್ಲಿ ನೀಡುತ್ತಿದೆ.

ವಿಶ್ವವಿದ್ಯಾನಿಲಯವು ಕೆಳಕಂಡ ವಿಶೇಷತೆಗಳನ್ನು ಹೊಂದಿರುತ್ತದೆ :
- ವಿಶಾಲ ಅತ್ಯಾಧುನಿಕ ಹಾಗೂ ಹಸಿರುಮಯ ಕ್ಯಾಂಪಸ್
- ಆಧುನಿಕ ಐಸಿಟಿ ತಂತ್ರಜ್ಞಾನ ಬೆಂಬಲಿತ ಬೋಧನಾ ಸೌಲಭ್ಯಗಳು
- ಅನುಭವಿ ಹಾಗೂ ನುರಿತ ಬೋಧನಾ ಸಿಬ್ಬಂದಿ
- ಸುಸಜ್ಜಿತ ಪ್ರಯೋಗಾಲಯಗಳು
- ಸುಸಜ್ಜಿತ ಗ್ರಂಥಾಲಯ ಹಾಗೂ ಇಂಟರ್ನೆಟ್ ಸೌಲಭ್ಯಗಳು
- ಪ್ರಾದೇಶಿಕ ಕೇಂದ್ರಗಳು ಹಾಗೂ ಕಲಿಕಾರ್ಥಿ ಸಹಾಯ (ಲರ್ನರ್ ಸಪೋರ್ಟ್ ಸೆಂಟರ್) ಕೇಂದ್ರಗಳನ್ನೊಳಗೊಂಡ ಸೇವಾ ವ್ಯವಸ್ಥೆ
- ಗುಣಮಟ್ಟದ ಸ್ವಯಂ ಕಲಿಕಾ ಸಾಮಗ್ರಿಗಳು (ಎಸ್.ಎಲ್.ಎಮ್)
- ವೃತ್ತಿ ಸಂಬಂಧಿತ ಸಲಹೆ ಹಾಗೂ ನೇಮಕಾತಿಯಲ್ಲಿ ನೆರವು

ಪ್ರವೇಶಾತಿ (ಎನ್‌ರೋಲ್ಮೆಂಟ್) ಮಾಹಿತಿ ಹಾಗೂ ವಿಧಾನ

1. ಅರ್ಹತೆಯ ಮಾನದಂಡ ಹಾಗೂ ಶುಲ್ಕದ ವಿವರಗಳನ್ನು ವಿವರಣಾ ಪುಸ್ತಕ (ಪ್ರಾಸ್ಪೆಕ್ಟಸ್) ದಲ್ಲಿ ನಮೂದಿಸಲಾಗಿದೆ. ಅಭ್ಯರ್ಥಿಗಳು ಸಂಬಂಧಿತ ಕಾರ್ಯಕ್ರಮಗಳ ಪ್ರಾಸ್ಪೆಕ್ಟಸ್‌ನ್ನು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು / ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಭ್ಯರ್ಥಿಗಳು, ಮೈಸೂರಿನಲ್ಲಿರುವ ಕರಾಮುವಿಯ ಕೇಂದ್ರ ಕಚೇರಿಯಲ್ಲಿ ನೇರವಾಗಿ / ಆನ್‌ಲೈನ್ ಮುಖಾಂತರ, ಅಥವಾ ತಮ್ಮ ಆಯ್ಕೆಯ ಸಮೀಪದ ಪ್ರಾದೇಶಿಕ ಕೇಂದ್ರಗಳಲ್ಲಿ ಮಾತ್ರವೇ ಖುದ್ದಾಗಿ ಪ್ರವೇಶಾತಿಯನ್ನು ಪಡೆಯುವುದು. ಆನ್‌ಲೈನ್ ಪ್ರವೇಶ ಅರ್ಜಿ ಫಾರಂನ್ನು ಭರ್ತಿ ಮಾಡಲು **KSOU Online Admission Portal** ಗೆ ಭೇಟಿ ನೀಡಿ. ಪ್ರವೇಶಾತಿ ಹಾಗೂ ಇನ್ನಿತರ ಮಾಹಿತಿಗಾಗಿ ಅರ್ಜಿದಾರರು ಕರಾಮುವಿಯ ಅಧಿಕೃತ ವೆಬ್‌ಸೈಟ್: www.ksoumysuru.ac.in ನ್ನು ವೀಕ್ಷಿಸುವುದು.
   - ಪ್ರವೇಶಪೂರ್ವ ಸಮಾಲೋಚನೆಗೆ ಮಾತ್ರ ಅರ್ಜಿದಾರರು ತಮ್ಮ ವ್ಯಾಪ್ತಿಯಲ್ಲಿ ಬರುವ ಕರಾಮುವಿಯ ಅಧಿಕೃತ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು.
   - ವಿದ್ಯಾರ್ಥಿಗಳು ಪಾವತಿಸಬೇಕಾದ ನಿಗದಿತ ಶುಲ್ಕವನ್ನು (ವಿವರಗಳು ವೆಬ್‌ಸೈಟ್‌ನಲ್ಲಿ ಲಭ್ಯವಿದೆ) ಮಾತ್ರ ಪಾವತಿಸಬೇಕು. ಹೆಚ್ಚುವರಿ ಪಾವತಿಗೆ ವಿಶ್ವವಿದ್ಯಾನಿಲಯವು ಜವಬ್ದಾರಿಯಾಗುವುದಿಲ್ಲ.
   - ಪ್ರವೇಶಾತಿ ಶುಲ್ಕವನ್ನು ಆನ್‌ಲೈನ್ ವಿಧಾನದ ಮೂಲಕ ಮಾತ್ರ ಪಾವತಿಸತಕ್ಕದ್ದು.
   - ಅಭ್ಯರ್ಥಿಗಳು ಗುರುತಿನ ಚೀಟಿಗಳು ಹಾಗೂ ಲಭ್ಯ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಮೈಸೂರಿನಲ್ಲಿರುವ ಕರಾಮುವಿಯ ಆಡಳಿತ ಕಛೇರಿಯಿಂದ ಅಥವಾ ತಮ್ಮ ಆಯ್ಕೆಯ ಪ್ರಾದೇಶಿಕ ಕೇಂದ್ರದಿಂದ ಪಡೆಯಬಹುದು.
2. ಪ.ಜಾ./ಪ.ಪ. ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ನಿಗಧಿತ ಶುಲ್ಕವನ್ನು ಪಾವತಿಸಿ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆ ಮಾಡಿಕೊಳ್ಳುವ ಷರತ್ತಿಗೆ ಒಳಪಟ್ಟು ಶುಲ್ಕ ವಿನಾಯಿತಿ ಯೋಜನೆಯಡಿ ಪ್ರವೇಶಾತಿ ಪಡೆಯಬಹುದಾಗಿದೆ. ಪ್ರವೇಶಾತಿಯು ವಿ.ವಿ.ಯ ಸ್ಕಾಲರ್‌ಶಿಪ್ ಘಟಕವು ವಿಧಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
   - ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳು / ಮಿಲಿಟರಿ ಸೇವೆಯಲ್ಲಿರುವ / ಮಾಜಿ ಸೈನಿಕ ವಿದ್ಯಾರ್ಥಿಗಳು / ಆಟೋ / ಕ್ಯಾಬ್ ಚಾಲಕರು ಮತ್ತು ಅವರ ಪತ್ನಿ / ಮಕ್ಕಳಿಗೆ / ಕೆಎಸ್‌ಆರ್‌ಟಿಸಿ / ಬಿಎಂಟಿಸಿ / ಎನ್‌ಡಬ್ಲ್ಯೂಕೆಆರ್‌ಟಿಸಿ / ಕೆಕೆಆರ್‌ಟಿಸಿಯಲ್ಲಿನ ನೌಕರರುಗಳಿಗೆ ಯುಜಿ ಮತ್ತು ಪಿಜಿ ಪದವಿ ಶಿಕ್ಷಣ ಕ್ರಮಗಳಿಗೆ ಬೋಧನಾ ಶುಲ್ಕದಲ್ಲಿ **ಶೇಕಡ 10%ರಷ್ಟು ರಿಯಾಯಿತಿಯನ್ನು** ಪಡೆಯಬಹುದು.
   - **ತೃತೀಯ ಲಿಂಗಕ್ಕೆ** ಸೇರಿದ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ **ವಿನಾಯಿತಿ** ಇರುತ್ತದೆ.
   - ಕೋವಿಡ್–19 ಖಾಯಿಲೆಯಿಂದ ಮೃತಪಟ್ಟ ತಂದೆ / ತಾಯಿಯ ಮಕ್ಕಳಿಗೆ ಸಂಬಂಧಪಟ್ಟ ಇಲಾಖೆಯಿಂದ ಅಗತ್ಯ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಷರತ್ತಿಗೊಳಪಟ್ಟು ಪೂರ್ಣ ಶುಲ್ಕ **ವಿನಾಯಿತಿ** ಇರುತ್ತದೆ.
   - ಸರ್ಕಾರವು ಅಗಿಂದ್ದಾಗ್ಗೆ ನಿಗದಿಪಡಿಸಿರುವ ಹಾಗೂ ಚಾಲ್ತಿಯಲ್ಲಿರುವ ಆದೇಶಗಳನ್ವಯ ಶೇಕಡ 50ಕ್ಕೂ ಹೆಚ್ಚಿನ ದೃಷ್ಟಿ ದೋಷವುಳ್ಳ ಅಭ್ಯರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ **(ಬಿ.ಎಡ್. ಮತ್ತು ಎಂ.ಬಿ.ಎ. ಹೊರತುಪಡಿಸಿ).**
3. ಪ್ರಥಮ / ದ್ವಿತೀಯ ಯುಜಿ/ಪಿಜಿ ಶಿಕ್ಷಣ ಕ್ರಮ ಪೂರೈಸಿ ಕಾರಣಾಂತರದಿಂದ ಪದವಿಯನ್ನು ಪೂರ್ಣಗೊಳಿಸಿಕೊಂಡಿಲ್ಲದ ವಿದ್ಯಾರ್ಥಿಗಳು ಕರಾಮುವಿಯ ನಿಯಮಗಳಿಗೆ ಒಳಪಟ್ಟು ದ್ವಿತೀಯ/ತೃತೀಯ ಯುಜಿ/ಪಿಜಿ ಶಿಕ್ಷಣ ಕ್ರಮಗಳಿಗೆ ನೇರ ಪ್ರವೇಶಾತಿ ಪಡೆಯಬಹುದಾಗಿದೆ. ವಿದ್ಯಾರ್ಥಿಗಳು ಈ ಸಂಬಂಧ ಅಂತರ್‌ಜಾಲದಲ್ಲಿ ಪ್ರಕಟಿಸಿರುವ ಸುತ್ತೋಲೆಯನ್ವಯ ಕ್ರಮಗಳನ್ನು ಅನುಸರಿಸುವುದು.
4. **ಬಿ.ಇಡಿ** ಶೈಕ್ಷಣಿಕ ಕಾರ್ಯಕ್ರಮಕ್ಕೆ ಅರ್ಹ ಅಭ್ಯರ್ಥಿಗಳನ್ನು ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಹಾಗೂ ಚಾಲ್ತಿ ಮೀಸಲಾತಿ ನಿಯಮಗಳನ್ವಯ ಆಯ್ಕೆ ಮಾಡಲಾಗುವುದು.

ಕರಾಮುವಿ ಪ್ರಾದೇಶಿಕ ಕೇಂದ್ರಗಳು

1. **ಮೈಸೂರು (ಕೇಂದ್ರ ಕಚೇರಿ) :** ಪ್ರವೇಶಾತಿ ವಿಭಾಗ, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು–570 006, ದೂ (ಕ): 0821–2500981, ಮೊಬೈಲ್: 9945366062 / 9113512565 / 9611418726 / 9900509959 / 9035395137 / 8123469017 / 9844010407.
2. **ಬೆಂಗಳೂರು–1 ಪ್ರಾದೇಶಿಕ ಕೇಂದ್ರ :** ಸ್ಯಾಟಲೈಟ್ ಬಸ್ ನಿಲ್ದಾಣ ಕಟ್ಟಡ, 1ನೇ ಮಹಡಿ, ಮೈಸೂರು ರಸ್ತೆ, **ಬಾಪೂಜಿನಗರ,** ಬೆಂಗಳೂರು–560 026. ದೂ: 080–26603664, ಮೊಬೈಲ್: 9880526439/ 9019526439.
3. **ಬೆಂಗಳೂರು–2 ಪ್ರಾದೇಶಿಕ ಕೇಂದ್ರ :** ಕರಾಮುವಿ ಮಹಿಳಾ ಪ್ರಾದೇಶಿಕ ಕೇಂದ್ರ, ಸರ್ಕಾರಿ ಬಾಲಕಿಯರ ಪಿ.ಯು. ಕಾಲೇಜ್, 4ನೇ ಮೇನ್, 13ನೇ ಕ್ರಾಸ್, ಬೆಸ್ಕಾಂ ಕಚೇರಿ ಹತ್ತಿರ, **ಮಲ್ಲೇಶ್ವರಂ,** ಬೆಂಗಳೂರು–560 003. ದೂ: 080–23448811, ಮೊಬೈಲ್ : 9741197921 / 9483517160.
4. **ಬೆಂಗಳೂರು–3 ಪ್ರಾದೇಶಿಕ ಕೇಂದ್ರ :** ಆಕ್ಸ್‌ಫರ್ಡ್ ಎಜುಕೇಷನಲ್ ಟ್ರಸ್ಟ್, ಶ್ರೀನಿವಾಸಪುರ, ಕೋಗಿಲು ಮುಖ್ಯ ರಸ್ತೆ, **ಯಲಹಂಕ,** ಬೆಂಗಳೂರು–560 064, ಮೊಬೈಲ್: 9008540090/7337718249.
5. **ಬೆಂಗಳೂರು–4 ಪ್ರಾದೇಶಿಕ ಕೇಂದ್ರ:** ನಂ.121, 2ನೇ ಮಹಡಿ, **ಮಡಿವಾಳ,** ಮಡಿವಾಳ ಸಂಚಾರಿ ಪೊಲೀಸ್ ಸ್ಟೇಷನ್ ಹಿಂಭಾಗ, ಹ್ಯಾಪಿಯೆಸ್ಟ್ ಮೈಂಡ್ ಹತ್ತಿರ, ಹೊಸೂರು ಮುಖ್ಯ ರಸ್ತೆ, ಬೆಂಗಳೂರು–560 068. ದೂ: 080–23158888, ಮೊಬೈಲ್ : 8618821417.
6. **ಬೆಂಗಳೂರು–5 ಪ್ರಾದೇಶಿಕ ಕೇಂದ್ರ:** ಸರಕಾರಿ ಪ್ರಥಮ ದರ್ಜೆ ಕಾಲೇಜು ಆವರಣ, **ಕೆ.ಆರ್. ಪುರಂ,** ಬೆಂಗಳೂರು–560 036. ಮೊಬೈಲ್: 8722788788.
7. **ಬೆಂಗಳೂರು–6 ಪ್ರಾದೇಶಿಕ ಕೇಂದ್ರ:** ಶ್ರೀ ಲಕ್ಷ್ಮೀ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್ ಆವರಣ, ನಂ.4 ಮತ್ತು 5, ಶ್ರೀ ಗಂಧಕಾವಲ್, ಮಾಗಡಿ ಮುಖ್ಯ ರಸ್ತೆ, **ಸುಂಕದಕಟ್ಟೆ,** ಬೆಂಗಳೂರು–560 091. ಮೊಬೈಲ್: 8453458238 / 9632332265.
8. **ಬೆಂಗಳೂರು–7 ಪ್ರಾದೇಶಿಕ ಕೇಂದ್ರ : ಹಜ್ ಭವನ, ತಿರುಮೇನಹಳ್ಳಿ ಕ್ರಾಸ್, ಹೆಗ್ಗಡೆ ನಗರ ಮೈನ್ ರೋಡ್,** ಬೆಂಗಳೂರು–560 064. ಮೊಬೈಲ್ : 9900667916.
9. **ಬೆಳಗಾವಿ ಪ್ರಾದೇಶಿಕ ಕೇಂದ್ರ :** ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಶಿಕ್ಷಣ ಮಹಾವಿದ್ಯಾಲಯ ಆವರಣ, ನೆಹರು ನಗರ, ಬೆಳಗಾವಿ–590010. ದೂ. 0831–2002815, ಮೊಬೈಲ್: 9663451169 / 9606040407.
10. **ಬಳ್ಳಾರಿ ಪ್ರಾದೇಶಿಕ ಕೇಂದ್ರ :** ಪ್ರಾದೇಶಿಕ ವಿಜ್ಞಾನ ಕೇಂದ್ರದ ಹಿಂಭಾಗ, ಜಿಲ್ಲಾ ಕ್ರೀಡಾಂಗಣದ ಹತ್ತಿರ, ನಲ್ಲಚೆರವು ಪ್ರದೇಶ, ಬಳ್ಳಾರಿ–583 102. ಮೊಬೈಲ್: 7892597159.
11. **ಚಾಮರಾಜನಗರ ಪ್ರಾದೇಶಿಕ ಕೇಂದ್ರ :** ಕೆ.ಹೆಚ್.ಬಿ. ಕಾಲೋನಿ, ರಾಮಸಮುದ್ರ ಲೇಔಟ್, ಇಮ್ಮಾನ್ಯುಯೆಲ್ ಕ್ರಿಶ್ಚಿಯನ್ ಪಬ್ಲಿಕ್ ಸ್ಕೂಲ್ ಹತ್ತಿರ, ಚಾಮರಾಜನಗರ–571342, ಮೊಬೈಲ್: 9980302686.
12. **ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರ :** ಸಾಯಿಮಂದಿರ ರಸ್ತೆ, ಮಧುವನ ಬಡಾವಣೆ, ಚಿಕ್ಕಮಗಳೂರು–577 102, ಮೊಬೈಲ್: 8088716236.
13. **ದಾವಣಗೆರೆ ಪ್ರಾದೇಶಿಕ ಕೇಂದ್ರ :** ಜೆ. ಹೆಚ್. ಪಟೇಲ್ ಬಡಾವಣೆ, ಶಾಮನೂರು–ನಾಗನೂರು ರಸ್ತೆ ಹಿಂಭಾಗ, ದಾವಣಗೆರೆ–577 004, ಮೊಬೈಲ್: 9986458055 / 9844926125.
14. **ಧಾರವಾಡ ಪ್ರಾದೇಶಿಕ ಕೇಂದ್ರ :** ಅಮರಗೋಳ 2ನೇ ಹಂತ, ಜಡ್ಜ್ ಕಾಲೋನಿ ಹತ್ತಿರ, ಕಡೆಯ ಬಸ್ ನಿಲ್ದಾಣ, ನವನಗರ, ಹುಬ್ಬಳ್ಳಿ–580025. ದೂ: 0836–2441199, ಮೊಬೈಲ್: 9916894944.
15. **ಹಾಸನ ಪ್ರಾದೇಶಿಕ ಕೇಂದ್ರ :** ಎಸ್. ಎಂ. ಕೃಷ್ಣ ನಗರ, ಅರಸೀಕೆರೆ ರಸ್ತೆ, ದೊಡ್ಡಪುರ ಅಂಚೆ, ಬಿ. ಟಿ. ಕೊಪ್ಪಲು, ಹಾಸನ–573 118, ಮೊಬೈಲ್: 8197818807 / 9482603060.
16. **ಕಲಬುರ್ಗಿ ಪ್ರಾದೇಶಿಕ ಕೇಂದ್ರ :** ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾನಿಲಯ ಆವರಣ, ಕಲ್ಬುರ್ಗಿ–585 106, ಮೊಬೈಲ್: 9916783555.
17. **ಕಾರವಾರ ಪ್ರಾದೇಶಿಕ ಕೇಂದ್ರ :** ಯು.ಎಸ್.ಕೆ.ವಿ ಹಳೆ ಕಟ್ಟಡ, ಮೊದಲನೇ ಮಹಡಿ, ಸವಿತ ಸರ್ಕಲ್ ಮುಖ್ಯ ರಸ್ತೆ, ಕಾರವಾರ–581 301, ಮೊಬೈಲ್: 9916894944.
18. **ಕೋಲಾರ ಪ್ರಾದೇಶಿಕ ಕೇಂದ್ರ :** ಎಸ್. ಪಿ. ಕಚೇರಿ ಹಿಂಭಾಗ, ಆರ್. ಎಲ್. ಜಾಲಪ್ಪ ಆಸ್ಪತ್ರೆ ಸಮೀಪ, ಕೋಲಾರ–563 101, ದೂ. 0815–2243301, ಮೊಬೈಲ್: 8970223247.
19. **ಮಂಡ್ಯ ಪ್ರಾದೇಶಿಕ ಕೇಂದ್ರ :** # ನಂ. 11(ಎ), 'ಇ' ಬ್ಲಾಕ್, ವಿವೇಕಾನಂದ ನಗರ ಲೇಔಟ್, ಕೆರ ಅಂಗಳ, ಸಂತೆಮಾಳದ ಎದುರ, ಮೇಲುಕೋಟೆ ರಸ್ತೆ, ಮಂಡ್ಯ–571402. ದೂ. 08232200862, ಮೊಬೈಲ್: 9741990284.
20. **ಮಂಗಳೂರು ಪ್ರಾದೇಶಿಕ ಕೇಂದ್ರ :** ಕಸ್ಟಮ್ ಕ್ವಾಟರ್ಸ್ ಎದುರು, 4ನೇ ಕ್ರಾಸ್, ದತ್ತನಗರ, ಮಂಗಳೂರು–575 016, ಮೊಬೈಲ್: 9945058950 / 9972196692.
21. **ರಾಮನಗರ ಪ್ರಾದೇಶಿಕ ಕೇಂದ್ರ :** ನಂ. 103, 'ಇ' ಬ್ಲಾಕ್, ಶಾಂತಿನಿಕೇತನ್ ಗ್ರೂಪ್ ಆಫ್ ಇನ್ಸ್‌ಟಿಟ್ಯೂಷನ್ಸ್, ಬಿ. ಎಂ. ರಸ್ತೆ, ವಿವೇಕಾನಂದ ನಗರ, ರಾಮನಗರ–562159, ಮೊಬೈಲ್: 9448668880 / 8861732487.
22. **ಶಿವಮೊಗ್ಗ ಪ್ರಾದೇಶಿಕ ಕೇಂದ್ರ :** ಅಲ್ಕೊಳ ಸರ್ಕಲ್, ಎಲ್.ಐ.ಸಿ. ಕಚೇರಿ ಹತ್ತಿರ, ಸಾಗರ ರಸ್ತೆ, ಶಿವಮೊಗ್ಗ–577 201, ದೂ: 08182–250367.
23. **ತುಮಕೂರು ಪ್ರಾದೇಶಿಕ ಕೇಂದ್ರ :** ಸಿಎ–07, ಟೂಡಾ ಲೇಔಟ್, ರಾಜೀವ್‌ಗಾಂಧಿ ನಗರ, ಮೆಳೆಕೋಟೆ, ಗಂಗಸಂದ್ರ ಮುಖ್ಯ ರಸ್ತೆ, ತುಮಕೂರು–572 105, ದೂ: 0816–2955580, ಮೊಬೈಲ್: 9844506629.
24. **ಉಡುಪಿ ಪ್ರಾದೇಶಿಕ ಕೇಂದ್ರ :** ಜಿಲ್ಲಾ ಪಂಚಾಯತ್ ಕಚೇರಿ ಹಳೇ ಕಟ್ಟಡ, 2ನೇ ಮಹಡಿ, ಬನ್ನಂಜೆ, ಉಡುಪಿ–576 101, ದೂ: 0820–2522247, ಮೊಬೈಲ್: 9972526647.
25. **ಬೀದರ್–1 ಪ್ರಾದೇಶಿಕ ಕೇಂದ್ರ :** ಸರ್ಕಾರಿ ಪ್ರ.ದ. ಕಾಲೇಜು, **ನೌಬಾದ್,** ಬೀದರ್–585402, ದೂ: 08482–232020, ಮೊಬೈಲ್: 9986696487.
26. **ಬೀದರ್–2 ಪ್ರಾದೇಶಿಕ ಕೇಂದ್ರ :** ಕರ್ನಾಟಕ ಪಬ್ಲಿಕ್ ಸ್ಕೂಲ್, **ಗೊರಟ (ಬಿ) ಗ್ರಾಮ,** ಹಲಸೂರು ತಾ॥. ಬೀದರ್–585327, ಮೊಬೈಲ್: 9986696487.
27. **ಬಾಗಲಕೋಟೆ ಪ್ರಾದೇಶಿಕ ಕೇಂದ್ರ :** ಬಿ.ವಿ.ವಿ.ಎಸ್. ಜನಶಿಕ್ಷಣ ಸಂಸ್ಥೆ ಕ್ಯಾಂಪಸ್, ಬಸವೇಶ್ವರ ಸ್ವತಂತ್ರ ಪಿ.ಯು. ಕಾಲೇಜ್ ಪಕ್ಕ, ವಿದ್ಯಾಗಿರಿ, ಬಾಗಲಕೋಟೆ–587 103, ಮೊಬೈಲ್: 7022222241 / 8861040975.
28. **ಮಡಿಕೇರಿ ಪ್ರಾದೇಶಿಕ ಕೇಂದ್ರ:** ಜೂನಿಯರ್ ಕಾಲೇಜು ಕ್ಯಾಂಪಸ್, ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಇಂಡೋರ್ ಸ್ಟೇಡಿಯಂ, ಮಡಿಕೇರಿ–571 201, ಮೊಬೈಲ್: 8762551115.
29. **ಕೊಳ್ಳೇಗಾಲ ಪ್ರಾದೇಶಿಕ ಕೇಂದ್ರ:** ಹರಿಚರಣ್ ಆರ್ಕೆಡ್, 2ನೇ ಮಹಡಿ, ಸೌತ್ ಎಕ್ಸ್‌ಟೆನ್‌ಷನ್, ಮಹದೇಶ್ವರ ಕಲ್ಯಾಣ ಮಂಟಪದ ಎದುರು, ಕೊಳ್ಳೇಗಾಲ–571 440. ಮೊಬೈಲ್: 9980740048.
30. **ಚಿತ್ರದುರ್ಗ ಪ್ರಾದೇಶಿಕ ಕೇಂದ್ರ:** ಡಾನ್ ಬಾಸ್ಕೋ ಪದವಿ ಕಾಲೇಜು ಆವರಣ, ಬಿಸಿಎಂ ಹಾಸ್ಟೆಲ್ ಹತ್ತಿರ, ಶನಿಮಹಾತ್ಮ ದೇವಸ್ಥಾನ ರಸ್ತೆ, ಚಳ್ಳಕರೆ ರಸ್ತೆ, ಚಿತ್ರದುರ್ಗ–577501. ಮೊಬೈಲ್: 7406612788.
31. **ಹಾವೇರಿ ಪ್ರಾದೇಶಿಕ ಕೇಂದ್ರ:** ಶ್ರೀ ಶಿವಲಿಂಗೇಶ್ವರ ವಿದ್ಯಾಪೀಠ, ಹುಕ್ಕೇರಿಮಠ, ಹಾವೇರಿ–581110. ಮೊಬೈಲ್: 97432 76734.
32. **ಚಿಕ್ಕಬಳ್ಳಾಪುರ ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪ್ರಥಮ ದರ್ಜೆ (ಪುರಸಭೆ) ಕಾಲೇಜು, ಎಂ. ಜಿ. ರಸ್ತೆ, ಚಿಕ್ಕಬಳ್ಳಾಪುರ–562101. ಮೊಬೈಲ್: 9164300299.
33. **ರಾಯಚೂರು ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಿಜಲಿಂಗಪ್ಪ ಕಾಲೋನಿ, ವಾಲ್ಮೀಕಿ ಸರ್ಕಲ್ ಹತ್ತಿರ, ಲಿಂಗಸಗೂರು ರಸ್ತೆ, ರಾಯಚೂರು–584101. ಮೊಬೈಲ್: 9686619555.
34. **ಯಾದಗಿರಿ ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪದವಿ ಕಾಲೇಜು, ಚಿತ್ತಾಪುರ ರಸ್ತೆ, ಯಾದಗಿರಿ–585202 ಮೊಬೈಲ್: 9880061361.
35. **ವಿಜಯಪುರ ಪ್ರಾದೇಶಿಕ ಕೇಂದ್ರ :** ಸ್ಯಾಟಲೈಟ್ ಬಸ್ ನಿಲ್ದಾಣ ಹತ್ತಿರ, ಅಂಬಾ ಭವಾನಿ ದೇವಸ್ಥಾನದ ಎದುರು, ವಿಜಯಪುರ–586 101, ಮೊಬೈಲ್: 9483628267.
36. **ಕೊಪ್ಪಳ ಪ್ರಾದೇಶಿಕ ಕೇಂದ್ರ :** ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯದ ಕಟ್ಟಡ, ಮೊದಲನೇ ಮಹಡಿ, ಗೋವನಕೊಪ್ಪ ಆಸ್ಪತ್ರೆ ಎದುರು, ಹೊಸಪೇಟೆ ರಸ್ತೆ, ಕೊಪ್ಪಳ–583 231, ಮೊಬೈಲ್: 9008588675 / 8722588675.
37. **ಗದಗ ಪ್ರಾದೇಶಿಕ ಕೇಂದ್ರ :** ಡಾ॥ ಪಂಡಿತ್ ಪುಟ್ಟರಾಜಗವಾಯಿ, ಐ.ಟಿ.ಐ. ಕಾಲೇಜು, ಎಲ್.ಎಲ್. ಬಿಲ್ಡಿಂಗ್, (ಹಳೆ ಡಿಸಿ ಅಫೀಸ್ ಸರ್ಕಲ್), ಜನರಲ್ ಕಾರ್ಯಪ್ಪ ಸರ್ಕಲ್, ಗದಗ–582 101. ಮೊಬೈಲ್: 8618929376 / 8884231002.
38. **ವಿಜಯನಗರ (ಹೊಸಪೇಟೆ) ಪ್ರಾದೇಶಿಕ ಕೇಂದ್ರ :** ಕನ್ನಡ ವಿಶ್ವವಿದ್ಯಾನಿಲಯ, ವಿದ್ಯಾರಣ್ಯ, ಹಂಪಿ, ವಿಜಯನಗರ ಜಿಲ್ಲೆ–583 276, ಮೊಬೈಲ್: 9945171920.
39. **ಪಿರಿಯಾಪಟ್ಟಣ ಪ್ರಾದೇಶಿಕ ಕೇಂದ್ರ :** ಡಿ.ಪಿ.ಬಿ.ಎಸ್. ಸರ್ಕಾರಿ ಬಾಲಕರ ಪಿಯು ಕಾಲೇಜು ಕ್ಯಾಂಪಸ್ (ಪ್ರೌಢಶಾಲಾ ವಿಭಾಗ), ಬಿ.ಎಂ. ರಸ್ತೆ, ಬೆಟ್ಟದಪುರ ಸರ್ಕಲ್ ಹತ್ತಿರ, ಪಿರಿಯಾಪಟ್ಟಣ – 571107. ಮೊಬೈಲ್: 9901423273.

1.	ಪ್ರವೇಶಾತಿಯ ಅಂತಿಮ ದಿನಾಂಕ: (ಬಿ.ಇಡಿ. ಹೊರತುಪಡಿಸಿ ಇತರೆ ಶೈಕ್ಷಣಿಕ ಕಾರ್ಯಕ್ರಮಗಳಿಗೆ)	15.10.2025
2.	ಬಿ.ಇಡಿ ಶೈಕ್ಷಣಿಕ ಕಾರ್ಯಕ್ರಮಕ್ಕೆ:	
	(i) ಸಾಮಾನ್ಯ ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ:	21.09.2025
	(ii) ಸಾಮಾನ್ಯ ಪ್ರವೇಶ ಪರೀಕ್ಷೆಯ ದಿನಾಂಕ:	28.09.2025

ತರಗತಿ ಹಾಗೂ ಪರೀಕ್ಷೆಗಳನ್ನು ಪ್ರಾದೇಶಿಕ ಕೇಂದ್ರ / ಕಲಿಕೆ ಸಹಾಯ ಕೇಂದ್ರಗಳಲ್ಲಿ ನಡೆಸಲಾಗುವುದು.

ಸಹಿ/–, ಕುಲಸಚಿವರು

ವಿಶ್ವವಾಣಿ

ಸಂಪಾದಕೀಯ

ಬರುವುದಕ್ಕೆ ಮುಖವೆಲ್ಲಿದೆ?!

ಈ ವರ್ಷಾಂತ್ಯದಲ್ಲಿ ಆಯೋಜಿಸಲಾಗಿರುವ 'ಕ್ವಾಡ್' ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಭಾರತಕ್ಕೆ ಬರಬೇಕಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈ ವಿಷಯದಲ್ಲಿ 'ತಾರಮ್ಮಯ್ಯ' ಮಾಡಲಿದ್ದಾರೆ ಎನ್ನಲಾಗುತ್ತಿದೆ. ಭಾರತದಿಂದ ಅಮೆರಿಕಕ್ಕೆ ಆಮದಾಗುವ ವಸ್ತುಗಳ ಮೇಲೆ ಟ್ರಂಪ್ ಅತಿರೇಕದ ಸುಂಕವನ್ನು ಹೇರಿದ ಕಾರಣಕ್ಕೆ ಭಾರತ-ಅಮೆರಿಕ ನಡುವಿನ ದ್ವಿಪಕ್ಷೀಯ ಸಂಬಂಧ ಹದಗೆಟ್ಟಿರುವುದರಿಂದಲೇ ಟ್ರಂಪ್ ಮಹಾಶಯರು ಈ ನಿರ್ಧಾರಕ್ಕೆ ಬಂದಿದ್ದಾರೆ ಎಂಬುದು ಲಭ್ಯ ಮಾಹಿತಿ. ಇದೊಂಥರಾ 'ಸುಮ್ಮನಿರಲಾರದೆ ಇರುವೆ ಬಿಟ್ಟುಕೊಂಡರು' ಎಂಬ ರೀತಿಯ ಬೆಳವಣಿಗೆ ಎನ್ನಲಡ್ಡಿಯಿಲ್ಲ. ಏಕೆಂದರೆ, ತಮ್ಮ ಮೊದಲ ಅಧಿಕಾರಾವಧಿಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿಯವರನ್ನು ಅಮೆರಿಕಕ್ಕೆ ಆಹ್ವಾನಿಸಿ 'ಹೌಡಿ ಮೋದಿ' ಎಂಬ ಬೃಹತ್ ಕಾರ್ಯಕ್ರಮವನ್ನು ಟೆಕ್ಸಾಸ್‌ನ ಹೂಸ್ಟನ್‌ನಲ್ಲಿ ಆಯೋಜಿಸಿ, ದ್ವಿಪಕ್ಷೀಯ ವ್ಯೂಹಾತ್ಮಕ ಭಾಗೀದಾರಿಕೆಯನ್ನು ಜಗತ್ತಿನೆದುರು ಬಿಂಬಿಸಿದ್ದ ಟ್ರಂಪ್, ತಮ್ಮ ಎರಡನೇ ಅಧಿಕಾರಾವಧಿಯಲ್ಲಿ ಪ್ಲೇಟು ಬದಲಿಸಿ ಅಪಸ್ವರ ಹಾಡಿಬಿಟ್ಟರು. ಭಾರತ ಮತ್ತು ಪಾಕ್ ನಡುವಿನ ಸಂಘರ್ಷವನ್ನು ನಿಲ್ಲಿಸಿದ್ದು ತಾವೇ ಎಂದು ಟ್ರಂಪ್ ತುತ್ತೂರಿ ಊದಲು ಶುರುಹಚ್ಚಿಕೊಂಡಾಗಿನಿಂದ ದ್ವಿಪಕ್ಷೀಯ ಸಂಬಂಧದಲ್ಲಿ ಬಿರುಕು ಕಾಣಿಸಿಕೊಳ್ಳಲಾರಂಭಿಸಿತು. ನಂತರ ಟ್ರಂಪ್ ಅತಿರೇಕದ ಸುಂಕವನ್ನು ಹೇರಿದ್ದರಿಂದಾಗಿ ಈ ಬಿರುಕು ಇನ್ನಷ್ಟು ದೊಡ್ಡದಾಯಿತು. ಇಷ್ಟೆಲ್ಲಾ ಎಡವಟ್ಟು ತಮ್ಮ ಕಡೆಯಿಂದ ಆಗಿರುವುದನ್ನು ತಡವಾಗಿಯಾದರೂ ಅರ್ಥಮಾಡಿಕೊಂಡಿರುವ ಟ್ರಂಪ್, ಹಿಂದೊಮ್ಮೆ ಭಾರತ ಭೇಟಿಗೆ ಬಂದಾಗ ಅಹಮದಾಬಾದ್‌ನಲ್ಲಿ ಸಿಕ್ಕ ಭವ್ಯ ಸ್ವಾಗತ ಮತ್ತೆ ಸಿಗುವುದು ದುಸ್ತರ ಎಂಬುದನ್ನು ಅರಿತಂತಿದೆ. ಹೀಗಾಗಿ ಭಾರತಕ್ಕೆ ಬರಲು ಅವರಿಗೆ ಮುಖವಿಲ್ಲ ಎಂಬುದು ಸ್ಪಷ್ಟ. ಸಾಲದೆಂಬಂತೆ, ರಷ್ಯಾ-ಚೀನಾ-ಭಾರತ ದೇಶಗಳು ಪರಸ್ಪರ ಕೈಕುಲುಕಿರುವುದನ್ನು ಜೀರ್ಣಿಸಿಕೊಳ್ಳಲು ಟ್ರಂಪ್ ಮಹಾಶಯರಿಗೆ ಆಗುತ್ತಿಲ್ಲ. ಇಂಥ ಹಲವು ಹತಾಶೆಗಳೇ ಟ್ರಂಪ್‌ರ ಭಾರತ ಭೇಟಿಗೆ ಮುಳ್ಳಾ ಗಿವೆ ಎನ್ನಲಡ್ಡಿಯಿಲ್ಲ. ಕಾರಣವೇನೇ ಇರಲಿ, ಭಾರತಕ್ಕಂತೂ ಇದರಿಂದ ನಷ್ಟವಿಲ್ಲ ಎಂಬುದೂ ಅಷ್ಟೇ ದಿಟ!

ಸೊಂಪಾದಕೀಯ

ಒಂದ್ ಕೆಲ್ಸ ಮಾಡಿ

ನಮ್ಮ ಸಮಾಜದಲ್ಲಿ ಕೆಲಸ ಅನ್ನೋದು ಬಹಳ ಸೂಕ್ಷ್ಮ ವಿಷಯ. ಅದರಲ್ಲೂ ಗಂಡಸರ ವಿಷಯದಲ್ಲಿ, 'ಉದ್ಯೋಗಂ ಪುರುಷ ಲಕ್ಷಣಂ'. ಆದ್ರೆ ಈ ಗಂಡಸು ಕೆಲಸ ಇಲ್ಲದೇ ಮನೆಯಲ್ಲೇ ಕೂತ್ರೆ, 'ಮಾಡಕ್ಕೆ ಬದುಕಿಲ್ಲದವನು' ಅಂತಾರೆ, ಯಾವಾಗ್ಲೂ ಕೆಲಸ ಮಾಡ್ತಾ ಇದ್ರೆ '24 ಗಂಟೆ ಬರೀ ಕೆಲ್ಸ ಮಾಡ್ಕೊಂಡೇ ಕೂರ್ತಾನೆ' ಅಂತ ಹೀಗಳೆಯುತ್ತಾರೆ. ಇನ್ನು ನಮ್ಮ ಕಂಪನಿಗಳು ಮಾತ್ರ ತಮ್ಮ ಉದ್ಯೋಗಿಗಳು ಜಾಸ್ತಿ ಕೆಲಸ ಮಾಡೋದನ್ನ ಉತ್ತೇಜನ ಮಾಡುತ್ತವೆ. ಕೆಲವೊಬ್ಬ ಕಂಪನಿ ಮಾಲೀಕರು 'ಬಿಡುವಿಲ್ಲದಂತೆ ಕೆಲಸ ಮಾಡಿ' ಅಂತ ತಮ್ಮ ಕಂಪನಿಯ ಉದ್ಯೋಗಿಗಳನ್ನು ಒತ್ತಾಯಿಸು ತ್ತಾರೆ. ಆದರೆ ಒಂದೊಮ್ಮೆ ಅದೇ ಉದ್ಯೋಗಿಗಳು ಬೇರೆ ಕಂಪನಿಗಳಿಗೆ ಪಾರ್ಟ್ ಟೈಂ ಕೆಲಸ ಮಾಡ್ತಾ ಇದ್ದಾರೆ ಅನ್ನೋದು ಕಂಡ್ರೆ ಕೆಂಡಾಮಂಡಲ ಆಗ್ತಾರೆ. ಒಂದು ಸಂಸ್ಥೆಯ ಉದ್ಯೋಗಿ ಆಗಿದ್ದುಕೊಂಡು ಇನ್ನೊಂದು ಕಂಪನಿಗೆ ಕೆಲಸ ಮಾಡೋದನ್ನ 'ಮೂನ್ ಲೈಟಿಂಗ್' ಅಂತಾರೆ. ಆದರೆ ಕಂಪನಿಗಳು ತಮ್ಮ ಉದ್ಯೋಗಿಗಳಿಗೆ ಈ ಕೆಲಸ ಮಾಡಲೇಬಾರದು ಅಂತ ಆರ್ಡರ್ ಮಾಡುತ್ತವೆ. 'ಒಂದ್ ಕೆಲ್ಸ ಮಾಡಿ, ಒಂದ್ ಸಲಕ್ಕೆ ಒಂದೇ ಕೆಲ್ಸ ಮಾಡಿ' ಅನ್ನೋ ವಾದ ಅವರದ್ದು. ಆದರೂ ಕೆಲವರು ಕದ್ದು ಮುಚ್ಚಿ ಇಂಥ ಕೆಲಸ ಮಾಡ್ತಾರೆ. ಸಾಫ್ಟ್‌ವೇರ್ ಕಂಪನಿಗಳೇನೋ ಓಕೆ, ಆದರೆ ಸಿಂಗಾಪುರ ದಲ್ಲಿ ಪಾಪ ಮನೆಗೆಲಸದ ಮಹಿಳೆಯೊಬ್ಬಳಿಗೆ ಈ ಪಾರ್ಟ್ ಟೈಮ್ ಕೆಲಸದಿಂದ ಸಂಕಷ್ಟ ಬಂದಿದೆ. ಅಲ್ಲಿನ ಕೋರ್ಟ್ ಆಕೆಗೆ 8 ಲಕ್ಷ ರುಪಾಯಿ ದಂಡ ವಿಧಿಸಿದೆ. ಆಕೆ ಮಾಡಿದ ತಪ್ಪು ಅಂದ್ರೆ ತಾನು ಮನೆಗೆಲಸ ಮಾಡುತ್ತಿದ್ದ 4 ಮನೆಗಳನ್ನು ಬಿಟ್ಟು ಇನ್ನೆರಡು ಮನೆಗಳಲ್ಲಿ ಪಾರ್ಟ್ ಟೈಮ್ ಕೆಲಸ ಮಾಡಿದ್ದು. ಪಾಪ, ಆಕೆಗೆ ಈಗ ಕೆಲಸ ಮಾಡೋದೂ ತಪ್ಪಾ ಅನ್ನೋ ಪ್ರಶ್ನೆ ಕಾಡತೊಡಗಿರಬಹುದು. ರಾಜಕಾರಣಿಗಳು ಒಬ್ಬರೇ ಅನೇಕ ಹುದ್ದೆಗಳನ್ನು ಹೊಂದಬಹುದು, ಒಬ್ಬ ಉದ್ಯಮಿ ಎಷ್ಟು ಬೇಕಾದರೂ ಉದ್ಯಮಗಳನ್ನು ನಡೆಸಬಹುದು, ಎಷ್ಟು ಬೇಕಾದರೂ ಹಣ ಗಳಿಸಬಹುದು. ಆದರೆ ಪಾಪ, ಮನೆಗೆಲಸದವರು ಮಾತ್ರ ಒಂದೆರಡು ಮನೆಗಳಲ್ಲಿ ಹೆಚ್ಚುವರಿ ಕೆಲಸ ಮಾಡಿದ್ರೆ, ಅದು ಘೋರ ಅಪರಾಧ ಅಂತ ದಂಡ ಹಾಕುವ ಈ ಪದ್ಧತಿ ಬಗ್ಗೆ ನಿಮಗೇನನಿಸುತ್ತದೆ?

ಸಂಪಾದಕರ ಸದ್ಯಶೋಧನೆ

ವಿಮಾನದಲ್ಲಿ ಕಿಟಕಿಗಳ ಮಹತ್ವ

ವಿಮಾನದ ಕಿಟಕಿಗಳ ಉದ್ದೇಶವೇನು, ವಿಮಾನದ ಕಿಟಕಿಗಳೇಕೆ ಅಷ್ಟು ಸಣ್ಣದಾಗಿರುತ್ತವೆ, ವಿಮಾನಗಳಿಗೆ ಕಿಟಕಿಗಳ ಅಗತ್ಯವಿದೆಯಾ ಎಂಬ ಪ್ರಶ್ನೆಗಳು ಪ್ರಯಾಣಿಕರ ಮನಸ್ಸಿನಲ್ಲಿ ಸುಳಿಯಬಹುದು. ವಿಮಾನದ ವಿನ್ಯಾಸದಲ್ಲಿ ಪ್ರಯಾಣಿಕರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಕಿಟಕಿಗಳು ಕೂಡ ಇದಕ್ಕೆ ಹೊರತಾಗಿಲ್ಲ ಎಂಬುದು. ಅನೇಕ ಪ್ರಯಾಣಿಕರು ಹೊರಗಿನ ನೋಟವನ್ನು ಆನಂದಿಸಲು ಕಿಟಕಿ ಸೀಟನ್ನು ಆರಿಸಿಕೊಳ್ಳುತ್ತಾರೆ. ಇನ್ನು ಕೆಲವರು, ಅದರಲ್ಲೂ ಆಗಾಗ ಪ್ರಯಾಣಿಸುವವರು, ಉದ್ದೇಶಪೂರ್ವಕವಾಗಿ ಕಿಟಕಿ ಸೀಟನ್ನು ಆರಿಸಿಕೊಳ್ಳುವುದಿಲ್ಲ. ಆದರೆ ಕೆಲವೇ ಜನರು ಈ ಕಿಟಕಿಗಳು ಕೇವಲ ಸೌಂದರ್ಯಕ್ಕೆ ಮಾತ್ರವಲ್ಲದೇ, ಇತರೆ ಪ್ರಾಯೋಗಿಕ ಕಾರ್ಯಗಳನ್ನು ನಿರ್ವಹಿಸುತ್ತವೆ ಎಂಬುದನ್ನು ತಿಳಿದಿರುತ್ತಾರೆ. ವಿಮಾನದ ಕಿಟಕಿಗಳು ಒಂದು ಪ್ರಮುಖ ಸುರಕ್ಷತಾ ಕಾರ್ಯವನ್ನು ನಿರ್ವಹಿಸುತ್ತವೆ. ಅನಿರೀಕ್ಷಿತ ಸಂದರ್ಭಗಳಲ್ಲಿ, ವಿಮಾನದಲ್ಲಿ ಏನಾದರೂ ತೊಂದರೆ ಉಂಟಾದಾಗ, ಸಿಬ್ಬಂದಿ ಮತ್ತು ಪ್ರಯಾಣಿಕರು ವಿಮಾನದ ಹೊರಗಿನ ಪರಿಸ್ಥಿತಿಗಳನ್ನು ನೋಡಲು, ಅರಿಯಲು ಇವು ಸಹಾಯ ಮಾಡುತ್ತವೆ. ಇದರಿಂದ, ಹೊರಗಡೆ ಬೆಂಕಿ ಅಥವಾ ಇನ್ನಾವುದೇ ಅಪಾಯಗಳಿವೆಯೇ ಎಂದು ಪರಿಶೀಲಿಸಿ, ಸ್ಥಳಾಂತರಗೊಳ್ಳುವುದು ಸುರಕ್ಷಿತವೇ ಎಂದು ನಿರ್ಧರಿಸಲು ಸಹಾಯವಾಗುತ್ತದೆ. ಈ ಸುರಕ್ಷತೆಯ ಉದ್ದೇಶಕ್ಕಾಗಿಯೇ, ಟೇಕಾಫ್ ಮತ್ತು ಲ್ಯಾಂಡಿಂಗ್ ಸಮಯದಲ್ಲಿ ಪ್ರಯಾಣಿಕರು ತಮ್ಮ ಕಿಟಕಿ ಪರದೆಗಳನ್ನು ತೆರೆದಿಡಲು ಗಗನಸಖಿಯರು ಸೂಚಿಸುವುದು. ವಿಮಾನ ಪ್ರಯಾಣದ ಈ ಹಂತಗಳಲ್ಲಿ ಅಪಾಯದ ಸಾಧ್ಯತೆ ಹೆಚ್ಚಿರುತ್ತದೆ. ಪರದೆಗಳನ್ನು ತೆರೆದಿಡುವುದರಿಂದ, ಕ್ಯಾಬಿನ್ ಸಿಬ್ಬಂದಿ ಹೊರಗಿನ ಪರಿಸ್ಥಿತಿಗಳನ್ನು ತಕ್ಷಣವೇ ಪರಿಶೀಲಿಸಬಹುದು ಮತ್ತು ಅಗತ್ಯವಿದ್ದರೆ, ಕೂಡಲೇ ಕ್ರಮ ಕೈಗೊಳ್ಳಬಹುದು. ವಿಮಾನದ ಕಿಟಕಿಗಳು ಕೇವಲ ಪ್ರಯಾಣಿಕರ ಆರಾಮ ಅಥವಾ ನೋಟಕ್ಕಾಗಿ ಮಾತ್ರವಲ್ಲ, ಅವು ಪ್ರತಿಯೊಂದು ವಾಣಿಜ್ಯ ವಿಮಾನದ ವಿನ್ಯಾಸದಲ್ಲಿ ಅಳವಡಿಸಲಾಗಿರುವ ಒಂದು ಪ್ರಮುಖ ಸುರಕ್ಷತಾ ವೈಶಿಷ್ಟ್ಯವಾಗಿದೆ. ಪ್ರಯಾಣಿಕರ ಸುರಕ್ಷತೆಗಾಗಿ ವಿಮಾನದ ಕಿಟಕಿಗಳನ್ನು ಇನ್ನೂ ಕೆಲವು ವಿಶೇಷ ವೈಶಿಷ್ಟ್ಯಗಳೊಂದಿಗೆ ವಿನ್ಯಾಸಗೊಳಿಸಲಾಗಿರುತ್ತದೆ. ವಿಮಾನದ ಕಿಟಕಿಗಳು ಸಾಮಾನ್ಯವಾಗಿ ಮೂರು ಪದರಗಳನ್ನು ಹೊಂದಿರುತ್ತವೆ. ಒಳಗಿನ ಮತ್ತು ಮಧ್ಯದ ಪದರಗಳು ರಕ್ಷಣಾತ್ಮಕವಾಗಿದ್ದು, ಹೊರಗಿನ ಪದರವು ವಿಮಾನದ ಅಧಿಕ ಒತ್ತಡವನ್ನು ತಡೆಯಲು ಸಹಾಯ ಮಾಡುತ್ತದೆ. ನೀವು ಕಿಟಕಿಗಳನ್ನು ಗಮನಿಸಿದರೆ, ಅದರ ಕೆಳಗಡೆ ಒಂದು ಸಣ್ಣ ರಂಧ್ರ (The Bleed Hole) ಇರುವುದನ್ನು ನೋಡಬಹುದು. ವಿಮಾನದ ಎತ್ತರ ಹೆಚ್ಚಾದಂತೆ, ಹೊರಗಿನ ಗಾಳಿಯ ಒತ್ತಡ ಕಡಿಮೆಯಾಗುತ್ತದೆ, ಆದರೆ ವಿಮಾನದ ಒಳಗಡೆ ಒತ್ತಡವನ್ನು ನಿಯಂತ್ರಿಸಿ ಸಹಜವಾಗಿ ಇರಿಸಲಾಗಿರುತ್ತದೆ. ಈ ರಂಧ್ರವು ಈ ಎರಡು ಒತ್ತಡಗಳ ನಡುವಿನ ವ್ಯತ್ಯಾಸವನ್ನು ಸಮತೋಲನಗೊಳಿಸುತ್ತದೆ. ಇದರಿಂದ ಕಿಟಕಿಗಳು ಬಿರುಕು ಬಿಡುವುದು ಅಥವಾ ಒಡೆಯುವುದು ತಪ್ಪುತ್ತದೆ. ಇದು ಒಂದು ಪ್ರಮುಖ ಸುರಕ್ಷತಾ ವೈಶಿಷ್ಟ್ಯ. ವಿಮಾನದ ಕಿಟಕಿಗಳನ್ನು ಗಾಜಿನ ಬದಲು ಹೆಚ್ಚು ಬಾಳಿಕೆ ಬರುವ ಮತ್ತು ಗಟ್ಟಿಯಾಗಿರುವ ವಸ್ತುಗಳಿಂದ ತಯಾರಿಸಲಾಗುತ್ತದೆ. ಈ ವಸ್ತುಗಳು ಯಾವುದೇ ಆಘಾತ ಅಥವಾ ತಾಪಮಾನದ ಬದಲಾವಣೆಗಳನ್ನು ಸುಲಭವಾಗಿ ತಡೆದುಕೊಳ್ಳಬಲ್ಲವು. ಹೀಗಾಗಿ, ವಿಮಾನದ ಕಿಟಕಿಗಳು ಕೇವಲ ಆಕರ್ಷಕವಾಗಿ ಕಾಣಿಸುವುದು ಮಾತ್ರವಲ್ಲ, ಅವು ನಿಮ್ಮ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಪ್ರಮುಖ ಪಾತ್ರ ವಹಿಸುತ್ತವೆ. ಕಾರ್ಗೋ ವಿಮಾನಗಳಲ್ಲಿ ಕಿಟಕಿಗಳಿರುವುದಿಲ್ಲ, ಏಕೆಂದರೆ ಕಾರ್ಗೋ ವಿಮಾನಗಳ ವಿನ್ಯಾಸವು ಗರಿಷ್ಠ ಸರಕು ಸಾಗಣೆ ಸಾಮರ್ಥ್ಯ, ಸುರಕ್ಷತೆ ಮತ್ತು ಇಂಧನ ದಕ್ಷತೆಯನ್ನು ಗುರಿಯಾಗಿರಿಸಿಕೊಂಡಿದೆ. ಪ್ರಯಾಣಿಕರಿಗೆ ಹೊರಗಿನ ನೋಟವು ಮುಖ್ಯವಾಗಿದ್ದರೆ, ಕಾರ್ಗೋ ವಿಮಾನಗಳಿಗೆ ಸಂಪೂರ್ಣವಾಗಿ ಕಾರ್ಯಕ್ಷಮತೆ ಮತ್ತು ತೂಕ ಮುಖ್ಯವಾಗಿರುತ್ತದೆ. ಕಿಟಕಿಗಳು ಮತ್ತು ಅವುಗಳ ಸುತ್ತ ಇರುವ ರಚನೆಗಳು ಗಣನೀಯ ತೂಕವನ್ನು ಹೊಂದಿರುತ್ತವೆ. ಕಿಟಕಿಗಳನ್ನು ತೆಗೆದುಹಾಕುವುದರಿಂದ ವಿಮಾನದ ತೂಕ ಕಡಿಮೆಯಾಗುತ್ತದೆ. ಇದರಿಂದ ಇಂಧನ ಉಳಿತಾಯವಾಗುತ್ತದೆ. ಕಾರ್ಗೋ ವಿಮಾನಗಳಲ್ಲಿ ಹೆಚ್ಚುವರಿ ಕಿಲೋ ತೂಕವು ಕೂಡಾ ಆದಾಯದ ಮೇಲೆ ಪರಿಣಾಮ ಬೀರುವುದರಿಂದ, ತೂಕವನ್ನು ಕಡಿಮೆ ಮಾಡುವುದು ಮುಖ್ಯ.

ಎಲ್ಲದಕ್ಕೂ ಸಿಬಿಐ ತನಿಖೆಯೊಂದೇ ಪರಿಹಾರವೇ?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
vveditoped@gmail.com
ranjith.hoskere@gmail.com

ರಾಜ್ಯದಲ್ಲಿ ಕಳೆದ ಎರಡು ತಿಂಗಳಿನಿಂದ ನಡೆಯುತ್ತಿರುವ 'ಬುರುಡೆ' ಪ್ರಕರಣದ ಆರೋಪಗಳೆಲ್ಲ 'ಬುರುಡೆ' ಎನ್ನುವುದು ಸಾಬೀತಾಗುತ್ತಿದ್ದಂತೆ, ಎಚ್ಚೆತ್ತಿರುವ ಬಿಜೆಪಿ ನಾಯಕರು ಇದೀಗ ಸಿಬಿಐ, ಎನ್‌ಐಎ ಸಂಸ್ಥೆಗಳನ್ನು ನೆನಪಿಸಿಕೊಳ್ಳುತ್ತಿದ್ದಾರೆ. ಆರಂಭದಲ್ಲಿ ಇದೇ ವಿಷಯದಲ್ಲಿ 'ಸ್ಪಷ್ಟ' ನಿಲುವು ತಾಳದೇ, ರಾಜ್ಯ ಸರಕಾರ ಎಸ್‌ಐಟಿಯನ್ನು ನೇಮಿಸಿದಾಗಲೂ ಮೌನವಾಗಿಯೇ ಪ್ರಕರಣವನ್ನು ಸ್ವಾಗತಿಸಿದ್ದ ಬಿಜೆಪಿಗರು, ಧರ್ಮಸ್ಥಳದ ವಿಷಯದಲ್ಲಿ ಮಾಸ್ಕ್ ಮ್ಯಾನ್ ನೀಡಿದ್ದೆಲ್ಲ ಸುಳ್ಳು ಮಾಹಿತಿ ಎನ್ನುವುದು ಖಾತ್ರಿಯಾದ ಬಳಿಕ ಎಚ್ಚೆತ್ತುಕೊಂಡಿದ್ದಾರೆ. ಇದೀಗ ಸಿಬಿಐ ತನಿಖೆಗೆ ಆಗ್ರಹಿಸುವ ಮೂಲಕ 'ರಾಜಕೀಯ' ಲಾಭ-ನಷ್ಟದ ಲೆಕ್ಕಾಚಾರವನ್ನು ಶುರುಮಾಡಿದ್ದಾರೆ. ಈ ಲಾಭ-ನಷ್ಟದ ಲೆಕ್ಕಾಚಾರಗಳನ್ನು ಮೀರಿ ನೋಡಿದಾಗ, ಎಲ್ಲ ಪ್ರಕರಣಗಳನ್ನು ಸಿಬಿಐಗೆ ಕೊಡಲು ಸಾಧ್ಯವೇ? ಕೊಟ್ಟರೂ ಸಿಬಿಐನವರಿಗೆ ಈ ಎಲ್ಲ ಪ್ರಕರಣಗಳನ್ನು ತನಿಖೆ ಮಾಡುವಷ್ಟು ಸಮಯವಿದೆಯೇ? ಎನ್ನುವ ಅನುಮಾನ ಬರುವುದರಲ್ಲಿ ಎರಡನೇ ಮಾತಿಲ್ಲ.

ಆರಂಭದಲ್ಲಿ, ಮಾಸ್ಕ್ ಮ್ಯಾನ್ ಚಿನ್ನಯ್ಯ ಬುರುಡೆ ತರುತ್ತಿದ್ದಂತೆ ಸೌಜನ್ಯ ಪ್ರಕರಣಕ್ಕೆ ಜೀವ ಬಂದಿತ್ತು. ಈ ಬುರುಡೆಗಳೊಂದಿಗೆ ಸೌಜನ್ಯ ಪ್ರಕರಣವನ್ನು ಮರುತನಿಖೆ ಮಾಡುವಂತೆ, ಸಿಬಿಐನಿಂದಲೇ ತನಿಖೆ ನಡೆಸುವಂತೆ ಬುರುಡೆ ಗ್ಯಾಂಗ್ ಆಗ್ರಹಿಸಿತ್ತು. ರಾಜ್ಯ ಸರಕಾರವು ಆರಂಭದಲ್ಲಿ ಸ್ಥಳೀಯ ಪೊಲೀಸರೇ ತನಿಖೆ ನಡೆಸುತ್ತಾರೆಂದು ಹೇಳಿ, ಬಳಿಕ ಎಸ್‌ಐಟಿಯನ್ನು ರಚಿಸಿದಾಗಲೂ ಯಾರೊಬ್ಬರೂ ಪ್ರಶ್ನಿಸಲಿಲ್ಲ. ಆದರೆ ಯಾವಾಗ ಸರಣಿ ಗುಂಡಿ ಅಗೆದರೂ ಏನೂ ಸಿಗಲಿಲ್ಲವೆಂಬುದು ಖಾತ್ರಿಯಾಯಿತೋ ಆಗ ಬಿಜೆಪಿಗರಿಗೆ ಸಿಬಿಐ ನೆನಪಾಯಿತು. ಅಲ್ಲಿಯವರೆಗೂ ನಮಗೂ, ಧರ್ಮಸ್ಥಳಕ್ಕೂ ಸಂಬಂಧವಿಲ್ಲವೆನ್ನುವಂತಿದ್ದ ಬಹುತೇಕ ನಾಯಕರು ಅಲ್ಲಿಂದ ಧರ್ಮಸ್ಥಳದ ಪರ ಬ್ಯಾಟ್ ಬೀಸಲು ಶುರುಮಾಡಿದರು.

ಇಂಥ ಯಾವುದೇ ಸೂಕ್ಷ್ಮ ಪ್ರಕರಣಗಳು ಮುನ್ನೆಲೆಗೆ ಬಂದರೂ ಪ್ರತಿಪಕ್ಷಗಳು ಸಹಜವಾಗಿ ಹೇಳುವುದು, ''ಪ್ರಕರಣವನ್ನು ಸಿಬಿಐಗೆ ಕೊಡಿ'' ಅಂತ. ಧರ್ಮಸ್ಥಳ ಅಥವಾ ಇನ್ಯಾವುದೇ ವಿಷಯದಲ್ಲಿರಲಿ ಸಿಬಿಐ ಅಥವಾ ಎನ್‌ಐಎನಿಂದ ತನಿಖೆಯಾಗಬೇಕು ಎನ್ನುವ ಆಗ್ರಹ ಹೊಸದೇನೂ ಅಲ್ಲ. ಹಾಗೆ ನೋಡಿದರೆ, ಈ ಹಿಂದೆ ಸೌಜನ್ಯ ಪ್ರಕರಣವನ್ನು ಮರುತನಿಖೆ ಮಾಡಿಸಬೇಕು ಎನ್ನುವ ಆಗ್ರಹ ಬಂದಾಗ ಇದೇ ಬಿಜೆಪಿಯ ಹಲವರು ಸಿಬಿಐ ತನಿಖೆ ಅನಗತ್ಯ ಎನ್ನುವ ಮಾತನ್ನಾಡಿದ್ದರು. ಆದರೆ ಪ್ರಕರಣದಲ್ಲಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬಹುದು ಎನ್ನುವ ವಿಷಯ ಹೊರಬರುತ್ತಿದ್ದಂತೆ, ಸಿಬಿಐಗೆ ವಹಿಸಬೇಕೆಂಬ ಆಗ್ರಹವನ್ನು ಶುರುಮಾಡಿದ್ದಾರೆ.

ಧರ್ಮಸ್ಥಳ ಬುರುಡೆ ಪ್ರಕರಣ ಹೋಗಲಿ, ಕೆಲ ದಿನಗಳ ಹಿಂದೆ ಕೋಲಾರದಲ್ಲಿ ಪ್ರೀತಿಯ ವಿಷಯದಲ್ಲಿ ನಡೆದ ಕೊಲೆಯನ್ನೂ ಎನ್‌ಐಎಗೆ ವಹಿಸಬೇಕು ಎನ್ನುವ ಆಗ್ರಹವನ್ನು ಬಿಜೆಪಿ ನಾಯಕರು ಮಾಡಿದ್ದರು. ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಎರಡೂವರೆ ವರ್ಷದ ಅವಧಿಯಲ್ಲಿ ಕನಿಷ್ಠ 10 ಪ್ರಕರಣಗಳನ್ನು ಸಿಬಿಐಗೆ ವಹಿಸಬೇಕು ಎಂದು ಬಿಜೆಪಿಗರು ಆಗ್ರಹಿಸಿದ್ದರು. ಹಾಗೆ ನೋಡಿದರೆ, ಯಾವುದೇ ಗಲಾಟೆ, ಘಟನೆ ನಡೆದಾಗ ಏನಾಗಿದೆ ಎನ್ನುವುದನ್ನು ಆಲೋಚಿಸುವ ಮೊದಲೇ, ಪ್ರತಿಪಕ್ಷ ಸ್ಥಾನದಲ್ಲಿರುವವರು ''ಪ್ರಕರಣವನ್ನು ಸಿಬಿಐಗೆ ವಹಿಸಿ'' ಎನ್ನುವ ಹೇಳಿಕೆ ನೀಡಿಯೇ ಬಳಿಕ ಮುಂದೇನು ಎನ್ನುವುದನ್ನು ಯೋಚಿಸುತ್ತಾರೆ ಎನ್ನುವಂತೆ ನಡೆದುಕೊಳ್ಳುತ್ತಾರೆ. ಅದರಲ್ಲಿಯೂ ಇತ್ತೀಚಿನ ದಿನದಲ್ಲಿ 'ಧರ್ಮ'ದ ವಿಷಯದಲ್ಲಿ ಹುಲ್ಲು ಕಡ್ಡಿ ಅಲ್ಲಾಡಿದರೂ ಬಿಜೆಪಿಯ ಕೆಲವರು 'ಎನ್‌ಐಎಗೆ ಪ್ರಕರಣ ವಹಿಸುವಂತೆ ಕೇಂದ್ರ'ಕ್ಕೊಂದು ಪತ್ರ ಬರೆದೇ ಮುಂದಿನ ಮಾತಾಡಬೇಕು ಎನ್ನುವ ಮನಸ್ಥಿತಿಯಲ್ಲಿದ್ದಾರೆ.

ಈ ರೀತಿ ಸಿಬಿಐ, ಎನ್‌ಐಎಗೆ ಪ್ರಕರಣಗಳನ್ನು ವಹಿಸಬೇಕು ಎನ್ನುವ ಆಗ್ರಹವು ಕರ್ನಾಟಕದಲ್ಲಿ ಮಾತ್ರವಲ್ಲ, ದೇಶದ ಬಹುತೇಕ ರಾಜ್ಯಗಳಲ್ಲಿ ಕೇಳಿಬರುವ ಪ್ರತಿಪಕ್ಷಗಳ ಪ್ರತಿನಿತ್ಯದ ಕೂಗಾಗಿದೆ. ಇದು ಬಿಜೆಪಿ ಮಾತ್ರವಲ್ಲದೇ, ಯಾವುದೇ ಪಕ್ಷವು ಪ್ರತಿಪಕ್ಷ ಸ್ಥಾನದಲ್ಲಿ ಕೂತಾಗ ಹೊಮ್ಮಿಸುವ ಸರ್ವೇಸಾಮಾನ್ಯ ಮಾತು. ಹಾಗೆಂದ ಮಾತ್ರಕ್ಕೆ, ಪ್ರತಿಪಕ್ಷಗಳು ಕೇಳುವಂತೆ ಎಲ್ಲ ಪ್ರಕರಣಗಳನ್ನೂ ಕೇಂದ್ರ ತನಿಖಾ ಸಂಸ್ಥೆಗಳಿಗೆ ವಹಿಸಬೇಕು ಎಂದಿಲ್ಲ. ಅನೇಕ ಪ್ರಕರಣಗಳಲ್ಲಿ, ರಾಜ್ಯ ಸರಕಾರವು ಸಿಬಿಐಗೆ ವಹಿಸಿದರೂ, ಸಿಬಿಐ ಪ್ರಕರಣವನ್ನು ದಾಖಲಿಸಿಕೊಳ್ಳುವುದಿಲ್ಲ. ಬದಲಿಗೆ ನಿಮ್ಮ ಪೊಲೀಸರಿಂದಲೇ ತನಿಖೆ ನಡೆಸಿ ಎನ್ನುವ ಹಿಂಬರಹವನ್ನು ಕೊಟ್ಟು ಸಾಗಹಾಕುತ್ತದೆ. ಏಕೆಂದರೆ 'ರಾಜಕೀಯ' ಕಾರಣಗಳಿಗಾಗಿ ಆಗ್ರಹಿಸಿದ ಅಥವಾ ಶಿಫಾರಸು ಮಾಡಿದ ಪ್ರಕರಣಗಳನ್ನು ಸಿಬಿಐ ತನಿಖೆ ಮಾಡುವುದಕ್ಕೆ ಅದರ ಬಳಿ ಸಮಯವೂ ಇಲ್ಲ, ಮಾನವ ಸಂಪನ್ಮೂಲವೂ ಇರುವುದಿಲ್ಲ.

ಹಾಗೆ ನೋಡಿದರೆ, ಇತ್ತೀಚಿನ ದಿನಗಳಲ್ಲಿ ಸಿಬಿಐ ಎಲ್ಲ ಪ್ರಕರಣವನ್ನೂ ವಹಿಸಿಕೊಳ್ಳುವ ಆಸಕ್ತಿಯನ್ನು ತೋರುತ್ತಿಲ್ಲ. ಇದಕ್ಕೆ ಉದಾಹರಣೆಯ ರೀತಿಯಲ್ಲಿ ಕಳೆದ ವರ್ಷ ಸಿಬಿಐನ ಬೆಂಗಳೂರು ವಿಭಾಗದ ಮುಖ್ಯಸ್ಥರು ರಾಜ್ಯ ಗೃಹ ಇಲಾಖೆಗೆ ಪತ್ರ ಬರೆದು, ಕರ್ನಾಟಕ ಸರಕಾರದಿಂದ ಸಿಬಿಐಗೆ ಹಸ್ತಾಂತರವಾಗಿರುವ ಪ್ರಕರಣಗಳ ತನಿಖೆಗೆ ನಮ್ಮ ಬಳಿ ಮಾನವ ಸಂಪನ್ಮೂಲದ ಕೊರತೆಯಿದೆ. ಆದ್ದರಿಂದ ಗೃಹ ಇಲಾಖೆಯ ಅಧಿಕಾರಿ ಹಾಗೂ ವಾಹನ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಮನವಿ ಮಾಡಿದ್ದರು. ಕರ್ನಾಟಕ ಸರಕಾರವು ಸಿಬಿಐಗೆ ಶಿಫಾರಸು ಮಾಡಿರುವ ಪ್ರಕರಣಗಳನ್ನು ಸೂಕ್ತ ರೀತಿಯಲ್ಲಿ ತನಿಖೆ ನಡೆಸಲು ಐದು ಡಿವೈಎಸ್‌ಪಿ, 25 ಇನ್‌ಸ್ಪೆಕ್ಟರ್, 25 ಎಸ್‌ಐ, 50 ಪೇದೆಗಳು ಹಾಗೂ ಇಬ್ಬರು ಆಡಿಟರ್‌ಗಳು ಬೇಕೆಂದು ವರ್ಷದ ಹಿಂದೆಯೇ ಮನವಿ ಮಾಡಲಾಗಿದೆ. ಹೆಚ್ಚು ಪ್ರಕರಣಗಳನ್ನು ಕೊಟ್ಟಷ್ಟೂ ಹೆಚ್ಚುವರಿ ಅಧಿಕಾರಿಗಳನ್ನು ನೀಡಬೇಕೆಂಬ 'ಷರತ್ತು' ವಿಧಿಸಿರುವುದನ್ನು ಗಮನಿಸಿದರೆ ಸಿಬಿಐ ಬಳಿಯಿರುವ 'ಕಾರ್ಯ'ದ ಭಾರವನ್ನು ನಿಭಾಯಿಸಲು ಇರುವ ಸಮಸ್ಯೆ ಸ್ಪಷ್ಟವಾಗಿ ತಿಳಿಯುತ್ತದೆ.

ಬಿಜೆಪಿಯವರು ಮಾಡುತ್ತಿರುವ ಈ ಕೆಲಸವನ್ನು ಈ ಹಿಂದೆ ಕಾಂಗ್ರೆಸ್ ನಾಯಕರು ಮಾಡಿದ್ದರು. ಅದಕ್ಕೂ ಮೊದಲು ಕಾಂಗ್ರೆಸ್ ಅಧಿಕಾರದಲ್ಲಿದ್ದ ಸಮಯದಲ್ಲಿ ಬಿಜೆಪಿ ನಾಯಕರೂ ಇದೇ ಕೆಲಸವನ್ನು ಮಾಡಿಕೊಂಡೇ ಬಂದಿದ್ದಾರೆ. ಸಿಬಿಐಗೆ ವಹಿಸಬೇಕು ಎನ್ನುವ ಕೂಗು ಯಾವುದೋ ಒಂದು ಪಕ್ಷಕ್ಕೆ ಸೀಮಿತವಾಗಿಲ್ಲ. ಕೇಂದ್ರ ಹಾಗೂ ರಾಜ್ಯದಲ್ಲಿ ಭಿನ್ನ ಪಕ್ಷಗಳು ಅಧಿಕಾರದಲ್ಲಿದ್ದಾಗ ಪ್ರತಿಪಕ್ಷವು 'ಪ್ರಕರಣವನ್ನು ಸಿಬಿಐಗೆ ವಹಿಸಬೇಕು' ಎನ್ನುವ ಆಗ್ರಹವನ್ನು ಮಾಡುವುದು ಸಾಮಾನ್ಯ. ಈ ಹಿಂದೆ 2013ರಿಂದ18ರವರೆಗೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ, ಗಣಪತಿ ಆತ್ಮಹತ್ಯೆ ಪ್ರಕರಣ, ಡಿ.ಕೆ.ರವಿ ಆತ್ಮಹತ್ಯೆ ಪ್ರಕರಣ, ಪರೇಶ್ ಮೆಹ್ತಾ ಕೊಲೆ ಪ್ರಕರಣ ಸೇರಿದಂತೆ ಹತ್ತಾರು ಪ್ರಕರಣಗಳನ್ನು ಸಿಬಿಐಗೆ ವಹಿಸುವಂತೆ ಬಿಜೆಪಿ ಆಗ್ರಹಿಸಿ, ಅದರಲ್ಲಿ ಯಶಸ್ವಿಯಾಗಿತ್ತು. ಈ ಎಲ್ಲ ಪ್ರಕರಣಗಳಲ್ಲಿ ಸರಕಾರ ಹಾಗೂ ಸಚಿವರ ವಿರುದ್ಧದ ದೂರಿತ್ತು. ಆದರೆ ಅಂತಿಮವಾಗಿ ಬಹುತೇಕ ಪ್ರಕರಣಗಳು 'ಬಿ' ರಿಪೋರ್ಟ್ ಸಲ್ಲಿಕೆಯ ಮೂಲಕ ಅಥವಾ ನ್ಯಾಯಾಲಯದಲ್ಲಿ ಖುಲಾಸೆಯಾಗುವ ಮೂಲಕ ಅಂತ್ಯವಾಗಿವೆ.

ಧರ್ಮಸ್ಥಳದ ಬುರುಡೆ ಪ್ರಕರಣವನ್ನು ಎನ್‌ಐಎ ಅಥವಾ ಸಿಬಿಐಗೆ ವಹಿಸುವಂತೆ ಆಗ್ರಹಿಸುತ್ತಿರುವ ಬಿಜೆಪಿ ನಾಯಕರಿಗೆ ಟಕ್ಕರ್ ಕೊಡಬೇಕೆಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಸಿಬಿಐ ಪ್ರಕರಣಗಳಿಗೆ ಸಂಬಂಧಿಸಿದಂತೆ ಟ್ವೀಟ್ ಮಾಡಿದ್ದಾರೆ. ಈ ಟ್ವೀಟ್‌ನಲ್ಲಿ ಪ್ರಮುಖವಾಗಿ ಈಗಾಗಲೇ ಕೊಟ್ಟಿರುವ ಪ್ರಕರಣಗಳೇ 'ತಾರ್ಕಿಕ' ಅಂತ್ಯ ಕಾಣದೇ ಅತಂತ್ರ ಸ್ಥಿತಿಯಲ್ಲಿವೆ. ಹೀಗಿರುವಾಗ ಹೊಸ ಪ್ರಕರಣಗಳನ್ನು ನೀಡುವುದಾದರೂ ಏಕೆ ಎನ್ನುವುದು ಅವರ ವಾದವಾಗಿದೆ. ಈಗಾಗಲೇ ಗುರು ರಾಘವೇಂದ್ರ ಬ್ಯಾಂಕ್, ಶ್ರೀ ಗುರು ಸೌರ್ವಭೌಮ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಬ್ಯಾಂಕ್‌ಗಳ ಅವ್ಯವಹಾರಕ್ಕೆ ಸಂಬಂಧಿಸಿದಂತೆ 2020ರಲ್ಲಿಯೇ ದಾಖಲಾಗಿರುವ ಪ್ರಕರಣಗಳನ್ನು ತನಿಖೆಗೆಂದು ಸಿಬಿಐಗೆ ವಹಿಸಲಾಗಿತ್ತು. ನಾಲ್ಕು ವರ್ಷ ಕಳೆದರೂ ಸಿಬಿಐ ತನಿಖೆಯಲ್ಲಿ ಮಹತ್ವದ ಪ್ರಗತಿಯಾಗಿಲ್ಲ. ಅದೇ ರೀತಿ ಬೆಂಗಳೂರಿನ ಹನುಮಂತನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2022ರ ಮಾರ್ಚ್‌ನಲ್ಲಿ ನಡೆದ ಪ್ರಕರಣ, ಪಾಪ್ಯುಲರ್ ಫೈನಾನ್ಸ್ ಹಗರಣಗಳನ್ನೆಲ್ಲ ಸಿಬಿಐಗೆ ವಹಿಸಲಾಗಿದೆ. ಆದರೂ, ಯಾವುದೇ ಕ್ರಮವಾಗಿಲ್ಲ, ಹೀಗಿರುವಾಗ ಹೊಸದಾಗಿ ಪ್ರಕರಣಗಳನ್ನು ನೀಡಿದರೆ ಅದರ ಫಲಿತಾಂಶ ಯಾವಾಗ? ಎನ್ನುವುದು ಈಗಿರುವ ಪ್ರಶ್ನೆಯಾಗಿದೆ.

ಪ್ರತಿಪಕ್ಷ ಸ್ಥಾನದಲ್ಲಿರುವಾಗ ಬಿಜೆಪಿಯವರಾಗಲಿ, ಕಾಂಗ್ರೆಸ್‌ನವರಾಗಲಿ 'ಆಗ್ರಹಿಸುವ' ಅನೇಕ ಪ್ರಕರಣಗಳನ್ನು ಸಿಬಿಐಗೆ ವಹಿಸುವ ಅಗತ್ಯವಿರುವುದಿಲ್ಲ. ಈ ಸತ್ಯವು ನಾಯಕರಿಗೆ ಗೊತ್ತಿರುತ್ತದೆ. ಆದರೆ ಅಂದಿನ ಪರಿಸ್ಥಿತಿಯಲ್ಲಿ ಸರಕಾರವನ್ನು ಟೀಕಿಸುವ ಅಥವಾ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಕ್ರಿಯೆ ಭಾಗವಾಗಿ 'ಸಿಬಿಐ ತನಿಖೆ' ಎನ್ನುವ ಆಗ್ರಹದ ಮಾತುಗಳನ್ನು ಆಡುತ್ತಾರಷ್ಟೇ. ಸದ್ಯ ಕರ್ನಾಟಕದ ವಿಷಯದಲ್ಲಿ ಧರ್ಮಸ್ಥಳ ಪ್ರಕರಣವನ್ನು ಎನ್‌ಐಎ ಅಥವಾ ಸಿಬಿಐಗೆ ವಹಿಸಬೇಕು ಎಂದು ಬಿಜೆಪಿಯವರು ಆಗ್ರಹಿಸುತ್ತಿದ್ದಾರೆ. ಆದರೆ ನಿಜವಾಗಿಯೂ ಬುರುಡೆ ಪ್ರಕರಣವನ್ನು ಎನ್‌ಐಎಗೆ ವಹಿಸಲು ಬರುವುದೇ ಎನ್ನುವ ಪ್ರಶ್ನೆಗೆ ಬಹುತೇಕ ನಾಯಕರ ಬಳಿ ಉತ್ತರವಿಲ್ಲ. ಒಂದು ವೇಳೆ ಈ ಪ್ರಕರಣದಲ್ಲಿ ಕೇಂದ್ರ ಸರಕಾರದ ಅಂಗಸಂಸ್ಥೆಗಳನ್ನು ತರಲೇಬೇಕು ಎನ್ನುವ ಹಠವಿದ್ದರೆ, ಜಾರಿ ನಿರ್ದೇಶನಾಲಯವು (ಇ.ಡಿ.) ಎಂಟ್ರಿಯಾಗುವಂತೆ ನೋಡಿಕೊಳ್ಳಲು ಅವಕಾಶವಿದೆ. ಏಕೆಂದರೆ, ಬುರುಡೆ ಪ್ರಕರಣಕ್ಕೆ ವಿದೇಶದಿಂದ 'ಫಂಡಿಂಗ್' ಅಥವಾ ಭಾರಿ ಪ್ರಮಾಣದಲ್ಲಿ ಹಣದ ವ್ಯವಹಾರ ನಡೆದಿರುವ ಅನುಮಾನಗಳು ಬರುತ್ತಿರುವುದರಿಂದ, ಈ ವಿಷಯವನ್ನು ಮುಂದಿಟ್ಟುಕೊಂಡು ಪ್ರಕರಣದಲ್ಲಿ ಇ.ಡಿ. ಪ್ರವೇಶವಾಗುವಂತೆ ನೋಡಿಕೊಳ್ಳಬಹುದು. ಆದರೆ ಸಂಸದ ಕೋಟಾ ಶ್ರೀನಿವಾಸ್ ಪೂಜಾರಿ ಹೊರತುಪಡಿಸಿ, ಬಹುತೇಕ ಬಿಜೆಪಿಗರು ಈ ಆಯಾಮದಲ್ಲಿ ಪ್ರಕರಣವನ್ನು ನೋಡಿಯೇ ಇಲ್ಲ, ಬದಲಿಗೆ ಬಿಜೆಪಿಯ ಬಳಿಯಿದ್ದ 'ಸಿದ್ಧ' ಅಸ್ತ್ರದ ರೀತಿಯಲ್ಲಿ ಪ್ರಕರಣವನ್ನು ಸಿಬಿಐ ಅಥವಾ ಎನ್‌ಐಎಗೆ ವಹಿಸಬೇಕು ಎನ್ನುವ ಆಗ್ರಹವನ್ನು ಮುಂದುವರಿಸಿದ್ದಾರೆ.

ಯಾವುದೇ ಪ್ರಕರಣವಿರಲಿ, ಯಾರಿಂದ ತನಿಖೆಯಾಗುತ್ತಿದೆ ಎನ್ನುವುದಕ್ಕಿಂತ, ಯಾವ ಆಯಾಮದಲ್ಲಿ ಅದು ಸಾಗುತ್ತಿದೆ ಹಾಗೂ ತಾರ್ಕಿಕ ಅಂತ್ಯಕ್ಕೆ ತನಿಖೆ ಹೋಗುತ್ತಿದೆಯೇ ಎನ್ನುವುದನ್ನು ಗಮನಿಸಬೇಕಿದೆ. ಆದರೆ ಭಾರತದ ರಾಜಕೀಯ ವ್ಯವಸ್ಥೆಯಲ್ಲಿ 'ತಾರ್ಕಿಕ' ಅಂತ್ಯ ಎನ್ನುವುದಕ್ಕಿಂತ ಹೆಚ್ಚಾಗಿ, ಅಂದಿನ ರಾಜಕೀಯ ಹೋರಾಟದ ಅಸ್ತ್ರದ ಆಯಾಮದಲ್ಲಿ ಬಹುತೇಕ ನಾಯಕರು ಆಲೋಚಿಸುವುದಿಲ್ಲ. ಇಂದು ಬಿಜೆಪಿ ಪ್ರತಿಪಕ್ಷದಲ್ಲಿದ್ದುಕೊಂಡು ಕೇಳುತ್ತಿರುವ ಮಾತುಗಳನ್ನೇ ಮುಂದೊಂದು ದಿನ ಕಾಂಗ್ರೆಸಿಗರು ತಾವು ಪ್ರತಿಪಕ್ಷದಲ್ಲಿ ಕೂತಾಗ ಕೇಳುತ್ತಾರೆ ಎನ್ನುವುದರಲ್ಲಿ ಅನುಮಾನವೇ ಇಲ್ಲ.

ಕೊನೆಯದಾಗಿ, ಯಾವುದೇ ಪ್ರಕರಣವಿರಲಿ, ಆರೋಪವಿರಲಿ ತನಿಖೆ ಹೇಗಾಯಿತು ಎನ್ನುವುದಕ್ಕಿಂತ ಮುಖ್ಯವಾಗಿ ತನಿಖೆಯಿಂದ ಬಂದ 'ಫಲಿತಾಂಶ'ವೇನು ಎನ್ನುವುದರ ಕಡೆಗೆ ಗಮನಹರಿಸಬೇಕಾಗುತ್ತದೆ...

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅರ್ಥ (ಅ)ವ್ಯವಸ್ಥೆ!

2019-20ರಲ್ಲಿ ಚೀನಾಕ್ಕೆ ಭಾರತದ ರಫ್ತು ಮೌಲ್ಯವು 1.46 ಲಕ್ಷ ಕೋಟಿ ರುಪಾಯಿಗಳಷ್ಟಿದ್ದರೆ 2024-25ಕ್ಕೆ ಅದು 1.26ಕ್ಕೆ ಕುಸಿದಿದೆ! ಆದರೆ ಚೀನಾದಿಂದ ಮಾಡಿಕೊಳ್ಳಲಾದ ಆಮದು ಮಾತ್ರ 5.75ರಿಂದ 10ಕ್ಕೆ ಏರಿದೆ! ಹೀಗಾಗಿ, ವ್ಯಾಪಾರ ಕೊರತೆಯು 4.29ರಿಂದ 8.74ಕ್ಕೆ ಏರಿದೆ. ವಿಪರ್ಯಾಸವೆಂದರೆ, ಹಲವು ವರ್ಷಗಳಿಂದ ನಾವಿಲ್ಲಿ ಚೀನಾ ವಸ್ತುಗಳನ್ನು ನಿಷೇಧಿಸುವ ಮಾತನ್ನಾಡುತ್ತಿದ್ದೇವೆ!

ಇದೀಗ ಅಮೆರಿಕವು ನಮಗೆ ಸುಂಕ ಏರಿಕೆಯ ಪೆಟ್ಟು ನೀಡಿದೆ. ಇವುಗಳ ಮಧ್ಯೆಯೂ ನಮ್ಮ ಜಿಡಿಪಿ ಏರುತ್ತಲೇ ಇದೆ! ಕೆಲವೇ ವರ್ಷಗಳಲ್ಲಿ ಭಾರತವು ಜಗತ್ತಿನ ಎರಡನೇ ಅತಿ ದೊಡ್ಡ ಆರ್ಥಿಕ ಶಕ್ತಿ ಆಗಲಿದೆ. ಈ ಮಾತಿಗೆ ಸಮರ್ಥನೆಯೆಂಬಂತೆ, ರಿಲಯನ್ಸ್ ಸಂಸ್ಥೆಯು ಗುಜರಾತಿನಲ್ಲಿ ವಿಶ್ವದ ಅತಿ ದೊಡ್ಡ ಗಿಗಾ ಎನರ್ಜಿ ಕಾಂಪ್ಲೆಕ್ಸ್ ಸ್ಥಾಪಿಸುತ್ತಿದೆ. ಒಂದೆಡೆ ಹೀಗಾದರೆ ಇನ್ನೊಂದೆಡೆ, ಆಹಾರ ಪದಾರ್ಥಗಳೂ ಸೇರಿದಂತೆ ಎಲ್ಲಾ ಅವಶ್ಯಕ ಸಾಮಗ್ರಿಗಳ ಬೆಲೆಯೂ ಏರುತ್ತಲೇ ಇದೆ. ರಾಷ್ಟ್ರೀಕೃತ ಬ್ಯಾಂಕುಗಳು ಠೇವಣಿದಾರರಿಗೆ ಕೊಡುವ ಬಡ್ಡಿಯ ಗರಿಷ್ಠ ದರವನ್ನು ಶೇಕಡಾ 6.50ರ ಆಸುಪಾಸಿಗೆ ಇಳಿಸಲಾಗಿದೆ. 'ಅತಿ ಶ್ರೀಮಂತರಿಂದ ವಸೂಲು ಮಾಡಲಾಗದ' ಬ್ಯಾಂಕ್ ಸಾಲಗಳ ಮೊತ್ತವು ಭಾರಿ ಪ್ರಮಾಣದಲ್ಲಿ ಏರುತ್ತಿದೆ. ಸರಕಾರಗಳು ಜನಸಾಮಾನ್ಯರ ಮೇಲೆ ಹೇರುತ್ತಿರುವ ವಿವಿಧ ತೆರಿಗೆಗಳು ಏರುತ್ತಿವೆ. ಜತೆಗೆ, ಕೇಂದ್ರದ ತೆರಿಗೆ ಮಾರ್ಪಾಡು ಮತ್ತು ರಾಜ್ಯಗಳಿಗೆ ತೆರಿಗೆ ಹಂಚಿಕೆಯ ರೀತಿ ಇವುಗಳು, ಕರ್ನಾಟಕವೂ ಸೇರಿದಂತೆ ನಿರ್ದಿಷ್ಟ ರಾಜ್ಯಗಳಿಗೆ ಸಲ್ಲಬೇಕಾದ ನ್ಯಾಯಯುತ ತೆರಿಗೆಯ ಪಾಲನ್ನು ಭಾಗಶಃ ವಂಚಿಸುತ್ತಿವೆ. ಇವೆಲ್ಲದರ ಅರ್ಥ ಏನು? ಬಡ ಮತ್ತು ವಿಶೇಷವಾಗಿ ಮಧ್ಯಮ ವರ್ಗದವರಿಂದ ಹಣ ವಸೂಲು ಮಾಡಿ ಕೆಲವೇ ಶ್ರೀಮಂತರಿಗೆ ನೀಡಿ ಅವರ ಉದ್ಯಮಗಳನ್ನು ಮಾತ್ರವಲ್ಲ, ಸಂಪತ್ತನ್ನೂ ದೊಡ್ಡದು ಮಾಡಿ, ತನ್ಮೂಲಕ ವಿಶ್ವದ ಎರಡನೇ ಅತಿ ದೊಡ್ಡ ಆರ್ಥಿಕ ಶಕ್ತಿ ಎನಿಸಿಕೊಳ್ಳುವುದು ತಾನೆ? ಬಹುಜನರ ಹಿತ ಕಾಯುವುದರ ಬದಲು ಹಿತಕ್ಕೆ ಧಕ್ಕೆ ತರುವ ಇಂಥ ಅರ್ಥವ್ಯವಸ್ಥೆ ನಮಗೆ ಬೇಕೇ?

- ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಮಾದರಿ ವ್ಯಕ್ತಿತ್ವ

ದೇಶದಲ್ಲೇ ಮೊದಲ ಬಾರಿಗೆ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದ ಮತ್ತು ಲೋಕಾಯುಕ್ತ ಕಾಯಿದೆಯನ್ನು ಜಾರಿಗೆ ತಂದ ಕೀರ್ತಿ ದಿವಂಗತ ರಾಮಕೃಷ್ಣ ಹೆಗಡೆಯವರಿಗೆ ಸಲ್ಲುತ್ತದೆ. ಇವರ ಆಡಳಿತ ವೈಖರಿಯು ಕರ್ನಾಟಕಕ್ಕೆ ಮಾತ್ರವಲ್ಲದೆ ಇಡೀ ದೇಶಕ್ಕೇ ಮಾದರಿಯಾಗಿತ್ತು.

ರಾಜ್ಯದಲ್ಲಿ ಶಾಲಾ ಮಕ್ಕಳಿಗೆ ಪಠ್ಯಪುಸ್ತಕ, ಬಸ್‌ಪಾಸ್, ಸಮವಸ್ತ್ರಗಳನ್ನು ಉಚಿತವಾಗಿ ವಿತರಿಸಿದ ಹೆಗ್ಗಳಿಕೆ ಹೆಗಡೆಯವರದ್ದು. ಮಾತ್ರವಲ್ಲದೆ, ರೈತರ ಸಾಲ ಮನ್ನಾ, ವಿಧವಾ ಮಾಸಾಶನ, ಹೆರಿಗೆ ಭತ್ಯೆಯಂಥ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದು, ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೊದಲ ಬಾರಿಗೆ ಶೇ.33ರಷ್ಟು ಮೀಸಲು ಕಲ್ಪಿಸಿದ್ದು, ಪ್ರಥಮ ಬಾರಿಗೆ ಜನಸ್ಪಂದನ ಕಾರ್ಯಕ್ರಮ ಏರ್ಪಡಿಸಿದ್ದು ಹೆಗಡೆಯವರೇ.

ಬಹುತೇಕರಿಗೆ ಗೊತ್ತಿರುವಂತೆ ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ರಾಮಕೃಷ್ಣ ಹೆಗಡೆಯವರ ಗರಡಿಯಲ್ಲಿ ಬೆಳೆದವರೇ. ಹೀಗಾಗಿ ಅವರು, ಹೆಗಡೆಯವರ ಮೌಲ್ಯಾಧಾರಿತ ರಾಜಕೀಯ ಮತ್ತು ಚಿಂತನೆಗಳು ಮುಂದಿನ ಪೀಳಿಗೆಗೂ ತಿಳಿಯುವಂತಾಗಲು ವಿಶ್ವವಿದ್ಯಾಲಯವೊಂದರಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸಬೇಕು. ಜತೆಗೆ, ಶಾಲಾ ಪಠ್ಯಕ್ರಮಗಳಲ್ಲಿ ಹೆಗಡೆಯವರ ವಿಚಾರಧಾರೆಗಳನ್ನು ಅಳವಡಿಸುವ ಕುರಿತು ಕ್ರಮ ಕೈಗೊಳ್ಳಬೇಕು. ಹೀಗಾದಲ್ಲಿ ರಾಜಕಾರಣದಲ್ಲಿ ಮೌಲ್ಯಗಳು ಹೆಚ್ಚಾಗುವುದಕ್ಕೆ ಅನುವು ಮಾಡಿಕೊಟ್ಟಂತಾಗುತ್ತದೆ.

- ಶಿವರಾಜ್ ನಡಗೇರಿ, ಕಲಬುರಗಿ

ಹೂವನ್ನು ಒದರಿ ನಾರು ಸ್ವರ್ಗ ಸೇರಿದ ಕಥೆ!

ಬೂಕರ್ ಪ್ರಶಸ್ತಿ ಮತ್ತು ದಸರಾ ಉದ್ಘಾಟನೆಯ ಮಾತುಗಳು ಬದಿಗಿರಲಿ, ಈ ನಕ್ಸಲ್ ಮನಸ್ಥಿತಿಯ ಎಡ ಬರಹಗಾರರಿಗೆ ಹಿಂದೂ ಧರ್ಮ, ಧರ್ಮಗ್ರಂಥ, ದೇವರು ಯಾಕೆ ವಿಮರ್ಶೆಯ ಸರಕು? ಅದರಲ್ಲೂ ಅನ್ಯಧರ್ಮೀಯರಿಗೇಕೆ ಹಿಂದೂ ಧರ್ಮವನ್ನು ವಿಮರ್ಶಿಸುವ ಹೆಸರಿನಲ್ಲಿ ಅವಹೇಳನ ಮಾಡುವ ಚಟ?

ಪದಸಾಗರ
ನವೀನ್ ಸಾಗರ್
vveditoped@gmail.com

ಎವ್ರಿ ಡೇ ಈಸ್ ನಾಟ್ ಸಂಡೇ ಅಂತ ಯಾರು ಸ್ವಾಮಿ ಹೇಳಿದ್ದು. ಕರ್ನಾಟಕದಲ್ಲಿ ಕಳೆದ ಒಂದು ಹತ್ತು ದಿನಗಳಿಂದ ಭಾನುವಾರವೇ ಚಾಲ್ತಿಯಲ್ಲಿದೆ.. ಓಹ್ ಕ್ಷಮಿಸಿ ಇದು ಭಾನುವಾರವಲ್ಲ- ಬಾನು 'ವಾರ'! ಆದರೆ ಬಾನುವಾರಗಳು ಬಾನು'ವಾರ್' ಆಗಿ ಬದಲಾಗಿ ಯುದ್ಧ ಸದೃಶ ವಾತಾವರಣ ನಿರ್ಮಾಣವಾಗಿದೆ. ಯೆಸ್.. ಈ ಯುದ್ಧದ ಕೇಂದ್ರಬಿಂದು ಬಾನು.

ಬಾನು ಭೂಮಿಯಷ್ಟು ಅಂತರವಿರುವ ಎರಡು ಧರ್ಮಗಳ ಮಧ್ಯ ಇನ್ನಷ್ಟು ಅಂತರ ನಿರ್ಮಾಣವಾಗುವುದಕ್ಕೂ ಬಾನು ಕಾರಣವಾಗುತ್ತಿದ್ದಾರೆ. ಬಾನು ಮುಷ್ತಾಕ್ ಅವರಿಗೆ ಇದು ಬೇಕಿತ್ತಾ? ಸೈಲೆಂಟಾಗಿ ನಮ್ರತೆಯ ಮಾತನ್ನಾಡಿ ಹಿಂದೆ ಸರಿದು ಘನತೆ ಉಳಿಸಿಕೊಳ್ಳಬಹುದಿತ್ತಲ್ಲವೇ? ದಸರಾ ಉದ್ಘಾಟನೆ ಮಾಡಲೇಬೇಕೆಂದು ಅಷ್ಟೊಂದು ಆಸೆಯಾದರೂ ಯಾಕೆ? ಯಾರದ್ದೋ ಸಾಧನೆಗೆ ಅಯಾಚಿತವಾಗಿ ಹತ್ತು ಲಕ್ಷ ಹಣ ಸರಕಾರದಿಂದ ಸಿಕ್ಕಿದೆ. ಸಾಕೆಂದು ಸುಮ್ಮನಿರೋ ಬದಲು ದಸರಾ ಉದ್ಘಾಟಿಸುವ ಹುಕಿ ಏಕೆ? ನಾನಿದನ್ನು ಹುಕಿ ಅಂತಲೇ ಕರೆಯುತ್ತೇನೆ. ಯಾಕಂದರೆ ಹಿಂದೂ ಧಾರ್ಮಿಕ ನಂಬಿಕೆಗಳ ಬಗ್ಗೆ ಮನಸಲ್ಲಿ ಕಿಂಚಿತ್ತೂ ಗೌರವ ಇಲ್ಲದವರು, ಹಿಂದೂ ದೇವರನ್ನು, ಆಚರಣೆಗಳನ್ನು ಹೀಗಳೆಯುವವರು, ಇನ್ನಾವ ಸದ್ಭಾವದಿಂದ ದಸರಾ ಉದ್ಘಾಟನೆ ಮಾಡಲು ಸಾಧ್ಯ? ಸರಕಾರವೇನೋ ಮುಸಲ್ಮಾನೆ ಎಂಬ ಕಾರಣಕ್ಕೆ ಒಲೈಸುತ್ತಿದೆ ಅನ್ನೋಣ. ಆದರೆ ಮುಸಲ್ಮಾನೆ ಯಾಕೆ ಸರಕಾರವನ್ನು ಒಲೈಸುತ್ತಿರೋದು? ಭವಿಷ್ಯದಲ್ಲಿ ಮತ್ತಷ್ಟು ಲಾಭದ ನಿರೀಕ್ಷೆಯಿಂದಲಾ?

ಬಾನು ಮುಷ್ತಾಕ್ ಕನ್ನಡ ಸಾರಸ್ವತ ಲೋಕದಲ್ಲಿ ಯಾವತ್ತಿಗೂ ಜನಪ್ರಿಯ ಅಥವಾ ಸಮಾಜೋಪಯೋಗಿ ಲೇಖಕಿ ಆಗಿ ಗುರುತಿಸಿಕೊಂಡವರಲ್ಲ. ಧಾರ್ಮಿಕ ವಿಚಾರಗಳನ್ನು ಕೆಣಕುವ ಸಬ್ಜೆಕ್ಟ್‌ಗಳೇ ಅವರ ಬಹುಪಾಲು ಬರಹದ ಸರಕು. ಅವರ ಬರಹಗಳೆಲ್ಲವೂ ಅವರ ಕಾಂಟ್ರವರ್ಸಿಯಲ್ ಹೇಳಿಕೆಗಳದ್ದೇ ಇನ್ನೊಂದು ರೂಪವಷ್ಟೆ. ಅಂಥದ್ದು ಬರೆದರೂ ಪಾಪ ಅಂತಾರಾಷ್ಟ್ರೀಯ ಮಟ್ಟದಲ್ಲಿ ಲೆಫ್ಟಿಸ್ಟ್ ಮನಸುಗಳನ್ನು ಮುಟ್ಟಲು ಸಾಧ್ಯವಾಗಿರಲಿಲ್ಲ ಬಾನು ಮುಷ್ತಾಕ್ ಅವರಿಗೆ. ಕಾರಣ ಅವು ಇಂಗ್ಲಿಷ್‌ನಲ್ಲಿರಲಿಲ್ಲ. ಆದರೆ ದೀಪಾ ಭಸ್ತಿ ಅವರು 'ಹಾರ್ಟ್ ಲ್ಯಾಂಪ್' ಹೆಸರಿನಲ್ಲಿ ಮಾಡಿದ ಇಂಗ್ಲಿಷ್ ಅನುವಾದ ಲೆಫ್ಟಿಸ್ಟ್ ಅವಾರ್ಡ್ ಎಂದೇ ಖ್ಯಾತವಾದ ಬೂಕರ್ ಪ್ರಶಸ್ತಿ ಪ್ಯಾನೆಲ್‌ಗೆ ಕಾಣಿಸಿದ್ದೇ ತಡ ಅವಾರ್ಡ್ ಅನೌನ್ಸ್ ಆಗಿಯೇಬಿಟ್ಟಿತ್ತು.

ಒರಿಜಿನಲ್ಲು ರಾಜ್ಯಮಟ್ಟದಲ್ಲೂ ಅವಾರ್ಡ್ ಪಡೆಯಲು ಯೋಗ್ಯವಿಲ್ಲದೇ ಮೂಲೆ ಸೇರಿತ್ತು. ಆದರೆ ಅದರ ಅನುವಾದಕ್ಕೆ ಬೂಕರ್ ಸಿಕ್ಕಿಬಿಟ್ಟಿತು. ಅದರರ್ಥ ಏನು? ದೀಪಾ ಭಸ್ತಿಗೆ ಬೂಕರ್ ಅವಾರ್ಡ್ ಸಿಕ್ಕಿದ್ದು ಕಷ್ಟಪಟ್ಟು ಅನುವಾದಿಸಿ, ಮೂಲಕೃತಿಗಿಂತ ಬೆಟರ್ ಅನಿಸುವಂತೆ ಬರೆದದ್ದಕ್ಕೋ, ಅಥವಾ ಬಾನು ಮುಷ್ತಾಕ್ ಎಂಬ ಲೆಫ್ಟಿಸ್ಟ್ ಮನಸ್ಥಿತಿಯ ಮುಸಲ್ಮಾನ ಲೇಖಕಿಯ ಪುಸ್ತಕವನ್ನು ಅನುವಾದಿಸಿದ್ದಕ್ಕೋ ಬಲ್ಲವರೇ ಹೇಳಬೇಕು.

ಆಯ್ತು. ಅನುವಾದಕ್ಕೆ ಬೂಕರ್ ಪ್ರಶಸ್ತಿ ಬಂತು. ಸಂತೋಷ. ಕನ್ನಡ ಮೂಲದ ಲೇಖಕಿ ಬರೆದ ಇಂಗ್ಲಿಷ್ ಪುಸ್ತಕಕ್ಕೆ ವಿದೇಶಿ ಪ್ರಶಸ್ತಿಯೊಂದು ಬಂದಿದೆ. ಸಂತೋಷ. ಆದರೆ ಬೂಕರ್ ಪ್ರಶಸ್ತಿ ಪಡೆಯುವುದು ಹೆಮ್ಮೆಯ ವಿಚಾರ ಯಾಕೆ? ಸಿನಿಮಾದಲ್ಲಿ ಆಸ್ಕರ್ ಥರವೇ ಪುಸ್ತಕದಲ್ಲಿ ಬೂಕರ್. ಅಷ್ಟೇ. ಈ ಪ್ರಶಸ್ತಿಗಳನ್ನು ಸರ್ವಶ್ರೇಷ್ಠ ಎಂದೇಕೆ ತಲೆಮೇಲೆ ಹೊತ್ತು ಮೆರೆಸುತ್ತಿರುವುದು? ಬೂಕರ್ ಪ್ರಶಸ್ತಿ ಗೆದ್ದದ್ದು ದೀಪಾ ಭಸ್ತಿ. ಬಾನು ಮುಷ್ತಾಕ್ ಮೂಲಕೃತಿ ತಮ್ಮದು ಅಂತ ಖುಷಿಪಡಬಹುದೇ ಹೊರತು, ತಾವು ಪ್ರಶಸ್ತಿ ವಿಜೇತರಲ್ಲ ಎಂದು ಅವರಿಗೆ ಗೊತ್ತಿರಬೇಕು. ಆದರೆ ಪ್ರಶಸ್ತಿಯ ಪಾಲುದಾರೆ ಅಥವಾ ಪ್ರಮುಖ ಹಕ್ಕು ತಮ್ಮದೇ ಎಂಬಂತೆ ಮೈಲೇಜ್ ಗಿಟ್ಟಿಸುತ್ತಿರುವುದು ಅತಿ ದೊಡ್ಡ ಅಸಹ್ಯ. ಕಡೆಯ ಪಕ್ಷ ನಾವು ಜಂಟಿಯಾಗಿ ಉದ್ಘಾಟಿಸುತ್ತೇವೆ ಎಂಬ ಸೌಜನ್ಯದ ಪ್ರತಿಕ್ರಿಯೆಯೂ ಬಾನು ಅವರಿಂದ ಬರಲಿಲ್ಲ. ಹೂವಿನ ಜತೆ ನಾರು ಸ್ವರ್ಗ ಸೇರುವುದು ನೋಡಿದ್ದೇವೆ. ಹೂವನ್ನೇ ಒದರಿ ನಾರು ಸ್ವರ್ಗ ಸೇರುವುದನ್ನು ಬಾನು ಮುಷ್ತಾಕ್ ತೋರಿಸಿದ್ದಾರೆ. ಮಗ ಪರೀಕ್ಷೆಯಲ್ಲಿ ಪಾಸ್ ಆದರೆ, ಹುಟ್ಟೋಕೆ ಕಾರಣ ಆದವರು ಎಂದು, ಅಪ್ಪನಿಗೆ ಸರ್ಟಿಫಿಕೇಟ್ ಕೊಟ್ಟ ಹಾಗಾಗಿದೆ.

ಇನ್ನು ಸರಕಾರದ ವಿವೇಚನೆ ಬಗ್ಗೆ ಮಾತನಾಡುವುದೇ ವ್ಯರ್ಥ. ಇದು ವಿವಾದವಾಗುತ್ತದೆ ಎಂದು ಗೊತ್ತಿದ್ದರೂ, ವಿವಾದ ಆಗಬೇಕು ಎಂಬ ಆಸೆ ಇಟ್ಟುಕೊಂಡೇ ತೆಗೆದುಕೊಂಡ ನಿರ್ಧಾರ ಇದು. ಮುಖ್ಯಮಂತ್ರಿಗಳ ಹೇಳಿಕೆ ಗಮನಿಸಿದೆ. ಬೂಕರ್ ಗೆದ್ದಿದ್ದಕ್ಕೆ, ನಾವು ದೀಪಾ ಭಸ್ತಿಯವರಿಗೂ ಬಾನು ಮುಷ್ತಾಕ್ ಅವರಿಗೂ ತಲಾ ಹತ್ತು ಲಕ್ಷ ನೀಡಿದ್ದೇವೆ. ಯಾಕೆ ನೀಡಿದಿರಿ ಅಂತ ಕೇಳಬೇಕಲ್ಲ ಈಗ. ಬೂಕರ್ ಸಂಸ್ಥೆ ಅನುವಾದಕಿಗೆ ಪ್ರಶಸ್ತಿ ಜತೆ ಹಣ ನೀಡಿದ್ದಾಗಿದೆ. ಇಲ್ಲಿ ಆ ಸಂತೋಷಕ್ಕೆ ಒಂದು ಸನ್ಮಾನ ಸಾಕಿತ್ತಲ್ಲವೇ? ಈ ಔದಾರ್ಯ ಏಕೆ? ಸರಿ ದೀಪಾ ಭಸ್ತಿಗೆ ಹಣದ ಗೌರವ ಕೊಟ್ಟದ್ದು ಓಕೆ ಅನ್ನೋಣ. ಬಾನು ಮುಷ್ತಾಕ್‌ಗೆ ಹತ್ತು ಲಕ್ಷ ಕೊಡುವ ಅಗತ್ಯವೇನಿತ್ತು? ಇಷ್ಟಕ್ಕೂ ಯಾರ ಹಣ ಇದು ಈ ರೀತಿ ದಾನ ಮಾಡೋದಕ್ಕೆ? ಸರಿ ಇಬ್ಬರಿಗೂ ಹತ್ತು ಲಕ್ಷ ಕೊಟ್ಟಾಯ್ತು. ಸನ್ಮಾನವೂ ಆಯ್ತು. ಅಲ್ಲಿಗೆ ಮುಗಿಯಬೇಕಿತ್ತಲ್ವಾ ಸಂಭ್ರಮ? ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಆಯ್ಕೆ ಮಾಡಿದ್ದೇಕೆ? ದೀಪಾ ಭಸ್ತಿಯನ್ನು ಸೈಡಿಗಿಟ್ಟಿದ್ದೇಕೆ? ಎರಡು ವರ್ಷಗಳ ಹಿಂದೆ ಹಿಂದೂ ಧರ್ಮದ ಮತ್ತು ಸ್ವಾಮಿಗಳ ಅವಹೇಳನ ಮಾಡಿದ್ದಕ್ಕೆ ಹಂಸಲೇಖ ಅವರಿಗೆ ದಸರಾ ಉದ್ಘಾಟಿಸುವ ಅವಕಾಶ ನೀಡಲಾಯಿತು. ಈಗ ಬಾನು ಮುಷ್ತಾಕ್‌ಗೆ ಆಹ್ವಾನ. ಇಲ್ಲಿ ಯಾವ ಸಂದೇಶ ರವಾನೆ ಆಗ್ತಾ ಇದೆ. ಹಿಂದೂ ಧರ್ಮವನ್ನು ಟೀಕಿಸಿ, ನಿಂದಿಸಿ, ಅಪಹಾಸ್ಯ ಮಾಡಿ. ನಾವು ನಿಮ್ಮನ್ನು ಸನ್ಮಾನಿಸುತ್ತೇವೆ ಅಂತಲಾ?

ಇಲ್ಲಿ ಬಾನು ಮುಷ್ತಾಕ್ ಕೇವಲ ಹಿಂದೂ ಧಾರ್ಮಿಕ ಭಾವನೆಗೆ ಮಾತ್ರ ಧಕ್ಕೆ ತಂದಿರುವುದಲ್ಲ, ನಾಡದೇವಿ ಭುವನೇಶ್ವರಿ ಕುರಿತಾಗಿ ವಿರೋಧಿ ಹೇಳಿಕೆ ನೀಡುವ ಮೂಲಕ ಕನ್ನಡವನ್ನೂ ಅವಮಾನಿಸಿದ್ದಾರೆ.

ಹಿಂದೂ ಧರ್ಮ ಮತ್ತು ನಾಡದೇವಿಯ ಬಗ್ಗೆ ಗೌರವವಿಲ್ಲದವರಿಂದ ನಾಡಹಬ್ಬದ ಉದ್ಘಾಟನೆ ಎಂಬುದು ವ್ಯಂಗ್ಯದ ಪರಮಾವಧಿ ಅಲ್ಲವೇ? ಸರಕಾರದ ಪ್ರಕಾರ ನಾಡಹಬ್ಬ ಒಂದು ಸೆಕ್ಯುಲರ್ ಹಬ್ಬ. ಯಾವ ಲಾಜಿಕ್ ಪ್ರಕಾರ ಇದು ಸೆಕ್ಯುಲರ್ ಹಬ್ಬ? ಯಾವ ಮುಸಲ್ಮಾನ ಕ್ರೈಸ್ತರ ಮನೆಯಲ್ಲಿ ನವರಾತ್ರಿ ಆಚರಣೆ ನಡೆಯುತ್ತದೆ ತೋರಿಸಿಬಿಡಲಿ. ನವರಾತ್ರಿಯ ಯಾವ ಪೂಜೆಗಳಲ್ಲಿ ಮುಸಲ್ಮಾನರು ಇನ್ನಿತರ ಧರ್ಮದವರು ಬಂದು ಭಾಗವಹಿಸಿ ಪೂಜೆ ಪುನಸ್ಕಾರಗಳನ್ನು ಮಾಡುತ್ತಾರೆ? ಒಂಬತ್ತು ದಿನ ಒಂಬತ್ತು ದೇವಿಯ ಪೂಜೆ ನಡೆಸುವ ನವರಾತ್ರಿ, ಮಹಾಭಾರತದ ಪೌರಾಣಿಕ ಇತಿಹಾಸ ಇರುವ ವಿಜಯದಶಮಿ ಅದ್ಯಾವಾಗ ಸೆಕ್ಯುಲರ್ ಹಬ್ಬವಾಗಿಬಿಟ್ಟಿತು? ಶಾಲೆಯಲ್ಲಿ ದಸರಾ ಸಮಯದಲ್ಲಿ ನಡೆಸುವ ಶಾರದಾ ಪೂಜೆಯನ್ನು ನಿಲ್ಲಿಸಲು ಹೊರಟಿತ್ತು ಇದೇ ಸರಕಾರ. ಕಾರಣ ಸೆಕ್ಯುಲರಿಸಂ ಅಮಲು. ಬಿಜೆಪಿ ಸರಕಾರ ಇದ್ದಾಗ, ಚಾಮುಂಡಿ ಪೂಜೆ, ದಸರಾ ಇವೆಲ್ಲ ಕೋಮುವಾದಿ ಹಬ್ಬವಾಗಿತ್ತು. ಮಹಿಷ ದಸರಾ ಎಂಬ ಅನಿಷ್ಟದ ಆಚರಣೆಗೆ ಬೆಂಬಲವಾಗಿ ನಿಂತು ದಸರಾ ಮತ್ತು ಚಾಮುಂಡೇಶ್ವರಿಯನ್ನು ವಿರೋಧಿಸುತ್ತಿತ್ತು ಇದೇ ಬಣ. ಅಂದರೆ ದಸರಾ ಅನ್ನೋದು ತಮಗೆ ಬೇಕಾದಾಗ ಸೆಕ್ಯುಲರ್ ಮತ್ತು ಕೋಮುವಾದಿ ಹಬ್ಬವಾಗಿ ಬದಲಾಗುವ ಆಚರಣೆಯಾ?

ಸರಕಾರ ಹೇಳುವ ಹಾಗೆ ಹೈದರ್ ಟಿಪ್ಪೂ ಕಾಲದಲ್ಲೂ ದಸರಾ ಆಚರಣೆ ಇತ್ತು ನಿಜ. ಆದರೆ ಅದು ಹಿಂದೂಗಳಿಂದ ಆಚರಿಸಲ್ಪಡುತ್ತಿತ್ತು. ಆ ಲೆಕ್ಕದಲ್ಲಿ ಇಂದಿನ ಪರಿಸ್ಥಿತಿ ಟಿಪ್ಪೂ ಕಾಲಕ್ಕಿಂತ ಹೀನ ಅನಿಸುತ್ತಿಲ್ಲವೇ?

ಹಿಂದೂಗಳು ಧರ್ಮಾಂಧರಲ್ಲ, ಮುಸಲ್ಮಾನ ದ್ವೇಷಿಗಳೂ ಅಲ್ಲ. ದಸರಾ ಹಬ್ಬವನ್ನು ಒಬ್ಬ ಘನತೆವೆತ್ತ ಮುಸ್ಲಿಂ ಮಹಿಳೆ ಉದ್ಘಾಟಿಸಿದ್ದರೆ ಅದನ್ನು ಯಾವ ಹಿಂದೂ ಕೂಡ ವಿರೋಧಿಸುತ್ತಿರಲಿಲ್ಲ. ಹಾಗಿದ್ದಿದ್ದರೆ ಕವಿ ಪ್ರೊಫೆಸರ್ ನಿಸಾರ್ ಅಹಮದ್ ಅವರು ಆಯ್ಕೆಯಾದಾಗಲೂ ವಿರೋಧ್ಯ ವ್ಯಕ್ತ ಆಗಿರುತ್ತಿತ್ತು. ನಿಸಾರ್ ಅಹಮದ್ ಯಾವತ್ತಿಗೂ ಭಾರತೀಯತೆ ಸಾರಿದರು. ಕನ್ನಡಪ್ರೇಮ ತೋರಿದರು. ಬಹುಸಂಖ್ಯಾತ ಹಿಂದೂಗಳ ಧಾರ್ಮಿಕ ಭಾವಕ್ಕೆ ಎಂದೂ ಧಕ್ಕೆ ತರಲಿಲ್ಲ. ಅಂಥ ವ್ಯಕ್ತಿ ದೇವರ ಗರ್ಭಗುಡಿ ಹೊಕ್ಕರೂ ಹಿಂದೂಧರ್ಮ ಸಹಿಸುತ್ತದೆ. ಆದರೆ ದೇವರ ಅಸ್ತಿತ್ವವನ್ನೇ ಪ್ರಶ್ನಿಸೋ, ಹೆಜ್ಜೆ ಹೆಜ್ಜೆಗೂ ಹಿಂದೂ ಧರ್ಮದ ಆಚರಣೆಗಳನ್ನು ಟೀಕಿಸೋ ವ್ಯಕ್ತಿಗೆ ಈ ಗೌರವ ಯಾಕೆ?

ಇನ್ನು ಹಲವರ ಸವಾಲಿನಂತೆ ಬಾನು ಮುಷ್ತಾಕ್ ಕಟ್ಟರ್ ಹಿಂದೂ ಧರ್ಮೀಯರಂತೆ ದಿರಿಸು ಧರಿಸಿ ಹಿಂದೂ ಆಚರಣೆಯಂತೆ ಪೂಜೆ ಮಾಡಲು ತಯಾರಿದ್ದಾರಾ? ಇಲ್ಲ. ಹಾಗೆ ಮಾಡಲು ಅವರ ಧರ್ಮ ಬಿಡುವುದಿಲ್ಲ. ಈಗಲೇ ಫತ್ವಾ ಹೊರಡಿಸುವ ಮಾತು ಬರುತ್ತಿದೆ. ಮುಸಲ್ಮಾನ ನಾಯಕರು ಉಗ್ರವಾಗಿ ಮಾತನಾಡುತ್ತಿದ್ದಾರೆ. ಪೂಜೆ ಮಾಡಿದ್ರೆ ಹರಾಮ್, ಕಾಫಿರರು ಅಂತೆಲ್ಲ ಹೇಳುತ್ತಿದ್ದಾರೆ. ತನ್ನ ಧರ್ಮದ ಎದುರು ಸೆಡ್ಡು ಹೊಡೆದು ನಿಲ್ಲಲು ಬಾನು ಮುಷ್ತಾಕ್‌ಗೆ ಸಾಧ್ಯ ಇದೆಯಾ? ಇಲ್ಲ. ಹೀಗಿರುವಾಗ ಉದ್ಘಾಟನೆಯ ಅವಕಾಶ ಉಳಿಸಿಕೊಳ್ಳೋಕೆ ಬಣ್ಣದ ಮಾತುಗಳನ್ಯಾಕೆ ಆಡುತ್ತಿದ್ದಾರೆ?

ಬೂಕರ್ ಪ್ರಶಸ್ತಿ ಮತ್ತು ದಸರಾ ಉದ್ಘಾಟನೆಯ ಮಾತುಗಳು ಬದಿಗಿರಲಿ, ಈ ನಕ್ಸಲ್ ಮನಸ್ಥಿತಿಯ ಎಡ ಬರಹಗಾರರಿಗೆ ಹಿಂದೂ ಧರ್ಮ, ಧರ್ಮಗ್ರಂಥ, ದೇವರು ಯಾಕೆ ವಿಮರ್ಶೆಯ ಸರಕು? ಅದರಲ್ಲೂ ಅನ್ಯಧರ್ಮೀಯರಿಗೇಕೆ ಹಿಂದೂ ಧರ್ಮವನ್ನು ವಿಮರ್ಶಿಸುವ ಹೆಸರಿನಲ್ಲಿ ಅವಹೇಳನ ಮಾಡುವ ಚಟ? ಅನ್ಯಧರ್ಮದ ಕುರಿತಾಗಿ ಅದೊಮ್ಮೆ ಅಜಿತ್ ಹನುಮಕ್ಕನವರ್ ಮಾತನಾಡಿದ್ದಕ್ಕೆ ಏನೆಲ್ಲ ಅನುಭವಿಸುವಂತಾಯ್ತು. ಆದರೆ ಹಿಂದೂ ಧರ್ಮವನ್ನು ನಿಂದಿಸಿ ಯಾರು ಬೇಕಾದರೂ ಜಯಿಸಿಕೊಳ್ಳಬಹುದು. ಇದೇ ಅಲ್ವಾ ಸರಕಾರ ನೀಡುತ್ತಿರುವ ಸಂದೇಶ?

ಈಗಲೂ ಸಮಯ ಇದೆ. ಬಾನು ಮುಷ್ತಾಕ್ ಈ ಆಹ್ವಾನವನ್ನು ತಿರಸ್ಕರಿಸಲಿ. ಹಿಂದೆ ಸರಿಯುವುದರಿಂದ ಕಳೆದುಕೊಂಡಿರುವ ಮರ್ಯಾದೆಯೇನೂ ಮರಳಿ ಸಿಗುವುದಿಲ್ಲ. ಆದರೆ ಸರಕಾರಕ್ಕೆ ಪರೋಕ್ಷವಾಗಿ ಸಹಾಯ ಮಾಡಿದಂತಾಗುತ್ತದೆ. ಜತೆಗೆ ಈ ಬಾರಿಯ ದಸರಾ ಹಬ್ಬಕ್ಕೆ ತಟ್ಟುವ ಮೈಲಿಗೆ ತಪ್ಪಿದಂತಾಗುತ್ತದೆ. ನಾಡಹಬ್ಬ ಅರ್ಥಪೂರ್ಣವೂ ಅನಿಸುತ್ತದೆ.

ಸರಕಾರಕ್ಕೆ ಒಂದು ಮನವಿ. ಹಿಂದೂ ಧರ್ಮಕ್ಕೆ ಹೆಮ್ಮೆ ತರುವ ಹಾಗೂ ಕರ್ನಾಟಕಕ್ಕೆ ರಾಷ್ಟ್ರಪ್ರಶಸ್ತಿ ತಂದುಕೊಟ್ಟ 'ಕಾಂತಾರ' ಚಿತ್ರದ ನಟ-ನಿರ್ದೇಶಕ ರಿಷಭ್ ಶೆಟ್ಟಿ ನಮ್ಮ ಆಯ್ಕೆಯಾಗಿ ಇದ್ದಾರೆ. ಪದ್ಮಭೂಷಣ ಗೌರವಕ್ಕೆ ಪಾತ್ರರಾದ ಹಿರಿಯ ನಟ ಅನಂತ್ ನಾಗ್ ಇದ್ದಾರೆ. ಕಾಂಟ್ರವರ್ಸಿಗಳಿಂದ ದೂರ ಇರುವ ಆದರೆ ರಾಜ್ಯಕ್ಕೆ ಹೆಮ್ಮೆ ತಂದ ಹತ್ತು ಹಲವಾರು ವ್ಯಕ್ತಿಗಳು ಇಲ್ಲಿದ್ದಾರೆ. ಅವರಲ್ಲಿ ಯಾರನ್ನಾದರೂ ಬದಲಿ ಆಯ್ಕೆ ಮಾಡಿ ಸರಕಾರ ಬಹುಸಂಖ್ಯಾತರ ಭಾವನೆಗಳನ್ನು ಗೌರವಿಸಲಿ. ದಸರಾ ನಾಡಹಬ್ಬವೇ ಹೌದು. ಆದರೆ ಹಿಂದೂಗಳ ಹಬ್ಬವನ್ನು ನಾಡಹಬ್ಬವಾಗಿಸಲಾಗಿದೆ ಎಂಬುದು ನೆನಪಿರಲಿ. ರಂಜಾನ್ ಹಬ್ಬವನ್ನು ನಾಡಹಬ್ಬ ಆಗಿಸಲು ಸಾಧ್ಯವಿಲ್ಲ. ಸೆಕ್ಯುಲರೈಸ್ ಮಾಡಲಾಗುವುದಿಲ್ಲ ಎಂಬ ವಾಸ್ತವವನ್ನು ಸರಕಾರ ಗಮನಿಸಿದಲ್ಲಿ, ದಸರಾ ಹಬ್ಬವನ್ನು ಸೆಕ್ಯುಲರೈಸ್ ಮಾಡುವ ದುರಾಲೋಚನೆಗೆ ಇಳಿಯುವುದಿಲ್ಲ.

ಭಟ್ಟರ್ ಸ್ಕಾಚ್

- **ಶ್ರೀಧರಮೂರ್ತಿ ಸಿ., ಗೋಕರ್ಣ**
ಭಟ್ರೇ, ಮನುಷ್ಯನ ಆಸೆಗೆ ಮಿತಿಯೇ ಇಲ್ಲವಲ್ಲ?
– **ಆಸೆಯನ್ನು ಮಿತಿಗೊಳಿಸಿ ಏನನ್ನು ಸಾಧಿಸುತ್ತೀರಿ?**

- **ಅಶೋಕ ಬ್ಯಾಡಗಿ, ಹಾವೇರಿ**
ಭಟ್ರೇ, ಮೀನು ಶಾಲೆಗೆ ಹೋಗುವುದಿಲ್ಲವಲ್ಲ, ಕಾರಣವೇನಿರಬಹುದು?
– **ಅಲ್ಲಿ 'ನೆಟ್' ಹಾಕಿದ್ರೇ ಸಿಕ್ಕಿಬೀಳಬೇಕಾಗುತ್ತದಲ್ಲ?!**

- **ರಘು ಮೆಣಸಿ, (ಇಮೇಲ್ ಮೂಲಕ)**
ಭಟ್ರೇ, ಕಾಫಿ ಸದಾ ಖುಷಿಖುಷಿಯಾಗಿ ಇರುತ್ತದಲ್ಲ, ಏಕೆ?
– **ಅದಕ್ಕೆ 'ಫಿಲ್ಟರ್' ಮಾಡೋ ಚಿಂತೆ ಇಲ್ಲ!**

- **ವಿನುತಾ ಹೆಗಡೆ, ಸಿದ್ದಾಪುರ**
ಭಟ್ರೇ, ಕಂಪ್ಯೂಟರುಗಳು ಚಳಿಗಾಲದಲ್ಲಿ ನಡುಗುತ್ತವೆ ಅಂತ ಕೇಳಿದ್ದೇನೆ, ನಿಜವಾ?
– **ಹೂಂ .. ಅದರ 'ವಿಂಡೋಸ್' ತೆರೆದಿರುತ್ತದಲ್ಲ?!**

- **ಸುನಯನಾ ವಿಶ್ವಾಸ, ಬೆಂಗಳೂರು**
ಭಟ್ರೇ, ಮೊಟ್ಟೆ ಯಾಕೆ ಹುಚ್ಚನ ಥರ ವರ್ತಿಸುತ್ತದೆ?
– **ಹೂಂ.. ಅದಕ್ಕೆ ತಾನು ಕ್ರ್ಯಾಕ್ ಆಗಿಬಿಟ್ಟರೆ ಎಂಬ ಭಯವಿದ್ದಿರಬಹುದು!**

- **ವೆಂಕಟೇಶ ಹಡಗಲಿ, ಮಾನ್ವಿ**
ಭಟ್ರೇ, ಹಾಲು ಸದಾ ಸಿಟ್ಟಿನಲ್ಲಿಯೇ ಇರುವುದೇಕೆ?
– **ತನ್ನನ್ನು ಯಾರೋ ಬಂದು ಕುದಿಸಿಬಿಡಬಹುದು ಎಂಬ ಆತಂಕ!**

- **ಸೀಮಾ, ಬೆಂಗಳೂರು**
ಭಟ್ರೇ, ಚಂದ್ರನೇಕೆ ತನ್ನ ಸೆಲ್ಫಿಯನ್ನು ತೆಗೆದುಕೊಳ್ಳುವುದಿಲ್ಲ?
– **ಏಕೆಂದರೆ ಆತನ 'ಫೇಸ್' ಯಾವಾಗಲೂ ಒಂದೇ ರೀತಿ ಇರುತ್ತದಲ್ಲ?!**

- **ನಿರಂಜನ ಮಟ್ಟಿ, ಬೆಂಗಳೂರು**
ಭಟ್ರೇ, ಬಸ್ ಜಿಮ್‌ಗೆ ಹೋಗೋದಿಲ್ಲ ಅಂತಾರಲ್ಲ, ಏಕಿರಬಹುದು?
– **ಅದಕ್ಕೆ ಈಗಾಗಲೇ 'ಬಾಡಿ ಬಿಲ್ಡಿಂಗ್' ಆಗಿರುತ್ತದಲ್ಲ?!**

- **ನವೀನ ನಡುಮನಿ, ಹುಬ್ಬಳ್ಳಿ**
ಭಟ್ರೇ, ರೈಲು ಯಾಕೆ ತುಂಬಾ ಸುಂದರವಾಗಿ ಹಾಡುತ್ತದೆ?
– **ಏಕೆಂದರೆ ಅದಕ್ಕೆ ಯಾವಾಗಲೂ 'ಟ್ರ್ಯಾಕ್' ಸಪೋರ್ಟ್ ಇರುತ್ತದೆ!**

ಇದು ಜಾಗತಿಕ ಯಜಮಾನಿಕೆ ಬದಲಾಗುವ ಸಮಯ!

ಚೀನಾ ಮತ್ತು ಭಾರತ ಎರಡೂ ಒಂದಾಗುವುದು ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ ಎನ್ನುವಂತಿತ್ತು. ಟ್ರಂಪ್ ಯಾವಾಗ ಭಾರತದ ಮೇಲೆ ಹೆಚ್ಚಿನ ಸುಂಕ ವಿಧಿಸಿದರೋ ಆಗ ಚೀನಾ ಭಾರತದ ಪರವಾಗಿ ನಿಂತಿತು. 'ಬೀಜಿಂಗ್ ನವದೆಹಲಿಯ ಜತೆಯಿದೆ' ಎನ್ನುವ ಅಧಿಕೃತ ಹೇಳಿಕೆಯನ್ನೂ ನೀಡುತ್ತದೆ. ಗಡಿ ತಗಾದೆಗಳನ್ನು ನಾವು ಬಗೆ ಹರಿಸಿಕೊಳ್ಳಬಹುದು ಎನ್ನುವಷ್ಟರ ಮಟ್ಟಿಗೆ ಚೀನಾ ಭಾರತದ ಬಗ್ಗೆ ಮೃದುಧೋರಣೆ ತಾಳಿದೆ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ನಮ್ಮಲ್ಲಿ ಒಂದು ಆಡುಮಾತಿದೆ- ''ಮಾತು ಆಡಿದರೆ ಹೋಯ್ತು, ಮುತ್ತು ಒಡೆದರೆ ಹೋಯ್ತು'' ಎನ್ನುವುದು ಆ ಮಾತು. ಇದರರ್ಥ ಬಹಳ ಸರಳ. ಮಾತನಾಡುವ ಮುಂಚೆ ಬಹಳಷ್ಟು ಎಚ್ಚರಿಕೆಯಿಂದ ಇರಬೇಕು. ಆಡುವ ಮಾತು ಯಾವ ಪರಿಣಾಮವನ್ನು ಬೀರಬಲ್ಲದು ಎನ್ನುವುದರ ಅರಿವಿರಬೇಕು. ಯಾವಾಗ, ಎಲ್ಲಿ ಮತ್ತು ಎಷ್ಟು ಮಾತಾಡಬೇಕು ಎನ್ನುವುದರ ಪ್ರಜ್ಞೆ ಇರಬೇಕು. ಇದು ಎಲ್ಲರಲ್ಲೂ ಇರಬೇಕಾದದ್ದು. ಅದರಲ್ಲೂ ಒಂದು ದೇಶದ ಪ್ರೆಸಿಡೆಂಟ್ ಆದವರು, ರಾಜತಾಂತ್ರಿಕ ವರ್ಗದವರು ಮತ್ತು ಸಮಾಜದಲ್ಲಿ ಉನ್ನತ ಸ್ಥಾನದಲ್ಲಿರುವ, ಸಮಾಜದ ಬಹುಜನರನ್ನು ಪ್ರೇರೇಪಿಸಬಲ್ಲ ವ್ಯಕ್ತಿಗಳು ಇನ್ನೂ ಹೆಚ್ಚು ಜಾಗೃತರಾಗಿರುವ ಅವಶ್ಯಕತೆಯಿದೆ. ಅವರಾಡುವ ಒಂದೊಂದು ಮಾತುಗಳೂ ರೆಕಾರ್ಡ್ ಆಗುತ್ತವೆ. ಅವು ಚರಿತ್ರೆಯ ಪುಟಗಳಲ್ಲಿ ದಾಖಲಾಗುತ್ತವೆ. ಮಾತುಗಳಿಗೆ ಒಂದು ದೇಶ, ಜನಾಂಗವನ್ನು ಒಡೆಯುವ ಮತ್ತು ಒಗ್ಗೂಡಿಸುವ ಶಕ್ತಿಯಿದೆ.

ಮಾತು ಮನಸ್ಸಿನ ಮೂರ್ತರೂಪ ಎನ್ನುತ್ತಾರೆ. ಅಂದರೆ ಮನಸ್ಸಿನಲ್ಲಿದ್ದ ಭಾವನೆಗಳು ಮಾತಿನ ರೂಪದಲ್ಲಿ ಹೊರಬರುತ್ತವೆ. ಮನಸ್ಸಿನಲ್ಲಿರುವ ಮಾತುಗಳನ್ನು ನಾಗರಿಕ ಸಮಾಜದಲ್ಲಿ ಪೂರ್ಣ ಹೇಳಲಾಗದು. ಹೀಗಾಗಿ ಅಳೆದು ತೂಗಿ ಮಾತನಾಡುವುದು, ಸಭ್ಯತೆ ಮೀರಿ ಮಾತನಾಡದೆ ಇರುವುದು ಮತ್ತು ನಮ್ಮಲ್ಲಿ ಅಭಿಪ್ರಾಯ ಭೇದವಿದ್ದಾಗ ಕೂಡ ಅದನ್ನು ಸಭ್ಯತೆಯಿಂದ ಹೇಳುವುದು ಸಂಸ್ಕಾರ ಎನ್ನಿಸಿಕೊಂಡಿದೆ. ಮೊದಲೇ ಹೇಳಿದಂತೆ ಇದು ಎಲ್ಲಾ ಪ್ರಜೆಗಳಿಗೂ ಅನ್ವಯ. ಅದರಲ್ಲೂ ಆಯಕಟ್ಟಿನ ಜಾಗದಲ್ಲಿ ಕುಳಿತ ಮಂದಿ ಮೈಯೆಲ್ಲಾ ಕಣ್ಣಾಗಿರಬೇಕು, ಕಿವಿಯಾಗಿರಬೇಕು. ಮಾತನಾಡುವ ಮುನ್ನ ಸಾವಿರ ಬಾರಿ ಯೋಚಿಸಬೇಕು. ಅದಕ್ಕೇ ಇರಬೇಕು ನಮ್ಮ ಹಿರಿಯರು 'ಮಾತು ಬೆಳ್ಳಿ, ಮೌನ ಬಂಗಾರ' ಎಂದದ್ದು!

ಇವತ್ತಿನ ದಿನದಲ್ಲಿ ಅತ್ಯುತ್ತಮ ಮಾತುಗಾರರು ಕೇವಲ ತಮ್ಮ ಮಾತುಗಳಿಂದ ಬದುಕನ್ನು ಕಟ್ಟಿಕೊಂಡಿದ್ದಾರೆ. ಕೋಟಿಗಟ್ಟಲೆ ಹಣವನ್ನು ಸಂಪಾದಿಸಿದ್ದಾರೆ. ಅವರ ಯಶಸ್ಸಿಗೆ ಕಾರಣ ಟೈಮಿಂಗ್. ಸರಿಯಾದ ಸಮಯದಲ್ಲಿ ಸರಿಯಾದ ಮಾತುಗಳು ಅವರನ್ನು ಬದುಕಿನ ಉತ್ತುಂಗಕ್ಕೆ ಕರೆದೊಯ್ದಿವೆ. ಚೆನ್ನಾಗಿ ಮಾತನಾಡುವುದು ಒಂದು ಕಲೆಯಾದರೆ, ಎಲ್ಲಿ ಮೌನವಾಗಿರಬೇಕು ಎನ್ನುವುದು ಮತ್ತು ಎಷ್ಟು ಮಾತಾಡಬೇಕು ಎನ್ನುವುದು ಅದಕ್ಕಿಂತ ದೊಡ್ಡ ಕೌಶಲ.

ಇಷ್ಟೆಲ್ಲಾ ಪೀಠಿಕೆ ಹಾಕಲು ಕಾರಣ, ನಿಮಗೆಲ್ಲಾ ಗೊತ್ತಿರುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದ ಬಗ್ಗೆ ತಮ್ಮ ನಾಲಗೆಯನ್ನು ಹರಿಬಿಟ್ಟಿರುವುದು. ಮಾತಿನ ಭರದಲ್ಲಿ ಆತ ಭಾರತವನ್ನು 'ಡೆಡ್ ಇಕಾನಮಿ' ಎಂದರು. ಪಾಕಿಸ್ತಾನದ ಜತೆಗೆ ಹೆಚ್ಚಿನ ಪ್ರೀತಿ ತೋರಿದರು. ಸಾಲದ್ದಕ್ಕೆ ''ಪಾಕಿಸ್ತಾನ ಒಂದು ದಿನ ತೈಲವನ್ನು ಮಾರುವ ಸ್ಥಿತಿಗೆ ಬರುತ್ತದೆ. ಯಾರಿಗೆ ಗೊತ್ತು ಭಾರತ ಕೂಡ ಆ ತೈಲವನ್ನು ಕೊಳ್ಳಬಹುದು'' ಎನ್ನುವ ಮಾತನ್ನು ಆಡಿದರು. ಹೆಚ್ಚಿನ ಸುಂಕ ವಿಧಿಸಿದರು. ತಾವು ಹೇಳಿದಂತೆ ಕೇಳದಿದ್ದರೆ ಇನ್ನಷ್ಟು ಸ್ಯಾಂಕ್ಷನ್ಸ್ ಜಾರಿ ಮಾಡುವುದಾಗಿ ಹೇಳಿದರು. ಅವರ ಮಾತುಗಳಲ್ಲಿ ನಾಗರಿಕತೆ ಮಾಯವಾಗಿತ್ತು. 'ನಾನು ಹೇಳಿದ್ದೇ ವೇದವಾಕ್ಯ, ಅಂತಿಮ' ಎನ್ನುವ ರೀತಿಯಲ್ಲಿತ್ತು. ಅವರು ನಾಲಗೆಯ ಮೇಲಿನ ಹಿಡಿತವನ್ನು ಕಳೆದುಕೊಂಡು ಮಾತನಾಡುತ್ತಿರುವುದು ಇದು ಮೊದಲೇನಲ್ಲ. ಆದರೆ ಈ ಮಾತುಗಳು ಮಾಡಿದ ಡ್ಯಾಮೇಜನ್ನು ಅವರ ಬೇರಾವ ಮಾತುಗಳೂ ಮಾಡಿರಲಿಲ್ಲ.

ಇಪ್ಪತ್ತೈದು ವರ್ಷದ ಅಮೆರಿಕ ಮತ್ತು ಭಾರತೀಯ ಡಿಪ್ಲೊಮ್ಯಾಟ್ಸ್ ಮಾಡಿದ ಎಲ್ಲಾ ಕೆಲಸಗಳನ್ನು ಟ್ರಂಪ್ ಮಾತುಗಳು ನೆಲಕಚ್ಚಿಸಿ ಬಿಟ್ಟವು. ಟ್ರಂಪ್ ಮೊದಲ ಅವಧಿಯಲ್ಲಿ ಸ್ವತಃ ಭಾರತದ ಜತೆಗೆ ಕಟ್ಟಿಕೊಂಡಿದ್ದ ಉತ್ತಮ ಬಾಂಧವ್ಯವನ್ನು ಕೂಡ ಅವರು ಕೈಯಾರೆ ಹಾಳುಮಾಡಿಕೊಂಡರು. 'ಅಮೆರಿಕವನ್ನು ಮತ್ತೆ ಗ್ರೇಟ್ ಮಾಡಬೇಕು' ಎನ್ನುವ ಟ್ರಂಪ್ ಅವರ ನಿಲುವು ತಪ್ಪಲ್ಲ. ಆ ದೇಶದ ಅಧ್ಯಕ್ಷನಾಗಿ ಅಂಥ ನಿಲುವು ಒಳ್ಳೆಯದು. ಅದು ಆ ದೇಶಕ್ಕೆ ಖಂಡಿತ ಲಾಭದಾಯಕ. ಆದರೆ ಅದಕ್ಕೆ ಆತ ತುಳಿದ ಹಾದಿ ಮಾತ್ರ ಸರಿಯಾಗಿಲ್ಲ. ಅಲ್ಲದೆ ಇಂದಿಗೆ ಪರಿಸ್ಥಿತಿ ಬದಲಾಗಿದೆ. ಇಪ್ಪತ್ತು-ಮೂವತ್ತು ವರ್ಷದ ಹಿಂದೆ ಅಮೆರಿಕ ಮಾತಿಗೆ ಎದುರಾಡುವ ಶಕ್ತಿ ಯಾರಿಗೂ ಇರಲಿಲ್ಲ. ಬದಲಾದ ಪರಿಸ್ಥಿತಿಯಲ್ಲಿ ಆಡುವ ಮಾತಿನ ಮೇಲೆ ಅವರು ನಿಯಂತ್ರಣ ತಪ್ಪಿದ್ದು, ಅಮೆರಿಕವನ್ನು ಗ್ರೇಟ್ ಮಾಡುವ ಹಾದಿಯಿಂದ ಅವರನ್ನು ವಿಮುಖರನ್ನಾಗಿಸಿದೆ.

ಇಷ್ಟೆಲ್ಲಾ ಪ್ರಹಸನ ಏಕಾಗುತ್ತಿದೆ ಎಂದರೆ, ಜಗತ್ತಿನಲ್ಲಿ ಇಂದಿಗೂ ಅಮೆರಿಕದ ಡಾಲರನ್ನು ವಿನಿಮಯ ಮಾಧ್ಯಮವನ್ನಾಗಿ ಬಳಸುತ್ತಿದ್ದೇವೆ. ಡಾಲರಿನ ಮೇಲಿನ ಅವಲಂಬನೆ ಹೆಚ್ಚಾದಷ್ಟೂ ಅಮೆರಿಕ ಬಲಿಷ್ಠವಾಗುತ್ತದೆ. ಮೂವತ್ತು ವರ್ಷದ ಹಿಂದೆ ಜಗತ್ತಿನ 96/97 ಪ್ರತಿಶತ ವಹಿವಾಟು ಅಮೆರಿಕದ ಡಾಲರಿನ ಮೂಲಕವೇ ಆಗುತ್ತಿತ್ತು. ಅಂದರೆ ಭಾರತವು ಚೀನಾ ಜತೆಯೋ ಅಥವಾ ರಷ್ಯಾ ಜತೆಯೋ ಅಥವಾ ಜಗತ್ತಿನ ಬೇರೆ ಯಾವುದೇ ದೇಶದ ಜತೆಯಲ್ಲಿ ಕೂಡ ವ್ಯಾಪಾರ ಮಾಡಿದರೂ ಅಲ್ಲಿ ಬಳಕೆಯಾಗುತ್ತಿದ್ದದ್ದು ಡಾಲರ್. ಇಂದಿಗೆ ಅದು 65/70 ಪ್ರತಿಶತಕ್ಕೆ ಇಳಿದಿದೆ. ಅಂದರೆ ಬಹಳಷ್ಟು ದೇಶಗಳು ಡಾಲರಿನ ಬದಲಿಗೆ, ಯುರೋ, ಪೌಂಡ್, ಚೀನಾದ ಯೆನ್ ಕರೆನ್ಸಿಯಲ್ಲಿ, ಮತ್ತೆ ಹಲವು ಕಡೆ ಭಾರತೀಯ ರುಪಾಯಿಯಲ್ಲಿ ಕೂಡ ಟ್ರೇಡ್ ಮಾಡುತ್ತಿವೆ.

ಡಾಲರಿನ ಈ ಪಾರುಪತ್ಯದ ಬಗ್ಗೆ ಸೊಲ್ಲೆತ್ತಿದವರನ್ನು, ಇದನ್ನು ವಿರೋಧಿಸಿದವರನ್ನು ಅಮೆರಿಕ ಇಲ್ಲವಾಗಿಸುತ್ತ ಬಂದಿರುವುದು ಜಗತ್ತಿಗೆ ಗೊತ್ತಿರುವ ಸತ್ಯ. ಇರಾಕಿನ ಸದ್ದಾಂ ಹುಸೇನ್ ಡಾಲರಿನ ವಿರುದ್ಧ ಮಾತನಾಡಿದ ಪ್ರಮುಖರಲ್ಲಿ ಮೊದಲಿಗ ಎನ್ನಬಹುದು. ''ಡಾಲರಿಗೆ ಬದಲಿಗೆ ಇರಾಕಿ ದಿನಾರಿನಲ್ಲಿ ವ್ಯಾಪಾರ ಮಾಡುತ್ತೇನೆ'' ಎಂದಿದ್ದವನನ್ನು ಅಮೆರಿಕ ಹೇಗೆ ಟಾರ್ಗೆಟ್ ಮಾಡಿತು. ಇರಾಕಿನ ಮೇಲೆ ದಾಳಿ ಮಾಡಿ ಆ ದೇಶವನ್ನು ಶಿಲಾಯುಗಕ್ಕೆ ಮರಳಿಸಿದ್ದು ಅಲ್ಲದೆ ಸದ್ದಾಮನನ್ನು ಕೂಡ ಮುಗಿಸಿಬಿಟ್ಟಿತು. ನಂತರದ ಪಟ್ಟಿಯಲ್ಲಿ ಬರುವುದು ಲಿಬಿಯಾದ ಮೊಹಮದ್ ಗಡಾಫಿ. ಗಡಾಫಿ ಬಹಳ ಸುಭಗ ಎನ್ನುವುದು ನನ್ನ ಉದ್ದೇಶವಲ್ಲ. ಆದರೆ ಅಮೆರಿಕ ಆತನನ್ನು ಕೂಡ ಇಲ್ಲವಾಗಿಸಿದ್ದು ಆತ ಕೆಟ್ಟವನು ಎನ್ನುವ ಕಾರಣಕ್ಕಾಗಿ

ಅಲ್ಲ, ಬದಲಿಗೆ ತಾನು ಹೇಳಿದಂತೆ ಕೇಳಲಿಲ್ಲ ಎನ್ನುವ ಏಕೈಕ ಕಾರಣಕ್ಕೆ ಎನ್ನುವುದು ವೇದ್ಯ. ವೆನಿಜುವೆಲಾದ ಹ್ಯೂಗೋ ಚಾವೇಸ್ ಅತ್ಯಂತ ಗಟ್ಟಿಮುಟ್ಟಾಗಿದ್ದವರು ಆರೆಂಟು ತಿಂಗಳಲ್ಲಿ ಕಾಯಿಲೆಗೆ ತುತ್ತಾಗಿ ಮರಣ ಹೊಂದಿದರು. ಕ್ಯೂಬಾ, ವಿಯೆಟ್ನಾಂ, ಹೀಗೆ ಅಮೆರಿಕ ವಿರುದ್ಧ ಸೊಲ್ಲೆತ್ತಿದ ದೇಶಗಳನ್ನು ಮತ್ತು ಅಲ್ಲಿನ ನಾಯಕರನ್ನು ಹೊಸಕಿ ಹಾಕುವುದು ಅಮೆರಿಕದ ಹಳೆಯ ಚಾಳಿ.

ಇವತ್ತಿನ ದಿನಕ್ಕೆ ಬರೋಣ. ಭಾರತ, ಬ್ರೆಜಿಲ್, ಚೀನಾ, ರಷ್ಯಾ ಮತ್ತು ಸೌತ್ ಆಫ್ರಿಕಾ ಸೇರಿಕೊಂಡು 'ಬ್ರಿಕ್ಸ್' ಎನ್ನುವ ಒಕ್ಕೂಟ ಕಟ್ಟಿಕೊಂಡಿರುವುದು ಹಳೆಯ ವಿಚಾರ. ಈ ಒಕ್ಕೂಟದಲ್ಲಿ ಇಂಡೋನೇಷ್ಯಾ ದೇಶವನ್ನು ಹೊಸ ಸದಸ್ಯ ದೇಶವನ್ನಾಗಿ ಸೇರಿಸಿಕೊಳ್ಳಲಾಗಿದೆ. ಇದರ ಜತೆಗೆ ಹತ್ತು ದೇಶಗಳನ್ನು 'ಬ್ರಿಕ್ಸ್' ಒಕ್ಕೂಟದ ಪಾಲುದಾರ ದೇಶಗಳು ಎಂದು ಗುರುತಿಸಲಾಗಿದೆ. ಬೆಲಾರಸ್, ಬೊಲಿವಿಯಾ, ನೈಜೀರಿಯಾ, ಮಲೇಷ್ಯಾ, ಥೈಲ್ಯಾಂಡ್, ಕ್ಯೂಬಾ, ವಿಯೆಟ್ನಾಂ, ಉಗಾಂಡಾ, ಉಜ್ಬೇಕಿಸ್ತಾನ್ ಮತ್ತು ಕಝುಕಿಸ್ತಾನ್ ದೇಶಗಳು 'ಬ್ರಿಕ್ಸ್' ಒಕ್ಕೂಟದ ಪಾಲುದಾರ ದೇಶಗಳಾಗಿ ಸೇರ್ಪಡೆಗೊಂಡಿವೆ. ಅಮೆರಿಕ ದೇಶದ ಏಕಸಾಮ್ಯದ ದೇಶಗಳು ದಶಕದಿಂದ ಸೊಲ್ಲೆತ್ತಲು ಶುರು ಮಾಡಿವೆ. ಹೀಗಾಗಿ ಅಮೆರಿಕ ವಿರುದ್ಧ ಒಂದು ಸಾಂಘಿಕ ಹೋರಾಟದ ಅಗತ್ಯವನ್ನು ಮನಗಂಡು ಜೂನ್ 2009ರಲ್ಲಿ ಬ್ರಿಕ್ಸ್ ಒಕ್ಕೂಟ ಸೃಷ್ಟಿಯಾಯಿತು. 2010ರಲ್ಲಿ ಸೌತ್ ಆಫ್ರಿಕಾ ದೇಶವನ್ನು ಕೂಡ ಸದಸ್ಯ ದೇಶವನ್ನಾಗಿ ಸೇರಿಸಿಕೊಳ್ಳಲಾಗಿದೆ. 2024ರಲ್ಲಿ ಈಜಿಪ್ಟ್, ಇಥಿಯೋಪಿಯಾ, ಇರಾನ್, ಯುನೈಟೆಡ್ ಅರಬ್ ಎಮಿರೇಟ್ಸ್ ದೇಶಗಳನ್ನು ಸೇರಿಸಿಕೊಳ್ಳಲಾಯಿತು. 2025ರಲ್ಲಿ ಇಂಡೋನೇಷ್ಯಾ ದೇಶಕ್ಕೆ ಸದಸ್ಯತ್ವ ಸಿಕ್ಕಿದೆ. ಇನ್ನಷ್ಟು ದೇಶಗಳು ಈ ಒಕ್ಕೂಟವನ್ನು ಸೇರಿಕೊಳ್ಳಲು ಅರ್ಜಿಯನ್ನು ಸಲ್ಲಿಸಿವೆ.

ಅಮೆರಿಕ, ಯುನೈಟೆಡ್ ಕಿಂಗ್‌ಡಮ್, ಜರ್ಮನಿ, ಸ್ಪೇನ್, ಫಿನ್‌ಲ್ಯಾಂಡ್, ನೆದರ್ಲ್ಯಾಂಡ್, ಫ್ರಾನ್ಸ್, ಡೆನ್ಮಾರ್ಕ್, ಕೆನಡಾ ಸೇರಿದಂತೆ ಒಟ್ಟಾರೆ 32 ದೇಶಗಳ ನ್ಯಾಟೋ ಒಕ್ಕೂಟ ಜಾಗತಿಕ ಜಿಡಿಪಿಯ 43 ಪ್ರತಿಶತ ದೇಣಿಗೆ ನೀಡುತ್ತಿದೆ. ಹತ್ತು ದೇಶಗಳ ಬ್ರಿಕ್ಸ್ ಒಕ್ಕೂಟ ಜಾಗತಿಕ ಜಿಡಿಪಿಯ 46 ಪ್ರತಿಶತವನ್ನು ಹೊಂದಿದೆ. ನ್ಯಾಟೋ ಒಕ್ಕೂಟದ ಎಲ್ಲಾ ಸದಸ್ಯ ದೇಶಗಳ ಒಟ್ಟು ಜನಸಂಖ್ಯೆ ಜಾಗತಿಕ ಜನಸಂಖ್ಯೆಯ 12 ಪ್ರತಿಶತವಿದ್ದರೆ, ಬ್ರಿಕ್ಸ್ ಒಕ್ಕೂಟ ಜಾಗತಿಕ ಜನಸಂಖ್ಯೆಯ 40 ಪ್ರತಿಶತವನ್ನು ಹೊಂದಿವೆ. ನ್ಯಾಟೋ ಒಕ್ಕೂಟ ಮಿಲಿಟರಿ ಒಕ್ಕೂಟವಾಗಿದೆ. 'ಬ್ರಿಕ್ಸ್' ಇಕನಾಮಿಕ್ಸ್ ಕೋ-ಆಪರೇಷನ್‌ಗೆ ಜನ್ಮ ತಾಳಿದೆ. ಇದರರ್ಥ ಬ್ರಿಕ್ಸ್ ಮೂಲ ಉದ್ದೇಶ ಅಮೆರಿಕನ್ ಡಾಮಿನೆನ್ಸ್ ಅನ್ನು ಕೊನೆಗೊಳಿಸುವುದಾಗಿದೆ. ಇದು ಅಮೆರಿಕದ ಅಧ್ಯಕ್ಷ ಟ್ರಂಪ್ ಅವರಿಗೆ ಚೆನ್ನಾಗಿ ಗೊತ್ತಿದೆ. ಡಾಲರ್ ಕುಸಿದರೆ ಅಮೆರಿಕ ಮುಂದೆಂದೂ ಅಮೆರಿಕವಾಗಿ ಉಳಿದುಕೊಳ್ಳುವುದಿಲ್ಲ ಎನ್ನುವುದು ಕೂಡ ಅವರಿಗೆ ಗೊತ್ತಿದೆ. ಹೀಗಿದ್ದೂ ಟ್ರಂಪ್ ನಾಲಗೆಯನ್ನು ಹರಿಬಿಟ್ಟು ಅವರ ದೇಶಕ್ಕೆ ಬಹಳ ದೊಡ್ಡ ತಪ್ಪು ಮಾಡಿಬಿಟ್ಟರು ಮತ್ತು ಬ್ರಿಕ್ಸ್ ಒಕ್ಕೂಟಕ್ಕೆ ಅನುಕೂಲ ಮಾಡಿಕೊಟ್ಟರು.

ಬ್ರಿಕ್ಸ್ ಒಕ್ಕೂಟದಲ್ಲಿ ಎಲ್ಲವೂ ಸರಿಯಿಲ್ಲ. ಏಕೆಂದರೆ ಈ ಒಕ್ಕೂಟದ ಪ್ರಮುಖ ದೇಶಗಳಲ್ಲಿ ಅಂದರೆ ಚೀನಾ ಮತ್ತು ಭಾರತದ ನಡುವೆ ಹೇಳಿಕೊಳ್ಳುವ ಉತ್ತಮ ಬಾಂಧವ್ಯವಿಲ್ಲ. ಚೀನಾ ದೇಶ ಅಮೆರಿಕದ ಡಾಲರಿಗೆ ವಿರುದ್ಧವಾಗಿ ಬ್ರಿಕ್ಸ್ ಕರೆನ್ಸಿ ತರಬೇಕು ಎನ್ನುವ ಉದ್ದೇಶವನ್ನು ಹೊಂದಿದೆ. ಅದಕ್ಕಾಗಿ ಸಕಲ ತಯಾರಿಗಳು ಆಗಿವೆ. ಆದರೆ ಬ್ರಿಕ್ಸ್ ಕರೆನ್ಸಿ ಹೊರಡಿಸಲು ಭಾರತ ಒಪ್ಪಿಗೆಯನ್ನು ನೀಡದ ಕಾರಣ ಅದು ನಿಂತಿದೆ. ಇದು ಅಮೆರಿಕ ಪಾಲಿಗೆ ಸಿಹಿಸುದ್ದಿ. ಚೀನಾ ಮತ್ತು ಭಾರತ ಎರಡೂ ಒಂದಾಗುವುದು ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ ಎನ್ನುವಂತಿತ್ತು. ಟ್ರಂಪ್ ಯಾವಾಗ ಭಾರತದ ಮೇಲೆ ಹೆಚ್ಚಿನ ಸುಂಕ ವಿಧಿಸಿದರೋ ಆಗ ಚೀನಾ ಭಾರತದ ಪರವಾಗಿ ನಿಂತಿತು. 'ಬೀಜಿಂಗ್ ನವದೆಹಲಿಯ ಜತೆಯಿದೆ' ಎನ್ನುವ ಅಧಿಕೃತ ಹೇಳಿಕೆಯನ್ನು ಕೂಡ ನೀಡುತ್ತದೆ. ಗಡಿ ತಗಾದೆಗಳನ್ನು ನಾವು ಕುಳಿತು ಬಗೆ ಹರಿಸಿಕೊಳ್ಳಬಹುದು ಎನ್ನುವಷ್ಟರ ಮಟ್ಟಿಗೆ ಚೀನಾ ಭಾರತದ ಬಗ್ಗೆ ಮೃದುಧೋರಣೆ ತಾಳಿದೆ.

ಎಲ್ಲಕ್ಕೂ ಒಂದು ಅಂತ್ಯ ಎನ್ನುವುದು ಇರಲೇಬೇಕಲ್ಲವೇ? ಅಮೆರಿಕದ ಮುಂದೆ ಇಂದು ನಿಂತಿರುವುದು ಭಾರತ ಎನ್ನುವ ಬೃಹತ್ ರಾಷ್ಟ್ರ. ಜಗತ್ತಿನ ಸರಿಸುಮಾರು 19 ಪ್ರತಿಶತ ಜನಸಂಖ್ಯೆ ಹೊಂದಿರುವ ದೇಶ. ವ್ಯಾಪಾರದ ದೃಷ್ಟಿಯಿಂದ ನೋಡಿದಾಗ ಭಾರತದ ಮಾರುಕಟ್ಟೆಯನ್ನು ಕಡೆಗಣಿಸಿ ಯಾವ ದೇಶವೂ ವ್ಯಾಪಾರವನ್ನು ಮಾಡಲಾಗದು ಎನ್ನುವಷ್ಟು ದೊಡ್ಡ ದೇಶ. 'ಪರ್ಚೇಸಿಂಗ್ ಪವರ್' ದೃಷ್ಟಿಯಲ್ಲಿ ಭಾರತ ಇಂದಿಗೆ ಸರಿಸುಮಾರು 18 ಟ್ರಿಲಿಯನ್ ಇಕಾನಮಿ. 2038ಕ್ಕೆ ಜಗತ್ತಿನ ಎರಡನೇ ಅತಿ ದೊಡ್ಡ ಇಕಾನಾಮಿಯಾಗಲಿದೆ. ಚೀನಾ ಮೊದಲ ಸ್ಥಾನದಲ್ಲಿ, ಭಾರತ ಎರಡನೇ ಸ್ಥಾನದಲ್ಲಿರಲಿವೆ. ಅಮೆರಿಕ ಮೂರನೇ ಸ್ಥಾನಕ್ಕೆ ತಳ್ಳಲ್ಪಡುತ್ತದೆ. ಹೀಗಾಗಿ ಎರಡನೇ ಮಹಾಯುದ್ಧದ ನಂತರ ಅಧಿಪತಿಯಾಗಿ ಮೆರೆದಿದ್ದ ಅಮೆರಿಕದ ಪಾರುಪತ್ಯಕ್ಕೆ ಭಾರತ ಅಧಿಕೃತವಾಗಿ ಅಂತ್ಯಹಾಡಿದೆ. ಹೊಸ ವಿಶ್ವವ್ಯವಸ್ಥೆಯ 'ರೀ-ಸೆಟ್' ಬಟನ್ ಒತ್ತಿದ್ದು ಭಾರತ ಎನ್ನುವುದು ಚರಿತ್ರೆಯಲ್ಲಿ ದಾಖಲಾಗಲಿದೆ.

ಚೀನಾ ಮತ್ತು ಭಾರತದ ನಡುವೆ ಎರಡೂ ದೇಶಕ್ಕೂ ಆಪ್ತವಾಗಿರುವ ರಷ್ಯಾ ನಿಂತಿದೆ. ಇವತ್ತಿನವರೆಗೂ ಬ್ರಿಕ್ಸ್ ಕರೆನ್ಸಿ ಬಗ್ಗೆ, ಚೀನಾ ಮತ್ತು ಭಾರತ ಒಟ್ಟಾಗಿ ಕೆಲಸ ಮಾಡುವುದರ ಬಗ್ಗೆ ಅನುಮಾನಗಳಿದ್ದವು. ಅಮೆರಿಕವಂತೂ ಇದು ಎಂದಿಗೂ ಸಾಧ್ಯವಿಲ್ಲದ ಮಾತು ಎನ್ನುವ ನಂಬಿಕೆಯಲ್ಲಿ ಬದುಕುತ್ತಿತ್ತು. ಆ ದೇಶದ ಅಧ್ಯಕ್ಷ ಎಲ್ಲವನ್ನೂ ಮಾಧ್ಯಮಗಳ ಮುಂದೆ ಹೇಳುತ್ತಾ ''ನಾನು ಹೇಳಿದ್ದು ಎಲ್ಲರೂ ಕೇಳಬೇಕು, ಕೇಳುತ್ತಾರೆ'' ಎನ್ನುವ ಹುಂಬತನದ ಮಾತುಗಳನ್ನು ಆಡದೆ ಹೋಗಿದ್ದರೆ, ಜಾಗತಿಕ ಅಭಿವೃದ್ಧಿ ಓಟದಲ್ಲಿ ಎಲ್ಲರಿಗಿಂತ ಹೆಚ್ಚು 'ಗ್ರೋತ್ ರೇಟ್' ಹೊಂದಿ ಪ್ರಥಮ ಸ್ಥಾನದಲ್ಲಿರುವ ಭಾರತವನ್ನು 'ಡೆಡ್ ಇಕಾನಮಿ' ಎನ್ನುವ ತಪ್ಪು ಮಾಡದೆ ಇದ್ದಿದ್ದರೆ ಆಗ ಚೀನಾ ಮತ್ತು ಭಾರತ ಸನಿಹ ಬರುತ್ತಿರಲಿಲ್ಲವೇನೋ? ಆದರೆ ಟ್ರಂಪ್ ಆಡಿದ ಆ ಒಂದು ಮಾತು ವಿಶ್ವ ಯಜಮಾನಿಕೆಯ ಚೇರನ್ನು ಅಲ್ಲಾಡಿಸಿರುವುದು ಸತ್ಯ.

'ಹೌದು' ಒಂದೇ ಅಲ್ಲ; 'ಇಲ್ಲ' ಎನ್ನಲೂ ಕಲಿಯಬೇಕು!

ಒಳ್ಳೆಯ ಅವಕಾಶಗಳು ಬಂದಾಗ 'ಎಸ್' ಎನ್ನುವುದು ಎಷ್ಟು ಮುಖ್ಯವೋ, ನಮಗೆ ಒಗ್ಗದ ಅಥವಾ ಹೊರೆಯಾಗಿ ಪರಿಣಮಿಸುವ ಕಾರ್ಯ'ಭಾರ'ಗಳು(!) ಎದುರಾದಾಗ 'ನೋ' ಎನ್ನುವುದೂ ಅಷ್ಟೇ ಮುಖ್ಯವಾಗುತ್ತದೆ. ಬೇಡದಿರುವ ಸಂಗತಿಗಳಿಗೆ, ಇಷ್ಟವಿಲ್ಲದ ವಿಷಯಗಳಿಗೆ ನೇರವಾಗಿ 'ನೋ' ಅನ್ನಬೇಕು.

ಹಿತೋಪದೇಶ
ಗಣಪತಿ ವಿ. ಅವಧಾನಿ
vveditoped@gmail.com

ನೀವೊಂದು ಹೊಸ ಕಾರು ಕೊಂಡುಕೊಂಡಿದ್ದೀರಿ. ಅದು ದೊಡ್ಡ ಕಾರು. ಇನ್ನೂ ಒಂದು ತಿಂಗಳಾಗಿಲ್ಲ. ನೀವಿನ್ನೂ ಲಾಂಗ್ ಡ್ರೈವ್ ಹೋಗಿಲ್ಲ. ಅಷ್ಟರಲ್ಲೇ ನಿಮ್ಮ ಒಬ್ಬ ಗೆಳೆಯರೋ ಅಥವಾ ಸಂಬಂಧಿಕರೋ ಬಂದು, ''ನಿಮ್ಮ ಹೊಸ ಕಾರು ಬೇಕು, ಎರಡು ದಿನ ಕುಟುಂಬದೊಂದಿಗೆ ಪಿಕ್ನಿಕ್ ಹೋಗಬೇಕು'' ಎನ್ನುತ್ತಾರೆ. ನಿಮಗೆ ಕೊಡಲು ಮನಸ್ಸಿಲ್ಲ. ಎಲ್ಲಿ ಸಂಬಂಧ ಹಾಳಾಗುತ್ತೋ ಎಂಬ ಗ್ರಹಿಕೆಯಲ್ಲಿ 'ಇಲ್ಲ' ಎನ್ನಲು ಹಿಂಜರಿಯುತ್ತೀರಿ. ಇನ್ನೊಂದು ಪ್ರಸಂಗ: ನೀವು ಹೊಸ ಮನೆಯೊಂದನ್ನು ಕೊಂಡುಕೊಳ್ಳುತ್ತೀರಿ ಅಥವಾ ಕಟ್ಟಿಸುತ್ತೀರಿ. ನಂತರ, ಹಳೆಯ ಮನೆಯನ್ನು ಬಾಡಿಗೆಗೆ ಕೊಟ್ಟು, ಹೊಸ ಮನೆಗೆ ಆದ ಖರ್ಚನ್ನು ಹೊಂದಿಸಿಕೊಳ್ಳಲು ನಿರ್ಧಾರ ಮಾಡುತ್ತೀರಿ. ಅಷ್ಟರಲ್ಲೇ ನಿಮ್ಮ ಸಂಬಂಧಿಕರು ಆ ಹಳೆಯ ಮನೆಯ ಮೇಲೆ ಕಣ್ಣು ಹಾಕುತ್ತಾರೆ, ತಮಗೇ ಬಿಟ್ಟುಕೊಡುವಂತೆ ಪರೋಕ್ಷವಾಗಿ ಆಗ್ರಹಿಸುತ್ತಾರೆ. 'ಕೊಡಲಾಗುವುದಿಲ್ಲ' ಎಂದು ಹೇಳಲು ಸಾಧ್ಯವಾಗದೇ ತೊಳಲಾಡುತ್ತೀರಿ.

ಮೇಲಿನವು ವೈಯಕ್ತಿಕ ನೆಲೆಯ ಸಂಗತಿಗಳಾದವು. ಇನ್ನು ಕಾರ್ಯಕ್ಷೇತ್ರದ ವಲಯಕ್ಕೆ ಬಂದರೆ, ಆಫೀಸಿನಲ್ಲಿ ಬಾಸ್ ಕೊಡುವ ಅತಿರೇಕದ ಪ್ರಮಾಣದ ಕೆಲಸವನ್ನು ನಿರಾಕರಿಸಲಾಗದೆ ಒದ್ದಾಡುವವರು ಹಲವಾರು ಜನ. ಸರಕಾರಿ ಕೆಲಸವಿರಲಿ ಅಥವಾ ಖಾಸಗಿ ಕಂಪನಿಯ ಕೆಲಸವಿರಲಿ, ಉತ್ತಮವಾಗಿ ಕೆಲಸ ಮಾಡುವರಿಗೇ ಇನ್ನಷ್ಟು ಕೆಲಸವನ್ನು ಹಚ್ಚುವುದು ಹೊಸತೇನಲ್ಲ. ಕೆಲಸಗಳ್ಳರು ಆರಾಮಾಗಿದ್ದರೆ, ಉತ್ತಮವಾಗಿ ಮತ್ತು ಪ್ರಾಮಾಣಿಕವಾಗಿ ಕೆಲಸ ಮಾಡುವವರಿಗೆ ಹೀಗೆ ಇನ್ನಷ್ಟು ಹೊರೆ ಹೊರಬೇಕಾದಂಥ ಅನಿವಾರ್ಯತೆ. ಮಿತಿಗಿಂತ ಅಥವಾ ಸಹಜ ಸಾಮರ್ಥ್ಯಕ್ಕಿಂತ ಜಾಸ್ತಿ ಕೆಲಸದಲ್ಲಿ ತೊಡಗಿಸಿಕೊಂಡಿದ್ದರ ಪ್ರಯುಕ್ತ ಊಟ-ನಿದ್ರೆಯನ್ನು ಸರಿಯಾಗಿ ಮಾಡಲಾಗದೇ (ಅಂದರೆ ಅದಕ್ಕೆ ಸಮಯ ಸಿಗದೇ), ಅವರಿವರ ಮೇಲೆ ರೇಗಾಡುವಂಥ ಚಿತ್ತಸ್ಥಿತಿ ಇಂಥ ಕೆಲಸಗಾರರಲ್ಲಿ ರೂಪುಗೊಳ್ಳಬಹುದು ಮತ್ತು ಅದಕ್ಕೆ ಪ್ರತಿಯಾಗಿ ಮನೆಯವರಿಂದಲೂ ಅಸಹನೆ ಎದುರಾಗಬಹುದು.

ಭಾರತೀಯ ಸಂಸ್ಕೃತಿಯಲ್ಲಿ ಬೆಳೆದ ನಮಗೆ, ಯಾರಿಗಾದರೂ 'ಇಲ್ಲ' ಎಂಬ ಉತ್ತರವನ್ನು ಹೇಳುವುದು ಕಷ್ಟವಾಗುತ್ತದೆ. ಏಕೆಂದರೆ, ಚಿಕ್ಕಂದಿನಿಂದಲೂ ನಮಗೆ, ''ದೊಡ್ಡವರಿಗೆ ಗೌರವ ಕೊಡಬೇಕು, ಅವರ ಎದುರು 'ಇಲ್ಲ' ಅನ್ನಬಾರದು'' ಎಂದು ಕಲಿಸಿರುತ್ತಾರೆ. ಅದು ಸಹಜ ಕೂಡ. ನಾನು ಗಮನಿಸಿದಂತೆ, 5-6 ವರ್ಷದ ಮಗು ತನಗೆ ಸರಿಯಿಲ್ಲ ಎನಿಸಿದ್ದನ್ನು ಸುಲಭವಾಗಿ ಮತ್ತು ಸ್ಪಷ್ಟವಾಗಿ 'ಇಲ್ಲ', 'ಬೇಡ' ಎಂದು ಹೇಳುತ್ತದೆ. ಆ ಮಗು ದೊಡ್ಡದಾದಂತೆ ಈ ಗುಣ ಮಾಯವಾಗಿ 'ಇಲ್ಲ' ಎನ್ನಲು ತಡವರಿಸುತ್ತದೆ! 'ನಾವು ಎಲ್ಲರಿಗೂ ಇಷ್ಟವಾಗಬೇಕು' ಎಂಬ ಆಸೆ, ಒಬ್ಬರಿಗೊಬ್ಬರು ಸಹಾಯ ಮಾಡಬೇಕು ಎಂಬ ಮನೋಭಾವನೆ ಮತ್ತು ಬೇರೆಯವರು ಏನಂದುಕೊಳ್ಳುತ್ತಾರೋ ಎಂಬ ಭಯದಿಂದಾಗಿ 'ಇಲ್ಲ' ಎಂಬ ಪದವನ್ನು ಹೇಳುವುದು ಕಷ್ಟವಾಗುತ್ತದೆ. 'ಇಲ್ಲ' ಎನ್ನಬೇಕಾದ ಪರಿಸ್ಥಿತಿಯಲ್ಲಿ 'ಹೌದು' ಎಂದಾಗ, ಅದು ದೀರ್ಘಕಾಲೀನ ಸ್ಥಿತಿಯಲ್ಲಿ ನಮ್ಮಲ್ಲಿ ಮಾನಸಿಕ ಒತ್ತಡವನ್ನು ಹುಟ್ಟುಹಾಕುತ್ತದೆ; ಮಾತ್ರವಲ್ಲದೆ, ನಮ್ಮಲ್ಲಿ ಋಣಾತ್ಮಕ ಶಕ್ತಿಯನ್ನು ಸೃಷ್ಟಿಸಿ, ನಮ್ಮ ಆರೋಗ್ಯದ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ. ಸಕ್ಕರೆ ಕಾಯಿಲೆ, ರಕ್ತದೊತ್ತಡ, ಬೆನ್ನುನೋವು ಕಾಣಿಸಿಕೊಳ್ಳುವುದು, ಸಿಟ್ಟು ಜಾಸ್ತಿ ಬರುವುದು, ನಿದ್ರೆ ಬಾರದಿರುವುದು ಮುಂತಾದ ಲಕ್ಷಣಗಳ ಮೂಲಕ ಇದು ವ್ಯಕ್ತವಾಗಬಹುದು.

'ಇಲ್ಲ' ಎಂದು ಹೇಳುವುದು ಅನೇಕರಿಗೆ ಸುಲಭವಲ್ಲ. 'ಇಲ್ಲ, ಸಾಧ್ಯವಿಲ್ಲ, ಗೊತ್ತಿಲ್ಲ, ಮಾಡುವುದಿಲ್ಲ, ಆಗುವುದಿಲ್ಲ' ಇವನ್ನೆಲ್ಲ ನಕಾರಾತ್ಮಕ ಪದಗಳೆಂದು ನಾವು ಪರಿಗಣಿಸುತ್ತೇವೆ. ನಾನು 'ಇಲ್ಲ' ಅಂದರೆ ಅವರು ನನ್ನ ಬಗ್ಗೆ ಕೆಟ್ಟದಾಗಿ ಯೋಚಿಸುತ್ತಾರೇನೋ ಎಂಬ ಭಯ. ನಿರಾಕರಿಸಿದ ನಂತರ 'ನಾನು ತಪ್ಪು ಮಾಡಿದ್ದೇನೆ' ಎಂಬ ಅಂತರಂಗದ ಒತ್ತಡ. 'ಇಲ್ಲ' ಎಂದರೆ ಸ್ನೇಹ, ಕೌಟುಂಬಿಕ ಅಥವಾ ವೃತ್ತಿಪರ ಸಂಬಂಧ ಹಾಳಾಗಬಹುದು ಎಂಬ ಆತಂಕ. ಸಮಾಜ ನಮ್ಮನ್ನು ಕೆಟ್ಟದಾಗಿ ನೋಡುತ್ತದೇನೋ ಎಂಬ ಗೊಂದಲ. ಆದರೆ, 'ಇಲ್ಲ' ಎನ್ನುವುದನ್ನು ಬಳಸದೇ ದಿಢೀರನೆ 'ಹೌದು' ಅನ್ನುವುದರಿಂದಲೇ ಬದುಕಿನಲ್ಲಿ ಶೇ.50ಕ್ಕೂ ಹೆಚ್ಚು ಬಿಕ್ಕಟ್ಟುಗಳು ಉದ್ಭವವಾಗುತ್ತವೆ, ಕಷ್ಟಗಳು ಎದುರಾಗುತ್ತವೆ ಎಂಬುದನ್ನು ಅರಿಯಬೇಕು. ಕಾರಣ, 'ಇಲ್ಲ' ಎಂಬ ಪ್ರತಿಸ್ಪಂದನೆಯು ಅಸಹಕಾರವಲ್ಲ, ಅದು ಆತ್ಮಸಂರಕ್ಷಣೆಯ ಒಂದು ರೂಪ. ಹಾಗೆ ನಿರಾಕರಿಸಿದೆವು ಎಂದ ಮಾತ್ರಕ್ಕೆ ನಾವು ಅಸಹಕಾರಿಯಾಗಿದ್ದೇವೆ ಎಂದು ಅರ್ಥವಲ್ಲ. ಅದು ನಮ್ಮ ಮೌಲ್ಯಗಳು, ಗುರಿಗಳು, ನಮ್ಮ ಸಂತೋಷ ಮತ್ತು ಆರೋಗ್ಯವನ್ನು ಕಾಪಾಡುವ ಒಂದು ಕ್ರಮವಷ್ಟೇ. ಅಂಥದೊಂದು 'ಪ್ರತ್ಯುತ್ತರ'ವು ನಮ್ಮ ವ್ಯಕ್ತಿತ್ವವನ್ನು ಬಲಪಡಿಸುತ್ತದೆ.

30 ಕೆ.ಜಿ. ಹೊರುವವನನ್ನು 35 ಕೆ.ಜಿ. ಹೊರಲು ಹೇಳಿದರೆ ಹೊರಬಹುದು; 40 ಕೆ.ಜಿ. ಹೊರು ಅಂದರೆ ಅದು ಹೇಗೋ ಒಮ್ಮೆ ಪ್ರಯಾಸಪಟ್ಟು ಹೊರಬಹುದು. ಆದರೆ 60 ಕೆ.ಜಿ.



ಹೊರು ಅಂದರೆ ಅದು ಸಾಧ್ಯವಿಲ್ಲ. ಅಂಥ ಪರಿಸ್ಥಿತಿ ಬಂದರೆ 'ಇಲ್ಲ' ಎಂದೇ ಹೇಳಬೇಕು. ಇಲ್ಲದಿದ್ದರೆ ಕಷ್ಟ ತಪ್ಪಿದ್ದಲ್ಲ. ಕೆಲಸದ ಸ್ಥಳದಲ್ಲಿ ನಮಗೆ ಮಾಡಲು ಸಾಧ್ಯವಾಗದ ಹೆಚ್ಚುವರಿ ಜವಾಬ್ದಾರಿಯನ್ನು ನೀಡಿದಾಗ, 'ಈಗಿನ ಕೆಲಸಗಳನ್ನು ಪೂರ್ಣಗೊಳಿಸುವುದಕ್ಕೇ ಸಮಯ ಬೇಕು, ಹೊಸದನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ' ಎಂದು ಸ್ಪಷ್ಟವಾಗಿ ಹೇಳಬೇಕು. ಜೀವನದಲ್ಲಿ ಒಳ್ಳೆಯ ಅವಕಾಶಗಳು ಬಂದಾಗ 'ಎಸ್' ಅಂತ ಹೇಳುವುದು ಎಷ್ಟು ಮುಖ್ಯವೋ, ನಮಗೆ ಒಗ್ಗದ ಅಥವಾ ಹೊರೆಯಾಗಿ ಪರಿಣಮಿಸುವ ಕಾರ್ಯ'ಭಾರ'ಗಳು(!) ಎದುರು ನಿಂತಾಗ 'ನೋ' ಅಂತ ಹೇಳುವುದೂ ಅಷ್ಟೇ ಮುಖ್ಯವಾಗುತ್ತದೆ. ಬೇಡದಿರುವ ಸಂಗತಿಗಳಿಗೆ, ಇಷ್ಟವಿಲ್ಲದ ವಿಷಯಗಳಿಗೆ ನೇರವಾಗಿ 'ನೋ' ಅನ್ನಲು ಕಲಿಯಬೇಕು. ಜತೆಗೆ, ಇಷ್ಟವಿಲ್ಲದ ವಸ್ತು/ವ್ಯಕ್ತಿಗಳಿಗೂ 'ನೋ' ಎಂದು ಹೇಳುವುದನ್ನೂ ಅಭ್ಯಾಸ ಮಾಡಿಕೊಳ್ಳಬೇಕು. ಯಾವುದೇ 'ಸಂವಹನ-ಸಾಂಗತ್ಯ-ಚಟುವಟಿಕೆ' ಇತ್ಯಾದಿಗಳಿಂದ ನಾವೇ ಖುಷಿಯಾಗಿರದಿದ್ದರೆ, ನಮ್ಮಲ್ಲಿ ಏನು ಸಾಮರ್ಥ್ಯವಿದ್ದು ಏನು ಪ್ರಯೋಜನ ಹೇಳಿ?

'ಹೌದು' ಎನ್ನುವುದು ಸುಲಭವೇ. ಆದರೆ ಕೆಲವೊಮ್ಮೆ, 'ಹೌದು' ಅನ್ನುವುದಕ್ಕಿಂತ 'ಇಲ್ಲ' ಅನ್ನುವುದೇ ಸಂಬಂಧವನ್ನು ಉಳಿಸುವ ಮಾರ್ಗೋಪಾಯವೂ ಆಗುತ್ತದೆ. ಏಕೆಂದರೆ 'ಅಂತ್ಯ ನಿಷ್ಠುರಕ್ಕಿಂತ, ಆದಿ ನಿಷ್ಠುರ ಲೇಸು' ಅಲ್ಲವೇ? ಆದರೆ ಹಾಗೆ 'ಇಲ್ಲ' ಎಂದು ಹೇಳುವುದೂ ಒಂದು 'ಸಂವಹನ ಕಲೆ'. ಅದು ನಾಯಕತ್ವದ ಕಲೆಯೂ ಹೌದು. ನಾವು 'ಇಲ್ಲ' ಎಂದು ನೀಡುವ ಉತ್ತರವು ಮತ್ತೊಬ್ಬರ ಮುಖಕ್ಕೆ ಹೊಡೆದಂತೆ ಇರಬಾರದು, ಅವರನ್ನು 'ಕನ್ವಿನ್ಸ್' ಮಾಡುವ ರೀತಿಯಲ್ಲಿರಬೇಕು. 'ಇಲ್ಲ' ಎನ್ನಬೇಕಾದ ಪರಿಸ್ಥಿತಿಯಲ್ಲಿ ಹಾಗೆ ಹೇಳದೇಹೋದರೆ, ಶಾರೀರಿಕ ಮತ್ತು ಮಾನಸಿಕ ಒತ್ತಡ ಉಂಟಾಗಬಹುದು. ಸ್ವಂತ ಸಮಯ, ಗುರಿ ಮತ್ತು ಜೀವನದ ಆದ್ಯತೆಗಳನ್ನು ತ್ಯಜಿಸಬೇಕಾದ ಪರಿಸ್ಥಿತಿ ಬರಬಹುದು. ನಿರಾಕರಿಸದ ಕಾರಣದಿಂದಾಗಿ ಅಸಹನೆ ಉಂಟಾಗಬಹುದು. 'ಇವರು ಹೇಳಿದ್ದಕ್ಕೆಲ್ಲಾ ಯಾವಾಗಲೂ ಒಪ್ಪಿಕೊಳ್ಳುತ್ತಾರೆ' ಎಂಬ ಭಾವನೆ ಅಥವಾ 'ಟೇಕನ್ ಫಾರ್ ಗ್ರ್ಯಾಂಟೆಡ್' ರೀತಿಯ ಧೋರಣೆ ಇತರರಲ್ಲಿ ಬೆಳೆದು, ಅದು ನಮ್ಮ ಮೇಲೆ ಇನ್ನಷ್ಟು ಒತ್ತಡ ಬೀಳುವುದಕ್ಕೆ ಕಾರಣವಾಗಬಹುದು.

ಎಲ್ಲದಕ್ಕೂ 'ಎಸ್' ಎನ್ನುತ್ತಾ, ಎಲ್ಲವನ್ನೂ ತಲೆಯ ಮೇಲೆ ಹಾಕಿಕೊಳ್ಳುವ ಮನುಷ್ಯ ಕುಸಿದುಹೋಗುತ್ತಾನೆ, ದಣಿವು ಮತ್ತು ಒತ್ತಡದಿಂದ ಸೋತುಹೋಗುತ್ತಾನೆ. ತನ್ನ ಸಹಜ ಸಾಮರ್ಥ್ಯಕ್ಕಿಂತಲೂ, ಮಿತಿಗಿಂತಲೂ ಹೆಚ್ಚಿನ ಕೆಲಸಗಳನ್ನು ಗಂಟುಹಾಕಿಕೊಂಡವನು 'ಮೂರ್ಖ' ಎನಿಸಿಕೊಳ್ಳುತ್ತಾನೆ. ಆದರೆ ವಿವೇಕಿಯಾದವನು ತನ್ನ ಸಾಮರ್ಥ್ಯವನ್ನು ಅರಿತು, ಅದಕ್ಕೆ ತಕ್ಕನಾಗಿ ಕೆಲಸ-ಕಾರ್ಯಗಳನ್ನು ಅಚ್ಚುಕಟ್ಟಾಗಿ ಮಾಡಿಕೊಂಡು ಹೋಗುತ್ತಾನೆ.

ಬೇರೆಯವರಿಗೆ ಸಹಾಯ ಮಾಡುವುದು ಖಂಡಿತ ಒಳ್ಳೆಯದು. ಆದರೆ ಅದಕ್ಕೂ ಒಂದು ಮಿತಿ ಇರಬೇಕು. ಅದರಲ್ಲೂ ನಿರ್ದಿಷ್ಟವಾಗಿ, ಪುಕ್ಕಟೆಯಾಗಿ ಮಾಡುವ ಸಹಾಯಕ್ಕೆ ಅನೇಕ ಸಂದರ್ಭಗಳಲ್ಲಿ ಬೆಲೆ ಇರುವುದಿಲ್ಲ. ಅಪಾತ್ರರಿಗೆ ದಾನ ಮಾಡುವುದು ಅಥವಾ ನೆರವಾಗುವುದು ತರವಲ್ಲ, ಅದರಿಂದ ಏನೂ ಲಾಭವಿಲ್ಲ. ಕೆಲವು ಸಂದರ್ಭಗಳಲ್ಲಿ ಮಾಡುವ ಸಹಾಯ ಸರಿ; ಆದರೆ ಪ್ರತಿ ಸಲವೂ ಅದು ಅಭ್ಯಾಸವಾಗಬಾರದು. ಯಾವಾಗಲೂ ಎಲ್ಲರ ನಿರೀಕ್ಷೆಗಳನ್ನು ಪೂರೈಸುವುದು ಅಸಾಧ್ಯ. ಅಷ್ಟಕ್ಕೂ, ಈ ಜಗತ್ತಿನಲ್ಲಿ ಅತ್ಯಂತ ಒಳ್ಳೆಯವರ ತರಹ ಕಾಣಿಸಿಕೊಂಡು ಸಾಧಿಸಬೇಕಾದ್ದು ಅಥವಾ ದಾಖಲೆ ಬರೆಯುವಂಥದ್ದು ಏನಿದೆ ಎಂದು ನಾವು ವಿಚಾರ ಮಾಡಬೇಕು.

'ಇಲ್ಲ' ಎನ್ನುವುದೊಂದು ಪೂರ್ಣವಾಕ್ಯ, ಇದಕ್ಕೆ ವಿವರಣೆ, ಸ್ಪಷ್ಟೀಕರಣಗಳ ಅವಶ್ಯಕತೆಯಿಲ್ಲ. ಕ್ಷಮೆಯನ್ನು ಕೋರುವ ಅಗತ್ಯವೂ ಇಲ್ಲ. 'ಇಲ್ಲ' ಎಂಬುದು ಕೇವಲ ನಿರಾಕರಣೆ ಅಷ್ಟೇ. ನಿರಾಕರಣೆಗೆ ನಮ್ಮ ಮನಸ್ಸು ಸಮ್ಮತಿಸಿದೆ ಅಂದರೆ ತೊಂದರೆಯಿಲ್ಲ; ಆದರೆ 'ಇಲ್ಲ' ಎನ್ನುವಲ್ಲಿ ನಮ್ಮಲ್ಲಿ ಗೊಂದಲಗಳು ಇರಬಾರದು. 'ಇಲ್ಲ' ಎನ್ನುವುದನ್ನು ಕಠಿಣವಾಗಿ ಹೇಳುವ ಅಗತ್ಯವಿಲ್ಲ, ಆದರೆ ಅದನ್ನು ಸ್ಪಷ್ಟವಾಗಿ, ನೇರವಾಗಿ, ಆತ್ಮವಿಶ್ವಾಸದಿಂದ ಹೇಳಬೇಕು.

ಅಷ್ಟಕ್ಕೂ, 'ಇಲ್ಲ' ಎನ್ನುವುದು ಒಂದು ಶಕ್ತಿಶಾಲಿ ಪದ. ಅದರ ಬಳಕೆಯು ನಮ್ಮ ಆತ್ಮವಿಶ್ವಾಸಕ್ಕೆ, ಆತ್ಮಗೌರವಕ್ಕೆ ಮತ್ತು ಸಮತೋಲನದ ಜೀವನಕ್ಕೆ ದಾರಿ ತೋರಿಸುತ್ತದೆ. ಆದರೆ ಅದಕ್ಕೂ ಮೊದಲು ನಮ್ಮ ಆದ್ಯತೆಗಳು ಮತ್ತು ಗುರಿಗಳು ಸ್ಪಷ್ಟವಾಗಿರಬೇಕು. ನಮ್ಮ ಜೀವನದ ನಿಯಂತ್ರಣ ನಮ್ಮ ಕೈಯಲ್ಲೇ ಇರಬೇಕು. 'ಹೌದು' ಎಂದರೆ ಅವಕಾಶ, 'ಇಲ್ಲ' ಎಂದರೆ ನಮ್ಮ ಗಡಿಗಳ/ಮಿತಿಗಳ ಅರಿವು. Saying No means you know your limits. 'ಹೌದು' ಮತ್ತು 'ಇಲ್ಲ' ಎರಡೂ ಸಮಾನವಾಗಿ ಮುಖ್ಯ. ನಾವೆಲ್ಲರೂ ಆಯಾ ಪರಿಸ್ಥಿತಿಗೆ ತಕ್ಕಂತೆ 'ಹೌದು' ಅಥವಾ 'ಇಲ್ಲ' ಎನ್ನುವುದನ್ನು ಕಲಿಯಬೇಕು, ಅಭ್ಯಾಸ ಮಾಡಬೇಕು. ಅದರಲ್ಲೂ ನಿರ್ದಿಷ್ಟವಾಗಿ ನಮಗೆ ಒಗ್ಗದ ಪ್ರಸ್ತಾವನೆ/ಹೊಣೆಗಾರಿಕೆ ಎದುರಾದಾಗ 'ಇಲ್ಲ' ಎನ್ನುವುದೇ ಹೆಚ್ಚು ಸೂಕ್ತ. ಅದು ನಮ್ಮ ಜೀವನವನ್ನು, ಆರೋಗ್ಯವನ್ನು ಇನ್ನಷ್ಟು ಸಮೃದ್ಧಗೊಳಿಸುತ್ತದೆ.

(ಲೇಖಕರು ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಸಹಾಯಕ ಉಪಾಧ್ಯಕ್ಷರು)

ಸೇವೆ ಸಹಬಾಳ್ವೆಯ ಪ್ರತೀಕ ಧರ್ಮಸ್ಥಳ

ಧರ್ಮೋತ್ಕರ್ಷ
ಉತ್ಕರ್ಷ್ ಕೆ.ಎಸ್.
vveditoped@gmail.com

ಧಾರ್ಮಿಕ ನಂಬಿಕೆ, ಸಂಪ್ರದಾಯ ಮತ್ತು ಸಾಮಾಜಿಕ ಸೇವೆಗಳಿಗೆ ಹೆಸರುವಾಸಿಯಾಗಿರುವ 'ದೇಗುಲ ಪಟ್ಟಣ' ಧರ್ಮಸ್ಥಳವು ಕೋಟ್ಯಂತರ ಹಿಂದೂಗಳ ಶ್ರದ್ಧಾಕೇಂದ್ರವಾಗಿ ಸಾಕಷ್ಟು ವರ್ಷಗಳಿಂದ ತನ್ನದೇ ಆದ ಛಾಪನ್ನು ಮೂಡಿಸಿದೆ. ಶ್ರೀ ಮಂಜುನಾಥ ದೇವಾಲಯದ ಧರ್ಮಾಧಿಕಾರಿಗಳಾದ ಡಾ. ಡಿ.ವೀರೇಂದ್ರ ಹೆಗ್ಗಡೆ ಅವರು ಪ್ರಸ್ತುತ 'ಚಂಡಮಾರುತದ ಕೇಂದ್ರ'ದಲ್ಲಿ ನಿಂತಿದ್ದಾರೆ. ವ್ಯಾಪಕ ಶ್ರೇಣಿಯ ದತ್ತಿ ಚಟುವಟಿಕೆಗಳಿಗೆ ಮತ್ತು ಶೈಕ್ಷಣಿಕ ಉಪಕ್ರಮಗಳಿಗೆ ಹೆಸರುವಾಸಿಯಾಗಿರುವ ಹೆಗ್ಗಡೆಯವರು, ಧಾರ್ಮಿಕ ವಲಯಗಳನ್ನೂ ಮೀರಿದ ಗೌರವಾನ್ವಿತ ವ್ಯಕ್ತಿಯಾಗಿದ್ದಾರೆ.

ಆದರೆ, ಶ್ರೀಕ್ಷೇತ್ರದ ವಿರುದ್ಧ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಮತ್ತು ಸಾರ್ವಜನಿಕ ಅರ್ಜಿಗಳ ಸ್ವರೂಪದಲ್ಲಿ ಹೊಮ್ಮಿದ ಹಠಾತ್ ಆರೋಪಗಳು ಭಕ್ತರನ್ನು ಕ್ಷಣಕಾಲ ಬೆಚ್ಚಿ ಬೀಳಿಸಿದ್ದು ನಿಜ. ಗಣನೀಯ ವರ್ಷಗಳಿಂದ ಧಾರ್ಮಿಕ ಸಾಮರಸ್ಯಕ್ಕೆ ಮತ್ತು ಲೋಕೋಪಕಾರಕ್ಕೆ ಸಂಕೇತವಾಗಿ ನಿಂತಿರುವ ಶ್ರೀಕ್ಷೇತ್ರದ ಖ್ಯಾತಿಯ ಮೇಲೆ ಬಕಪಕ್ಷಿಗಳು ಕರಿನೆರಳನ್ನು ಬೀರಿದ್ದರ ಪರಿಣಾಮವಿದು. ನೂರಾರು ವರ್ಷಗಳ ಇತಿಹಾಸವಿರುವ ಧರ್ಮಸ್ಥಳದ ಬಗ್ಗೆ ಅಪಪ್ರಚಾರವನ್ನು ಮಾಡಿ, ತಲೆಬುಡವಿಲ್ಲದ ಆರೋಪಗಳನ್ನು ಮುಂಚೂಣಿಗೆ ತರುವ ಮುಖಾಂತರ, ಶ್ರೀಕ್ಷೇತ್ರವನ್ನು ಕೊಲೆಗಳಿಗೆ ಮತ್ತು ಬುರುಡೆಗಳಿಗೆ ಸೀಮಿತವಾಗಿ ಇಡಬೇಕೆಂದು ಕೆಲವಷ್ಟು ವಿಕ್ಷಿಪ್ತರು ವ್ಯವಸ್ಥಿತವಾಗಿ ಪ್ರಯತ್ನಿಸುತ್ತಿರುವುದು ದುರ್ದೈವದ ಸಂಗತಿ.

ವಾಸ್ತವದಲ್ಲಿ, ಧಾರ್ಮಿಕ ನಂಬಿಕೆಗಳು ಮತ್ತು ಶ್ರೀಕ್ಷೇತ್ರದ ಮಹಿಮೆಯಿಂದ ಮಾತ್ರವಲ್ಲದೆ ಧರ್ಮಾಧಿಕಾರಿ ಪೂಜ್ಯ ವೀರೇಂದ್ರ ಹೆಗ್ಗಡೆಯವರ ನೇತೃತ್ವದಲ್ಲಿ ನಡೆಯುತ್ತಲೇ ಬಂದಿರುವ ಅನೇಕ ಸಾಮಾಜಿಕ ಮತ್ತು ಸೇವಾಚಟುವಟಿಕೆಗಳಿಂದ ಧರ್ಮಸ್ಥಳವು ಹೆಸರುವಾಸಿಯಾಗಿದೆ. ಈ ಕುರಿತಾದ ಪಕ್ಷಿನೋಟ ಇಲ್ಲಿದೆ:

ಆರೋಗ್ಯ ಸೇವೆಗಳು: ವೈದ್ಯರ ಪ್ರಯೋಗಾಲಯ, ಔಷಧಿ ಮತ್ತು ತಪಾಸಣಾ ವ್ಯವಸ್ಥೆಗಳನ್ನು ಹೊಂದಿರುವ ಸಂಚಾರಿ ಆಸ್ಪತ್ರೆಗಳ ಮೂಲಕ ವೈದ್ಯಕೀಯ ಸೇವೆಗಳು ಗ್ರಾಮೀಣ ಪ್ರದೇಶವನ್ನೂ ತಲುಪುತ್ತಿವೆ. ಮಿಕ್ಕಂತೆ ಎಸ್‌ಡಿಎಂ ಟ್ರಸ್ಟ್ ಅಡಿಯಲ್ಲಿ ಬರುವ ಸಾಮಾನ್ಯ ಆಸ್ಪತ್ರೆಗಳು, ದಂತ ಆಸ್ಪತ್ರೆಗಳು, ಆಯುರ್ವೇದ ಮತ್ತು ನೈಸರ್ಗಿಕ ಚಿಕಿತ್ಸಾ ಕೇಂದ್ರಗಳು, ನೇತ್ರ ಚಿಕಿತ್ಸಾ ಆಸ್ಪತ್ರೆಗಳು ಕೂಡ ಸಾಕಷ್ಟು ವರ್ಷಗಳಿಂದ ಅನನ್ಯ ಸೇವೆಯನ್ನು ನೀಡುತ್ತಿವೆ. ಜನರಿಗೆ ಉಚಿತ ಆರೋಗ್ಯ ಸೇವೆ ನೀಡುವ ಸದಾಶಯದ ಭಾಗವಾಗಿ ಧರ್ಮಸ್ಥಳದಲ್ಲಿ ವೈದ್ಯಕೀಯ ಶಿಬಿರಗಳು, ರಕ್ತದಾನ ಶಿಬಿರಗಳು, ಕಣ್ಣಿನ ತಪಾಸಣೆ ಮತ್ತು ಶಸ್ತ್ರಚಿಕಿತ್ಸೆ ಮುಂತಾದ ಚಟುವಟಿಕೆಗಳನ್ನು ಅನೇಕ ವರ್ಷಗಳಿಂದ ನಿಯತವಾಗಿ ನಡೆಸಿಕೊಂಡು ಬರಲಾಗುತ್ತಿದೆ.

ದಾನಧರ್ಮ ಮತ್ತು ಅನ್ನದಾನ: ಧರ್ಮಸ್ಥಳದಲ್ಲಿ ಪ್ರತಿದಿನ ಲಕ್ಷಾಂತರ ಯಾತ್ರಿಕರಿಗೆ/ಭಕ್ತರಿಗೆ ಅನ್ನಪೂರ್ಣ ಭವನದಲ್ಲಿ ಸ್ವಚ್ಛ ಮತ್ತು ಪುಷ್ಟಿದಾಯಕ ಊಟವನ್ನು ಉಚಿತವಾಗಿ ನೀಡಲಾಗುತ್ತದೆ. ತೊಂದರೆಗೀಡಾದವರಿಗೆ ಆರ್ಥಿಕ, ವೈದ್ಯಕೀಯ, ಶೈಕ್ಷಣಿಕ ವಿಷಯಗಳಲ್ಲಿ ಸಹಾಯ ಮಾಡಲಾಗುತ್ತದೆ. ವೃದ್ಧರು, ಅಂಗವಿಕಲರು ಮತ್ತು ದೈನ್ಯಾವಸ್ಥೆಯಲ್ಲಿರುವವರಿಗೆ ಮಾಸಿಕ ಪಿಂಚಣಿ ಮತ್ತು ನೆರವನ್ನು ನೀಡಲಾಗುತ್ತದೆ.

ಶಿಕ್ಷಣ ಮತ್ತು ಕೌಶಲಾಭಿವೃದ್ಧಿ: ಶ್ರೀಕ್ಷೇತ್ರವು ಶಿಕ್ಷಣ ಮತ್ತು ಕೌಶಲಾಭಿವೃದ್ಧಿಗೆ ಹೆಚ್ಚು ಪ್ರಾಮುಖ್ಯವನ್ನು ನೀಡುತ್ತಿದೆ. ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಅಡಿಯಲ್ಲಿ 50ಕ್ಕೂ ಹೆಚ್ಚು ಶಾಲೆಗಳು ಮತ್ತು ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ ಎಂಜಿನಿಯರಿಂಗ್, ಮೆಡಿಕಲ್, ಡೆಂಟಲ್, ಆಯುರ್ವೇದ, ಕಾನೂನು, ಮ್ಯಾನೇಜ್‌ಮೆಂಟ್ ಮುಂತಾದ ವಿಭಾಗಗಳಿವೆ. ಸಿದ್ದವನ ಗುರುಕುಲದಲ್ಲಿ ವಿದ್ಯಾರ್ಥಿಗಳಿಗೆ ಉಚಿತ ವಸತಿ ನೀಡಲಾಗುತ್ತದೆ ಮತ್ತು ಯೋಗ, ಸಂಸ್ಕೃತ, ಧಾರ್ಮಿಕ, ಸಾಂಸ್ಕೃತಿಕ ಶಿಕ್ಷಣವನ್ನು ನೀಡಲಾಗುತ್ತದೆ. ಈ ಉಪಕ್ರಮದಿಂದಾಗಿ ಸಾವಿರಾರು ಮಕ್ಕಳಿಗೆ ಮೌಲ್ಯಾಧಾರಿತ ಶಿಕ್ಷಣ ಸಿಗುತ್ತಿದೆ. ಅಲ್ಲದೆ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿ ವೇತನ, ಪಠ್ಯಪುಸ್ತಕ ಮತ್ತು ವಸತಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಸ್ವಯಂ ಉದ್ಯೋಗ ಮತ್ತು ಆರ್ಥಿಕ ಸಬಲೀಕರಣ: ಗ್ರಾಮೀಣ ಯುವಕರಿಗೆ ಸ್ವಯಂ ಉದ್ಯೋಗದ ಅವಕಾಶಗಳನ್ನು ಒದಗಿಸಲೆಂದು ಧರ್ಮಸ್ಥಳ ಟ್ರಸ್ಟ್ ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತಿದೆ. 'ರುಡ್‌ಸೆಟ್' ತರಬೇತಿ ಕೇಂದ್ರಗಳಲ್ಲಿ ಕೃಷಿ, ಕೈಗಾರಿಕೆ, ಸೇವಾ ಕ್ಷೇತ್ರಗಳಲ್ಲಿ ಉದ್ಯಮಶೀಲತಾ ತರಬೇತಿಯನ್ನು ನೀಡಲಾಗುತ್ತಿದೆ ಮತ್ತು ಇವು 17 ರಾಜ್ಯಗಳಲ್ಲಿ 27 ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ. ಇದರಿಂದಾಗಿ ಲಕ್ಷಾಂತರ ಯುವಜನರಿಗೆ ಪ್ರಯೋಜನವಾಗುತ್ತಿದೆ. 'ಎಸ್‌ಕೆಡಿಆರ್‌ಡಿಪಿ' ಯೋಜನೆಯ ಮೂಲಕ ಸ್ವಸಹಾಯ ಗುಂಪುಗಳನ್ನು ಬಲಪಡಿಸಿ ಮಹಿಳಾ ಸಬಲೀಕರಣ, ಮೈಕ್ರೋಫೈನಾನ್ಸ್, ಆರೋಗ್ಯ, ಶಿಕ್ಷಣ, ಗೃಹನಿರ್ಮಾಣ ಮತ್ತು ಇಂಧನ ಸಂಬಂಧಿತ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ಜತೆಗೆ ಬ್ಯಾಂಕುಗಳ ಸಹಯೋಗದಲ್ಲಿ ಯುವಕರಿಗೆ ಸಾಲಸೌಲಭ್ಯ ಮತ್ತು ತಾಂತ್ರಿಕ ಮಾರ್ಗದರ್ಶನವನ್ನು ನೀಡಲಾಗುತ್ತಿದೆ.

ಪರಿಸರ ಸಂರಕ್ಷಣೆ: ಶ್ರೀಕ್ಷೇತ್ರದ ವತಿಯಿಂದ ಸಂಸ್ಕೃತಿ, ಪರಂಪರೆ ಮತ್ತು ಪರಿಸರ ಸಂರಕ್ಷಣೆಗೆ ವಿಶೇಷ ಪ್ರಾಮುಖ್ಯವನ್ನು ನೀಡಲಾಗುತ್ತಿದೆ. 224ಕ್ಕೂ ಹೆಚ್ಚು ಪ್ರಾಚೀನ ದೇವಾಲಯಗಳ ಜೀರ್ಣೋದ್ಧಾರಕ್ಕೆ ಶ್ರೀಕ್ಷೇತ್ರವು ಟೊಂಕ ಕಟ್ಟಿದೆ. ಪ್ರತಿವರ್ಷವೂ ನಡೆಸಲಾಗುವ ಸರ್ವಧರ್ಮ ಸಮಾವೇಶದಲ್ಲಿ ವಿವಿಧ ಧರ್ಮಗಳ ನಾಯಕರು, ಪಂಡಿತರು ಮತ್ತು ಸಮಾಜ ಸೇವಕರು ಪಾಲ್ಗೊಂಡು, ಸಹಾನುಭೂತಿ-ಸಹಬಾಳ್ವೆ-ಸಾಮಾಜಿಕ ಜಾಗೃತಿಯ ಬಗ್ಗೆ ಚರ್ಚಿಸುತ್ತಾರೆ. ಯಕ್ಷಗಾನ, ನವಲಗುಂದ ಕಲೆ, ಕಸ್ತೂರಿ ಎಂಬ್ರಾಯ್ಡರಿ ಮುಂತಾದ ಕಲೆಗಳಿಗೆ ಉತ್ತೇಜನ ನೀಡಲಾಗುತ್ತಿದೆ. ಮಂಜುಶ್ರೀ ಕಲಾಸಂಗ್ರಹಾಲಯ ಮುಂತಾದವುಗಳ ಮೂಲಕ ಭಾರತೀಯ ಪರಂಪರೆ ಮತ್ತು ಕಲಾಪ್ರಕಾರಗಳನ್ನು ಸಂರಕ್ಷಿಸಲಾಗುತ್ತಿದೆ. ಜತೆಗೆ ಗಿಡ-ಮರಗಳನ್ನು ನೆಡುವಿಕೆ, ನದಿ-ತೀರ್ಥಗಳ ಶುದ್ಧೀಕರಣ ಮತ್ತು ಪರಿಸರ ಜಾಗೃತಿ ಅಭಿಯಾನಗಳನ್ನು ನಿರಂತರವಾಗಿ ನಡೆಸಲಾಗುತ್ತಿದೆ.

ಕರ್ನಾಟಕದ ಪಾಲಿನ ಅಚ್ಚಳಿಯದ ಸೇವಾಧಾಮವಾಗಿರುವ ಧರ್ಮಸ್ಥಳದಲ್ಲಿ ಧರ್ಮ ಮತ್ತು ದಯೆಯ ಆಚರಣೆಯೊಂದಿಗೆ ಸಮಾಜಸೇವೆಯಂಥ ಮಹೋನ್ನತ ಕಾರ್ಯವೂ ನಡೆಯುತ್ತಿದೆ. ಆದರೆ ಇವುಗಳನ್ನರಿಯದೆ, ಅರ್ಥವಿಲ್ಲದೆ ಮತ್ತು ಅಸಂಬದ್ಧವಾಗಿ ಟೀಕೆ ಮಾಡುವವರ ಸಂಖ್ಯೆ ಹೆಚ್ಚುತ್ತಿರುವುದು ವಿಷಾದನೀಯ. ಜನಾಂಗದ ಏಳಿಗೆಗಾಗಿ ಶ್ರಮಿಸುತ್ತಿರುವ ಇಲ್ಲಿನ ಸಂಸ್ಥೆಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಟ್ರೋಲ್ ಮಾಡುವವರು, ಸಮಾಜಸೇವೆಯ ಅರ್ಥವನ್ನೇ ಅರಿಯದವರಂತೆ ಕಾಣುತ್ತಾರೆ. ಸಮಾಜದ ಪ್ರಗತಿಗೆ ದಾರಿದೀಪವಾಗಿರುವ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಮತ್ತು ಅಲ್ಲಿನ ವ್ಯವಸ್ಥೆಗೆ ಕಳಂಕವನ್ನು ಮೆತ್ತಲು ಯತ್ನಿಸುವುದು ಕೇವಲ ಅಜ್ಞಾನ ಮತ್ತು ಅಸೂಯೆಯ ಪ್ರತೀಕವಾಗಿದೆ. ಅದೇನೇ ಇರಲಿ, ಕೊನೆಗೆ ಗೆಲುವಾಗುವುದು ಧರ್ಮದ್ದೇ...

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:231

ಸಮಾಚಾರ ಸಣ್ಣದಲ್ಲ

ದೇಗುಲದ ಆನೆ ದಾಳಿ: ಮಾವುತ ಸಾವು

ಅಲಪ್ಪುಳ: ಕೇರಳದ ಕರಾವಳಿ ಜಿಲ್ಲೆಯ ಹರಿಪಾಡ್‌ನಲ್ಲಿರುವ ದೇವಸ್ಥಾನದ ಆನೆ ಇಬ್ಬರು ಮಾವುತರ ಮೇಲೆ ದಾಳಿ ನಡೆಸಿದೆ. ಇದರ ಪರಿಣಾಮವಾಗಿ ಒಬ್ಬರು ಮೃತಪಟ್ಟು, ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ ಕೆಲವು ತಿಂಗಳುಗಳಿಂದ ಸ್ಕಂದನ್ ಎಂಬ ಆನೆಗೆ ಮದವೇರಿತ್ತು. ಹೀಗಾಗಿ ದೇವಸ್ಥಾನದ ಅರ್ಚಕರ ಮನೆಯಲ್ಲಿ ಕಟ್ಟಿಹಾಕಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ. ಆದರೆ ಭಾನುವಾರ ಮಧ್ಯಾಹ್ನ ಮದವೇರಿದ ಸ್ಕಂದನ್ ಆನೆ ಏಕಾಏಕಿ, ಸುನಿಲ್ ಕುಮಾರ್ ಎಂಬ ಮಾವುತನ ಮೇಲೆ ದಾಳಿ ನಡೆಸಿದೆ. ದೇವಸ್ಥಾನಕ್ಕೆ ಸ್ಥಳಾಂತರಿಸುವಾಗ ಮತ್ತೆ ಕೋಪಗೊಂಡ ಸ್ಕಂದನ್, ಅದರ ನಿರ್ವಾಹಕ ಮುರಳೀಧರನ್ ಅವರ ಮೇಲೂ ಗಂಭೀರವಾಗಿ ದಾಳಿ ನಡೆಸಿತು. ಮುರಳೀಧರನ್ ಅವರನ್ನು ಆಸ್ಪತ್ರೆಗೆ ಸಾಗಿಸುವ ದಾರಿ ಮಧ್ಯದಲ್ಲೇ ಮೃತಪಟ್ಟಿದ್ದಾರೆ. ಗಾಯಳು ಸುನಿಲ್ ಕುಮಾರ್ ಸ್ಥಿತಿಯೂ ಗಂಭೀರವಾಗಿದೆ ಎಂದು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

9 ನಕ್ಸಲರ ಶರಣಾಗತಿ

ಲತೇಹಾರ್: ನಿಷೇಧಿತ ಜೆಜೆಎಂಪಿ ಮಾವೋವಾದಿ ಸಂಘಟನೆಯ ಒಂಬತ್ತು ಸದಸ್ಯರು (ನಕ್ಸಲರು) ಸೋಮವಾರ ಜಾರ್ಖಂಡ್‌ನ ಲತೇಹಾರ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳ ಮುಂದೆ ಶರಣಾಗಿದ್ದಾರೆ. ನಕ್ಸಲ್ ಚಟುವಟಿಕೆಯಲ್ಲಿ ಸಕ್ರಿಯಯಾಗಿದ್ದ ಇವರ ವಿರುದ್ಧ ಅನೇಕ ಪ್ರಕರಣಗಳು ದಾಖಲಾಗಿದ್ದವು. ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಭದ್ರತಾ ಪಡೆಗಳು ವಶಪಡಿಸಿಕೊಂಡಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಇವರ ತಲೆಗೆ ಒಟ್ಟು ರು. 23 ಲಕ್ಷ ಇನಾಮು ಘೋಷಿಸಲಾಗಿತ್ತು. 21 ಪ್ರಕರಣಗಳಲ್ಲಿ ಬೇಕಾಗಿದ್ದ ನಕ್ಸಲ ಸದಸ್ಯ ಮುಖೇಶ್ ಗಂಜು ಶರಣಾಗಿದ್ದಾನೆ. ಉಳಿದಂತೆ 10 ಪ್ರಕರಣಗಳಲ್ಲಿ ಬೇಕಾಗಿದ್ದ ಅಖಿಲೇಶ್ ರವೀಂದ್ರ, ಯಾದವ್ ಮತ್ತು ಗಂಜು ವಿರುದ್ಧ ದಾಖಲಾಗಿರುವ ಒಂಬತ್ತು ಪ್ರಕರಣಗಳು ಸೇರಿದಂತೆ ಅನೇಕ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಒಂಬತ್ತು ಮಂದಿ ನಕ್ಸಲರು ಶರಣಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಶರಣಾದವರಿಂದ ಎಕೆ 47, ರೈಫಲ್‌ಗಳು, ಕಾಟ್ರಿಡ್ಜ್ ಸೇರಿದಂತೆ ಮದ್ದುಗುಂಡುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಮೋದಿ-ಪುಟಿನ್ ಮಾತುಕತೆ | ಶಾಂಘೈ ಶೃಂಗದಲ್ಲಿ ಭಾರತ ರಾಯಭಾರ ಯಶಸ್ವಿ

ಭಾರತ-ರಷ್ಯಾ ಮೈತ್ರಿ ಬಲವರ್ಧನೆ

ಬೀಜಿಂಗ್: ಶಾಂಘೈ ಸಹಕಾರ ಶೃಂಗಸಭೆಯಲ್ಲಿ ಭಾಗಿಯಾಗಲು ಚೀನಾಕ್ಕೆ ತೆರಳಿದ ಪ್ರಧಾನಿ ನರೇಂದ್ರ ಮೋದಿ ಹಲವು ಜಾಗತಿಕ ನಾಯಕರನ್ನು ಭೇಟಿ ಆಗಿದ್ದಾರೆ. ವಿಶೇಷವೇನೆಂದರೆ ಮೋದಿಯನ್ನು ಕಂಡ ಕೂಡಲೇ ರಷ್ಯಾ ಅಧ್ಯಕ್ಷ ವಾಡ್ಲಿಮಿರ್ ಪುಟಿನ್ ಅವರು ಬಹಳ ಗೌರವದಿಂದ ಬಿಗಿದಪ್ಪಿಕೊಂಡಿದ್ದಾರೆ. ಶೃಂಗಸಭೆಯ ಹೊರತಾಗಿ ಇಬ್ಬರು ನಾಯಕರು ದ್ವಿಪಕ್ಷೀಯ ಸಭೆಯನ್ನು ನಡೆಸಿದ್ದಾರೆ.

ರಷ್ಯಾದ ತೈಲ ಆಮದಿನ ಮೇಲೆ ಅಮೆರಿಕ ಭಾರತದ ಮೇಲೆ ಶೇಕಡಾ 50ರಷ್ಟು ಸುಂಕವನ್ನು ವಿಧಿಸಿದ ನಂತರ ಮೊದಲ ಬಾರಿಗೆ ಈ ಭೇಟಿ ನಡೆದಿದೆ. ಪುಟಿನ್ ಭೇಟಿ ಕುರಿತು ಮೋದಿ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದು, 'ಅವರನ್ನು ಭೇಟಿಯಾಗುವುದು ಯಾವಾಗಲೂ ಸಂತೋಷವಾಗುತ್ತದೆ' ಎಂದು ಬರೆದುಕೊಂಡಿದ್ದಾರೆ.

ಮೋದಿ, ಪುಟಿನ್ ಹಾಗೂ ಚೀನಾ ಅಧ್ಯಕ್ಷ ಜಿನ್‌ಪಿಂಗ್ ಅವರು ಒಟ್ಟಿಗೆ ನಿಂತು ಮಾತನಾಡುತ್ತಿರುವ ಫೋಟೋ ಹಾಗೂ ವಿಡಿಯೋಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿವೆ. ಅಮೆರಿಕದೊಂದಿಗಿನ ಅವರ ಸಂಬಂಧಗಳು ಹದಗೆಟ್ಟಿರುವ ನಡುವೆಯೇ ಮೂವರು ನಾಯಕರ ನಡುವಿನ ಸ್ನೇಹಪರ ಮಾತುಕತೆಗಳು ನಡೆಯುತ್ತಿವೆ. ಪ್ರಧಾನಿ ಮೋದಿ ಅವರು ಎಸ್‌ಸಿಒ ಶೃಂಗಸಭೆಯ ಹೊರತಾಗಿ ಕ್ಸಿ ಜಿನ್‌ಪಿಂಗ್ ಅವರೊಂದಿಗೆ 50 ನಿಮಿಷಗಳಿಗೂ ಹೆಚ್ಚು ಕಾಲ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಇಬ್ಬರು ನಾಯಕರು ತಮ್ಮ ಗಡಿ ವ್ಯತ್ಯಾಸಗಳನ್ನು ಪರಿಹರಿಸಲು ಮತ್ತು ಸಹಕಾರವನ್ನು ಬಲಪಡಿಸಲು ಪ್ರತಿಜ್ಞೆ ಮಾಡಿದರು. ತಮ್ಮ ಆರಂಭಿಕ ಭಾಷಣದಲ್ಲಿ, ಪ್ರಧಾನಿ ಮೋದಿ ಅವರು ಭಾರತ-ಚೀನಾ ಸಂಬಂಧಗಳನ್ನು ಪರಸ್ಪರ ನಂಬಿಕೆ, ಗೌರವ ಮತ್ತು ಸೂಕ್ಷ್ಮತೆಯ ಆಧಾರದ ಮೇಲೆ ಮುಂದಕ್ಕೆ ಕೊಂಡೊಯ್ಯಲು ಬದ್ಧ ಎಂದು ಹೇಳಿದ್ದಾರೆ.

ಮೋದಿ –ಪುಟಿನ್ ನೇತೃತ್ವದಲ್ಲಿ ಭಾರತ ಮತ್ತು ರಷ್ಯಾ ದ್ವಿಪಕ್ಷೀಯ ಮಾತುಕತೆ.

ಟ್ರೋಲ್‌ಗೆ ಗುರಿಯಾದ ಪಾಕ್ ಪ್ರಧಾನಿ

ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಶೃಂಗಸಭೆಯ ವೇಳೆ ಪಾಕಿಸ್ತಾನದ ಪ್ರಧಾನ ಮಂತ್ರಿ ಶೆಹಬಾಜ್ ಶರೀಫ್ ಟ್ರೋಲ್‌ಗೆ ಗುರಿಯಾಗಿದ್ದಾರೆ. ಈ ಸಂಬಂಧ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಸುದ್ದಿ ಸಂಸ್ಥೆಯೊಂದು ವಿಡಿಯೊವನ್ನು ಹಂಚಿಕೊಂಡಿದೆ. ಫೋಟೊ ಚಿತ್ರೀಕರಣದ ಸಂದರ್ಭದಲ್ಲಿ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರನ್ನು ಭೇಟಿಯಾಗಲು ಪಾಕ್ ಪ್ರಧಾನಿ ತಡಕಾಡುತ್ತಿರುವುದು ದೃಶ್ಯದಲ್ಲಿ ಕಂಡುಬಂದಿದೆ. ಬಳಿಕ ರಷ್ಯಾ ಅಧ್ಯಕ್ಷರನ್ನು ಹಿಂಬಾಲಿಸುತ್ತಿರುವುದು ಕೂಡಾ ವಿಡಿಯೊದಲ್ಲಿದೆ. ಇನ್ನೊಂದು ವಿಡಿಯೊದಲ್ಲಿ ಮೋದಿ ಹಾಗೂ ರಷ್ಯಾದ ಅಧ್ಯಕ್ಷ ಬ್ಲಾದಿಮಿರ್ ಪುಟಿನ್ ಪರಸ್ಪರ ಸಂಭಾಷಣೆ ನಡೆಸುತ್ತಾ ಮುಂದೆ ಸಾಗುತ್ತಿರುವಾಗ ಬದಿಯಲ್ಲಿ ನಿಂತು ಶೆಹಬಾಜ್ ಶರೀಫ್ ನೋಡುತ್ತಿರುವ ದೃಶ್ಯವೂ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿವೆ.



ರಷ್ಯಾ, ಚೀನಾ ಅಧ್ಯಕ್ಷರ ಜೊತೆ ಮೋದಿ

ಒಂದೇ ಕಾರಿನಲ್ಲಿ ಪ್ರಯಾಣ

ಮೋದಿ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಚೀನಾದ ಟಿಯಾಂಜಿನ್‌ನಲ್ಲಿ ನಡೆದ ದ್ವಿಪಕ್ಷೀಯ ಸಭೆಯ ಸ್ಥಳಕ್ಕೆ ಒಂದೇ ಕಾರಿನಲ್ಲಿ ಪ್ರಯಾಣಿಸಿದ್ದಾರೆ. ಶಾಂಘೈ ಸಹಕಾರ ಸಂಸ್ಥೆ ಶೃಂಗಸಭೆಯ ನಂತರ ಜಂಟಿ ಪ್ರಯಾಣ ನಡೆಯಿತು. ಪುಟಿನ್ ಅವರೊಂದಿಗಿನ ತಮ್ಮ ಪ್ರಯಾಣದ ಚಿತ್ರವನ್ನು ಹಂಚಿಕೊಂಡ ಪ್ರಧಾನಿ ಮೋದಿ, 'ಶೃಂಗಸಭೆಯ ಸ್ಥಳದಲ್ಲಿ ನಡೆದ ಕಾರ್ಯಕಲಾಪಗಳ ನಂತರ, ಅಧ್ಯಕ್ಷ ಪುಟಿನ್ ಮತ್ತು ನಾನು ನಮ್ಮ ದ್ವಿಪಕ್ಷೀಯ ಸಭೆಯ ಸ್ಥಳಕ್ಕೆ ಒಟ್ಟಿಗೆ ಪ್ರಯಾಣಿಸಿದೆವು' ಎಂದು ಬರೆದುಕೊಂಡಿದ್ದಾರೆ. ಉಭಯ ನಾಯಕರು ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಮೋದಿ-ಪುಟಿನ್ ಆತ್ಮೀಯ ಭೇಟಿ

ತೆಲಂಗಾಣ ನಿಯಮ ಎತ್ತಿ ಹಿಡಿದ ಸುಪ್ರೀಂಕೋರ್ಟ್

ದೆಹಲಿ: ರಾಜ್ಯದಲ್ಲಿ 9ನೇ ತರಗತಿಯಿಂದ 12ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ ರಾಜ್ಯ ಕೋಟಾದ ಡಿಯಲ್ಲಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಅವಕಾಶ ನೀಡುವ ತೆಲಂಗಾಣ ಸರಕಾರದ ಸ್ಥಳೀಯ ನಿಯಮವನ್ನು ಸುಪ್ರೀಂ ಕೋರ್ಟ್ ಸೋಮವಾರ ಎತ್ತಿಹಿಡಿದಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ನ್ಯಾ.ಕೆ. ವಿನೋದ್ ಚಂದ್ರನ್ ಅವರನ್ನೊಳಗೊಂಡ ಪೀಠ, ತೆಲಂಗಾಣ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರಕಾರ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿ ಈ ತೀರ್ಪು ನೀಡಿತು.ವೈದ್ಯಕೀಯ ಪ್ರವೇಶದಲ್ಲಿ ಸ್ಥಳೀಯ ಕೋಟಾದ ಪ್ರಯೋಜನವನ್ನು ಪಡೆಯಲು ಖಾಯಂ ನಿವಾಸಿಯೊಬ್ಬರು ತೆಲಂಗಾಣದಲ್ಲಿ ನಾಲ್ಕು ವರ್ಷಗಳ ಕಾಲ ನಿರಂತರವಾಗಿ ವಿದ್ಯಾಭ್ಯಾಸ ಅಥವಾ ವಾಸಿಸುವ ಅಗತ್ಯವಿಲ್ಲ ಎಂದು ಹೈಕೋರ್ಟ್ ಈ ಹಿಂದೆ ತೀರ್ಪು ನೀಡಿತ್ತು.

ಇದೀಗ ಸುಪ್ರೀಂ ಕೋರ್ಟ್, 2024ರಲ್ಲಿ ತಿದ್ದುಪಡಿ ಮಾಡಲಾದ ತೆಲಂಗಾಣ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಪ್ರವೇಶ ನಿಯಮಗಳು-2017 ಅನ್ನು ಎತ್ತಿಹಿಡಿ ದಿದೆ. ಈ ಮೂಲಕ ರಾಜ್ಯ ಸರಕಾರವು ರಾಜ್ಯದಲ್ಲಿ 9ನೇ ತರಗತಿಯಿಂದ 12ನೇ ತರಗತಿಯವರೆಗೆ ನಿರಂತರವಾಗಿ ವಿದ್ಯಾ ಭ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ ಮಾತ್ರ ರಾಜ್ಯ ಕೋಟಾದ ಅಡಿಯಲ್ಲಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಅವಕಾಶ ನೀಡಿದೆ.

ಅಮೀಬಾ ಸೋಂಕಿಗೆ 2 ಬಲಿ

- ಕೇರಳದಲ್ಲಿ ಮೆದುಳು ತಿನ್ನುವ ಮಾರಕ ಸೋಂಕು
- ದೃಢಪಡಿಸಿದ ಆರೋಗ್ಯ ಇಲಾಖೆ

ಕೋಝಿಕೋಡ್: ಕೇರಳದ ಕೋಝಿಕೋಡ್ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಅಪರೂಪದ ಮತ್ತು ಮಾರಕ ಮೆದುಳಿನ ಸೋಂಕಾದ ಅಮೀಬಿಕ್ ಮೆನಿಂಗೊಎನ್ಸೆಫಾಲಿಟಿಸ್‌ಗೆ ಚಿಕಿತ್ಸೆ ಪಡೆಯುತ್ತಿದ್ದ 3 ತಿಂಗಳ ಮಗು ಸೇರಿದಂತೆ ಇಬ್ಬರು ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ. ಈ ಘಟನೆಯೊಂದಿಗೆ ಆಗಸ್ಟ್ ತಿಂಗಳಲ್ಲಿ ಕೇರಳದಲ್ಲಿ ಈ ಸೋಂಕಿನಿಂದ ಸಾವಿನ ಸಂಖ್ಯೆ ಮೂರಕ್ಕೇರಿದೆ.

ಕೋಝಿಕೋಡ್ ಜಿಲ್ಲೆಯ ಒಮಾಶ್ಶೇರಿಯ ಅಬೂಬಕರ್ ಸಿದ್ದಿಖ್ ಅವರ 3 ತಿಂಗಳ ಮಗು, ಒಂದು ತಿಂಗಳಿಂದ ಚಿಕಿತ್ಸೆ ಪಡೆಯುತ್ತಿತ್ತು. ಆದರೆ ಭಾನುವಾರ ಆರೋಗ್ಯ ಸ್ಥಿತಿ ಹದಗೆಟ್ಟಿದ್ದು, ತೀವ್ರ ನಿಗಾ ಘಟಕದಲ್ಲಿ (ಐಸಿಯು) ಮಗು ಮೃತಪಟ್ಟಿದೆ. ಇನ್ನೊಬ್ಬರು ಮಲಪ್ಪುರಂ ಜಿಲ್ಲೆಯ



ಕಪ್ಪಿಲ್‌ನ 52 ವರ್ಷ ವಯಸ್ಸಿನ ರಮ್ಲಾ ಅವರಿಗೆ ಜುಲೈ 8ರಂದು ರೋಗಲಕ್ಷಣಗಳು ಕಂಡುಬಂದಿದ್ದವು. ಅವರನ್ನು ಆರಂಭದಲ್ಲಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು, ಆದರೆ ಸ್ಥಿತಿ ಗಂಭೀರವಾದಾಗ ಕೋಝಿಕೋಡ್ ವೈದ್ಯಕೀಯ ಕಾಲೇಜಿಗೆ ಸ್ಥಳಾಂತರಿಸಲಾಯಿತು. ಈ ಹಿಂದೆ, ಆಗಸ್ಟ್ 14ರಂದು, ತಾಮರಶ್ಶೇರಿಯ 9 ವರ್ಷದ ಬಾಲಕಿಯೊಬ್ಬಳು ಇದೇ ಸೋಂಕಿನಿಂದ ಇದೇ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಳು. ಆರೋಗ್ಯ ಇಲಾಖೆಯ ಪ್ರಕಾರ, ಕೋಝಿಕೋಡ್, ಮಲಪ್ಪುರಂ ಮತ್ತು ವಯನಾಡ್ ಜಿಲ್ಲೆಗಳಿಂದ ಒಟ್ಟು ಎಂಟು ರೋಗಿಗಳು ಈಗ ಕೋಝಿಕೋಡ್ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮಹಾನಗರ ಪಾಲಿಕೆ, ವಿಜಯಪುರ

ನಂ.ದರಖಾಸ್ತು/ಮನಪಾವಿ/ಲೋ.ಇ/2706/2025-26 ದಿನಾಂಕ: 29.08.2025

ಅಲ್ಪಾವಧಿ ದರಖಾಸ್ತು ಪ್ರಕಟಣೆ

ಮಹಾನಗರ ಪಾಲಿಕೆ ವಿಜಯಪುರ ಮಾಲಿಕತ್ವದ ತ್ಯಾಜ್ಯ ನೀರು ಸಂಸ್ಕರಣಾ ಘಟಕದಲ್ಲಿನ ಯಂತ್ರೋಪಕರಣಗಳಿಗೆ ವಿದ್ಯುತನ್ನು ಸೋಲಾರ ಪ್ಯಾನಲ್ ಮೂಲಕ ಪಡೆಯಲು ಸನ್ 2025-26 ನೇ ಸಾಲಿನ ಜಲ್ ಹಿ ಅಮೃತ್ ಯೋಜನೆಯಡಿ ಕೈಗೊಳ್ಳಲು ಉದ್ದೇಶಿಸಿ ಅನುಮೋದನೆ ಪಡೆದಿರುವುದರಿಂದ ಕೆಳಕಾಣಿಸಿದ ಮಾಹಿತಿ ಪ್ರಕಾರ 110 ಕೆವಿ ವಿದ್ಯುತ್‌ನ್ನು ಸೋಲಾರ ಪ್ಯಾನಲ್ ಮೂಲಕ ಉತ್ಪಾದಿಸಿ ಸಂಗ್ರಹಿಸಿ ಬಳಸುವ ಯೋಜನೆಗೆ ಟೆಂಡರ್ ಕರೆಯಬೇಕಾದ ಕಾರಣ ಡಾಟಾ ರೇಟ ಅವಶ್ಯಕತೆ ಇರುವದರಿಂದ ಕೆಳಕಾಣಿಸಿದ ಮಾಹಿತಿಯನ್ನು ಪರಿಶೀಲನೆ ಮಾಡಿ ಕನಿಷ್ಠ ದರಗಳನ್ನು ಶೀಲ ಬಂದ ಮಾಡಿದ ಲಕೋಟಿಯಲ್ಲಿ ನಮೂದಿಸಿ ಟಪಾಲ್ ಮೂಲಕ ಅಥವಾ ಖುದ್ದಾಗಿ ಬಂದು ಸಲ್ಲಿಸಲು ಇಚ್ಚೆ ಹೊಂದಿದ ಅರ್ಹ ಏಜೆನ್ಸಿಗಳು ದಿನಾಂಕ: 04.09.2025 ರಂದು ಸಾಯಂಕಾಲ 4 ಘಂಟೆ ಓಳಗಾಗಿ ಮೇ ಕಾರ್ಯಪಾಲಕ ಅಭಿಯಂತರರು ವಿಜಯಪುರ (ಒಳಚರಂಡಿ ವಿಭಾಗ) ಇವರಲ್ಲಿ ಸಲ್ಲಿಸಲು ತಿಳಿಸಿದೆ.

Item	Unit	Total Panel set / KW Required	Cost Per Set / KW should be given Excluding GST
Pmax>= 590 Wp,144 cut Cell, MONO CRYSTALLINE PERC TECHNOLOGY BIFACIAL MODULES WITH FRAME- HALF CUT CELL WITH MULTI BUSBAR 187 MODULES String inverter for C&I and small utility projects to boost your power and profit, enhance productivity with increased energy yields, realize high power density and diversify available monitoring options. It takes safety to the top possible level in accordance with the strictest industry standards and runs efficiently even under the harshest environmental conditions with 98+% efficiency 80 KW. Ground Mount Structure(8ft height, South end)	SET	110	–
Solar Grade,Halogen Free, UV & Weather Resistant ,Electron Beam Cross Linkable Halogen Free Fire Retardant Compound 1C 4 and 6 SQMM 1.1Kv Inner PVC Sheathed, Galvanized Steel Strip ALUMINIUM CONDUCTOR XLPE INSULATED ARMORED CABLE 1100V AC - IS 7098-Part 1 Connectivity up to LTside Chemical, Maintenance Free Type - CU Bonded Rods Copper Bonded Rod 17 mm dia. x 3000 mm long x 250 microns with Tinned Terminals & SS Nut Bolts with Chemical Bags highly Conductive Carbon Based and earth pit covers ESE Type Lightning protection system with Counter Base and other accessories covering installation area with 107 meter radius MCB/DCSPD /ACSPD/ DC disconnect or/ poly boxes/1P65 rated boxes/ The DCDB is connected between PV panels and the on-grid inverter DCDB is fitted with a Fuse on the positive side and a DC SPD for protecting form surge on the DC side, Input and output are connected through wire glands and connect well terminal connectors. Solar ACDB makes On-grid inverter connection easier 1/3 Phase ACDB provides surge and overcurrent protection required for the on-grid inverter CRCA Metal Enclosure, Powder Coated RAL 7035, Wall Mounted/Stand Type, Indoor 250A 4P, 415V, AC MCCB with Spreader Terminals and Rotary Handle for Solar Input 4P, 415V,,25kA AC MCCB with EF, Spreader Terminals and Rotary Handle for Grid Output 1200A ACB and Suitable CT RYB LED Indicating Lamps for Output, 22mm, 230V AC Surge Protection with Surge Protection Devices, Type 2, 3P+N, 40KA (final rating will vary) Conduit Pipes with joints, Cable glands, ties, cablelugs , saddles, flexible Pipes, Junction Box with terminals insulation material etc Mobile App based level monitoring device customer to provide strong internet connectivity as per requirement Civil Works (site prep, foundation, trench, etc.) Installation, Commission, Freight and Taxes	KILO WATT	110	–

Note: GST Shall be Included Spratly. **Certifications:** IEC 61215, IEC61730 BIS complaint.
Warranty: 25 years in linear Performance

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ
ಸಹಿ/- ಅಧೀಕ್ಷಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ
ಸಹಿ/-ಆಯುಕ್ತರು, ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/298/ಕೆಎಸ್‌ಎಂಸಿಎ/2025-26

ಪಂಜಾಬ್, ಹಿಮಾಚಲ ಮತ್ತು ಜಮ್ಮು ಕಾಶ್ಮೀರದಲ್ಲಿ ಭಾರೀ ಮಳೆ

ಮಳೆಗೆ ಉತ್ತರ ತತ್ತರ

ದೆಹಲಿ: ಪಂಜಾಬ್, ಹಿಮಾಚಲ ಪ್ರದೇಶ ಮತ್ತು ಜಮ್ಮು ಕಾಶ್ಮೀರದಲ್ಲಿ ಸೋಮವಾರವೂ ಭಾರೀ ಮಳೆ ಮುಂದುವರಿದಿದ್ದು ಜನಜೀವನ ಸಂಪೂರ್ಣವಾಗಿ ಅಸ್ತವ್ಯಸ್ತವಾಗಿದೆ. ಪಂಜಾಬ್‌ನಲ್ಲಿ ಸಾಮಾನ್ಯಕ್ಕಿಂತ ಶೇ 74ರಷ್ಟು ಮಳೆ ಅಧಿಕವಾಗಿದ್ದು, ಕಳೆದ 25 ವರ್ಷಗಳಲ್ಲೇ ಈ ಪ್ರಮಾಣದ ಮಳೆಯನ್ನು ರಾಜ್ಯ ಕಂಡಿರಲಿಲ್ಲ ಎಂದು ಅಧಿಕಾರಿಗಳು ಹೇಳಿದರು.

ಭಾರೀ ಮಳೆಯಿಂದಾಗಿ ಜಮ್ಮು ಮತ್ತು ಪಂಜಾಬ್ ರಾಜ್ಯಗಳ ಹಲವು ಭಾಗಗಳಲ್ಲಿ ತೀವ್ರ ಸ್ವರೂಪದ ಪ್ರವಾಹ ಉಂಟಾಗಿದೆ. ರಸ್ತೆ, ಹೆದ್ದಾರಿಗಳು ಕೊಚ್ಚಿಕೊಂಡು ಹೋಗಿವೆ. ಪ್ರಮುಖ ನದಿಗಳು ಉಕ್ಕಿ ಹರಿಯುತ್ತಿವೆ. ಹಲವು ಗ್ರಾಮಗಳ ರಸ್ತೆ ಸಂಪರ್ಕ ಕಡಿತಗೊಂಡಿದೆ. ದ್ವೀಪಗಳಂತಾದ ಪ್ರದೇಶ ಗಳಲ್ಲಿ ಜನರು ಸಿಲುಕಿಕೊಂಡಿದ್ದಾರೆ. ಸೆಪ್ಟೆಂಬರ್ 3ರವರೆಗೆ ಶಾಲೆಗಳಿಗೆ ರಜೆಯನ್ನು ವಿಸ್ತರಿಸಿ ಪಂಜಾಬ್ ಸರಕಾರ ಆದೇ ಶಿಸಿದೆ. ಪಂಜಾಬ್ ಮತ್ತು ಜಮ್ಮು ಕಾಶ್ಮೀರದಲ್ಲಿ ನಾಗರಿಕರ ಸುರಕ್ಷತೆಗಾಗಿ ಸೇನೆಯು ವಿಪತ್ತು ಪರಿಹಾರ (ಎಚ್‌ಎಡಿಆರ್) ಕಾರ್ಯಾಚರಣೆ ನಡೆಸುತ್ತಿದೆ. ರಕ್ಷಣಾ ಕಾರ್ಯಕ್ಕಾಗಿ ಮತ್ತು ಅಹಾರ, ಅಗತ್ಯ ವಸ್ತುಗಳ ವಿತರಣೆಗಾಗಿ ವಾಯುಪಡೆಯು 20 ವಿಮಾನಗಳು ಹೆಲಿಕಾಪ್ಟರ್‌ಗಳನ್ನು ಬಳಸಲಾಗಿದೆ. ಮೋದಿ ಅವರಿಗೆ ಪತ್ರ ಬರೆದಿರುವ ಪಂಜಾಬ್ ಸಿ.ಎಂ, 60 ಸಾವಿರ ಕೋಟಿ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದಾರೆ. 'ಇದು ನಮ್ಮ ರಾಜ್ಯದ್ದೇ ಅನುದಾನ, ಅದು ನಿಮ್ಮ ಬಳಿ ಸಿಲುಕಿಕೊಂಡಿದೆ' ಎಂದೂ ಹೇಳಿದ್ದಾರೆ.

ಕಾಶ್ಮೀರಕ್ಕೆ ಶಾ ಭೇಟಿ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಜಮ್ಮು ಮತ್ತು ಕಾಶ್ಮೀರಕ್ಕೆ ಎರಡು ದಿನಗಳ ಭೇಟಿ ನೀಡಲಿದ್ದಾರೆ ಎಂದು ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಮಾಹಿತಿ ನೀಡಿದ್ದಾರೆ. ಜಮ್ಮು ಮತ್ತು ಶ್ರೀನಗರ ರಾಷ್ಟ್ರೀಯ ಹೆದ್ದಾರಿಯು ಮಳೆಯ ಕಾರಣ ಹಾನಿಗೊಳಗಾಗಿದ್ದು, ಇದರ ದುರಸ್ತಿ ಕಾರ್ಯವನ್ನು ಒಮರ್ ವೀಕ್ಷಿಸಿದರು. ತೀವ್ರ ಮಳೆಯಿಂದಾಗಿ ಹಿಮಾಚಲ ಪ್ರದೇಶದ ಮೂರು ರಾಷ್ಟ್ರೀಯ ಹೆದ್ದಾರಿಗಳೂ ಸೇರಿದಂತೆ ಒಟ್ಟು 822 ರಸ್ತೆಗಳು ಮುಚ್ಚಿ, 1,236 ವಿದ್ಯುತ್ ಪರಿವರ್ತಕಗಳು ಮತ್ತು 424 ಜಲ ಪೂರೈಕೆ ಯೋಜನೆಗಳಿಗೆ ಹಾನಿಯಾಗಿದೆ.

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080-27934470/27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/01/2023-24 ದಿನಾಂಕ: 25-08-2025

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಆಗಿ ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುವ ಜಮೀನನ್ನು ಪ್ರಸ್ತುತ ಕೈಗಾರಿಕಾ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಶ್ರೀ ರಾಜಣ್ಣ, ಶ್ರೀಮತಿ ಜಯಮ್ಮ ಮತ್ತು ಶ್ರೀ ಎಂ.ಎ. ಅಯೂಬ್ ಖಾನ್ ರವರುಗಳ ಪರವಾಗಿ ಜಿಪಿಎದಾರರಾದ ಶ್ರೀ ಜಯರಾಮನ್ ಬಿನ್ ಎಸ್. ಸುಬ್ರಮಣ್ಯಂ, ಮೆ॥ ಅವಿಜ್ಞ ಪ್ರೈ.ಲಿ., ಇವರು ಈ ಹಿಂದೆ ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯಾಗಿ ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುವ ಹೊಸಕೋಟೆ ತಾಲ್ಲೂಕು, ನಂದಗುಡಿ ಹೋಬಳಿ, ವೆಂಕಟಾಪುರ ಗ್ರಾಮದ ಸ.ನಂ. 24 ರಲ್ಲಿನ 05 ಎಕರೆ 12 ಗುಂಟೆ (01 ಗುಂಟೆ 'ಎ' ಖರಾಬು ಸೇರಿ), ಸ.ನಂ. 25/1 ರಲ್ಲಿನ 02 ಎಕರೆ 05 ಗುಂಟೆ, ಸ.ನಂ. 25/2 ರಲ್ಲಿನ 02 ಎಕರೆ 10 ಗುಂಟೆ, ಮತ್ತು ಸ.ನಂ. 36/2 ರಲ್ಲಿನ 07 ಗುಂಟೆ ಒಟ್ಟು 09 ಎಕರೆ 34 ಗುಂಟೆ ಜಮೀನುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ **ಕೈಗಾರಿಕಾ ಉದ್ದೇಶಕ್ಕೆ** ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಉದ್ದೇಶಿತ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾಬದ್ಧವಾದ ಕೈಗಾರಿಕಾ ಚಟುವಟಿಕೆಯನ್ನು ಪ್ರಾರಂಭಿಸಲು ಉದ್ದೇಶಿಸಿರುವುದರಿಂದ ಸ್ಥಳೀಯ ಸಾರ್ವಜನಿಕರಿಗೆ ಅನೇಕ ಉದ್ಯೋಗಾವಕಾಶಗಳು ದೊರಕುವುದರ ಜೊತೆಗೆ ಸುತ್ತಲಿನ ಪರಿಸರದ ಪ್ರದೇಶವು ಸಹ ಯೋಜನಾಬದ್ಧವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗುವುದೆಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/2572/ಅಡ್ವರ್ಟೋ/2025-26

ಏಳು ಸಾವಿರ ಭ್ರಷ್ಟಾಚಾರ ಪ್ರಕರಣ ವಿಚಾರಣೆ ಬಾಕಿ

ದೆಹಲಿ: ಸಿಬಿಐ ತನಿಖೆ ನಡೆಸುತ್ತಿರುವ 7,072 ಭ್ರಷ್ಟಾಚಾರ ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬಾಕಿ ಉಳಿದಿವೆ. ಅವುಗಳಲ್ಲಿ 379 ಪ್ರಕರಣಗಳು 20 ವರ್ಷಗಳಿಗೂ ಹಳೆಯವು ಎಂಬ ಅಚ್ಚರಿಯ ವರದಿಯನ್ನು ಕೇಂದ್ರ ವಿಜಿಲೆನ್ಸ್ ಆಯೋಗ (ಸಿವಿಸಿ) ಬಹಿರಂಗಪಡಿಸಿದೆ.

ಬಾಕಿ ಇರುವ ಪ್ರಕರಣಗಳಲ್ಲಿ 1,506 ಪ್ರಕರಣಗಳು ಮೂರು ವರ್ಷಗಳಿಗಿಂತ ಕಡಿಮೆ, 791 ಪ್ರಕರಣಗಳು ಮೂರರಿಂದ 5 ವರ್ಷ, 2,115 ಪ್ರಕರಣಗಳು ಐದರಿಂದ 10 ವರ್ಷಗಳಿಂದ ಬಾಕಿ ಇವೆ. 2,281 ಭ್ರಷ್ಟಾಚಾರ ಪ್ರಕರಣಗಳು 10ರಿಂದ 20 ವರ್ಷ, 379 ಪ್ರಕರಣಗಳು 20 ವರ್ಷಗಳಿಗೂ ಹೆಚ್ಚು ಹಳೆಯದ್ದಾಗಿವೆ. ಈ ಎಲ್ಲಾ ಮಾಹಿತಿಯು 2024ರ ಡಿಸೆಂಬರ್ 31ರ ವರೆಗಿನದ್ದಾಗಿದೆ ಎಂದು ಸಿವಿಸಿ ತಿಳಿಸಿದೆ. 2024ರ ವೇಳೆಗೆ ಒಟ್ಟು 7,072 ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಉಳಿದರೆ, ಇದೇ ಅವಧಿಯಲ್ಲಿ 2,660 ಪ್ರಕರಣಗಳು 10 ವರ್ಷಗಳಿಗೂ ಹೆಚ್ಚು ಕಾಲ ವಿಚಾರಣೆ ಹಂತದಲ್ಲೇ ಉಳಿದಿವೆ ಎಂದು ವರದಿ ಹೇಳಿದೆ. ಭ್ರಷ್ಟಾಚಾರ ಪ್ರಕರಣಗಳು ಮಾತ್ರವಲ್ಲದೇ ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಿಬಿಐ ಮತ್ತು ಆರೋಪಿಗಳು ಸಲ್ಲಿಸಿರುವ 13,100 ಮೇಲ್ಮನವಿಗಳು, ಮರು ಪರಿಶೀಲನಾ ಅರ್ಜಿಗಳು ವಿವಿಧ ಹೈಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಉಳಿದಿವೆ. ಇವುಗಳಲ್ಲಿ, 606 ಪ್ರಕರಣಗಳು 20 ವರ್ಷಗಳು, 1,227 ಪ್ರಕರಣಗಳು 15 ವರ್ಷಗಳಷ್ಟು ಹಳೆಯದಾಗಿವೆ ಎಂಬುದು ಸಿವಿಸಿ ವರದಿಯಲ್ಲಿದೆ.

ಕಳೆದ ವರ್ಷ ಇತ್ಯರ್ಥವಾದ ಪ್ರಕರಣ: ಸಿಬಿಐ ದಾಖಲಿಸಿದ ಪ್ರಕರಣಗಳಲ್ಲಿ 2024ರ ವರ್ಷವೊಂದರಲ್ಲಿ 644 ಪ್ರಕರಣಗಳನ್ನು ಇತ್ಯರ್ಥ ಮಾಡಿದೆ. ಇವುಗಳಲ್ಲಿ, 392 ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ಕೊಡಿಸಲಾಗಿದೆ. 154 ಪ್ರಕರಣಗಳಲ್ಲಿ ಆರೋಪಿಗಳು ಖುಲಾಸೆಯಾಗಿದ್ದಾರೆ. 21 ಪ್ರಕರಣಗಳಲ್ಲಿ ಆರೋಪಿಗಳು ಬಿಡುಗಡೆಯಾಗಿದ್ದಾರೆ. ನಾನಾ ಕಾರಣಗಳಿಗಾಗಿ 77 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. ಕಳೆದ ವರ್ಷದಲ್ಲಿ ಶಿಕ್ಷೆಯ ಪ್ರಮಾಣ ಶೇಕಡಾ 69.14ರಷ್ಟಿದೆ. 2023ರಲ್ಲಿ ಇದು 2023 ಶೇಕಡಾ 71.47ರಷ್ಟಿತ್ತು ಎಂದು ಸಿವಿಸಿ ಹೇಳಿದೆ. 2024ರ ಅಂತ್ಯದ ವೇಳೆಗೆ, ಭ್ರಷ್ಟಾಚಾರ ಮತ್ತು ಇತರೆ ಪ್ರಕರಣಗಳು ಸೇರಿ ಸಿಬಿಐ ತನಿಖೆಗೆ ಸಂಬಂಧಿಸಿದ ಒಟ್ಟು 11,384 ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆ ಹಂತದಲ್ಲಿ ಬಾಕಿ ಉಳಿದಿವೆ. 2024ರಲ್ಲಿ ಸಿಬಿಐ 807 ಭ್ರಷ್ಟಾಚಾರ ಪ್ರಕರಣಗಳನ್ನು ದಾಖಲಿಸಿದೆ. ಇದರಲ್ಲಿ 674 ನಿಯಮಿತ ಪ್ರಕರಣಗಳು ಮತ್ತು 133 ಪ್ರಾಥಮಿಕ ವಿಚಾರಣೆಗಳು ಸೇರಿವೆ ಎಂಬುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಇತ್ಯರ್ಥ ವಿಳಂಬಕ್ಕೆ ಕಾರಣವೇನು?

ಪ್ರಕರಣ ದಾಖಲಾದ ಒಂದು ವರ್ಷದೊಳಗೆ ತನಿಖೆಯನ್ನು ಪೂರ್ಣಗೊಳಿಸುವ ಗುರಿಯನ್ನು ಸಿಬಿಐ ಹೊಂದಿದೆ. ಆದರೆ, ಸಿಬ್ಬಂದಿ ಕೊರತೆ, ಕೆಲಸದ ಒತ್ತಡ, ದೊಡ್ಡ ಪ್ರಮಾಣದ ದಾಖಲೆಗಳ ಪರಿಶೀಲನೆ, ಆರೋಪಿಗಳ ವಿರುದ್ಧದ ಪ್ರಾಸಿಕ್ಯೂಷನ್‌ಗೆ ಕೋರ್ಟ್‌ಗಳ ಅನುಮತಿ ಸಿಗುವಲ್ಲಿ ವಿಳಂಬ ಸೇರಿ ಹಲವು ಕಾರಣಗಳಿಂದಾಗಿ ಕೇಸ್‌ಗಳು ವಿಲೇವಾರಿಯಾಗದೆ ಬಾಕಿ ಉಳಿಯುತ್ತಿವೆ. ಅದರಲ್ಲೂ ಬ್ಯಾಂಕ್ ವಂಚನೆ, ಆರ್ಥಿಕ ಅಪರಾಧಗಳ ತನಿಖೆಯು ತಡವಾಗುತ್ತಿರುವುದು ದೊಡ್ಡ ಸವಾಲಾಗಿದೆ.

ಸಮಾಚಾರ ಸಣ್ಣದಲ್ಲ

ಆರು ರಾಜ್ಯಗಳಿಗೆ ಸುಪ್ರೀಂ ನೋಟಿಸ್

ದೆಹಲಿ: ಲಿಂಗತ್ವ ಅಲ್ಪಸಂಖ್ಯಾತರನ್ನೂ ಒಳಗೊಂಡ ಸಮಗ್ರ ಲೈಂಗಿಕ ಶಿಕ್ಷಣವನ್ನು (ಸಿಎಸ್ಇ) ಶಾಲಾ ಪಠ್ಯಕ್ರಮದಲ್ಲಿ ಸೇರಿಸಬೇಕೆಂದು ಕೋರಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ನಡೆಸಿತು. ಬಳಿಕ ಈ ಕುರಿತು ಪ್ರತಿಕ್ರಿಯಿಸುವಂತೆ ಕೇಂದ್ರ ಸರಕಾರ, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಹಾಗೂ ಕರ್ನಾಟಕ ಸೇರಿದಂತೆ 6 ರಾಜ್ಯಗಳಿಗೆ ಸೂಚಿಸಿತು. ಮುಖ್ಯ ನ್ಯಾಯಮೂರ್ತಿ ಬಿ.ಆರ್ ಗವಾಯಿ ಹಾಗೂ ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರಿದ್ದ ಪೀಠವು, ಅರ್ಜಿದಾರರ ಪರ ವಕೀಲರಾದ ಗೋಪಾಲ್, ಶಂಕರನಾರಾಯಣನ್ ಅವರ ವಾದವನ್ನು ಆಲಿಸಿತು. ಬಳಿಕ 8 ವಾರಗಳ ಒಳಗಾಗಿ ಪ್ರತಿಕ್ರಿಯಿಸುವಂತೆ ನೋಟಿಸ್ ಜಾರಿ ಮಾಡಿತು. ಅರ್ಜಿದಾರರಾದ, 12ನೇ ತರಗತಿ ವಿದ್ಯಾರ್ಥಿನಿ ಕಾವ್ಯ ಮುಖರ್ಜಿ ಅವರು, ಕೇಂದ್ರ ಸರಕಾರ, ಎನ್‌ಸಿಇಆರ್‌ಟಿ, ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ತೆಲಂಗಾಣ, ಪಂಜಾಬ್ ಮತ್ತು ತಮಿಳು ನಾಡುಗಳನ್ನು ಉಲ್ಲೇಖಿಸಿ ಅರ್ಜಿ ಸಲ್ಲಿಸಿದ್ದರು. ಈ ರಾಜ್ಯಗಳ ಪಠ್ಯಕ್ರಮದಲ್ಲಿ ಸಿಎಸ್ಇ ಕುರಿತು ಲೋಪಗಳು ವರದಿಯಾಗಿವೆ. ಕೇರಳ ಇದಕ್ಕೆ ಹೊರತಾಗಿದೆ.

ಕೆಪಿಸಿಎಲ್ ಎಚ್ಚರಿಕೆ

ಬೆಂಗಳೂರು: ಕಾಳಿ ನದಿ ಯೋಜನೆಯ 1ನೇ ಹಂತ ಸೂಪಾ ಅಣೆಕಟ್ಟು ಜಲಾನಯನ ಪ್ರದೇಶದಲ್ಲಿ ಸತತ ಮಳೆಯಾಗುತ್ತಿರುವ ಹಿನ್ನೆಲೆ ಜಲಾಶಯದ ಕೆಳಹಂತದ ಪ್ರದೇಶದಲ್ಲಿ ಪ್ರವಾಹದ ಸ್ಥಿತಿ ಉಂಟಾಗಬಹುದು ಎಂದು ಕೆಪಿಸಿಎಲ್ ಅಂತಿಮ ಮುನ್ನೆಚ್ಚರಿಕೆ ನೀಡಿದೆ. ಸೂಪಾ ಅಣೆಕಟ್ಟೆಯ ಜಲಾನಯನ ಪ್ರದೇಶದಲ್ಲಿ ಸತತವಾಗಿ ಮಳೆಯಾಗುತ್ತಿದ್ದು, ಜಲಾಶಯಕ್ಕೆ ಭಾರತಿ ಪ್ರಮಾಣದ ನೀರು ಹರಿದುಬರುತ್ತಿರುವುದರಿಂದ ನೀರಿನ ಮಟ್ಟದಲ್ಲಿ ಸತತವಾಗಿ ಏರಿಕೆಯಾಗುತ್ತಿದೆ. ಜಲಾಶಯದ ಗರಿಷ್ಠ ಮಟ್ಟವು 564.00 ಮೀ.ಆಗಿದ್ದು, ನೀರಿನ ಸಂಗ್ರಹಣ ಸಾಮರ್ಥ್ಯ 147.55 ಟಿಎಂಸಿ ಇರುತ್ತದೆ. ಜಲಾಶಯದ ಈಗಿನ ನೀರಿನ ಮಟ್ಟವು 558.87 ಮೀ. ಆಗಿದ್ದು, 126.345 ಟಿಎಂಸಿ ನೀರಿನೊಂದಿಗೆ ಒಟ್ಟು ಸಾಮರ್ಥ್ಯದ ಶೇ.85.63ರಷ್ಟು ಭರ್ತಿಯಾಗಿದೆ. ಇದಲ್ಲದೆ, ಜಲಾಶಯದ ಒಳಹರಿವು ಸುಮಾರು 21,261 ಕ್ಯೂಸೆಕ್ ಇದ್ದು, ನೀರಿನ ಹರಿವು ಇದೇ ರೀತಿ ಮುಂದುವರಿದರೆ ಜಲಾಶಯವು ಗರಿಷ್ಠ ಮಟ್ಟ ತಲುಪುವ ಸಾಧ್ಯತೆ ಇರುತ್ತದೆ. ಆದ್ದರಿಂದ ಅಣೆಕಟ್ಟು ಸುರಕ್ಷತಾ ದೃಷ್ಟಿಯಿಂದ ಹೆಚ್ಚುವರಿ ಜಲಾಶಯದ ನೀರನ್ನು ಯಾವುದೇ ಸಮಯದಲ್ಲಾದರೂ ಹೊರ ಬಿಡಲಾಗುವುದು ಎಂದು ಕೆಪಿಸಿಎಲ್ ತಿಳಿಸಿದೆ. ಈ ಹಿನ್ನೆಲೆಯಲ್ಲಿ ಅಣೆಕಟ್ಟೆಯ ಕೆಳದಂಡೆಯಲ್ಲಿ ಹಾಗೂ ನದಿಯ ಪಾತ್ರದುದ್ದಕ್ಕೂ ವಾಸಿಸುತ್ತಿರುವ ಸಾರ್ವಜನಿಕರು ತಮ್ಮ ಜನ, ಜಾನುವಾರು ಇತ್ಯಾದಿಗಳೊಂದಿಗೆ ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಗೊಳ್ಳಬೇಕು. ಅಣೆಕಟ್ಟೆಯ ಕೆಳಭಾಗದ ನದಿ ಪಾತ್ರದಲ್ಲಿ ದೋಣಿ ಸಂಚಾರ, ಮೀನುಗಾರಿಕೆ, ಜಲಸಾಹಸ ಕ್ರೀಡಾ ಚಟುವಟಿಕೆಗಳನ್ನು ಮತ್ತು ಇತರೆ ಚಟುವಟಿಕೆಗಳನ್ನು ಮಳೆಗಾಲ ಮುಗಿಯುವವರೆಗೂ ನಡೆಸಬಾರದು ಎಂದು ಮನವಿ ಮಾಡಿದೆ.

ವಿರಾಮ
ಪ್ರತಿ ಭಾನುವಾರ

ಬುರುಡೆಯಾಟ ಬಗೆದಷ್ಟು ಬಯಲು | ಬುರುಡೆ ರಹಸ್ಯ ಬಾಯ್ಬಿಟ್ಟ ಚಿನ್ನಯ್ಯ

ಚಿನ್ನಯ್ಯನಿಗೆ ಎಸ್‌ಐಟಿ ಗ್ರಿಲ್ ಬುರುಡೆ ಕೊಟ್ಟಿದ್ದು ಜಯಂತ್

ಬೆಂಗಳೂರು: ಧರ್ಮಸ್ಥಳ ಪ್ರಕರಣದಲ್ಲಿ 'ಬುರುಡೆ ಗ್ಯಾಂಗ್' ನ ಬುರುಡೆಯಾಟ ಬಗೆದಷ್ಟು ಬಯಲಾಗುತ್ತಿದೆ. ಬೆಂಗಳೂರಿನ ಬಾಗಲಗುಂಟೆ ಜಯಂತ್ ಮನೆ ಮತ್ತು ವಿದ್ಯಾರಣ್ಯಪುರ ಸರ್ವೀಸ್ ಅಪಾರ್ಟ್‌ಮೆಂಟ್‌ಲ್ಲಿ ಮಹಜರು ನಡೆಸಿದ ಬಳಿಕ ಸ್ಫೋಟಕ ಸಂಗತಿಗಳು ಹೊರಬಿದ್ದಿವೆ. ಬುರುಡೆ ಸಿಕ್ಕಿದ್ದು, ಬುರುಡೆ ರಿಹರ್ಸಲ್ ನಡೆದಿದ್ದ ಬಗ್ಗೆ ರೋಚಕ ಸಂಗತಿಗಳು ಎಸ್‌ಐಟಿ ತನಿಖೆಯಿಂದ ಬಹಿರಂಗೊಂಡಿದೆ.

ಬುರುಡೆ ಪ್ಲ್ಯಾನ್‌ಗೂ ಮುನ್ನ ವಿಡಿಯೊ ರೆಕಾರ್ಡ್: ನೂರಾರು ಶವ ಹೂತಿದ್ದೇನೆ. ಹೂತಿರುವ ಜಾಗ ತೋರಿಸುತ್ತೇನೆ ಎಂದು ಕೈಯಲ್ಲೊಂದು ಬುರುಡೆ ಹಿಡಿದುಕೊಂಡು ಬಂದಿದ್ದ ಚಿನ್ನಯ್ಯ, ಬುರುಡೆ ಬಿಟ್ಟಿದ್ದ. ಆದರೆ ಈಗ ಈ ಬುರುಡೆ ಎಲ್ಲಿಂದ ಬಂತು ಎಂಬ ಸ್ಫೋಟಕ ವಿಚಾರ ಗೊತ್ತಾಗಿದೆ. ಜಯಂತ್ ಮನೆಯಲ್ಲೇ ಚಿನ್ನಯ್ಯನ ಹೇಳಿಕೆ ಮೊದಲು ವಿಡಿಯೊ ಮಾಡಲಾಗಿತ್ತು. ವಿಡಿಯೊ ಹೇಳಿಕೆ ಪಡೆದು, ನಂತರ ಅದನ್ನ ಗಿರೀಶ್ ಮಟ್ಟಣ್ಣನವರ್ ಸೂಚನೆಯಂತೆ ಜಯಂತ್ ಡಿಲೀಟ್ ಮಾಡಿದ್ದ. ಬುರುಡೆ ಪ್ಲ್ಯಾನ್ ಬಗ್ಗೆ ಜಯಂತ್ ಮನೆಯಲ್ಲೇ ರಿಹರ್ಸಲ್ ನಡೆದಿತ್ತು. ಈ ವಿಡಿಯೊಗಾಗಿ ಪೊಲೀಸರು ವಶಪಡಿಸಿಕೊಂಡಿರುವ ಫೋನ್‌ಗಳನ್ನು ರಿಟ್ರೀವ್ ಮಾಡಲಾಗಿದೆ.

ಬುರುಡೆ ರಹಸ್ಯ ಬಾಯ್ಬಿಟ್ಟ ಚಿನ್ನಯ್ಯ: ಎಸ್‌ಐಟಿ ಮುಂದೆ ಸ್ಫೋಟಕ ವಿಚಾರ ಬಾಯ್ಬಿಟ್ಟಿರುವ ಚಿನ್ನಯ್ಯ, ಬುರುಡೆ ರಹಸ್ಯ ಹೇಳಿದ್ದಾನೆ. ಸ್ಯಾಟಲೈಟ್ ಬಸ್ ನಿಲ್ದಾಣದಿಂದ ಬಾಗಲಗುಂಟೆ ಜಯಂತ್ ನಿವಾಸಕ್ಕೆ ನಾವೆಲ್ಲರು ಬಂದಿದ್ದೆವು. ಮೂರು ದಿನ ಜಯಂತ್ ಮನೆಯಲ್ಲೇ ಇದ್ದೆವು. ಮನೆಯ ಟೆರೇಸ್ ಮೇಲೆ ಕುಳಿತು ಚರ್ಚೆ ಮಾಡಿದ್ದೆವು. ಇದೇ ವೇಳೆ ಜಯಂತ್ ನನಗೆ ಬುರುಡೆ ಮತ್ತು ಮೂಳೆ ಕೊಟ್ಟಿದ್ದರು. ಜಯಂತ್ ಮನೆಯಲ್ಲೇ ಮೊದಲು ಬುರುಡೆ, ಮೂಳೆ ನೋಡಿದ್ದು ಎಂದು ಮೊದಲು ಬುರುಡೆ ತೆಗೆದುಕೊಂಡ ಬಗ್ಗೆ ಚಿನ್ನಯ್ಯ ಹೇಳಿಕೆ ನೀಡಿದ್ದಾನೆ. ಈ ಮಾಹಿತಿ ಆಧರಿಸಿ ಎಸ್‌ಐಟಿ ಬೆಂಗಳೂರಿಗೆ ಕರೆತಂದು ಜಯಂತ್ ಮನೆಯಲ್ಲಿ ಮಹಜರು ನಡೆಸಿದ್ದಾರೆ. ಜಯಂತ್ ಮನೆಯ ಬಳಿಕ ಗಿರೀಶ್ ಮಟ್ಟಣ್ಣನವರ್ ಸೂಚನೆಯಂತೆ ಗ್ಯಾಂಗ್ ಶಿಫ್ಟ್ ಆಗಿತ್ತು. ವಿದ್ಯಾರಣ್ಯಪುರದ ಸರ್ವಿಸ್ ಅಪಾರ್ಟ್‌ಮೆಂಟ್‌ಗೆ ಹೋದೆವು, ಅಪಾರ್ಟ್‌ಮೆಂಟ್‌ನಲ್ಲಿ ಮಟ್ಟಣ್ಣನವರ್, ಜಯಂತ್ ಹಲವರು ಸೇರಿದ್ದೆವು ಎಂದು ಚಿನ್ನಯ್ಯ ಹೇಳಿದ್ದಾನೆ. ಗಿರೀಶ್ ಮಟ್ಟಣ್ಣನವರ್ ಸೂಚನೆಯಂತೆ ಕೋರ್ಟ್‌ನಲ್ಲಿ ತಾನೇ ಬುರುಡೆ ತಂದಿದ್ದು ಎಂದು ಕೋರ್ಟ್‌ನಲ್ಲಿ ಹೇಳಿದ್ದಾಗಿ ಚಿನ್ನಯ್ಯ ಎಸ್‌ಐಟಿ ಮುಂದೆ ಚಿನ್ನಯ್ಯ ಬಾಯ್ಬಿಟ್ಟಿದ್ದಾನೆ.

ಧರ್ಮಸ್ಥಳ ಸುತ್ತಮುತ್ತ ಬುರುಡೆ ಗ್ಯಾಂಗ್‌ನಿಂದ ಟ್ರಯಲ್?

ಬುರುಡೆಯನ್ನ ಚಿನ್ನಯ್ಯನಿಗೆ ನೀಡುವ ಮುನ್ನ ಬುರುಡೆ ಗ್ಯಾಂಗ್ ರಿಹರ್ಸಲ್ ನಡೆಸಿರುವ ಬಗ್ಗೆಯೂ ತಿಳಿದುಬಂದಿದೆ. ಬಂಗ್ಲೆಗುಡ್ಡ, ನೇತ್ರಾವತಿ ತಟದಲ್ಲಿ ಚಿನ್ನಯ್ಯ ಆ್ಯಂಡ್ ಗ್ಯಾಂಗ್ ರಿಹರ್ಸಲ್ ಮಾಡಿ, ಬ್ಲೂಪ್ರಿಂಟ್ ಹಾಕಿತ್ತು ಎಂಬುದು ಬಯಲಾಗಿದೆ. ನೇತ್ರಾವತಿ ನದಿ ತೀರ ಮತ್ತು ಬಂಗ್ಲೆಗುಡ್ಡದಲ್ಲಿ ಕಾಡು ಸುತ್ತಿದ್ದ ಬುರುಡೆ ಗ್ಯಾಂಗ್ 30 ಜಾಗಗಳನ್ನು ಗುರುತು ಮಾಡಿ ನಕ್ಷೆ ರೆಡಿ ಮಾಡಿತ್ತು ಎನ್ನಲಾಗಿದೆ. ಚಿನ್ನಯ್ಯ ಶವ ಹೂಳದೇ ಇದ್ದ ಜಾಗಗಳನ್ನು ಗುರುತು ಮಾಡಿದ್ದ ಬುರುಡೆ ಪಡೆ, ಕನ್ಯಾಡಿ, ಬೋಳಿಯಾರು ಭಾಗದಲ್ಲಿ ಬುರುಡೆ ಕಥೆ ಸೃಷ್ಟಿಸಲು ಕನ್ಯಾಡಿ, ಬೋಳಿಯಾರುನಲ್ಲೂ ಗುರುತು ಮಾಡಿತ್ತು. ಪ್ರತಿ ದಿನ ಶೋಧ ಕಾರ್ಯಾಚರಣೆ ಬಳಿಕ ಮಹೇಶ್ ಶೆಟ್ಟಿ ತಿಮರೋಡಿ ಮನೆಯಲ್ಲಿ ಚರ್ಚೆ ನಡೆಸಿದ್ದರು. ಸಿದ್ಧಪಡಿಸಲಾದ ನಕ್ಷೆ ಹಿಡಿದು ಚರ್ಚೆ ಮಾಡುವಾಗ,ಪ್ರತಿ ಬಾರಿಯೂ ನಾನು ಶವ ಹೂತಿದ್ದು ಪಕ್ಕಾ ಎಂದೇ ಚಿನ್ನಯ್ಯ ಹೇಳುತ್ತಿದ್ದ. ಆದರೆ, ಚಿನ್ನಯ್ಯನ ಲೆಕ್ಕಾಚಾರ ಉಲ್ಟಾ ಹೊಡೆದಾಗ ಗ್ಯಾಂಗ್ ತಲ್ಲಣಗೊಂಡಿದೆ.







ಧಾರವಾಡದ ವಿದ್ಯಾಗಿರಿಯಲ್ಲಿರುವ ಸುವರ್ಣ ಕಲಾ ಹಾಗೂ ವಾಣಿಜ್ಯ ಪಿಯು ಕಾಲೇಜಿನಲ್ಲಿ ಮಹಿಳಾ ಮತ್ತು ಮಕ್ಕಳಾ ರಕ್ಷಣೆ, ಪೋಕ್ಸೊ ಕಾಯಿದೆಯ ಕುರಿತು ವಿದ್ಯಾರ್ಥಿಗಳಿಗೆ ವಿದ್ಯಾಗಿರಿ ಠಾಣೆ ಪಿಎಸ್‌ಐ ಮಲ್ಲಿಕಾರ್ಜುನ ಹೊಸೂರು ಜಾಗೃತಿ ಹಾಗೂ ಅರಿವು ಮೂಡಿಸಿದರು. ಈ ವೇಳೆ ಪ್ರಾಚಾರ್ಯ ಸದ್ಗುರು ಹೇಳವರ್, ಕಾರ್ಯದರ್ಶಿ ಸವಿತಾ ವಿಶ್ವನಾಥ್ ಮರಶೆಟ್ಟಿ ಸೇರಿದಂತೆ ಹಲವು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪಿಡಿಒ ವರ್ಗಾವಣೆ ಪ್ರಕ್ರಿಯೆ ಆರಂಭ

ಬೆಂಗಳೂರು: ಒಂದೇ ಸ್ಥಳದಲ್ಲಿ 5 ವರ್ಷಕ್ಕಿಂತ ಹೆಚ್ಚು ವರ್ಷ ಸೇವೆ ಸಲ್ಲಿಸಿದ ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಕೌನ್ಸೆಲಿಂಗ್ ಮೂಲಕ ವರ್ಗಾವಣೆಗೊಳಿಸುವ ಪ್ರಕ್ರಿಯೆ ಆರಂಭಿಸಿದೆ. ಸೆ.10 ರಿಂದ ಸೆ.20ರ ವರೆಗೆ ಕಡ್ಡಾಯ ವರ್ಗಾವಣೆ ಹಾಗೂ 23,24ರಂದು ಸಾಮಾನ್ಯ ಕೋರಿಕೆ ವರ್ಗಾವಣೆಗಳ ಕೌನ್ಸಿಲಿಂಗ್ ನಡೆಯಲಿವೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈಗಾಗಲೇ ಆನ್‌ಲೈನ್ ಮೂಲಕ ವಿಶೇಷ ಪ್ರಕರಣಗಳಲ್ಲಿ 515 ಅರ್ಜಿಗಳು ಹಾಗೂ ಸಾಮಾನ್ಯ ಕೋರಿಕೆಯಲ್ಲಿ 1215 ಅರ್ಜಿಗಳು ಸೇರಿ ಒಟ್ಟು 1730 ಅರ್ಜಿಗಳು ಬಂದಿವೆ. ಪ್ರಸ್ತುತ ಖಾಲಿ ಹುದ್ದೆಗಳು, ಕಡ್ಡಾಯ ವರ್ಗಾವಣೆಗಳ ರಾಜ್ಯವಾರು ಅಂತಿಮ ಪಟ್ಟಿ ಹಾಗೂ ವರ್ಗಾವಣೆಯಿಂದ ವಿನಾಯತಿಗಾಗಿ ಕೋರಿಕೆ ಸಲ್ಲಿಸಿದವರ ಪಟ್ಟಿಯನ್ನು https://rdprtransfer.karnataka.gov.in/ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಆಗಸ್ಟ್ 29ರಂದು ವಿಶೇಷ ಪ್ರಕರಣಗಳ ಅಂತಿಮ ವರ್ಗಾವಣೆ ಆದ್ಯತಾ ಪಟ್ಟಿ ಬಿಡುಗಡೆ ಮಾಡಲಾಗಿದೆ. ಸೆ.1ರಂದು ಸಾಮಾನ್ಯ ಕೋರಿಕೆ ಮತ್ತು ಕಡ್ಡಾಯ ವರ್ಗಾವಣೆಯ ಅಂತಿಮ ಆದ್ಯತಾ ಪಟ್ಟಿಯನ್ನು ಪ್ರಕಟಿಸಲಾಗಿದೆ. 3 ರಿಂದ 8ರ ವರೆಗೆ ವಿಶೇಷ ಪ್ರಕರಣಗಳ ಮೊದಲ ಸುತ್ತಿನ ಕೌನ್ಸೆಲಿಂಗ್ ಹಾಗೂ 8ನೇ ತಾರೀಖಿನಂದು ವಿಶೇಷ ಪ್ರಕರಣಗಳ ಎರಡನೇ ಸುತ್ತಿನ ಕೌನ್ಸೆಲಿಂಗ್ ನಡೆಯಲಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಐದು ದಿನದ ಗಣೇಶ ಸಂಭ್ರಮಾಚರಣೆಗೆ ತೆರೆ

5 ದಿನಗಳಲ್ಲಿ 5.91 ಲಕ್ಷ ಗಣೇಶ ಮೂರ್ತಿ ವಿಸರ್ಜನೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಐದು ದಿನದ ಗಣೇಶ ಸಂಭ್ರಮಾಚರಣೆಗೆ ತೆರೆ ಬಿದ್ದಿದ್ದು, ನಗರದ ವಿವಿಧ ಭಾಗಗಳಲ್ಲಿ ಭಾರೀ ಪ್ರಮಾಣದಲ್ಲಿ ಗಣೇಶ ಮೂರ್ತಿ ಗಳ ವಿಸರ್ಜನೆಯು ಕಂಡು ಬಂದಿದೆ ಎಂದು ಬಿಬಿಎಂಪಿ ಮಾಹಿತಿ ನೀಡಿದೆ.

ಬಿಬಿಎಂಪಿ ಮಾಹಿತಿ ಪ್ರಕಾರ, ಭಾನುವಾರ ಒಂದೇ ದಿನ ಬರೋಬ್ಬರಿ 1.29 ಲಕ್ಷ ಗಣೇಶ ಮೂರ್ತಿಗಳನ್ನು ವಿಸರ್ಜನೆ ಮಾಡಲಾಗಿದ್ದು, ಕಳೆದ 5 ದಿನಗಳಲ್ಲಿ ಒಟ್ಟು 5.91 ಲಕ್ಷ ಗಣೇಶ ಮೂರ್ತಿಗಳನ್ನು ವಿಸರ್ಜಿಸಲಾಗಿದೆ. ಗಣೇಶ ಮೂರ್ತಿಗಳ ವಿಸರ್ಜನೆಗಾಗಿ ಪಾಲಿಕೆಯ ಎಲ್ಲಾ ವಲಯಗಳಲ್ಲಿ 41 ಕೆರೆ ಅಂಗಳದ ಶಾಶ್ವತ/ತಾತ್ಕಾಲಿಕ ಕಲ್ಯಾಣಿಗಳು ಹಾಗೂ 489 ಸಂಚಾರಿ ವಾಹನ (ಮೊಬೈಲ್ ಟ್ಯಾಂಕರ್) ಗಳ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಮಾಹಿತಿ ನೀಡಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಮುಖ ಕೆರೆಗಳ ಅಂಗಳದಲ್ಲಿರುವ ಕಲ್ಯಾಣಿಗಳಲ್ಲಿ ಗಣೇಶ ವಿಸರ್ಜನೆಗೆ ಸೂಕ್ತ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು. ಕಲ್ಯಾಣಿಗಳ ಆವರಣದಲ್ಲಿ ವ್ಯವಸ್ಥಿತವಾಗಿ ಬ್ಯಾರಿಕೇಡಿಂಗ್‌ಗಳ ಅಳವಡಿಕೆ, ನುರಿತ ಈಜುಗಾರರ/ಜೀವ ರಕ್ಷಕರ ನಿಯೋಜನೆ, ಸಿಸಿಟಿವಿ ಅಳವಡಿಕೆ, ವಿದ್ಯುತ್ ದೀಪಗಳ ಸೌಲಭ್ಯ ಹಾಗೂ ಪೆಂಡಾಲ್ ವ್ಯವಸ್ಥೆ ಮಾಡಿಕೊಂಡು ಯಾವುದೇ ಅಹಿತಕರ ಘಟನೆಗಳ ನಡೆಯ ದಂತೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಪ್ರಮುಖ ಕಲ್ಯಾಣಿಗಳ ಬಳಿ ಮುನ್ನೆಚ್ಚರಿಕಾ ಕ್ರಮವಾಗಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಕಲ್ಯಾಣಿಗಳ ಬಳಿ ಗಣೇಶ ವಿಸರ್ಜನೆ ಮಾಡಿದ ವೇಳೆ ಸಂಗ್ರಹವಾಗುವ ತ್ಯಾಜ್ಯವನ್ನು ಆಟೋ ಟಿಪ್ಪರ್‌ಗಳ ಮೂಲಕ ವಿಲೇವಾರಿ ಮಾಡಲಾಗಿದೆ. 5,91,683 ಗಣೇಶ ಮೂರ್ತಿಗಳ ವಿಸರ್ಜನೆ ಬೆಂಗಳೂ ರಿನಲ್ಲಿ ಗಣೇಶ ಪ್ರತಿಷ್ಠಾಪನೆಯ ಮೊದಲು ದಿನ ಆಗಸ್ಟ್ 27 ರಂದು ಬುಧವಾರ 2,19,153 ಗಣೇಶ ಮೂರ್ತಿಗಳು ವಿಸರ್ಜನೆಗೊಂಡಿವೆ. ನಂತರ ಆ. 28 ರಂದು 73,959 ಗಣೇಶ ಮೂರ್ತಿಗಳು, ಆಗಸ್ಟ್ 29 ರಂದು 1,14,402 ಗಣೇಶ ಮೂರ್ತಿಗಳನ್ನು ನೀರಲ್ಲಿ ಬಿಡಲಾಗಿದೆ. ಆಗಸ್ಟ್ 30 ರಂದು 54,653 ಗಣೇಶ ಮೂರ್ತಿಗಳು ಹಾಗೂ 31 ರಂದು 1,29,516 ಗಣೇಶ ಮೂರ್ತಿಗಳನ್ನು ವಿಸರ್ಜಿಸಲಾಗಿದೆ. ಒಟ್ಟು 5 ದಿನಗಳಲ್ಲಿ ಬರೋಬ್ಬರಿ 5,91,683 ಲಕ್ಷ ಮೂರ್ತಿಗಳನ್ನು ವಿಸರ್ಜನೆ ಮಾಡಲಾಗಿದೆ.

ಹಲಸೂರು, ಹೆಬ್ಬಾಳ, ಯಡಿಯೂರು, ಸ್ಯಾಂಕಿ ಕೆರೆ ಅಂಗಳದ ಕಲ್ಯಾಣಿಗಳಲ್ಲಿ ಹೆಚ್ಚು ಗಣೇಶ ಮೂರ್ತಿಗಳನ್ನು ವಿಸರ್ಜನೆ ಮಾಡಲಿದ್ದು, ಆ ಕಲ್ಯಾಣಿಗಳಲ್ಲಿ ಹೂಳೆತ್ತುವ ಕಾರ್ಯ ನಡೆಯಲಿದೆ. ಅದರಂತೆ ಪ್ರಮುಖ ಕಲ್ಯಾಣಿ ಗಳಲ್ಲಿ ಮೇಲೆ ತೇಲುವಂತ ವಸ್ತುಗಳನ್ನು ಪ್ರತಿನಿತ್ಯ ಮುಂಜಾನೆಯೇ ತೆರವುಗೊಳಿಸಲಿದ್ದಾರೆ.

ವಿಸರ್ಜನೆ ಪಟ್ಟಿ

- **ಪೂರ್ವ ವಲಯ: 61,680**
- **ಪಶ್ಚಿಮ ವಲಯ: 9,050**
- **ದಕ್ಷಿಣ ವಲಯ: 42,274**
- **ಬೊಮ್ಮನಹಳ್ಳಿ ವಲಯ: 1,862**
- **ದಾಸರಹಳ್ಳಿ ವಲಯ: 231**
- **ಮಹದೇವಪುರ ವಲಯ: 3,612**
- **ಆರ್.ಆರ್ ನಗರ ವಲಯ: 3,329**
- **ಯಲಹಂಕ ವಲಯ: 7,478**
- **ಭಾನುವಾರ ಒಟ್ಟು ವಿಸರ್ಜಿಸಿದ ಮೂರ್ತಿಗಳು : 1,29,516**

ಹಿಂದೆ ಬೇಡವೆಂದು ಈಗೇಕೆ ಎನ್‌ಐಎಗೆ? ಬಿಜೆಪಿ ಹೇಳಿಕೆಗೆ ಪ್ರಿಯಾಂಕ್ ಖರ್ಗೆ ವ್ಯಂಗ್ಯ

ರಾಜ್ಯದ 74 ಪ್ರಕರಣ ಸಿಬಿಐ ಬಳಿ ಬಾಕಿ

ಬೆಂಗಳೂರು: ಮಾನವ ಸಂಪನ್ಮೂಲ ಕೊರತೆಯ ಕಾರಣಕ್ಕೆ ಸಾರ್ವಜನಿಕರಿಗೆ ನೂರಾರು ಕೋಟ್ಯಂತರ ರು. ವಂಚನೆಯಾಗಿದ್ದ 74 ಗಂಭೀರ ಪ್ರಕರಣಗಳು ತನಿಖೆಯಾಗದೆ ಸಿಬಿಐನಲ್ಲಿ ಬಾಕಿ ಉಳಿದಿದ್ದು, ತೊಂದರೆಗೆ ಒಳಗಾದವರು ನ್ಯಾಯಕ್ಕಾಗಿ ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ.

ಗುರು ರಾಘವೇಂದ್ರ ಬ್ಯಾಂಕ್ ನಿಯಮಿತ ಹಾಗೂ ಶ್ರೀ ಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟೆಟ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ 2020 ರಲ್ಲಿ ಬಸವನಗುಡಿ ಪೊಲೀಸ್ ಠಾಣೆ ಯಲ್ಲಿ ಒಂದು, ಶಂಕರಪುರ ಪೊಲೀಸ್ ಠಾಣೆಯಲ್ಲಿ ಮೂರು ಪ್ರಕರಣಗಳು ದಾಖ ಲಾಗಿದ್ದವು. ಅವುಗಳ ತನಿಖೆಗೆ ಸಿಬಿಐಗೆ ವಹಿಸಲಾಗಿತ್ತು. ನಾಲ್ಕು ವರ್ಷ ಕಳೆದರೂ ಸಿಬಿಐ ತನಿಖೆಯಲ್ಲಿ ಮಹತ್ವದ ಪ್ರಗತಿಯಾಗಿಲ್ಲ.

ಈ ಸಂಸ್ಥೆಗಳಲ್ಲಿ ಕೋಟ್ಯಂತರ ರುಪಾಯಿ ಠೇವಣಿ ಮಾಡಿದ ಸಾವಿರಾರು ಜನ ವಂಚನೆಗೆ ಒಳಗಾಗಿದ್ದರು. ವಿಧಾನ ಮಂಡಲದಲ್ಲಿ ಭಾರೀ ಪ್ರಮಾಣದ ಚರ್ಚೆಗಳಾದವು. ಆದರೆ ಯಾವುದೂ ಪ್ರಯೋಜನವಾಗಿಲ್ಲ. ಈವರೆಗೂ ವಂಚನೆಗೆ ಒಳಗಾದವರಿಗೆ ನ್ಯಾಯ ಸಿಕ್ಕಿಲ್ಲ. ಸಿಬಿಐಗೆ ವರ್ಗಾವಣೆಯಾಗಿದೆ ಎಂಬ ಕಾರಣಕ್ಕೆ ಸ್ಥಳೀಯ ಪೊಲೀಸರು ತನಿಖೆಯನ್ನು ಕೈ ಬಿಟ್ಟಿದ್ದಾರೆ. ಇನ್ನೂ ಕೇರಳ ಮೂಲದ ಪಾಪುಲರ್ ಫೈನಾನ್ಸ್ ಹಗರಣ ರಾಜ್ಯದಲ್ಲಿ ದೊಡ್ಡ ಸದ್ದು ಮಾಡಿತ್ತು. ಯಶವಂತಪುರದಲ್ಲಿ 47, ಎಚ್‌ಎಸ್‌ಆರ್ ಪೊಲೀಸ್ ಠಾಣೆಯಲ್ಲಿ ಐದು, ಬಸವನಗುಡಿ ಪೊಲೀಸ್ ಠಾಣೆಯಲ್ಲಿ ಮೂರು, ಜೈಭೀಮಾ ನಗರದಲ್ಲಿ ಎರಡು, ಮಡಿವಾಳ, ಮಾಗಡಿ, ಚಂದ್ರಾಲೇಔಟ್, ವಿದ್ಯಾರಣ್ಯಪುರ, ಯಲಹಂಕ, ಮಹದೇವಪುರ, ಸಂಪಗೀರಾಮನಗರ ಪೊಲೀಸ್ ಠಾಣೆಗಳಲ್ಲಿ ತಲಾ ಒಂದು ಪ್ರಕರಣ ದಾಖಲಾಗಿವೆ.

ಕೇರಳದ ಪಾಪುರಲ್ ಫೈನಾಸ್ ಶೇ.12 ರಷ್ಟು ಬಡ್ಡಿ ನೀಡುವ ಆಮಿಷ ತೋರಿಸಿ ಸಾವಿರಾರು ಮಂದಿಯಿಂದ ಕೋಟ್ಯಂತರ ರು. ಠೇವಣಿ ವಸೂಲಿ ಮಾಡಿತ್ತು. ಲಾಕ್ ಡೌನ್ ಸಂದರ್ಭದಲ್ಲಿ ಜನ ಸಂಕಷ್ಟದಲ್ಲಿರುವಾಗ ಏಕಾಏಕಿ ಬಾಗಿಲು ಬಂದ್ ಮಾಡಿಕೊಂಡು ನಾಪತ್ತೆಯಾಗಿತ್ತು. ಸಂಸ್ಥೆಯ ಮುಖ್ಯಸ್ಥ ಮತಾಯಿಸ್ ಸೇರಿದಂತೆ ಅನೇಕರ ವಿರುದ್ಧ ಠೇವಣಿದಾರರು ದೂರು ನೀಡಿ ನ್ಯಾಯ ಕೊಡಿಸುವಂತೆ ಮನವಿ ಮಾಡಿದ್ದರು. ಪಾಪುಲರ್ ಫೈನಾನ್ಸ್ ಕೇರಳ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಇದೇ ರೀತಿ ವಂಚನೆ ಮಾಡಿರುವುದು ವರದಿಯಾಗಿತ್ತು. ಅಂತಾರಾಜ್ಯ ಗಡಿ ಇರುವ ಕಾರಣಕ್ಕೆ ಹಾಗೂ ಕೋಟ್ಯಂತರ ರು. ಹಣ ದುರುಪಯೋಗ ಪ್ರಕರಣವಾಗಿರುವ ಕಾರಣಕ್ಕೆ ರಾಜ್ಯದ 64 ಪ್ರಕರಣಗಳನ್ನು ಸಿಬಿಐ ತನಿಖೆಗೆ ವಹಿಸಲಾಗಿತ್ತು. ಆದರೆ ಈವರೆಗೂ ತನಿಖೆ ಆರಂಭವಾಗಿಲ್ಲ. ಹಣಕಾಸು ನಷ್ಟ ಮಾಡಿಕೊಂಡವರಿಗೆ ನ್ಯಾಯ ಸಿಕ್ಕಿಲ್ಲ.

ಧರ್ಮಸ್ಥಳ ಪ್ರಕರಣದಲ್ಲಿ ನಡೆಯುತ್ತಿರುವುದು ಆರ್‌ಎಸ್‌ಎಸ್ ಒಳ ಜಗಳ. ಹಿಂದೆ ಬಿಜೆಪಿಯವರೇ ಸೌಜನ್ಯ ಪ್ರಕರಣವನ್ನು ಮರುತನಿಖೆ ಮಾಡಬೇಕು ಎಂದಿದ್ದರು, ಎಸ್‌ಐಟಿ ರಚನೆಯಾದಾಗಲೂ ಸುಮನಿದ್ದರು. ಈಗ ಏಕಾಏಕಿ ಧರ್ಮಸ್ಥಳ ಚಲೋ ಮಾಡುತ್ತಿದ್ದಾರೆ. ಧರ್ಮಸ್ಥಳ ಪ್ರಕರಣವನ್ನು ಕೇಂದ್ರ ತನಿಖಾ ಸಂಸ್ಥೆಗೆ ವಹಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಆದರೆ ಈ ಹಿಂದೆ ಸಿಬಿಐ ಮಾನವ ಸಂಪನ್ಮೂಲದ ಕೊರತೆಯ ಬಗ್ಗೆ ಪತ್ರ ಬರೆದಿತ್ತು, ಅದರಿಂದಾಗಿ ಸಿಬಿಐ ಮುಂದೆ ರಾಜ್ಯದ 74 ಪ್ರಕರಣಗಳ ತನಿಖೆ ಬಾಕಿ ಇವೆ. ಈ ಬಗ್ಗೆ ಬಿಜೆಪಿಯವರು ಏನು ಹೇಳುತ್ತಾರೆ?

-ಪ್ರಿಯಾಂಕ್ ಖರ್ಗೆ, ಸಚಿವ

ಭೋವಿ ನಿಗಮದಲ್ಲಿ ಹೆಚ್ಚಿದ ಕಮಿಷನ್

ಬೆಂಗಳೂರು: ಭೋವಿ ಅಭಿವೃದ್ಧಿ ನಿಗಮದಲ್ಲಿ ಫಲಾನುಭವಿಗಳಿಗೆ ಹಣ ನೀಡಲು ನಿಗಮದ ಅಧ್ಯಕ್ಷರು ಕಮಿಷನ್ ಕೇಳುತ್ತಿರುವ ಆರೋಪದ ವಿರುದ್ಧ ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದ್ದು, ' ಮತ್ತೊಂದು ಭ್ರಷ್ಟಾಚಾರ ಬಯಲಿಗೆ ಬಂದಿದೆ ಎಂದು ಆರೋಪಿಸಿದೆ.

ಈ ಬಗ್ಗೆ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಆರ್.ಅಶೋಕ, ಭೋವಿ ಅಭಿವೃದ್ಧಿ ನಿಗಮದಲ್ಲಿ ಫಲಾನುಭವಿಗಳಿಗೆ ಹಣ ನೀಡಲು ನಿಗಮದ ಅಧ್ಯಕ್ಷರೇ ಕಮಿಷನ್ ಕೇಳುತ್ತಿರುವ ಹಗರಣ ಬಯಲಾಗಿದೆ. ಕಾಂಗ್ರೆಸ್ ಸರಕಾರ ದಲಿತ ವಿರೋಧಿ ಮತ್ತು ಭ್ರಷ್ಟಾಚಾರಿ ಎಂಬುದು ಸಾಬೀತಾಗಿದೆ. ಈ ಹಿಂದೆ, ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕೆ ವಿನಿಯೋಗವಾಗಬೇಕಾಗಿದ್ದ ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ರು. ಹಣ ತೆಲಂಗಾಣ ವಿಧಾನಸಭೆ ಚುನಾವಣೆ, ಲೋಕಸಭೆ ಚುನಾವಣೆಗೆ ಬಳಸಿಕೊಂಡು ನುಂಗಿ ನೀರು ಕುಡಿದಿದ್ದಾಯ್ತು. ಪರಿಶಿಷ್ಟ ಸಮುದಾಯಗಳ ಅಭಿವೃದ್ಧಿಗೆ ಬಳಕೆಯಾಗಬೇಕಾಗಿದ್ದ ಎಸ್‌ಇಪಿ/ಟಿಎಸ್‌ಪಿ ನಿಧಿಯಲ್ಲಿ ಪ್ರತಿ ವರ್ಷ 15,000 ಕೋಟಿ ರು. ಹಣ ಬೇರೆಡೆ ವರ್ಗಾಯಿಸಿ ದಲಿತರಿಗೆ ಅನ್ಯಾಯ ಮಾಡಿದ್ದಾಯ್ತು. ಈಗ, ಭೋವಿ ಅಭಿವೃದ್ಧಿ ನಿಗಮದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಟೀಕಿಸಿದ್ದಾರೆ.

ಆರೋಪವೇನು?

ಭೋವಿ ಅಭಿವೃದ್ಧಿ ನಿಗಮದಲ್ಲಿ ಫಲಾನುಭವಿಗಳಿಗೆ ಮಂಜೂರಾದ ಹಣವನ್ನು ನೀಡಲು ಶೇಕಡ 60ರಷ್ಟು ಕಮಿಷನ್ ಕೇಳಲಾಗುತ್ತಿದೆ. ಕಚೇರಿಯಲ್ಲಿಯೇ ಡೀಲ್ ನಡೆಯುತ್ತಿದೆ. ಬಿಜೆಪಿ ಅವಧಿಯಲ್ಲಿ 40 ಪರ್ಸೆಂಟ್ ಕಮಿಷನ್ ಆರೋಪ ಮಾಡಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್, 60 ಪರ್ಸೆಂಟ್ ಕಮಿಷನ್ ಆರೋಪ ಕೇಳಿಬಂದಿದೆ. ಭೋವಿ ಸಮಾಜದಲ್ಲಿ ನಿರಂತರವಾಗಿ ಅಕ್ರಮಗಳು ನಡೆಯುತ್ತಿವೆ ಎಂದು ಭೋವಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವೆಂಕಟೇಶ್ ಆರೋಪಿಸಿದ್ದಾರೆ.

ಸರಕಾರದಲ್ಲಿ ಕಮಿಷನ್ ದಂಧೆ: ಭೂ ಒಡೆತನ ಯೋಜನೆಯಡಿ ಭೂಮಿ ಮಂಜೂರಾದವರಿಗೆ 25 ಲಕ್ಷ ರು. ಹಣ ನೀಡಲಾಗುತ್ತಿದ್ದು, ಇದರ ಸಹಾಯಧನ ಬಿಡುಗಡೆ ಮಾಡಲು 5 ಲಕ್ಷ ಕಮಿಷನ್‌ಗೆ ಬೇಡಿಕೆ ಇಟ್ಟಿರುವ ಭೋವಿ ನಿಗಮದ ಅಧ್ಯಕ್ಷ ರವಿಕುಮಾರ್ ಕಾಂಗ್ರೆಸ್ ಸರಕಾರದಲ್ಲಿ ತಾಂಡವವಾಡುತ್ತಿರುವ ಕಮಿಷನ್ ದಂಧೆ, ಭ್ರಷ್ಟಾಚಾರ ಇದೆ ಎಂದಿದ್ದಾರೆ.

ಎಸ್.ನಾಗಣ್ಣಗೆ ತುಮಕೂರು ವಿವಿ ಗೌರವ ಡಾಕ್ಟರೇಟ್ | ಕೆಯುಡಬ್ಲ್ಯೂಜೆಯಿಂದ ಅಭಿನಂದನಾ ಸಮಾರಂಭ

ಸವಾಲು ಎದುರಿಸುತ್ತಿರುವ ಪತ್ರಿಕೋದ್ಯಮ: ಸಿ.ಎಸ್.ಷಡಾಕ್ಷರಿ

ಬೆಂಗಳೂರು: ಸಾಮಾಜಿಕ ಜಾಲತಾಣಗಳು ಸಕ್ರೀಯವಾಗಿರುವ ಪ್ರಸ್ತುತ ದಿನಗಳಲ್ಲಿ, ವಿಶ್ವಾಸಾರ್ಹಕ್ಕೆ ಪಾತ್ರವಾಗಿರುವ ಪತ್ರಿಕೋದ್ಯಮವು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕಾದ ಪರಿಸ್ಥಿತಿ ಎದುರಾಗಿದೆ ಎಂದು ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯೂಡಬ್ಲ್ಯುಜೆ) ವತಿಯಿಂದ ಪತ್ರಿಕೋದ್ಯಮ ಸೇವೆಗಾಗಿ ತುಮಕೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಹಿರಿಮೆಗೆ ಪಾತ್ರರಾದ ಪ್ರಜಾ ಪ್ರಗತಿ ದಿನಪತ್ರಿಕೆಯ ಸಂಪಾದಕ ಎಸ್.ನಾಗಣ್ಣ ಅವರಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾ ರಂಭದಲ್ಲಿ ಮಾತನಾಡಿ, ಪತ್ರಿಕೋದ್ಯಮದಿಂದ ಸಮಾಜ ಬದಲಾವಣೆ ಸಾಧ್ಯವಿದೆ. ಸಮಾಜದ ಅಂಕು ಡೊಂಕು ತಿದ್ದುವ ಕಾಯಕವನ್ನು ಪತ್ರಿಕೆಗಳು ಉತ್ತಮ ಸೇವೆ ಸಲ್ಲಿಸಿಕೊಂಡು ಬಂದಿವೆ. ಮುದ್ರಣ ಮಾಧ್ಯಮಕ್ಕೀಗ ಭಾರೀ ಸವಾಲಿನ ದಿನಗಳು ಎದುರಾಗಿವೆ. ಹಿರಿಯ ಪತ್ರಕರ್ತ ಎಸ್.ನಾಗಣ್ಣ ಅವರಿಗೆ ಸಂದಿರುವ ಈ ಗೌರವವು ಕನ್ನಡ ಪತ್ರಿಕೋದ್ಯಮಕ್ಕೆ ಸಂದ ಹಿರಿಮೆ ಎಂದೂ ಅವರು ವಿಶ್ಲೇಷಿಸಿದರು.



ತುಮಕೂರು ವಿವಿಯಿಂದ ಗೌರವ ಡಾಕ್ಟರೇಟ್‌ಗೆ ಪಾತ್ರರಾಗಿರುವ ಪ್ರಜಾ ಪ್ರಗತಿ ದಿನಪತ್ರಿಕೆಯ ಸಂಪಾದಕ ಎಸ್.ನಾಗಣ್ಣ ಅವರನ್ನು ಬೆಂಗಳೂರಿನಲ್ಲಿ ಕೆಯುಡಬ್ಲ್ಯೂಜೆ ಅಭಿನಂದಿಸಿತು.

ನಾಗಣ್ಣ ಸೇವೆ ಅನನ್ಯ: ಮದನಗೌಡ: ಅಭಿನಂದನಾ ಮಾತುಗಳನ್ನಾಡಿದ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಎಚ್.ಬಿ. ಮದನಗೌಡ ಮಾತನಾಡಿ, ಪತ್ರಿಕೋದ್ಯಮವು ಇಂದು ಸಮಾಜ ಸೇವಾ ಮನೋಭಾವದಿಂದ ದೂರ ಸರಿದು, ಉದ್ಯಮವಾಗಿ ಬದಲಾಗುತ್ತಿದೆ. ನಾಗಣ್ಣ ಅವರು ಪ್ರಜಾಪ್ರಗತಿ ಪತ್ರಿಕೆಯ ಮೂಲಕ ತುಮಕೂರಿಗೂ ಒಂದೊಳ್ಳೆಯ ಹೆಸರನ್ನು ದೊರಕಿಸಿಕೊಡುವುದರಲ್ಲಿ ಪ್ರಮುಖ ಪಾತ್ರ ವಹಿಸಿದವರು ಎಂದು ಅವರ ಹೋರಾಟದ ಸೇವೆಯನ್ನು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ರಾಜ್ಯಾಧ್ಯಕ್ಷ ಶಿವಾನಂದ ಕೆಯೂಡಬ್ಲ್ಯುಜೆ ತಗಡೂರು ಮಾತನಾಡಿ, ಸಿದ್ಧಗಂಗಾ ಮಠದ ಡಾ.ಶಿವಕುಮಾರಸ್ವಾಮೀಜಿ ಅವರು ನಾಗಣ್ಣ ಅವರ ಬದುಕಿನ ಪ್ರೇರಣೆ. ಜಿಲ್ಲಾ ಮಟ್ಟದ ಪತ್ರಿಕೆ ಸಂಪಾದಕರಾಗಿ ತನ್ನ ಪರಿಶ್ರಮ ಮತ್ತು ಬದ್ಧತೆಯಿಂದ ಅದೇ ಪತ್ರಿಕೆಯನ್ನು ರಾಜ್ಯ ಮಟ್ಟದ ಪತ್ರಿಕೆಯನ್ನಾಗಿ ರೂಪಿಸಿ ಅದಕ್ಕೆ ಸಂಪಾದಕರಾಗಿದ್ದಾರೆ. ರಾಜ್ಯ ಸಮ್ಮೇಳನ ಸಂದರ್ಭದಲ್ಲಿ ಅವರ ಸೇವೆ ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತರಾದ ಈಶ್ವರ ದೈತೋಟ, ಐಎಡಬ್ಲ್ಯುಜೆ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ, ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಕೆ.ಶಂಭುಲಿಂಗ ಕಂ.ಕ.ಮೂರ್ತಿ, ಕೆಯೂಡಬ್ಲ್ಯುಜೆ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ, ಕಾರ್ಯದರ್ಶಿ ನಿಂಗಪ್ಪ ಚಾವಡಿ, ಬೆಂಗಳೂರು ನಗರ ಘಟಕದ ಪ್ರಧಾನ ಕಾಯರ್ದರ್ಶಿ ನರೇಂದ್ರ, ಪಾರೆಕಟ್, ತುಮ ಕೂರು ಜಿಲ್ಲಾ ಘಟಕ ಅಧ್ಯಕ್ಷ ಚಿ.ನಿ.ಪುರುಷೋತ್ತಮ, ಪ್ರಧಾನ ಕಾರ್ಯದರ್ಶಿ ರಘುರಾಮ್ ಇದ್ದರು.

ಸುಖದ ಕಾಲದಲ್ಲಿ ನಾಗಣ್ಣ ಪತ್ರಿಕೋದ್ಯಮ ಮಾಡಿದ್ದಕ್ಕಿಂತ ಹೆಚ್ಚು ಸವಾಲಿನ ವಿರುದ್ಧ ಈಜಿದ್ದು ಹೆಚ್ಚು. ಗ್ರಾಮೀಣ ಪತ್ರಿಕೋದ್ಯಮಕ್ಕೆ ಶಕ್ತಿ ನೀಡುವ ಕೆಲಸವನ್ನು ಅವರು ಸತತವಾಗಿ, ಪರಿಶ್ರಮದಿಂದ ಮಾಡಿಕೊಂಡು ಬಂದಿದ್ದಾರೆ.

-ಎಸ್.ಕೆ.ಶೇಷಚಂದ್ರಿಕಾ, ಹಿರಿಯ ಪತ್ರಕರ್ತ

ಮರೆಯಲಾಗದ ದಿನ

ಕೆಯುಡಬ್ಲ್ಯೂಜೆ ಗೌರವ ಸ್ವೀಕರಿಸಿ ಮಾತನಾಡಿದ ಎಸ್.ನಾಗಣ್ಣ ಅವರು, ನನ್ನ ಬದುಕಿನಲ್ಲಿ ಕೆಯುಡಬ್ಲ್ಯೂಜೆ ಅಭಿನಂದನೆ ಕೂಡ ಮರೆಯಲಾಗದ ದಿನ. ಇಂಥದೊಂದು ಅವಕಾಶ ಕಲ್ಪಿಸಿ ಬರಮಾಡಿಕೊಂಡ ತಗಡೂರು ಮತ್ತು ಪದಾಧಿಕಾರಿಗಳಿಗೆ ಧನ್ಯವಾದಗಳು. ಶೇಷಣ್ಣ ಮತ್ತು ಮದನಗೌಡರು ಸೇರಿದಂತೆ ಹಲವರು ನನ್ನ ಬಗ್ಗೆ ಗುಣಗಾನ ಮಾಡಿದ್ದೀರಿ. ಅವರಿಗೂ ಅಭಾರಿಯಾಗಿರುವೆ. ಪತ್ರಿಕೋದ್ಯಮಕ್ಕೆ ಎಷ್ಟೇ ಪೈಪೋಟಿ ಬರಲಿ, ಅದನ್ನು ಎದುರುಸಿಕೊಂಡು, ನಮ್ಮ ವೃತ್ತಿ ಗೌರವವನ್ನು ಕಾಪಾಡಿಕೊಳ್ಳಲು ಸಂಘಟಿತ ಪ್ರಯತ್ನ ನಡೆಸೋಣ ಎಂದರು.

ಆರು ರಾಜ್ಯಗಳಿಗೆ ಸುಪ್ರೀಂ ನೋಟಿಸ್

ದೆಹಲಿ: ಲಿಂಗತ್ವ ಅಲ್ಪಸಂಖ್ಯಾತರನ್ನೂ ಒಳಗೊಂಡ ಸಮಗ್ರ ಲೈಂಗಿಕ ಶಿಕ್ಷಣವನ್ನು (ಸಿಎಸ್ಇ) ಶಾಲಾ ಪಠ್ಯಕ್ರಮದಲ್ಲಿ ಸೇರಿಸಬೇಕೆಂದು ಕೋರಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ನಡೆಸಿತು. ಬಳಿಕ ಈ ಕುರಿತು ಪ್ರತಿಕ್ರಿಯಿಸುವಂತೆ ಕೇಂದ್ರ ಸರಕಾರ, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಹಾಗೂ ಕರ್ನಾಟಕ ಸೇರಿದಂತೆ 6 ರಾಜ್ಯಗಳಿಗೆ ಸೂಚಿಸಿತು. ಮುಖ್ಯ ನ್ಯಾಯಮೂರ್ತಿ ಬಿ.ಆರ್ ಗವಾಯಿ ಹಾಗೂ ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರಿದ್ದ ಪೀಠವು, ಅರ್ಜಿದಾರರ ಪರ ವಕೀಲರಾದ ಗೋಪಾಲ್, ಶಂಕರನಾರಾಯಣನ್ ಅವರ ವಾದವನ್ನು ಆಲಿಸಿತು. ಬಳಿಕ 8 ವಾರಗಳ ಒಳಗಾಗಿ ಪ್ರತಿಕ್ರಿಯಿಸುವಂತೆ ನೋಟಿಸ್ ಜಾರಿ ಮಾಡಿತು. ಅರ್ಜಿದಾರರಾದ, 12ನೇ ತರಗತಿ ವಿದ್ಯಾರ್ಥಿನಿ ಕಾವ್ಯ ಮುಖರ್ಜಿ ಅವರು, ಕೇಂದ್ರ ಸರಕಾರ, ಎನ್‌ಸಿಇಆರ್‌ಟಿ, ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ತೆಲಂಗಾಣ, ಪಂಜಾಬ್ ಮತ್ತು ತಮಿಳು ನಾಡುಗಳನ್ನು ಉಲ್ಲೇಖಿಸಿ ಅರ್ಜಿ ಸಲ್ಲಿಸಿದ್ದರು. ಈ ರಾಜ್ಯಗಳ ಪಠ್ಯಕ್ರಮದಲ್ಲಿ ಸಿಎಸ್ಇ ಕುರಿತು ಲೋಪಗಳು ವರದಿಯಾಗಿವೆ. ಕೇರಳ ಇದಕ್ಕೆ ಹೊರತಾಗಿದೆ.

ಅಖಿಲ ಭಾರತ ವಾಕ್-ಶ್ರವಣ ಸಂಸ್ಥೆ ವಜ್ರ ಮಹೋತ್ಸವ | ರಾಷ್ಟ್ರಪತಿ ಮುರ್ಮು, ರಾಜ್ಯಪಾಲರು, ಸಿಎಂ ಭಾಗಿ

ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆಗೆ 32 ಕೋಟಿ ರು ಮೀಸಲು

ಮೈಸೂರು: ವಾಕ್ ಮತ್ತು ಶ್ರವಣ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆ ಮತ್ತು ಪ್ರಗತಿ ಕಾಣಬೇಕಾಗಿದ್ದು, ಇದಕ್ಕೆ ರಾಜ್ಯ ಸರಕಾರ 10 ಎಕರೆ ಜಾಗ ಒದಗಿಸಿದೆ. ಮಾತ್ರವಲ್ಲ ಅಗತ್ಯ ಇರುವ ಎಲ್ಲಾ ನೆರವನ್ನೂ ಒದಗಿಸಲು ನಾವು ಸಿದ್ಧರಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಅಖಿಲ ಭಾರತ ವಾಕ್-ಶ್ರವಣ ಸಂಸ್ಥೆಯ (ಆಯಿಷ್)ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಜ್ಯ ಸರಕಾರದ ಪ್ರಾಯೋಜಿತ ಕಾಕ್ಲಿಯರ್ ಇಂಪ್ಲಾಂಟ್ ಕಾರ್ಯಕ್ರಮವಾದ 'ಶ್ರವಣ ಸಂಜೀವಿನಿ' ಯೋಜನೆಗೆ ರಾಜ್ಯ ಸರಕಾರವು 2024-25ರ ಬಜೆಟ್‌ನಲ್ಲಿ ಆರ್ಥಿಕವಾಗಿ ದುರ್ಬಲ ವರ್ಗದ ಮಕ್ಕಳಿಗೆ ದುಬಾರಿ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆಯನ್ನು ಉಚಿತವಾಗಿ ಒದಗಿಸಲು 32 ಕೋಟಿ ರು.ಗಳನ್ನು ಮೀಸಲಿಟ್ಟಿದೆ. ಈ ಸಂಸ್ಥೆಯ ಅಂಗಳದಲ್ಲಿ 2.55 ಕೋಟಿ ರು.ವೆಚ್ಚದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಅಂಗವಿಕಲ ಮಕ್ಕಳಿಗೆ ಆಂಫಿಥಿಯೇಟರ್ ನಿರ್ಮಾಣ, ಅಂಗವಿಕಲ ಸ್ನೇಹಿ ಸಲಕರಣೆಗಳು, ಉದ್ಯಾನವನ ಅಭಿವೃದ್ಧಿ, ಮಾತು ಬಾರದ, ಕಿವಿ ಕೇಳದ ಮಕ್ಕಳಿಗೆ ನಿರೀಕ್ಷಣಾ ಕೊಠಡಿ ಮತ್ತು ಮ್ಯೂಸಿಯಂ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲಾಗುತ್ತಿದೆ ಎಂದರು.

ಮೈಸೂರಿನ ಅಖಿಲ ಭಾರತ ವಾಕ್-ಶ್ರವಣ ಸಂಸ್ಥೆ ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್, ಸಿಎಂ ಸಿದ್ದರಾಮಯ್ಯ ಭಾಗಿಯಾಗಿದ್ದರು.

ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯು ವಾಕ್ ಮತ್ತು ಶ್ರವಣ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕೆಲಸ ಮಾಡುತ್ತಿರುವ ಏಷ್ಯಾದ ಅತ್ಯುತ್ತಮ ಸಂಸ್ಥೆಗಳಲ್ಲೊಂದಾಗಿರುವುದು ನಮ್ಮ ಜಿಲ್ಲೆಯ ಮತ್ತು ರಾಜ್ಯದ ಹೆಮ್ಮೆ. ಧ್ವನಿಯಿಲ್ಲದವರಿಗೆ ಧ್ವನಿಯಾಗಿರುವ, ಕಿವಿ ಕೇಳದೆ ಮೌನವಾಗಿರುವವರಿಗೆ ಮಾತಿನ ಚೈತನ್ಯ ತುಂಬಿರುವ ಇಂಥ ಸಂಸ್ಥೆಯು ಮೈಸೂರಿನಲ್ಲಿರುವುದು ಹಾಗೂ ವಜ್ರ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ ಎಂದರು.

ರಾಜ್ಯದಲ್ಲಿ 3.3 ಲಕ್ಷ ಜನರು ಮಾತು ಬಾರದವರು ಹಾಗೂ ಕಿವಿ ಕೇಳಿಸದವರಿದ್ದಾರೆ. ಶೇ.0.5ರಷ್ಟಿರುವ ಈ ಅಸಹಾಯಕರು ನಮಗೆ ಅಂಕಿ ಸಂಖ್ಯೆಗಳಲ್ಲ. ಹಾಗಾಗಿ ಈ ಸಮಸ್ಯೆಯಿರುವವರನ್ನು ಅತ್ಯಂತ ಎಚ್ಚರಿಕೆಯಿಂದ ಕಾಪಾಡಿಕೊಳ್ಳುವುದು ನಾಗರಿಕ ಸಮಾಜದ ಜವಾಬ್ದಾರಿ ಎಂದರು.

ವೇದಿಕೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್, ಕೇಂದ್ರ ಆರೋಗ್ಯ ರಾಜ್ಯ ಖಾತೆ ಸಚಿವೆ ಅನುಪ್ರಿಯಾ ಪಟೇಲ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಸಂಸದ ಯದುವೀರ್ ಒಡೆಯರ್, ಆಯಿಷ್ ನಿರ್ದೇಶಕಿ ಡಾ.ಎಂ.ಪುಷ್ಪಾವತಿ ಉಪಸ್ಥಿತರಿದ್ದರು.

ಮೈಸೂರಿನಲ್ಲಿ 1966ರಲ್ಲಿ ಸ್ಥಾಪನೆಯಾದ ಈ ಸಂಸ್ಥೆಯು ವಾಕ್ ಮತ್ತು ಶ್ರವಣ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಮಾನವ ಸಂಪನ್ಮೂಲ ಅಭಿವೃದ್ಧಿ, ಸಂಶೋಧನೆ, ಚಿಕಿತ್ಸೆ, ಪುನರ್ವಸತಿ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲೂ ಸೇವೆ ಒದಗಿಸುತ್ತಿರುವ ಮಹತ್ವದ ಸಂಸ್ಥೆಯಾಗಿದೆ.

-ಸಿದ್ದರಾಮಯ್ಯ, ಸಿಎಂ

ಸಂಜ್ಞೆ ಭಾಷೆ ಪರಿಣಾಮಕಾರಿ ಸಂವಹನ ಸಾಧನ

ಶ್ರವಣ ಮತ್ತು ಮಾತಿನ ದುರ್ಬಲತೆ ಇರುವ ಜನರಿಗೆ ಸಂಜ್ಞೆ ಭಾಷೆ ಪರಿಣಾಮಕಾರಿ ಸಂವಹನ ಸಾಧನವಾಗಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಮೆಚ್ಚುಗೆ ವ್ಯಕ್ತಪಡಿಸಿದರು.ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಂಜ್ಞೆ ಭಾಷೆಯ ಅಭಿವೃದ್ಧಿ ಅವಶ್ಯಕತೆಯಿದೆ. ಭಾರತೀಯ ಸಂಜ್ಞೆ ಭಾಷೆಯನ್ನು ಪ್ರಮಾಣೀಕರಿಸುವ ಮತ್ತು ಸಮಾಜದಲ್ಲಿ ಅದರ ಬಳಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಎಂಬ ಮಂತ್ರವನ್ನು ಅರಿತುಕೊಂಡು, ಭಾರತ ಸರಕಾರದ ವಿಶೇಷ ಚೇತನರ ಸಬಲೀಕರಣ ಇಲಾಖೆಯು ದೇಶದ ಅಂಗವಿಕಲ ವ್ಯಕ್ತಿಗಳ ಸಬಲೀಕರಣಕ್ಕಾಗಿ, ಎಲ್ಲರನ್ನೂ ಒಳಗೊಂಡ ಸಮಾಜದ ಸೃಷ್ಟಿಗಾಗಿ ಶ್ರಮಿಸುತ್ತಿದೆ. ಶ್ರವಣದೋಷವುಳ್ಳವರಿಗಾಗಿ ಕಾಕ್ಲಿಯರ್ ಇಂಪ್ಲಾಂಟ್ ಯೋಜನೆಯನ್ನು ಇಲಾಖೆಯು ಜಾರಿಗೊಳಿಸುತ್ತಿದೆ. ಭಾರತೀಯ ಸಂಕೇತ ಭಾಷಾ ನಿಘಂಟನ್ನು ಸಹ ಅಭಿವೃದ್ಧಿಪಡಿಸಲಾಗಿದೆ ಎಂದರು.

ಹರಿಯಾಣದಲ್ಲಿ ವಿಶ್ವದ ಶಕ್ತಿಶಾಲಿ ಅತಿ ಉದ್ದದ ರೈಲಿಗೆ ಚಾಲನೆ

ಭಾರತಕ್ಕೂ ಬಂದಿದೆ ಹೈಡ್ರೋಜನ್ ಚಾಲಿತ ರೈಲು

ರೈಲ್ವೆ ಕ್ಷೇತ್ರದಲ್ಲಿ ಭಾರತ ಇತ್ತೀಚೆಗೆ ಕ್ರಾಂತಿಕಾರಕ ಬದಲಾವಣೆ ಕಾಣುತ್ತಿದೆ. ದೇಶಾದ್ಯಂತ ವಂದೇ ಭಾರತ್ ರೈಲುಗಳ ಓಡಾಟ ಆರಂಭವಾಗಿದೆ. ಬುಲೆಟ್ ಟ್ರೇನ್ ಓಡಾಟದ ಬಗ್ಗೆ ಸಿದ್ಧತೆ ಆರಂಭವಾಗಿದೆ. ಮೆಟ್ರೋ ನಗರಗಳಲ್ಲಿ ಮೆಟ್ರೋ ರೈಲಿನ ಜಾಲ ವಿಸ್ತರಣೆ ಕಂಡಿದೆ. ಉತ್ತರ ಪ್ರದೇಶದಲ್ಲಿ 4.5 ಕಿ.ಮೀ ಉದ್ದದ ಸರಕು ಸಾಗಾಣಿಕೆ ರೈಲು ಇತ್ತೀಚೆಗೆ ಚಾಲನೆ ಪಡೆದಿದೆ. ಇದಕ್ಕೆ ಹೊಸ ಸೇರ್ಪಡೆ ಹೈಡ್ರೋಜನ್ ರೈಲು.

ಡಾ.ಮಾದೇಶ್ ಮಂಜುನಾಥ

ವಿಶ್ವದ ಶಕ್ತಿಶಾಲಿ ಮತ್ತು ಅತಿ ಉದ್ದದ ರೈಲು ಸುಮಾರು 2600 ಪ್ರಯಾಣಿಕರನ್ನು ಒಮ್ಮೆಗೇ ಸಾಗಿಸುವ 1200 ಎಚ್ ಪಿ ಸಾಮರ್ಥ್ಯ ಹೊಂದಿದ ಹೈಡ್ರೋಜನ್ ಚಾಲಿತ ರೈಲುಗಳು ಭಾರತದಲ್ಲಿ ಸದ್ಯವೇ ಕಾರ್ಯ ನಿರ್ವಹಿಸಲಿವೆ. ಇದರೊಂದಿಗೆ, ಭಾರತವು ಜರ್ಮನಿ, ಫ್ರಾನ್ಸ್, ಸ್ವೀಡನ್ ಮತ್ತು ಚೀನಾ ಜೊತೆಗೆ ಹೈಡ್ರೋಜನ್ ತಂತ್ರಜ್ಞಾನದಿಂದ ಚಾಲಿತ ರೈಲುಗಳನ್ನು ಜಾಗತಿಕವಾಗಿ ಅಭಿವೃದ್ಧಿಪಡಿಸಿದ ಐದನೇ ರಾಷ್ಟ್ರವಾಗಲಿದೆ.

ದೇಶದ ಮೊದಲ ಹೈಡ್ರೋಜನ್ ಚಾಲಿತ ರೈಲು ಸೇವೆಯು ಹರಿಯಾಣದ ಜಿಂದ್ ಮತ್ತು ಸೋನಿಪತ್ ನಗರವನ್ನು ಸಂಪರ್ಕಿಸಲಿದೆ. ಇತ್ತೀಚೆಗಷ್ಟೆ ಭಾರತೀಯ ರೈಲ್ವೆ ಚೆನ್ನೈನ ಇಂಟಿಗ್ರಲ್ ಕೋಚ್ ಫ್ಯಾಕ್ಟರಿಯಲ್ಲಿ (ಐಸಿಎಫ್) ತನ್ನ ಮೊದಲ ಹೈಡ್ರೋಜನ್ ಚಾಲಿತ ರೈಲು ಕೋಚ್‌ನ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

ಹೈಡ್ರೋಜನ್ ರೈಲು ಎಂದರೇನು?

ಹೈಡ್ರೋಜನ್ ರೈಲು, ಹೈಡ್ರೋಜನ್ ಚಾಲಿತ ರೈಲು, ಹೈಡ್ರೋಜನ್ ರೈಲ್ವೆ ಅಥವಾ ಹೈಡ್ರೋಜನ್ ಇಂಧನ ರೈಲು ಎಂದೂ ಕರೆಯಲ್ಪಡುತ್ತದೆ. ಇದು ಜಲಜನಕವನ್ನು ಪ್ರಾಥಮಿಕ ಶಕ್ತಿಯ ಮೂಲವಾಗಿ ಬಳಸುವ ಒಂದು ರೈಲು. ಈ ರೈಲುಗಳು ಇಂಧನ ಕೋಶಗಳಿಂದ ಚಾಲಿತವಾಗಿದ್ದು, ಅವು ಜಲಜನಕ ಮತ್ತು ಆಮ್ಲಜನಕವನ್ನು ವಿದ್ಯುತ್ ಆಗಿ ಪರಿವರ್ತಿಸುತ್ತವೆ, ನೀರಿನ ಆವಿ ಮತ್ತು ಶಾಖವನ್ನು ಉಪ-ಉತ್ಪನ್ನಗಳಾಗಿ(ಬೈ ಪ್ರಾಡಕ್ಟ್ಸ್) ಹೊರಸೂಸುತ್ತವೆ.

ದುಬಾರಿ ರೈಲು !

ಹೈಡ್ರೋಜನ್ ಹೆರಿಟೇಜ್ ಇನಿಷಿಯೇಟಿವ್ ಯೋಜನೆಯಡಿಯಲ್ಲಿ ಒಟ್ಟು 35 ರೈಲುಗಳನ್ನು ಜರ್ಮನಿಯ ತಂತ್ರಜ್ಞಾನದಡಿ ಭಾರತದಲ್ಲಿ ಸಿದ್ಧವಾಗುತ್ತಿದೆ. ಚೆನ್ನೈನಲ್ಲಿರುವ ರೈಲ್ವೆ ಕೋಚ್ ತಯಾರಿಕಾ ಘಟಕದಲ್ಲಿ ಈ ಎಲ್ಲಾ ರೈಲು ಬೋಗಿಗಳು, ಇಂಜಿನ್ ತಯಾರಾಗುತ್ತವೆ. ಇಂಥ ಒಂದು ಬೋಗಿಯನ್ನು ತಯಾರಿಸಲು 10 ಕೋಟಿ ರೂ. ಖರ್ಚಾಗುತ್ತದೆ. ಈ ರೈಲು ಸಾಮಾನ್ಯ ಹಳಿಗಳ ಮೇಲೆ ಓಡಿಸಬಹುದಾದರೂ ರೈಲು ಹಳಿಗೆ ಕೆಲವಾರು ಮಾರ್ಪಾಟುಗಳನ್ನು ಮಾಡಬೇ ಕಾಗುತ್ತದೆ. ಒಂದು ಮಾರ್ಗದ ರೈಲು ಹಳಿಗೆ ಕೆಲವು ಮಾರ್ಪಾಟುಗಳನ್ನು ಮಾಡಬೇಕಾದರೆ ಅದಕ್ಕೆ ಸುಮಾರು 75 ಕೋಟಿ ರೂ. ಖರ್ಚಾಗುತ್ತದೆ ಎಂದು ರೈಲ್ವೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಹೈಡ್ರೋಜನ್ ರೈಲುಗಳು ಹೇಗೆ ಕೆಲಸ ಮಾಡುತ್ತವೆ?

ಹೈಡ್ರೋಜನ್ ರೈಲಿನ ವಿಶೇಷತೆಯೆಂದರೆ ಇವುಗಳ ಫ್ಯೂಯಲ್ ಸೆಲ್ ಅಥವಾ ಇಂಧನ ಕೋಶ. ಇದು ಜಲಜನಕ ಮತ್ತು ಆಮ್ಲಜನಕದ ನಡುವಿನ ಎಲೆಕ್ಟ್ರೋಕೆಮಿಕಲ್ ಕ್ರಿಯೆಯ ಮೂಲಕ ವಿದ್ಯುತ್ ಉತ್ಪಾದಿಸುತ್ತದೆ. ಈ ಪ್ರಕ್ರಿಯೆಯಲ್ಲಿ, ಇಂಧನ ಕೋಶದಲ್ಲಿ ಜಲಜನಕ ಆಮ್ಲಜನಕದೊಂದಿಗೆ ಸಂಯೋಜಿಸಲ್ಪಡುತ್ತದೆ. ವಿದ್ಯುತ್ ಮತ್ತು ನೀರನ್ನು ತ್ಯಾಜ್ಯ ಉತ್ಪನ್ನಗಳಾಗಿ ಉತ್ಪಾದಿಸುತ್ತದೆ.

ವಿದ್ಯುತ್ ಶಕ್ತಿ

ಇಂಧನ ಕೋಶದಿಂದ ಉತ್ಪತ್ತಿಯಾಗುವ ವಿದ್ಯುತ್, ರೈಲಿನ ವಿದ್ಯುತ್ ಮೋಟಾರ್‌ಗಳಿಗೆ ಶಕ್ತಿಯನ್ನು ನೀಡುತ್ತದೆ. ಇದು ರೈಲಿನ ಚಕ್ರಗಳನ್ನು ಚಲಿಸಲು ಅನುವು ಮಾಡಿಕೊಡುತ್ತದೆ. ಇದರರ್ಥ

ಹೈಡ್ರೋಜನ್ ರೈಲುಗಳು ಮೂಲಭೂತವಾಗಿ ವಿದ್ಯುತ್ ರೈಲುಗಳಾಗಿದ್ದು, ಶುದ್ಧ, ನವೀಕರಿಸಬಹುದಾದ ಇಂಧನ ಮೂಲವನ್ನು ಬಳಸುವ ಹೆಚ್ಚುವರಿ ಪ್ರಯೋಜನವನ್ನು ಹೊಂದಿವೆ.

ಶಕ್ತಿ ಸಂಗ್ರಹಣೆ: ಹೈಡ್ರೋಜನ್ ರೈಲುಗಳು ಇಂಧನ ಕೋಶಗಳಿಂದ ಉತ್ಪತ್ತಿಯಾಗುವ ಹೆಚ್ಚುವರಿ ವಿದ್ಯುತ್ ಅನ್ನು ಸಂಗ್ರಹಿಸಲು ಬ್ಯಾಟರಿಗಳು ಅಥವಾ ಸೂಪರ್ ಕೆಪಾಸಿಟರ್‌ಗಳಂತಹ ಶಕ್ತಿ ಸಂಗ್ರಹ ವ್ಯವಸ್ಥೆಗಳನ್ನು ಹೊಂದಿರುತ್ತವೆ. ಈ ಸಂಗ್ರಹಿತ ಶಕ್ತಿಯು ರೈಲುಗಳಿಗೆ ವೇಗ ಮತ್ತು ರೈಲುಗಳು ಎತ್ತರದ ಪ್ರದೇಶಗಳಲ್ಲಿ ಸಂಚರಿಸುವ ಸಂದರ್ಭದಲ್ಲಿ ಇಂಜಿನ್ ಸಾಮರ್ಥ್ಯಕ್ಕೆ ಹೆಚ್ಚಿನ ವಿದ್ಯುತ್ ಬೇಡಿಕೆಯ ಅವಧಿಯಲ್ಲಿ ಇಂಧನ ಕೋಶದ ಉತ್ಪಾದನೆಯನ್ನು ಪೂರೈಸಲು ಬಳಸಬಹುದು.

ಹೈಡ್ರೋಜನ್ ರೈಲಿನ ಇತಿಹಾಸ?

2018 ರಲ್ಲಿ ವಿಶ್ವದ ಮೊಟ್ಟ ಮೊದಲ ಹೈಡ್ರೋಜನ್ ಚಾಲಿತ ರೈಲುಗಳನ್ನು ಜರ್ಮನಿಯವರು ಅಭಿವೃದ್ಧಿಪಡಿಸಿದರು. ಅದುವೇ ಕೊರಾಡಿಯ ಇಲಿಂಟ್ ಆಲ್ ಸ್ಟೋಮ್ ಮತ್ತು ಹೈಡ್ರೊ ಫ್ಲೆಕ್ಸ್

ಹೈಡ್ರೋಜನ್ ರೈಲುಗಳನ್ನು ಸ್ವೀಡನ್ ಮತ್ತು ಫ್ರಾನ್ಸ್ ದೇಶಗಳು ಅಭಿವೃದ್ಧಿಪಡಿಸಿವೆ.

ಸವಾಲುಗಳು ಮತ್ತು ಮಿತಿಗಳು

ಹೈಡ್ರೋಜನ್ ಉತ್ಪಾದನೆ ಮತ್ತು ಸಂಗ್ರಹಣೆ: ಹೈಡ್ರೋಜನ್ ರೈಲುಗಳು ಪರಿಸರ ಸ್ನೇಹಿಯಾಗಿದ್ದರೂ, ಹೈಡ್ರೋಜನ್ ಉತ್ಪಾದನೆ ಮತ್ತು ಸಂಗ್ರಹಣೆ ಸವಾಲಿನದ್ದಾಗಿದೆ. ಪ್ರಸ್ತುತ, ಹೆಚ್ಚಿನ ಹೈಡ್ರೋಜನ್ ಅನ್ನು ನೈಸರ್ಗಿಕ ಅನಿಲ ಸುಧಾರಣೆಯ ಮೂಲಕ ಉತ್ಪಾದಿಸಲಾಗುತ್ತದೆ, ಇದು ಹಸಿರುಮನೆ ಅನಿಲ ಹೊರಸೂಸುವಿಕೆಗೆ ಕಾರಣವಾಗುತ್ತದೆ. ಆದಾಗ್ಯೂ, ನವೀಕರಿಸಬಹುದಾದ ಇಂಧನ ಮೂಲಗಳನ್ನು ಬಳಸಿಕೊಂಡು ವಿದ್ಯುತ್ ವಿಭಜನೆಯ(ಎಲೆಕ್ಟ್ರೋಲೈಸಿಸ್) ಮೂಲಕವೂ ಹೈಡ್ರೋಜನ್ ಅನ್ನು ಉತ್ಪಾದಿಸಬಹುದು. ಇದು ಹೆಚ್ಚು ಪರಿಸರ ಸ್ನೇಹಿಯಾಗಿದೆ

ಹೈಡ್ರೋಜನ್ ಅನ್ನು ಸುರಕ್ಷಿತವಾಗಿ ಮತ್ತು ಪರಿಣಾಮಕಾರಿಯಾಗಿ ಸಂಗ್ರಹಿಸುವುದು ಮತ್ತೊಂದು ಸವಾಲಾಗಿದೆ. ಏಕೆಂದರೆ ಇದು ಕಡಿಮೆ ಶಕ್ತಿಯ ಸಾಂದ್ರತೆಯನ್ನು ಹೊಂದಿರುತ್ತದೆ ಮತ್ತು ಹೆಚ್ಚಿನ ಒತ್ತಡ ಅಥವಾ ಕಡಿಮೆ ತಾಪಮಾನದಲ್ಲಿ ಸಂಗ್ರಹಿಸಬೇಕಾಗುತ್ತದೆ. ಇದು ಹೈಡ್ರೋಜನ್ ರೈಲುಗಳ ವಿನ್ಯಾಸ ಮತ್ತು ಕಾರ್ಯಾಚರಣೆಯಲ್ಲಿ ಹೆಚ್ಚಿದ ವೆಚ್ಚಕ್ಕೆ ಕಾರಣವಾಗಬಹುದು. ಅಧಿಕ ಆರಂಭಿಕ ಹೂಡಿಕೆ ಮತ್ತು ಹೆಚ್ಚು ದುಬಾರಿಯಾಗಿದೆ.

ಭವಿಷ್ಯದ ಹೈಡ್ರೋಜನ್ ರೈಲುಗಳು: ವಿಶ್ವಾದ್ಯಂತ ನಾನಾ ದೇಶಗಳು ತಮ್ಮ ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಮತ್ತು ಹೆಚ್ಚು ಸುಸ್ಥಿರ ಇಂಧನ ಬಳಕೆಯನ್ನು ಉತ್ತೇಜಿಸಲು ಹೈಡ್ರೋಜನ್ ರೈಲುಗಳತ್ತ ಮುಖ ಮಾಡಿವೆ. ರೈಲು ಸಾರಿಗೆಯ ಭವಿಷ್ಯದಲ್ಲಿ ಮಹತ್ವದ ಪಾತ್ರವನ್ನು ವಹಿಸಲು ಸಿದ್ಧವಾಗಿವೆ. ಇಂಧನ ಕೋಶ ತಂತ್ರಜ್ಞಾನ, ಹೈಡ್ರೋಜನ್ ಉತ್ಪಾದನೆ ಮತ್ತು ಸಂಗ್ರಹಣೆಯಲ್ಲಿ ನಡೆಯುತ್ತಿರುವ ಪ್ರಗತಿಯೊಂದಿಗೆ, ಮುಂಬರುವ ವರ್ಷಗಳಲ್ಲಿ ಹೈಡ್ರೋಜನ್ ರೈಲುಗಳು ಈಗ ಬಳಕೆಯಲ್ಲಿರುವ ಡೀಸೆಲ್ ರೈಲುಗಳಿಗೆ ಪರ್ಯಾಯವಾಗುವ ಸಾಮರ್ಥ್ಯವನ್ನು ಹೊಂದಿದೆ.

ಹೈಡ್ರೋಜನ್ ರೈಲುಗಳ ವಿಧಗಳು

- **ಪ್ರಯಾಣಿಕ ರೈಲುಗಳು:** ಹೈಡ್ರೋಜನ್ ಚಾಲಿತ ಪ್ಯಾಸೆಂಜರ್ ರೈಲುಗಳು. ಇವುಗಳು ಪರಿಸರ ಸ್ನೇಹಿ ಸ್ವಚ್ಛ ಮತ್ತು ಶಾಂತವಾದ ಪ್ರಯಾಣವನ್ನು ಒದಗಿಸುತ್ತದೆ. ವಿದ್ಯುದೀಕರಣವಲ್ಲದ ಟ್ರ್ಯಾಕ್ ಗಳಲ್ಲೂ ಮುಖ್ಯವಾಗಿ ಉಪನಗರ ಮತ್ತು ಪ್ರಾದೇಶಿಕ ಸೇವೆಗಳಿಗೆ ಅವು ವಿಶೇಷವಾಗಿ ಸೂಕ್ತವಾಗಿವೆ. ಸರಕು ಸಾಗಣೆ ರೈಲುಗಳು ಹೈಡ್ರೋಜನ್ ರೈಲುಗಳನ್ನು ಸರಕು ಸಾಗಣೆಗೆ ಬಳಸಬಹುದು, ಇದರ ಸಾಮರ್ಥ್ಯ ಡೀಸೆಲ್ ಚಾಲಿತ ಲೋಕೋಮೋಟಿವ್‌ಗಳಿಗಿಂತಲೂ ಹೆಚ್ಚು. ಸರಕು ಸಾಗಣೆ ಹೈಡ್ರೋಜನ್ ರೈಲುಗಳನ್ನು ತಂತ್ರಜ್ಞಾನವು ಇನ್ನೂ ಅಭಿವೃದ್ಧಿಯ ಹಂತದಲ್ಲಿದ್ದು ಭವಿಷ್ಯದಲ್ಲಿ ಹೆಚ್ಚು ಸಾಮರ್ಥ್ಯದೊಂದಿಗೆ ಸರಕು ಸಾಗಣೆ ರೈಲುಗಳು ನಿರ್ಮಾಣಗೊಳ್ಳಲಿವೆ.



ಅನುಕೂಲಗಳು

ಹೈಡ್ರೋಜನ್ ರೈಲುಗಳ ಪ್ರಮುಖ ಪ್ರಯೋಜನವೆಂದರೆ ಇವುಗಳು ಪರಿಸರ ಸ್ನೇಹಿ. ಜಲಜನಕದ ರೈಲುಗಳ ಇಂಧನ ಕೋಶ ಕ್ರಿಯೆಯ ಉಪ-ಉತ್ಪನ್ನಗಳು ನೀರು ಮತ್ತು ಶಾಖ ಮಾತ್ರ ಆಗಿರುವುದರಿಂದ, ಪರಿಸರಕ್ಕೆ ಹಾನಿಯಾಗುವ ಯಾವುದೇ ವಿಷಕಾರಕ ಅನಿಲಗಳನ್ನ ಹೊರ ಸೂಸುವುದಿಲ್ಲ. ಇದು ಸಾರಿಗೆ ಕ್ಷೇತ್ರದ ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಮತ್ತು ಗಾಳಿಯ ಗುಣ ಮಟ್ಟವನ್ನು ಸುಧಾರಿಸಲು ಆಕರ್ಷಕ ಆಯ್ಕೆಯಾಗಿದೆ.

ಇಂಧನ ದಕ್ಷತೆ

ಡೀಸೆಲ್ ರೈಲುಗಳಿಗಿಂತ ಹೈಡ್ರೋಜನ್ ರೈಲುಗಳು ಹೆಚ್ಚು ಶಕ್ತಿಯುತವಾಗಿದ್ದು, ಸಮರ್ಥವಾಗಿವೆ. ಇಂಧನ ಕೋಶಗಳು ಇಂಧನದ ಹೆಚ್ಚಿನ ಶೇಕಡಾವಾರು ಶಕ್ತಿಯನ್ನು ಬಳಸಬಹುದಾದ ವಿದ್ಯುತ್ ಆಗಿ ಪರಿವರ್ತಿಸುತ್ತದೆ. ಇದರರ್ಥ ಹೈಡ್ರೋಜನ್ ರೈಲುಗಳು ಸಾಂಪ್ರದಾಯಿಕ ಡೀಸೆಲ್ ರೈಲುಗಳಿಗಿಂತ ಕಡಿಮೆ ಇಂಧನವನ್ನು ಬಳಸುತ್ತವೆ. ಇವು ಕಡಿಮೆ ತ್ಯಾಜ್ಯವನ್ನು ಉತ್ಪಾದಿಸುತ್ತವೆ. ಇದರಿಂದ ಮಿತವ್ಯಯಿ ಮತ್ತು ಪರಿಸರ ಸ್ನೇಹಿ ಆಗಿದೆ

ಮೂಲಸೌಕರ್ಯ ಹೊಂದಾಣಿಕೆ

ಹೈಡ್ರೋಜನ್ ರೈಲುಗಳನ್ನು ಕನಿಷ್ಠ ಮಾರ್ಪಾಡುಗಳೊಂದಿಗೆ ಈಗಾಗಲೇ ಅಸ್ತಿತ್ವದಲ್ಲಿರುವ ಟ್ರ್ಯಾಕ್ ಗಳಲ್ಲಿ ಚಲಿಸಬಹುದು ವಿಶೇಷವೆಂದರೆ ಇವುಗಳು ವಿದ್ಯುದ್ದೀಕರಿಸಿದ ಹಳಿಗಳು ಮತ್ತು ವಿದ್ಯುದ್ದೀಕರಿಸದ ಹಳಿಗಳಲ್ಲಿ ಚಲಿಸಬಹುದು, ಇದು ಮಿಶ್ರ ರೈಲು ಜಾಲಗಳನ್ನು ಹೊಂದಿರುವ ಪ್ರದೇಶಗಳಿಗೆ ಬಹುಮುಖ ಆಯ್ಕೆಯಾಗಿದೆ.

ಶಿಕ್ಷಕಿ ಬೈದರೆಂದು ಮಾತ್ರೆ ಸೇವಿಸಿ ಅಸ್ವಸ್ಥಗೊಂಡ ವಿದ್ಯಾರ್ಥಿ

ಮುದ್ದೇಬಿಹಾಳ: ಶಿಕ್ಷಕಿಯ ಬೈಗುಳ, ಹೊಡೆತಕ್ಕೆ ಬೇಸತ್ತು 7ನೇ ತರಗತಿಯ ವಿದ್ಯಾರ್ಥಿಯೊಬ್ಬ ಶಾಲೆಯಲ್ಲಿ ವಿತರಿಸುವ ಕಬ್ಬಿಣಾಂಶದ 10ಕ್ಕೂ ಹೆಚ್ಚು ಮಾತ್ರೆಗಳನ್ನು ಶಾಲಾ ಅವಧಿಯಲ್ಲಿಯೇ ಏಕಕಾಲಕ್ಕೆ ಸೇವಿಸಿ ಅಸ್ವಸ್ಥಗೊಂಡ ಘಟನೆ ಸೋಮವಾರ ನಡೆದಿದ್ದು ಸಕಾಲಿಕ ಚಿಕಿತ್ಸೆಯಿಂದಾಗಿ ಆತ ಪ್ರಾಣಾಪಾಯದಿಂದ ಪಾರಾಗಿದ್ದರೂ ಮುನ್ನೆಚ್ಚರಿಕೆ ಕ್ರಮವಾಗಿ ಹೆಚ್ಚಿನ ಚಿಕಿತೆಗೆ ವಿಜಯಪುರ ಜಿಲ್ಲಾಸ್ಪತ್ರೆಗೆ ಕಳಿಸಲು ಕ್ರಮ ಕೈಕೊಳ್ಳಲಾಗಿದೆ.

ಪಟ್ಟಣದ ತಾಳಿಕೋಟೆ ರಸ್ತೆ ಪಕ್ಕದಲ್ಲಿರುವ ಸರಕಾರಿ ಕನ್ನಡ ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಕೃಷ್ಣಾ ರಮೇಶ ದೊಡಮನಿ ಎಂಬಾತನೇ ದುಡುಕಿನ ನಿರ್ಧಾರ ಕೈಕೊಂಡ ವಿದ್ಯಾರ್ಥಿಯಾಗಿದ್ದಾನೆ. ಶಾಲೆಯಲ್ಲಿ ಟೇಬಲ್ ಮೇಲೆ ಇಡಲಾಗಿದ್ದ ಈ ಮಾತ್ರೆಗಳನ್ನು ಸೇವಿಸಿ ಕೂಡಲೇ ಅಸ್ವಸ್ಥಗೊಂಡ ಅವನನ್ನು ಸ್ಥಳೀಯ ಚಿಕ್ಕಮಕ್ಕಳ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆತರಲಾಯಿತು. ಅಲ್ಲಿಂದ ಆಂಬ್ಯುಲೆನ್ಸ್ ಮೂಲಕ ತಾಲೂಕು ಸರಕಾರಿ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ನೀಡಲಾಯಿತು. ಮಾತ್ರೆಯ ಅಂಶಗಳನ್ನೆಲ್ಲ ವಾಂತಿ ಮಾಡಿಸುವ ಮೂಲಕ ಹೊಟ್ಟೆ ಸ್ವಚ್ಛಗೊಳಿಸಲಾಯಿತು. ಸ್ಥಳಕ್ಕೆ ಆಗಮಿಸಿದ ಬಿಇಓ ಬಿ.ಎಸ್.ಸಾವಳಗಿ ಅವರು ಯಾಕೆ ಹೀಗೆ ಮಾಡಿದೆ ಎಂದು ಕೇಳಿದಾಗ ಉತ್ತರಿಸಿದ ಬಾಲಕ ತನಗೆ ಶಿಕ್ಷಕಿ ಜಂಗೀನ ಎನ್ನುವವರು ಸುಮ್ಮನೆ ಬೈಯುವುದು, ಹೊಡೆಯುವುದು ಮಾಡುತ್ತಾರೆ. ಸಹಪಾಠಿಗಳು ಹೇಳಿದ ಮಾತನ್ನು ಕೇಳಿಕೊಂಡು ನನ್ನನ್ನೇ ದೂಷಿಸುತ್ತಾರೆ. ಸಹಪಾಠಿಗಳು ಕೂಡಾ ನನಗೆ ಬೈಯುತ್ತಾರೆ. ಇದರಿಂದ ಬೇಸತ್ತು ಶಾಲೆಯ ಟೇಬಲ್ ಮೇಲೆ ಇಟ್ಟಿದ್ದ ಮಾತ್ರೆಗಳನ್ನು ನುಂಗಿದೆ ಎಂದು ಹೇಳಿಕೆ ನೀಡಿದ್ದಾನೆ.

ದೀಪಾ ಬಾಸ್ತಿ ಅವರನ್ನೂ ದಸರಾ ಉದ್ಘಾಟನೆಗೆ ಕರೆಯಲಿ

ಮಡಿಕೇರಿ: ಐತಿಹಾಸಿಕ ಹಿನ್ನೆಲೆಯ ಮೈಸೂರು ದಸರಾ ಉತ್ಸವದ ಉದ್ಘಾಟನೆಯ ವಿಚಾರದಲ್ಲಿ ರಾಜ್ಯ ಸರಕಾರ ಬೂಕರ್ ಪ್ರಶಸ್ತಿಗೆ ಭಾಜನರಾದ ಬಾನು ಮುಷ್ತಾಕ್ ಹಾಗೂ ದೀಪಾ ಬಾಸ್ತಿ ಅವರನ್ನು ಒಂದೇ ರೀತಿಯಲ್ಲಿ ನೋಡಬೇಕಿತ್ತು. ಆ ಮೂಲಕ ದೀಪಾ ಬಾಸ್ತಿ ಅವರನ್ನು ಕೂಡ ದಸರಾ ಉದ್ಘಾಟನೆಗೆ ಕರೆಯಬೇಕಾಗಿತ್ತು ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಅವರು ಅಭಿಪ್ರಾಯಪಟ್ಟಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ರಾಜ್ಯ ಸರಕಾರ ಮೈಸೂರು ದಸರಾ ಉದ್ಘಾಟನೆಗೆ ಬುಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿದ ಕ್ರಮ ಸರಿಯಾಗಿದೆ. ಈ ಹಂತದಲ್ಲಿ ಬುಕರ್ ವಿಜೇತೆ ದೀಪಾ ಬಾಸ್ತಿಯವರನ್ನು ಕೂಡ ಕರೆಯಬಹುದಿತ್ತು. ಈ ಲೋಪವನ್ನು ಈಗಲೂ ಸರಿಪಡಿಸಿಕೊಳ್ಳಲು ಅವಕಾಶವಿದೆ ಎಂದರು. ದಸರಾ ಉತ್ಸವದಂದು ಚಾಮುಂಡಿ ಬೆಟ್ಟದಲ್ಲಿ ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟನೆ ಹಾಗೂ ಅರಮನೆ ಮೈದಾನದ ಕಾರ್ಯಕ್ರಮಕ್ಕೆ ಬಾನು ಮುಷ್ತಾಕ್ ಅವರೊಂದಿಗೆ ದೀಪಾ ಬಾಸ್ತಿಯವರನ್ನು ಆಹ್ವಾನಿಸಿ ದೊಡ್ಡ ಕಾರ್ಯಕ್ರಮವನ್ನು ಆಯೋಜಿಸಿ ಎಂದು ಸಲಹೆ ನೀಡಿದರು.

ಅನೈತಿಕ ಸಂಬಂಧ ಪ್ರಶ್ನಿಸಿದ್ದಕ್ಕೆ ಗಂಡನಿಂದ ಹೆಂಡತಿಯ ಕೊಲೆ

ದಾವಣಗೆರೆ: ಬೇರೊಬ್ಬ ಮಹಿಳೆ ಜತೆ ಗಂಡ ಅನೈತಿಕ ಸಂಬಂಧ ಹೊಂದಿರುವುದನ್ನು ಪ್ರಶ್ನಿಸಿದ್ದಕ್ಕೆ ಹೆಂಡತಿಯನ್ನು ಕೊಲೆ ಮಾಡಿರುವ ಘಟನೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕಿನ ಚಿಕ್ಕಮಲ್ಲನಹೊಳೆ ಗೊಲ್ಲರಹಟ್ಟಿಯಲ್ಲಿ ನಡೆದಿದೆ.

ಜ್ಯೋತಿ (35) ಕೊಲೆಯಾದ ಮಹಿಳೆ. ಆರೋಪಿ ಪತಿ ಬಾಲರಾಜ್ (40). ಜಗಳೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಸ್ಥಳಕ್ಕೆ ಡಾಗ್ ಸ್ಕ್ವಾಡ್ ಹಾಗೂ ವಿಧಿ ವಿಜ್ಞಾನ ಪ್ರಯೋಗಾಲಯದ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪೊಲೀಸ್ ಠಾಣೆ ಪಿಐ ಸಿದ್ದರಾಮಯ್ಯ ಅವರು ಪ್ರತಿಕ್ರಿಯಿಸಿ, ಅನೈತಿಕ ಸಂಬಂಧ ಹೊಂದಿದ್ದ ಪತಿ ಬಾಲರಾಜ್‌ನನ್ನು ಪತ್ನಿ ಜ್ಯೋತಿ ಪ್ರಶ್ನಿಸಿದ್ದಾಳೆ. ಈ ವಿಚಾರವಾಗಿ ಭಾನುವಾರ ರಾತ್ರಿ 11:30 ರ ವೇಳೆಗೆ ಗಂಡ-ಹೆಂಡತಿ ನಡುವೆ ಗಲಾಟೆ ಆಗಿದೆ. ಜಗಳದ ನಂತರ ಹೆಂಡತಿ ಜ್ಯೋತಿಯನ್ನು ಬಾಲರಾಜ್ ಕುಡುಗೋಲುನಿಂದ ಕತ್ತು ಸೀಳಿ ಕೊಲೆ ಮಾಡಿದ್ದಾನೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರು, ಆನೆಕ್ಸ್ -1 ಕಟ್ಟಡ, ನರಸಿಂಹರಾಜ ಚೌಕ, ಬೆಂಗಳೂರು - 560 002

ನಮೂನೆ -3

ಸಂಖ್ಯೆ : ಬೃಬೆಂಮಪಾ/ಆಯುಕ್ತರು/ಪಿಎಸ್‌ಆರ್(ಜಿ)/1334/2025-26 ದಿನಾಂಕ: 01.09.2025

ಸಾರ್ವಜನಿಕ ಪ್ರಕಟಣೆ (ಕಾಯ್ದೆ 3 ರ ಉಪಕಾಯ್ದೆ (3) ನೋಡಿ)

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14-ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ, ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು **ಪಾಣತ್ತೂರು-ಕಾಡುಬೀಸನಹಳ್ಳಿ ಮುಖ್ಯ ರಸ್ತೆಯನ್ನು ಕಾಡುಬೀಸನಹಳ್ಳಿ ಸೇತುವೆ ಹೊರ ವರ್ತುಲ ರಸ್ತೆ (ಓಆರ್‌ಆರ್) ದಿಂದ ಪಾಣತ್ತೂರು ಮುಖ್ಯ ರಸ್ತೆ RMPರಸ್ತೆಯವರೆಗೆ RHS ಬದಿಯ ತಿರುವು (ಚ: 0.00 ಮೀ ನಿಂದ 810.00 ಮೀ) ವರೆಗೆ RMP-2015 ರ ಪ್ರಕಾರ 18.00 ಮೀ ಅಗಲಕ್ಕೆ ಅಗಲೀಕರಣ** ಕಾಮಗಾರಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದೆ. ಪ್ರದೇಶಗಳು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು / ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರಿಸೆಟಲ್‌ಮೆಂಟ್ ಪಾರದರ್ಶಕ ಕಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು / ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ / ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ / ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ಡೆಪ್ಯೂಟಿ ಕಮೀಷನರ್‌ರವರ ಕಛೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಛೇರಿ, ಬೃ.ಬೆಂಮಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

List of Land / Building area surrendered and land owners for which DRC is to be issued

Name of the District: Bengaluru Urban, Name of theTaluk: Bangalore East, Name of the Village: Panathuru

Sy. No /Khatha no.	Block	Type of land: Vacant	Type of land: Built up	Nature of land: Agriculture	Nature of land: Converted Undeveloped	Nature of land: Approved layout / developed land Building site	Dimension of the land/ Plot & Extent in Sq.M: Dimension	Dimension of the land/ Plot & Extent in Sq.M: Extent	Boundaries of the land / plot: East	Boundaries of the land / plot: West	Boundaries of the land / plot: North	Boundaries of the land / plot: South	Building Details: Extent in Sq.M	Building Details: Type of Construction and No,. of floors	Building Details: Floor Area Ratio	Present Activity on Land/Building (Specify Specific activity such as Shop, Office, factory, Apartment, Individual House etc.)	Market (guide lines) value of the land per Sq.M (in Rs.)	Name and address of the owner of the plot/Land for which DRC is to be issued
Sy No.82/5	(Block-I)	Vacant Land			Converted Land			51.58	Sy No.82/2	Sy No.82/6	Sy No.82/4	Road	None	None	None	Vacant	60,000/-	Sri.P.K Srinivasa Reddy S/o M.P Krishna Reddy R/at No.46, 1st Cross, Kaverappa Layout, Panathuru, Bangalore-560103. Represent by G.P.A Holder Sri.P.K Jayachandra Reddy S/o Late M.P Krishnappa @ Late M.P Krishna Reddy
	(Block-II)							74.37	Sy No.82/2	Sy No.82/6	Road	Remaining Portion of Sy No.82/5	None	None	None	Vacant	60,000/-	

ಗಮನಿಸಿ: ಈ ಆಸ್ತಿಯ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯವನ್ನು ಸರ್ಕಾರಿ ಆದೇಶ ಸಂಖ್ಯೆ: ನಅಇ 137 ಎಂಎನ್‌ಯು 2024 (ಇ), ದಿನಾಂಕ: 09.09.2024 ಮತ್ತು ಸುತ್ತೋಲೆ ಸಂಖ್ಯೆ: ಆಯುಕ್ತರು/ಪಿ.ಎಸ್.ಆರ್/ಜಿ/1802/2024-25, ದಿನಾಂಕ:21.09.2024 ರ ಪ್ರಕಾರ ಶುಲ್ಕ ಪಾವತಿಯ ಷರತ್ತುಗಳಿಗೆ ಒಳಪಟ್ಟಿರುತ್ತದೆ ಎಂದು ಪರಿಗಣಿಸಲಾಗುತ್ತದೆ.
ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಕೆಳಗೆ ನಿರ್ದಿಷ್ಟಪಡಿಸಿದ ವಿಳಾಸಕ್ಕೆ ಸಲ್ಲಿಸಬಹುದು:

ವಿಭಾಗ / ಉಪ ವಿಭಾಗ / ಶಾಖೆ ಕಛೇರಿಗಳ ಹೆಸರು ಮತ್ತು ವಿಳಾಸ	ಉಪ ಆಯುಕ್ತರು, ಭೂಸ್ವಾಧೀನ ಮತ್ತು ಟಿಡಿಆರ್, 2ನೇ ಮಹಡಿ, ಕೊಠಡಿ ಸಂಖ್ಯೆ: 208, ಅನೆಕ್ಸ್ ಕಟ್ಟಡ-3, ಎನ್.ಆರ್. ಸ್ಕ್ವೇರ್, ಬಿಬಿಎಂಪಿ, ಬೆಂಗಳೂರು-560002.

ಸಹಿ/- ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಸರಾ ಚಾಲನೆಗೆ ಎಡ-ಬಲ ಗೊಂದಲ

ಕೆ.ಜೆ.ಲೋಕೇಶ್ ಬಾಬು, ಮೈಸೂರು

ದಸರಾ ಮಹೋತ್ಸವ ಉದ್ಘಾಟಕರ ಬಗ್ಗೆ ಆಳುವ ಸರಕಾರ ಸ್ಪಷ್ಟ ಮಾತುಗಳಲ್ಲಿ ತನ್ನ ನಿಲುವು ಪ್ರಕಟಿಸಿದರೂ, ಸದರಿ ವಿಚಾರ ವಿಪಕ್ಷಗಳು ಹಾಗೂ ಹಿಂದೂ ಪರ ಸಂಘಟನೆಗಳ ಪಾಲಿಗೆ ಈವರೆಗೆ ಗೊಂದಲದ ಗೂಡಾಗಿಯೇ ಕಾಡತೊಡಗಿದೆ.

ಈ ಹಿಂದಿನ ಯಾವ ದಸರಾ ವೇಳೆಯೂ ಕಂಡು ಬಾರದ ಈ ಮಟ್ಟಿನ ವಿರೋಧಾಭಾಸ ಈ ವರ್ಷದ ದಸರೆಗೆ ಕಂಡುಬರುತ್ತಿರುವುದು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಒಂದು ಬಗೆಯ ಕಸಿವಿಸಿ ಸೃಷ್ಟಿಸಿದೆ. ಒಂದೆಡೆ ಆಳುವ ಸರಕಾರದ ಪರ ಎಡವರ್ಗದವರಿದ್ದರೆ, ವಿಪಕ್ಷ ಹಾಗೂ ಹಿಂದೂ ಸಂಘಟನೆಗಳ ಪರ ಬಲ ವರ್ಗದ ಮಂದಿ ನಿಂತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ದಸರಾ ಉದ್ಘಾಟಕರಾಗಿ ಆಯ್ಕೆಯಾಗಿರುವ ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ ಪುರಸ್ಕೃತ ಲೇಖಕಿ ಬಾನು ಮುಷ್ತಾಕ್ ಅವರ ಬಗ್ಗೆ ಒಬ್ಬೊಬ್ಬರದ್ದೂ ಒಂದೊಂದು ಬಗೆಯ ವ್ಯಾಖ್ಯಾನ, ಅಭಿಪ್ರಾಯ ಕೇಳಿಬರುತ್ತಿವೆ. ಕೆಲವರು ಹೇಳಿಕೆಗಳನ್ನು ನೀಡಿರುವ ಭರದಲ್ಲಿ ನೈತಿಕತೆ ಮರೆತಿರುವುದು ಕೂಡ ಸ್ಪಷ್ಟವಾಗಿ ಕಾಣುತ್ತಿದೆ. ಅವರವರ ಆಹಾರ ಪದ್ಧತಿ ಅವರವರಿಗೆ ಬಿಟ್ಟದ್ದು ಎಂಬ ಕನಿಷ್ಠ ವಿವೇಚನೆಯೂ ಇಲ್ಲದಂತೆ ನೀಡುತ್ತಿರುವ ಹೇಳಿಕೆಗಳು ಸಾಮಾಜಿಕ ಶಾಂತಿಯನ್ನು ಕದಡಿರುವುದಂತೂ ನಿಜ.

ಸಿಎಂ ಸಮರ್ಥನೆ

ಇದರ ನಡುವೆ ತನ್ನ ಆಯ್ಕೆಯೇ ಅಂತಿಮ ಎಂಬ ನಿಲುವಿಗೆ ಅಂಟಿಕೊಂಡಿರುವ ಸಿಎಂ ಸಿದ್ದರಾಮಯ್ಯ ಭಾನುವಾರ ಮೈಸೂರಿನಲ್ಲಿ ತಾವೇ ಖುದ್ದು ಟೀಕಾಕಾರರ ವಿರುದ್ಧ ಹರಿಹಾಯ್ದರು. ಈ ಮೂಲಕ ತಮ್ಮ ಆಯ್ಕೆಯನ್ನು ಬಲವಾಗಿ ಸಮರ್ಥಿಸಿಕೊಂಡರು. ಅಂತೆಯೇ ದಸರಾ ಉದ್ಘಾಟಕರ ಆಯ್ಕೆ ಕುರಿತಂತೆ ವಾರವಿಡೀ ಮೈಸೂರಿನಲ್ಲಿ ನಡೆದ ವಿದ್ಯಮಾನಗಳು ರಾಜ್ಯದ ಗಮನ ಸೆಳೆದಿರುವುದು ಸುಳ್ಳಲ್ಲ. ಈ ವೇಳೆ ಯಾರ್‍ಯಾರು ಯಾವ್ಯಾವ ಬಗೆಯ ಹೇಳಿಕೆ ನೀಡಿದ್ದಾರೆ ಎಂಬ ಬಗ್ಗೆ ಒಂದು ಪುಟ್ಟ ಅವಲೋಕನ ಹೀಗಿದೆ.

ಧರ್ಮಾಂಧರು ಮಾತ್ರ ಬಾನು ಮುಷ್ತಾಕ್ ಹೆಸರನ್ನು ವಿರೋಧಿಸುತ್ತಾರೆ. ಕನ್ನಡಾಂಬೆಯ ಬಗ್ಗೆ ಬಾನು ಮುಷ್ತಾಕ್ ನೀಡಿರುವ ಹಳೆಯ ಹೇಳಿಕೆಗೂ ಇದಕ್ಕೂ ಏನು ಸಂಬಂಧ. ಎಂದೋ ಏನೋ ಹೇಳಿದ್ದಾರೆ ಎಂದು ಅದನ್ನು ಇಲ್ಲಿಗೆ ಲಿಂಕ್ ಮಾಡುವುದು ಎಷ್ಟು ಸರಿ. ಬೆರಳೆಣಿಕೆ ಮಂದಿಗೆ ಮಾತ್ರ ಬುಕರ್ ಪ್ರಶಸ್ತಿ ಬಂದಿದೆ. ನಾನೇ ಅವರ ಹೆಸರನ್ನು ಆಯ್ಕೆ ಮಾಡಿದ್ದೇನೆ. ಉದ್ಘಾಟಕರು ದನ ತಿನ್ನುವುದನ್ನು ಬಿಜೆಪಿಯವರು ನೋಡಿದ್ದಾರಾ? ದಸರಾ ಸಾಂಸ್ಕೃತಿಕ ಹಬ್ಬ. ಇದು ಧರ್ಮಾತೀತವಾದ ಹಬ್ಬ. ನಿಸಾರ್ ಅಹಮದ್ ಕೂಡ ದಸರಾ ಉದ್ಘಾಟನೆ ಮಾಡಿದ್ದಾರೆ.

-**ಸಿದ್ದರಾಮಯ್ಯ**, ಮುಖ್ಯಮಂತ್ರಿ

ದಸರಾ ಉದ್ಘಾಟಕರ ವಿಚಾರದಲ್ಲಿ ನನ್ನ ಅಭಿಪ್ರಾಯ ಏನೂ ಇಲ್ಲ. ಕರೆದವರು, ಕರೆಸಿಕೊಂಡವರಿಗಷ್ಟೇ ಅದು ಗೊತ್ತು. ಸರಕಾರದ ದಸರಾ ನಮ್ಮ ಪರಂಪರೆಯ ಭಾಗವಲ್ಲ. ನಮ್ಮ ದಸರಾ ಖಾಸಗಿಯಾಗಿಯೇ ನಡೆಯುತ್ತದೆ. ಅವರಿಗೆ ಬೇಕಾದ ರೀತಿ ದಸರೆ ಮಾಡುತ್ತಾರೆ. ಅದಕ್ಕೂ ನಮಗೂ ಸಂಬಂಧ ಇಲ್ಲ.

-**ಪ್ರಮೋದಾದೇವಿ ಒಡೆಯರ್**, ರಾಜವಂಶಸ್ಥೆ



ಬಾನು ಮುಷ್ತಾಕ್ ಅವರು ಕನ್ನಡವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ಇಂಗ್ಲಿಷ್ ಗೆ ಭಾಷಾಂತರ ಮಾಡಿದ ದೀಪಾ ಬಾಸ್ತಿಯವರಿಗೂ ಪ್ರಶಸ್ತಿ ನೀಡಲಾಗಿದೆ. ಬಾನು ಮುಷ್ತಾಕ್ ರೈತ ಚಳವಳಿ, ಭಾಷಾ ಚಳವಳಿ, ವಕೀಲ ವೃತ್ತಿ, ಹೀಗೆ ಹೋರಾಟದ ಹಿನ್ನೆಲೆಯಿಂದ ಬಂದವರು. ಆದರೆ, ಕೆಲವರು ವಿರೋಧ ವ್ಯಕ್ತಪಡಿಸಿದ್ದಾರೆ. ನಮ್ಮದು ಬಹುತ್ವದ ದೇಶ. ಮಂತ್ರಿಗಳಾಗಿದ್ದವರೂ ಒಬ್ಬ ಮಹಿಳಾ ಸಾಧಕಿ ವಿರುದ್ಧ ಮಾತನಾಡಿರುವುದು ಸರಿಯಲ್ಲ.

-**ಎಚ್. ವಿಶ್ವನಾಥ್**, ವಿಧಾನ ಪರಿಷತ್ ಸದಸ್ಯ

ಮುಸ್ಲಿಮರನ್ನು ಕರೆಯಬಾರದು ಅಂತ ಸಂವಿಧಾನದಲ್ಲಿ ಹೇಳಿಲ್ಲ. ಇವರು ರಾಮ ಮಂದಿರ ಉದ್ಘಾಟನೆ ವೇಳೆ ಪ್ರೊಟೋಕಾಲ್ ಉಲ್ಲಂಘನೆ ಆಗಿಲ್ವಾ?. ವೈದಿಕ ವ್ಯವಸ್ಥೆ ಬಿಟ್ಟು ನಾವೇ ಮಾಡಲಿಕ್ಕೆ ಸಾಧ್ಯನಾ? ನಾನು ಕೂಡ ಒಬ್ಬ ಹಿಂದೂ. ಯಾವುದೇ ಪೂಜೆ ನಡೆದರೆ ಯಾರು ಮಾಡುತ್ತಾರೆ ಹೇಳಿ.

-**ಸಂತೋಷ್ ಲಾಡ್**, ಸಚಿವ

ಬುಕರ್ ಪ್ರಶಸ್ತಿ ಪಡೆದಿರುವ ದೀಪಾ ಬಸ್ತಿಯವರನ್ನು ಕೂಡ ಬಾನು ಮುಷ್ತಾಕ್ ಜೊತೆಗೆ ದಸರಾ ಉದ್ಘಾಟನೆಗೆ ಆಹ್ವಾನಿಸಬೇಕಿತ್ತು. ಕೇವಲ ಓಟ್ ಬ್ಯಾಂಕ್ ಪಾಲಿಟಿಕ್ಸ್ ಗಾಗಿ ಬಾನು ಮುಷ್ತಾಕ್ ರನ್ನು ಮಾತ್ರ ಆಹ್ವಾನಿಸಿದ್ದಾರೆ. ಬಾನು ಮುಷ್ತಾಕ್ ಜೊತೆಗೆ ದೀಪಾ ಬಸ್ತಿಯವರನ್ನು ಸಹ ಆಹ್ವಾನಿಸಬೇಕಿತ್ತು. ಇಬ್ಬರೂ ಒಟ್ಟಿಗೆ ಸೇರಿ ಉದ್ಘಾಟನೆ ಮಾಡಿದ್ದರೆ ಹೆಚ್ಚು ಅರ್ಥಪೂರ್ಣವಾಗುತ್ತಿತ್ತು. ಬಾನು ಮುಷ್ತಾಕ್ ಒಬ್ಬರೇ ದಸರಾ ಉದ್ಘಾಟನೆಗೆ ನಮ್ಮ ಪ್ರಬಲ ವಿರೋಧ ಇದ್ದೇ ಇದೆ.

-**ಮಹೇಶ್ ಕಾಮತ್**, ವಿಶ್ವ ಹಿಂದೂ ಪರಿಷದ್, ಜಿಲ್ಲಾಧ್ಯಕ್ಷ

ಸಿದ್ದರಾಮಯ್ಯ ತಂತ್ರ ಕಾಂಗ್ರೆಸ್ ಮೂರ್ಖರಿಗೆ ಅರ್ಥವಾಗುತ್ತಿಲ್ಲ. ಮುಸ್ಲಿಮರನ್ನು ತಮ್ಮ ಬೆನ್ನ ಹಿಂದೆ ಇಟ್ಟುಕೊಳ್ಳಲು ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟನೆ ಗೆ ಕರೆದಿದ್ದಾರೆ. ನಾಳೆ ಸಿಎಂ ಕುರ್ಚಿಗೆ ಕಂಟಕ ಬಂದಾಗ ಮುಸ್ಲಿಂ ಶಕ್ತಿ ತಮ್ಮ ಹಿಂದೆ ನಿಲ್ಲಿಸಿಕೊಳ್ಳಲು ಹೆಣೆದಿರುವ ತಂತ್ರ ಇದು. ಕನ್ನಡದ ಬಗ್ಗೆ ಅವಮಾನಕರವಾಗಿ ಮಾತನಾಡಿದವರು ದಸರಾ ಉದ್ಘಾಟಿಸಬೇಕಾ? ಇದನ್ನು ಜನರೇ ಹೇಳಲಿ.

- **ಪ್ರತಾಪ್ ಸಿಂಹ**, ಮಾಜಿ ಸಂಸದ

@vishwavaninews

ಆರಾಮ

ವಿಶ್ವವಾಣಿ
ಬೆಂಗಳೂರು
02-09-2025
ಮಂಗಳವಾರ

ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತವಿಹಾರ

ಹೆಚ್ಚಿನ ಕೆಲಸದಿಂದ ಸಂತೃಪ್ತಿ ಸಾಧ್ಯ

ಆದಾಯಕ್ಕಾಗಿ ಕೆಲಸ ಮಾಡುವ ಎಲ್ಲರ ಕಾರ್ಯ ವೈಖರಿ, ರೀತಿ - ನೀತಿಗಳು ಒಂದೇ ರೀತಿಯಾಗಿ ರುವುದಿಲ್ಲ. ಸಮಾನ ವೇತನ ಪಡೆವ ಕೆಲಸಗಾರರ ಕೆಲಸಗಳು ಸಮಾನವಾಗಿರುವುದಿಲ್ಲ. ಕೆಲವರು ತಾವು ಪಡೆವ ಸಂಬಳಕ್ಕಿಂತ ಕಡಿಮೆ ಕೆಲಸ ಮಾಡು ತ್ತಾರೆ. ಇನ್ನು ಕೆಲವರು ಪಡೆವ ಸಂಬಳಕ್ಕೆ ಮೋಸ ವಾಗದಂತೆ ತಮಗೆ ವಹಿಸಿದ ಕೆಲಸ ಮಾತ್ರ ಮಾಡಿ ಮುಗಿಸುತ್ತಾರೆ. ಕೆಲವೇ ಕೆಲವರು ತಮ್ಮ ಪಾಲಿನದ ಕ್ಕಿಂತ ಹೆಚ್ಚಿನ ಕೆಲಸವನ್ನು ಖುಷಿಯಿಂದಲೇ ಮಾಡುತ್ತಾರೆ. ಹೀಗೆ ಹೆಚ್ಚಿನ ಕೆಲಸ ಮಾಡುವುದ ರಿಂದ ಅವರ ಮಾನಸಿಕ ಮತ್ತು ದೈಹಿಕ ಸಾಮರ್ಥ್ಯ ಹೆಚ್ಚುತ್ತಾ ಹೋಗುತ್ತದೆ. ಹೆಚ್ಚಿನ ಅನುಭವ ಹೆಚ್ಚಿನ ಕಲಿಕೆಗೆ ದಾರಿ ಮಾಡಿಕೊಡುತ್ತದೆ. ಕಲಿಕೆಯೊಂದಿಗೆ ಆತ್ಮ ವಿಶ್ವಾಸ ಬೆಳೆಯುತ್ತಾ ಸಾಗುತ್ತದೆ, ಮಾಡುತ್ತಿ ರುವ ಕೆಲಸದ ಬಗ್ಗೆ ಆಪ್ತತೆ ಬೆಳೆದು, ಪ್ರೀತಿ ಮೂಡುತ್ತದೆ. ಪ್ರೀತಿಯಿಂದ ಮಾಡುವ ಕೆಲಸ ಆಯಾಸ ತರುವುದಿಲ್ಲ. ಹೆಚ್ಚಿನ ಅವಧಿಯ ಕೆಲಸ ಮಾಡಿದ ನಂತರವೂ, ಸುಸ್ತು ಎನಿಸದೆ, ಮನಸ್ಸು ಆಹ್ಲಾದಕರ ಭಾವ ಹೊಂದುವಂತಾದರೆ, ಕೌಟುಂಬಿಕ ಹಾಗೂ ವೈಯಕ್ತಿಕ ಜೀವನದಲ್ಲಿಯೂ ಮನಸ್ಸು ನಿರಾಳ ವಾಗುತ್ತದೆ. ಈ ಮನಸ್ಥಿತಿ ಹಾಗೆಯೇ ಮುಂದುವರೆದು, ಕೆಲಸದ ಸ್ಥಳ ದಲ್ಲಿಯೂ ಸೌಹಾರ್ದತೆಯಿಂದಿರಲು ದಾರಿ ಮಾಡಿಕೊಡುತ್ತದೆ. ಮಾಡುವ ಕೆಲಸದ ಬಗ್ಗೆ ನಿಷ್ಠೆ ಇರುವವರು ಬಹುಬೇಗ ಎಲ್ಲರ ವಿಶ್ವಾಸಕ್ಕೆ ಪಾತ್ರರಾಗುತ್ತಾರೆ. ಅವರ ಕಾರ್ಯ ತತ್ಪರತೆಯೇ ಅವರ ಮೌಲ್ಯವರ್ಧನೆಗೆ ಕಾರಣವಾಗುತ್ತದೆ. ಉಳಿದವರು, ನಂಬಿಕೆಯಿಂದ ಇಂತಹವರನ್ನು ತಮ್ಮ ನಾಯಕನನ್ನಾಗಿ ನೋಡಲು ಪ್ರಾರಂಭಿಸು ತ್ತಾರೆ. ಬೇರೆಯವರು ಗುರುತಿಸುವ ನಾಯಕತ್ವದ ಗುಣವನ್ನು ತಮಗೆ ತಾವೇ ಕಂಡುಕೊಳ್ಳಲು ವೇದಿಕೆ ಸಿದ್ಧವಾಗುತ್ತದೆ. ಇಂತಹವರು ಉದ್ಯೋಗ, ವ್ಯವಹಾರ, ಸೇವೆ ಅಥವಾ ಯಾವುದೇ ಕ್ಷೇತ್ರದಲ್ಲಿ ಇದ್ದರೂ, ಪದೋನ್ನತಿಯನ್ನು ಪಡೆಯುವುದು ಸುಲಭ ಸಾಧ್ಯವಾಗುತ್ತದೆ. ಮೇಲ್ವಿಚಾರಕರಿಲ್ಲದಿದ್ದರೂ, ಪರಿಶ್ರಮದಿಂದ ಕೆಲಸ ಮಾಡುವವರು, ಶೈಕ್ಷಣಿಕ ಅರ್ಹತೆ, ವಯೋಮಾನ, ಅನುಭವ ಎಲ್ಲವನ್ನು ಮೀರಿ ಬೇಡಿಕೆಗೆ ಪಾತ್ರರಾಗುತ್ತಾರೆ. ಜವಾಬ್ದಾರಿ ಹೆಚ್ಚುತ್ತಾ ಹೋದಂತೆ ಸಮಯ ಪಾಲನೆಯ ಕಡೆಗೂ ಹೆಚ್ಚಿನ ಗಮನ ಹೋಗುತ್ತದೆ. ತಮಗೆ ದೊರೆತ ಸಮಯದಲ್ಲಿ ಸೂಚನೆಗಳನ್ನು ಸಮರ್ಪಕವಾಗಿ ನಿಭಾಯಿಸುತ್ತಾ, ಬೇರೆ ಕೆಲಸಗಾರರೊಂದಿಗೆ, ಸಹೋದ್ಯೋಗಿಗಳೊಂದಿಗೆ ಉತ್ತಮ ಬಾಂಧವ್ಯಗಳನ್ನು ಏರ್ಪಡಿಸಿಕೊಳ್ಳುವ ಇವರ ವ್ಯಕ್ತಿತ್ವ ಎಲ್ಲಾ ಆಯಾಮಗಳಿಂದಲೂ ಸುವಿಕಾಸಗೊಳ್ಳುತ್ತದೆ. ಮೌಲ್ಯ ಬೆಂಬಲಿತವಾದದ್ದನ್ನೇ, ಕೆಲಸ ಮಾಡುವ ಸ್ಥಳದಲ್ಲಾಗಲಿ, ಬಂಧು - ಬಾಂಧವರ ಪರಿಸರದಲ್ಲಾಗಲಿ ನೀಡಲು ಯೋಚಿಸಿ, ಕಾರ್ಯಯೋನ್ಮುಖರಾದಾಗ, ಪ್ರತಿಫಲವಾಗಿ ಪಡೆಯುವ ಸ್ಪಂದನೆ ಮಧುರವಾಗಿರುತ್ತದೆ. ಇದು ಸಂತೃಪ್ತಿಗೆ ಕಾರಣವಾಗುತ್ತದೆ.

● ಮಾಯಾ ಬಾಲಚಂದ್ರ

ಹನಿಮಳೆ

ಮೆಲುದನಿ

ಸಣ್ಣಗೆ ಸುರಿವ ಶ್ರಾವಣದ ಮಳೆ
ಕಿವಿಯೊಳಗೆ ನುಸುಳುವ ಕುಳಿರ್ಗಾಳಿ
ನೆನಪಿಸುತಿದೆ ನಿನ್ನ ಮೆಲುದನಿಯ
ಕಾಯುತಿದೆ ಮನ ನಿನಗಾಗಿ ಇನಿಯ!

● ಸಿಂಚನಾ

ಮೌನದಿಂದ ಬೆಳೆಯುವ ವಿಷ!

ಮುಕ್ತವಾಗಿ ಹಂಚಿಕೊಳ್ಳಲಾಗದೇ ಇರುವಂತಹ ಮಾನಸಿಕ ಸಮಸ್ಯೆಗಳು, ಮನದೊಳಗೇ ಅಭಿವೃದ್ಧಿಗೊಂಡು ಗಂಭೀರ ಸಮಸ್ಯೆಗಳಾಗಬಹುದು. ಇದಕ್ಕೆ ಪರಿಹಾರವೆಂದರೆ, ಮುಕ್ತವಾಗಿ ಮಾತನಾಡುವ ವಾತಾವರಣ.

● ಲಕ್ಷ್ಮೀಕಾಂತ್ ಎಲ್ ವಿ, ತುಮಕೂರು

ಸಮಾಜದ ಮುಖಕ್ಕೆ ಒಂದು ಮುಸುಕು ಇದೆ. ಅದು ನಗುವಿನ ಮುಸುಕು. ಆದರೆ ಆ ನಗುವಿನ ಹಿಂದೆ ಅದೆಷ್ಟೋ ನೋವುಗಳು, ಕಷ್ಟಗಳು, ಮತ್ತು ಕದಡಿದ ಮನಸ್ಸುಗಳು ಅಡಗಿರುತ್ತವೆ. 'ಮಾನಸಿಕ ಸಮಸ್ಯೆ' ಎಂಬುದು ಒಂದು ಅದೃಶ್ಯ ಗೋಡೆ. ಅದು ಕಣ್ಣಿಗೆ ಕಾಣಿಸುವುದಿಲ್ಲ, ಆದರೆ ಅದರ ಪ್ರಭಾವ ಬಹಳ ಆಳವಾಗಿರುತ್ತದೆ. ಶತಮಾನಗಳಿಂದಲೂ ಮಾನಸಿಕ ಕಾಯಿಲೆಗಳನ್ನು ದೆವ್ವ, ಭೂತ, ಅಥವಾ ವೈಯಕ್ತಿಕ ದೌರ್ಬಲ್ಯ ಎಂದು ಪರಿಗಣಿಸಲಾಗುತ್ತಿತ್ತು. ಆಧುನಿಕ ಕಾಲದಲ್ಲಿಯೂ, ವೈಜ್ಞಾನಿಕ ಪ್ರಗತಿ ಎಷ್ಟೇ ಆಗಿದ್ದರೂ, ಈ ಅಂಧಕಾರ ಸಂಪೂರ್ಣವಾಗಿ ಹೋಗಿಲ್ಲ.

ಮಾನಸಿಕ ಸಮಸ್ಯೆ ಹಲವು ಮೂಲಗಳಿಂದ ಉಂಟಾಗುತ್ತದೆ. ಮೊದಲನೆಯದಾಗಿ, ಅಜ್ಞಾನ. ಅನೇಕ ಜನರಿಗೆ ಮಾನಸಿಕ ಆರೋಗ್ಯ ಸಮಸ್ಯೆಗಳು ರೋಗಗಳು ಎಂದು ತಿಳಿದಿಲ್ಲ. ಬದಲಾಗಿ, ಅವನ್ನು ವ್ಯಕ್ತಿಯ ದುರ್ಬಲ ವ್ಯಕ್ತಿತ್ವ ಅಥವಾ ನಂಬಿಕೆಯ ಕೊರತೆಯಿಂದ ಉಂಟಾಗುತ್ತದೆ ಎಂದು ಭಾವಿಸುತ್ತಾರೆ. ಇದರ ಪರಿಣಾಮವಾಗಿ, ಸಮಸ್ಯೆಯಲ್ಲಿರುವ ವ್ಯಕ್ತಿ ಸಹಾಯ ಕೇಳಲು ಹಿಂಜರಿಯುತ್ತಾನೆ.

ಎರಡನೆಯದಾಗಿ, ಭಯ ಮತ್ತು ಅವಮಾನ. ಮನಸ್ಸಿನ ಅಸ್ವಸ್ಥತೆಯನ್ನು ಬಹಿರಂಗಪಡಿಸುವುದರಿಂದ ಸಮಾಜದಲ್ಲಿ ತಮಗೆ ಗೌರವ ಸಿಗುವುದಿಲ್ಲ ಅಥವಾ ಕೆಲಸ ಕಳೆದುಕೊಳ್ಳಬಹುದು ಎಂಬ ಭಯ ಅನೇಕರಲ್ಲಿ ಇರುತ್ತದೆ. ಈ ಭಯವು ಅವರನ್ನು ಮೌನವಾಗಿ ನರಳಲು ಪ್ರೇರೇಪಿಸುತ್ತದೆ. ಇದರ ಜೊತೆಗೆ, ಮಾಧ್ಯಮಗಳು ಮತ್ತು ಚಲನಚಿತ್ರಗಳಲ್ಲಿ ಮಾನಸಿಕ ರೋಗಿಗಳನ್ನು ಅಸಹಜ, ಅಪಾಯಕಾರಿ ಅಥವಾ ಹಾಸ್ಯಾಸ್ಪದ ವ್ಯಕ್ತಿಗಳಂತೆ ತೋರಿಸುವುದರಿಂದ ಈ ತಪ್ಪು ಕಲ್ಪನೆಗಳು ಮತ್ತಷ್ಟು ಗಟ್ಟಿಯಾಗುತ್ತವೆ.

ಮೂರನೆಯದಾಗಿ, ಸಾಮಾಜಿಕ ರಚನೆಗಳು. ಕೆಲಸದ ಸ್ಥಳದಲ್ಲಿ, ಶಾಲೆಗಳಲ್ಲಿ ಮತ್ತು ಕುಟುಂಬಗಳಲ್ಲಿ ಮಾನಸಿಕ ಆರೋಗ್ಯದ ಕುರಿತು ಮುಕ್ತವಾಗಿ ಚರ್ಚೆ ನಡೆಸಲು ಅವಕಾಶ ಇರುವುದಿಲ್ಲ. ಇದರಿಂದ ಜನರು ತಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಹಿಂಜರಿಯುತ್ತಾರೆ. ಕುಟುಂಬದ ಸದಸ್ಯರೊಬ್ಬರಿಗೆ ಮಾನಸಿಕ ಸಮಸ್ಯೆ ಇದ್ದರೆ, ಆ ಇಡೀ ಕುಟುಂಬವನ್ನು ವಿಚಿತ್ರವಾಗಿ ನೋಡುವ ಪ್ರವೃತ್ತಿ ನಮ್ಮಲ್ಲಿ ಇಂದಿಗೂ ಇದೆ.

ವರ್ತಮಾನದಲ್ಲಿ ಮಾನಸಿಕ ಸಮಸ್ಯೆ

- **ಕೆಲಸದ ಸ್ಥಳದಲ್ಲಿ:** ಉದ್ಯೋಗಿಗಳು ತಮ್ಮ ಮಾನಸಿಕ ಆರೋಗ್ಯ ಸಮಸ್ಯೆಗಳ ಕುರಿತು ಮಾತನಾಡಲು ಹೆದರುತ್ತಾರೆ. ಬಹುಶಃ ಇದು ಅವರಿಗೆ ಕೆಲಸದಲ್ಲಿ ಬಡ್ತಿ ಸಿಗದೆ ಇರಬಹುದು ಅಥವಾ ಕೆಲಸ ಕಳೆದುಕೊಳ್ಳಬಹುದು ಎನ್ನುವ ಭಯ ಇರಬಹುದು. ಇದರ ಪರಿಣಾಮವಾಗಿ, ಉದ್ಯೋಗಿಗಳು ಒತ್ತಡ, ಆತಂಕ, ಮತ್ತು ಖಿನ್ನತೆಯಂತಹ ಸಮಸ್ಯೆಗಳೊಂದಿಗೆ ಹೋರಾಡುತ್ತಲೇ ಕೆಲಸ ಮಾಡಬೇಕಾಗುತ್ತದೆ. ಇದು ಅವರ ಕಾರ್ಯಕ್ಷಮತೆಯ ಮೇಲೆ ಮಾತ್ರವಲ್ಲ, ಅವರ ವೈಯಕ್ತಿಕ ಜೀವನದ ಮೇಲೂ ನಕಾರಾತ್ಮಕ ಪರಿಣಾಮ ಬೀರುತ್ತದೆ.
- **ಸಾಮಾಜಿಕ ಮಾಧ್ಯಮಗಳಲ್ಲಿ:** ಸಾಮಾಜಿಕ ಮಾಧ್ಯಮಗಳು ಒಂದು ರೀತಿಯ ಮುಖವಾಡದ ಜಗತ್ತು. ಇಲ್ಲಿ ಎಲ್ಲರೂ ಸಂತೋಷವಾಗಿ, ಪರಿಪೂರ್ಣ ಜೀವನ ನಡೆಸುತ್ತಿರುವಂತೆ ತೋರಿಸಿಕೊಳ್ಳುತ್ತಾರೆ. ಇಲ್ಲಿ, ತಮ್ಮ ನೋವನ್ನು ಹಂಚಿಕೊಳ್ಳಲು ಹಿಂಜರಿಯುತ್ತಾರೆ.
- **ಶಿಕ್ಷಣ ಸಂಸ್ಥೆಗಳಲ್ಲಿ:** ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಒತ್ತಡ, ಪರೀಕ್ಷಾ ಆತಂಕ ಅಥವಾ ವೈಯಕ್ತಿಕ ಸಮಸ್ಯೆಗಳ ಕುರಿತು ಮಾತನಾಡಲು ಬಯಸಿದರೂ, ಸೂಕ್ತ ವೇದಿಕೆ ಮತ್ತು ಮಾರ್ಗದರ್ಶನ ಸಿಗುವುದಿಲ್ಲ.

ಮಾನಸಿಕ ಸಮಸ್ಯೆಯನ್ನು ಹೋಗಲಾಡಿಸುವುದು ಇಡೀ ಸಮಾಜದ ಸಾಮೂಹಿಕ ಪ್ರಯತ್ನವನ್ನು ಬಯಸುತ್ತದೆ.

1. **ಅರಿವಿನ ಮೂಡಿಸುವಿಕೆ:** ಮಾಧ್ಯಮ, ಶಾಲೆ, ಕಾಲೇಜು ಮತ್ತು ಕೆಲಸದ ಸ್ಥಳಗಳಲ್ಲಿ ಮಾನಸಿಕ ಆರೋಗ್ಯದ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹೆಚ್ಚಿಸಬೇಕು. ಮಾನಸಿಕ ಕಾಯಿಲೆಗಳು ಹೇಗೆ ದೈಹಿಕ ಕಾಯಿಲೆಗಳಂತೆ ಸಹಜ ಎಂದು ವಿವರಿಸಬೇಕು.
2. **ಮುಕ್ತ ಸಂವಾದಕ್ಕೆ ಪ್ರೋತ್ಸಾಹ:** ಕುಟುಂಬ, ಸ್ನೇಹಿತರು ಮತ್ತು ಸಹೋದ್ಯೋಗಿಗಳೊಂದಿಗೆ ಮಾನಸಿಕ ಆರೋಗ್ಯದ ಕುರಿತು ಮುಕ್ತವಾಗಿ ಮಾತನಾಡಲು ಪ್ರೋತ್ಸಾಹಿಸಬೇಕು. ನಿನ್ನ ಮನಸ್ಸಿಗೆ ಆರಾಮವಾಗಿದೆಯಾ? ಅಥವಾ ನಿನಗೆ ಯಾವುದೇ ಸಹಾಯ ಬೇಕಿದ್ದರೆ ಕೇಳು ಎಂಬಂತಹ ಸರಳ ಮಾತುಗಳು ಕೂಡ ಒಬ್ಬ ವ್ಯಕ್ತಿಯ ಮೇಲೆ ದೊಡ್ಡ ಪರಿಣಾಮ ಬೀರಬಹುದು.
3. **ವೃತ್ತಿಪರ ಸಹಾಯಕ್ಕೆ ಪ್ರೋತ್ಸಾಹ:** ಥೆರಪಿ, ಸಮಾಲೋಚನೆ ಮತ್ತು ಔಷಧಿಗಳು ಮಾನಸಿಕ ಸಮಸ್ಯೆಗಳನ್ನು ಗುಣಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಮನೋವೈದ್ಯರು ಮತ್ತು ಸೈಕಾಲಜಿಸ್ಟ್‌ಗಳನ್ನು ಭೇಟಿ ಮಾಡುವುದು ದೌರ್ಬಲ್ಯದ ಸಂಕೇತವಲ್ಲ, ಬದಲಿಗೆ ತಮ್ಮ ಬಗ್ಗೆ ಕಾಳಜಿ ವಹಿಸುವ ಪ್ರಜ್ಞಾವಂತಿಕೆಯ ಸಂಕೇತ ಎಂದು ಸಮಾಜಕ್ಕೆ ತಿಳಿಸಬೇಕು.
4. **ಸರ್ಕಾರದ ಪಾತ್ರ:** ಸರ್ಕಾರ ಮಾನಸಿಕ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಹಣವನ್ನು ಹಂಚಬೇಕು, ತಜ್ಞರ ಸಂಖ್ಯೆಯನ್ನು ಹೆಚ್ಚಿಸಬೇಕು ಮತ್ತು ಮಾನಸಿಕ ಆರೋಗ್ಯ ಸೇವೆಗಳನ್ನು ಎಲ್ಲರಿಗೂ ಸುಲಭವಾಗಿ ಸಿಗುವಂತೆ ಮಾಡಬೇಕು.

ಮಾನಸಿಕ ಸಮಸ್ಯೆಯನ್ನು ಹೋಗಲಾಡಿಸುವುದು ಕೇವಲ ಮಾನವೀಯತೆಯ ಪ್ರಶ್ನೆ ಮಾತ್ರವಲ್ಲ, ಅದೊಂದು ಉತ್ತಮ, ಆರೋಗ್ಯಪೂರ್ಣ ಮತ್ತು ಸಹಾನುಭೂತಿಯುಳ್ಳ ಸಮಾಜವನ್ನು ನಿರ್ಮಿಸುವ ಪ್ರಶ್ನೆಯೂ ಹೌದು. ಈ ಸಮಸ್ಯೆಯ ವಿರುದ್ಧ ಜಾಗೃತಿ ಪ್ರಾರಂಭವಾಗಬೇಕಿದೆ. ಮತ್ತು ಈ ಜಾಗೃತಿಯ ಮೊದಲ ಹೆಜ್ಜೆ - ಮೌನ ಮುರಿಯುವುದು.

ಐಮಂಗಲದಲ್ಲಿ ನಿತ್ಯೋತ್ಸವ!

● ಪುರುಷೋತ್ತಮ್ ವೆಂಕಿ, ಚಿತ್ರದುರ್ಗ

ಹಿರಿಯೂರು ತಾಲ್ಲೂಕು ಐಮಂಗಲ ಗ್ರಾಮದ ಪೊಲೀಸ್ ತರಬೇತಿ ಶಾಲೆಯಲ್ಲಿ ನೀಡುತ್ತಿರುವ ತರಬೇತಿಯಲ್ಲಿ, ನೀಡುವ ಸೂಚನೆಗಳು ಕನ್ನಡದಲ್ಲಿರುವುದು ವಿಶೇಷ ಎನಿಸಿದೆ! ನಿತ್ಯ ನಡೆಯುವ ಪರೇಡಿನಲ್ಲಿ ಶಿಸ್ತು, ಸಂಯಮದ ಜತೆಯಲ್ಲೇ, ಕನ್ನಡದಲ್ಲಿ ಕಮಾಂಡ್! ಇಲ್ಲಿನ ಪರೇಡ್‌ಗೆ ಕನ್ನಡದ ಹಾಡುಗಳನ್ನು ಬಳಸಿ, ಸ್ವರ, ರಾಗ, ಲಯ, ತಾಳಗಳೂ ಸಮ್ಮಿಳಿತವಾಗಿರುತ್ತವೆ. ರಾಜ್ಯದ ವಿವಿಧೆಡೆಯಿಂದ ಬರುವ ಪ್ರಶಿಕ್ಷಣಾರ್ಥಿಗಳು ಇಲ್ಲಿ ಪೊಲೀಸ್ ತರಬೇತಿ ಪಡೆಯುತ್ತಿದ್ದಾರೆ. ಇಲ್ಲಿನ ಪ್ರಾಂಶುಪಾಲರು, ಕನ್ನಡ ಭಾಷೆ, ಸಂಸ್ಕೃತಿ, ಇತಿಹಾಸ ಬಿಂಬಿಸುವ ಹಾಡುಗಳನ್ನು, ಪರೇಡ್‌ಗಾಗಿ ಸಂಯೋಜನೆ ಮಾಡಿದ್ದಾರೆ.

ದುರ್ಗದ ಇತಿಹಾಸ ಸಾರುವ 'ನಾಗರ ಹಾವು' ಚಲನಚಿತ್ರದ 'ಕನ್ನಡ ನಾಡಿನ ವೀರರಮಣಿಯ' ಗೀತೆಗೆ ಪರೇಡ್ ಸಂಯೋಜಿಸಿದ್ದಾರೆ. ತಾಳ, ಲಯದೊಂದಿಗೆ ಸಂಯೋಜನೆಗೊಂಡಿರುವ ಹೆಜ್ಜೆಗಳು ಆನಂದ ಸೃಷ್ಟಿಸುತ್ತವೆ. ಇದರೊಟ್ಟಿಗೆ 'ತಿರುಗು ಬಾಣ' ಚಿತ್ರದ 'ಇದೇ ನಾಡು ಇದೇ ಭಾಷೆ ಎಂದೆಂದೂ ನನ್ನದಾಗಿರಲಿ' ಗೀತೆಯನ್ನೂ ಪೊಲೀಸ್ ಕವಾಯತಿಗೆ ಅಳವಡಿಸಲಾಗಿದೆ. ಸಿಬ್ಬಂದಿಯ ವೇಗದ ಹೆಜ್ಜೆಯ ಲಯ, ಗತಿ ಗಮನ ಸೆಳೆಯುತ್ತದೆ. 'ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ' ಗೀತೆಗೂ ಪರೇಡ್ ಸಂಯೋಜಿಸಲಾಗಿದೆ. ಸಿಬ್ಬಂದಿಯ ನಿಧಾನಗತಿಯ ಹೆಜ್ಜೆಗಳು 'ನಿತ್ಯೋತ್ಸವ' ಗೀತೆಯ ಭಾವವನ್ನು ತೆರೆದಿಡುತ್ತವೆ. 'ಮೋಜುಗಾರ ಸೊಗಸುಗಾರ' ಚಿತ್ರದ 'ಕನ್ನಡವೇ ನಮ್ಮಮ್ಮ ಅವಳಿಗೆ ಕೈಮುಗಿಯಮ್ಮ' ಗೀತೆಗೆ ಪರೇಡ್ ಸಿದ್ಧಗೊಳ್ಳುತ್ತಿದೆ.

ತದೇಕಚಿತ್ತರಾಗಿ ಹೆಜ್ಜೆ ಹಾಕುವ ಸಿಬ್ಬಂದಿ, ಒಮ್ಮೆ ಸಿಪಾಯಿಗಳಂತೆ ಕಂಡರೆ ಮತ್ತೊಮ್ಮೆ ಕಲಾವಿದರಂತೆ ಭಾಸವಾಗುತ್ತಾರೆ. ಸಿಬ್ಬಂದಿಯನ್ನು ವಿವಿಧ ತುಕಡಿಗಳಾಗಿ ವಿಂಗಡಿಸಲಾಗಿದ್ದು, ಎಲ್ಲರೂ ಕನ್ನಡ ಸೂಚನೆಗಳನ್ನು ಪಾಲಿಸುತ್ತಾರೆ. ಇಬ್ಬರಿಂದ ಮೂವರು ಸಿಬ್ಬಂದಿ ಹಾಡುತ್ತಾ ಹೆಜ್ಜೆ ಹಾಕುತ್ತಾರೆ. ಅದಕ್ಕನುಗುಣವಾಗಿ ಉಳಿದವರು ಮುನ್ನಡೆಯುತ್ತಾರೆ. ಪ್ರಸ್ತುತ ಪೊಲೀಸ್ ತರಬೇತಿ ಶಾಲೆ ನಡೆಯುತ್ತಿರುವ ಜಾಗ ಐಮಂಗಲ ಗ್ರಾಮದ ಸ್ಥಳ ಚಿತ್ರದುರ್ಗದ ಅರಸರ ಕಾಲದಲ್ಲಿ ಧಾನ್ಯ ಸಂಗ್ರಹಿಸುವ ತಾಣವಾಗಿತ್ತು. ಸುತ್ತಲೂ ಇರುವ ಕೋಟೆ ಸುಸ್ಥಿತಿಯಲ್ಲಿದೆ. ಇಲ್ಲಿಯ 58 ಎಕರೆ ಜಾಗದಲ್ಲಿ ಪೊಲೀಸ್ ತರಬೇತಿ ಶಾಲೆ ಇರುವುದರಿಂದ ಸ್ಮಾರಕವೂ ಸಂರಕ್ಷಣೆಯಾಗಿದೆ. ಅಲ್ಲಿ ವಿವಿಧ ಪ್ರಬೇಧದ ಗಿಡ-ಮರಗಳಿದ್ದು ಪ್ರಕೃತಿಯ ಮಡಿಲಲ್ಲಿ ಪೊಲೀಸ್ ತರಬೇತಿ ನಡೆಯುತ್ತದೆ. ವಿಶೇಷವಾಗಿ, ಕನ್ನಡದ ಅಭಿಮಾನ ಹುಟ್ಟಿಸುವ ಗೀತೆಗಳನ್ನು ಪರೇಡ್‌ಗೆ ಅಳವಡಿಸಿರುವುದು ಗಮನ ಸೆಳೆಯುತ್ತದೆ.

ಕಬ್ಬಿಣಕ್ಕಾಗಿ ಹರಿವೆ ಸೊಪ್ಪು!

● ಅಜಯ್ ಅಂಚೆಪಾಳ್ಯ

ಗ್ರಾಮೀಣ ಬದುಕಿನ ಹಿನ್ನೆಲೆಯ ದಿನಚರಿಯಲ್ಲಿ 'ಸೊಪ್ಪಿನ ಸಾರು' ಬಹು ಮುಖ್ಯ ರಿಸೆಪಿ. ನಮ್ಮ ಗ್ರಾಮೀಣರು ಸೊಪ್ಪುಗಳನ್ನು ಆಹಾರದಲ್ಲಿ ಧಾರಾಳವಾಗಿ ಸೇವಿಸುತ್ತಿದ್ದರು. ಈಚಿನ ವರ್ಷಗಳಲ್ಲಿ, ಸೊಪ್ಪಿನ ಬಳಕೆ ತುಸು ಕಡಿಮೆ ಎಂದೇ ಹೇಳಬಹುದು; ಅದರಲ್ಲೂ ಮುಖ್ಯವಾಗಿ, ಮಧ್ಯಾಹ್ನದ ಆಹಾರಕ್ಕಾಗಿ, ವಿವಿಧ ಸಂದರ್ಭಗಳ ಆಹಾರಕ್ಕಾಗಿ ಹೊಟೇಲ್ ಮತ್ತು ಆನ್‌ಲೈನ್ ವ್ಯವಸ್ಥೆ ಯನ್ನು ನಂಬಿರುವ ನಗರಿಗರಿಗೆ, ಸೊಪ್ಪಿನ ಸಾಂಬರಿನ ಲಾಭ ದೊರಕುತ್ತಿಲ್ಲ ಎಂದೇ ಹೇಳಬಹುದು. ಸೊಪ್ಪುಗಳ ಪೈಕಿ, ನಮ್ಮ ರಾಜ್ಯದಲ್ಲಿ ಹೆಚ್ಚು ಪರಿಚಿತವಾಗಿರುವುದು ಹರಿವೆ ಸೊಪ್ಪು. ಕೆಂಪು ಮತ್ತು ಹಸಿರು ತಳಿಗಳಲ್ಲಿ ಬೆಳೆಯುವ ಸೊಪ್ಪು ಹಲವು ಖನಿಜಾಂಶಗಳ ಆಗರ.

- ಹರಿವೆ ಸೊಪ್ಪಿನಲ್ಲಿ ವಿಟಮಿನ್ ಎ, ಸಿ ಮತ್ತು ಕೆ ಇದೆ. ಜತೆಗೆ, ಕ್ಯಾಲ್ಷಿಯಂ, ಮ್ಯಾಗ್ನೀಶಿಯಂ ಮತ್ತು ಪೊಟಾಶಿಯಂ ಖನಿಜಾಂಶಗಳು ಲಭ್ಯ. ಇದರಲ್ಲಿರುವ ಅಧಿಕ ಪ್ರಮಾಣದ ಕ್ಯಾಲ್ಶಿಯಂ ಮತ್ತು ವಿಟಮಿನ್ ಕೆ, ದೇಹದ ಮೂಳೆಯ ಬೆಳವಣಿಗೆಗೆ ಸಹಕಾರಿ.
- ಹರಿವೆ ಸೊಪ್ಪಿನಲ್ಲಿರುವ ವಿಟಮಿನ್ ಸಿ, ಒಂದು ಆ್ಯಂಟಿ ಆಕ್ಸಿಡೆಂಟ್ ಆಗಿದ್ದು, ನಮ್ಮ ದೇಹದ ಪ್ರತಿರೋಧ ಶಕ್ತಿಯನ್ನು ಉತ್ತಮಪಡಿಸುತ್ತದೆ. ಜತೆಗೆ ಸೊಪ್ಪಿನಲ್ಲಿ ಹಲವು ವಿಧದ ಆ್ಯಂಟಿಆಕ್ಸಿಡೆಂಟ್ ಇವೆ.
- ಕಬ್ಬಿಣದ ಅಂಶ ಕೊರತೆ ಇರುವವರು, ಹರಿವೆ ಸೊಪ್ಪಿನ ಸಾಂಬಾರನ್ನು ಸಾಕಷ್ಟು ಸೇವಿಸಿದರೆ, ದೇಹದಲ್ಲಿನ ಕಬ್ಬಿಣದ ಅಂಶ ಉತ್ತಮಗೊಳ್ಳುತ್ತದೆ. ಇದರಿಂದಾಗಿ ರಕ್ತ ಕಣಗಳ ಉತ್ಪಾದನೆ ಸ್ಥಿರವಾಗಿ, ರಕ್ತಹೀನತೆ ದೂರವಾಗುತ್ತದೆ.
- ಸೊಪ್ಪಿನಲ್ಲಿರುವ ಇನ್ನೂ ವಿವಿಧ ಖನಿಜಾಂಶಗಳಿಂದಾಗಿ, ಕೆಟ್ಟ ಕೊಲೆಸ್ಟ್ರಾಲ್ ದೂರವಾಗುತ್ತದೆ ಎಂದು ತಜ್ಞರು ಗುರುತಿಸಿದ್ದಾರೆ. ಉತ್ತಮ ನೆಲದಲ್ಲಿ, ಗುಣಮಟ್ಟದ ನೀರನ್ನು ಉಪಯೋಗಿಸಿ ಬೆಳೆದ ಸೊಪ್ಪನ್ನು ಪ್ರತಿದಿನ ಸಾಂಬಾರು ಮತ್ತು ಪಲ್ಯ ಮಾಡಿ ಸೇವಿಸಿ, ಆರೋಗ್ಯ ಉತ್ತಮಪಡಿಸಿಕೊಳ್ಳಿ!

ನಮ್ಮಪ್ಪನ ಆರಾಮ ಕುರ್ಚಿ

● ಕರ್ನಲ್ ಮಹೇಶ್ ಹೊಸಮನಿ(ನಿವೃತ್ತ)

ಆರಾಮ ಕುರ್ಚಿ ಎಂದ ತಕ್ಷಣ ನೆನಪು ಬರುವುದು ನಮ್ಮಪ್ಪನ 'ಸಿಂಹಾಸನ'ವೇ ಆಗಿದ್ದ ಜಮಖಾನ ಬಟ್ಟೆಯ ಪಟ್ಟಾಪಟ್ಟಿ ಆರಾಮಕುರ್ಚಿ. ಆ ಕುರ್ಚಿಗೆ ತೇಗದ ಮರದ ಫ್ರೇಮು. ಎರಡು ಫ್ರೇಮುಗಳ ಜೋಡಿಸಲು ಸ್ಕ್ರೂ ಹಾಗೂ ಗಡಿಯಾರದ ಕುಂಜಿ ಕೊಡುವ ಆಕಾರದ ಥ್ರೆಡ್ಡು. ಫ್ರೇಮಿನ ತುದಿಯಲ್ಲಿ ನಾಲ್ಕೈದು ಅಡಿ ಉದ್ದ ಹಾಗೂ ಒಂದೂವರೆ ಅಡಿ ಅಗಲ ಜಮಖಾನದ ತುದಿಗಳಲಿ ಮಡಿಚಿ ಹೊಲಿದ ಕೊಳವೆ ತೂಬುಗಳು. ಒಂದೊಂದು ತೂಬಿನಲಿ ತೂರಲು ಒಂದೊಂದು ರೂಲರ್. ಭಾನುವಾರ ಬಂತೆಂದರೆ ಅಪ್ಪನದು ಅದರಲೇ ದರಬಾರು. ಓದಿಸಲು ಕುಳಿತಾಗ ಒಮ್ಮೊಮ್ಮೆ ಸಿಟ್ಟಿಗೆದ್ದು ರೂಲರನೇ ತನ್ನಾಯುಧ ಮಾಡಿಕೊಂಡು ಬಡಿದಿದ್ದುಂಟು! ಅಂದರೆ, ಆರಾಮ ಕುರ್ಚಿಯಲ್ಲಿ ಕುಳಿತು ಓದುವಾಗ, ಯಾರೂ ತೊಂದರೆ ಕೊಡುವಂತಿಲ್ಲ. ಪ್ರೀತಿ ಮಾಡುವಾಗ ಅದರಲೇ ನಮ್ಮ ಮಲಗಿಸಿ ಆರಾಮ ಕುರ್ಚಿಯಲೇ ತೂಗಿದ್ದು ಸಹ.

ಕೆಲವೊಮ್ಮೆ ಗದರಿದಾಗ ಹೆದರಿ ಹಸಿಮಾಡಿದಾಗ ಜಮಖಾನ ಬಟ್ಟೆಯ ಬಿಚ್ಚಿ ಒಗೆದು ಒಣಗಿಹಾಕಲೂ ಬರುತ್ತಿತ್ತು.

ಕೆಲವೊಮ್ಮೆ ಆ ಬಟ್ಟೆಯ ಹೊಲಿಗೆ ಬಿಚ್ಚಿಕೊಂಡಾಗ ರಿಪೇರಿಯೂ ಆಗುತ್ತಿತ್ತು. ಕೆಲವೊಮ್ಮೆ ತಮಾಷೆಗಾಗಿ ರೂಲರನು ತೆಗೆದು ಯಾರನಾದರೂ ಕೂಡಲು ಹೇಳಿ ಅವರು ಬಿದ್ದು ಅಂಡು ನೋವಾದಾಗ ನಕ್ಕು ನಕ್ಕು ಸುಸ್ತಾಗಿದ್ದೂ ನೆನಪಿದೆ. ಅದರಲಿ ಅಪ್ಪ ಆರಾಮವಾಗಿ ಗೊರಕೆ ಹೊಡೆಯುತ್ತ ನಿದ್ದೆಗೆ ಜಾರಿದಾಗ ನಮಗಾಗಿ ಹೆಣಗಾಡಿ ದುಡಿದ ಜೀವಕೆ ಏನೋ ಒಂಥರ ಸಮಾಧಾನ. ಈಗ ಆರಾಮ ಕುರ್ಚಿ ಹಾಗೂ ಆರಾಮ ಪಡೆದು ಪೂರ್ಣವಿರಾಮ ಪಡೆದ ಅಪ್ಪನ ನೆನಪು ಮಾತ್ರ ನಮ್ಮ ಪಾಲಿಗೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ನಿದ್ರೆ ಮಾಡುವಿಕೆ (3)
5. ಒಂದೇ ಅಭಿಪ್ರಾಯ (4)
6. ಸಂಪ್ರದಾಯ ಅಥವಾ ಅಭ್ಯಾಸ (2)
7. ಕೆಳಕ್ಕೆ ಬೀಳುವಿಕೆ ತಲೆಕೆಳಗಾಗಿದೆ (3)
10. ನಯವಾಗಿಯೇ ಮಾತನಾಡಿಸಿದ ಸುತ (3)
13. ಶ್ರೀಕೃಷ್ಣ ಜನಿಸಿದ ಸ್ಥಳ (3)
14. ನಾಯಕ ಮಾಡಿದ ಕೆಲಸ (3)
15. ನರಿಯ ನಡುವೆ ಚರ್ಮವಾದ್ಯ (3)
17. ಪ್ರವಹಿಸುವಿಕೆ ಅಥವಾ ತೀಕ್ಷ್ಣತೆ (3)
20. ಮತ್ತೊಬ್ಬರ ಸಹವಾಸ (2)
21. ಗುಣಮಟ್ಟವನ್ನು ಅಳೆಯುವ ಸಾಧನ (4)
22. ತಿರುಗಿ ಬಂದಿರುವ ಕುದುರೆ (3)

ಮೇಲಿಂದ ಕೆಳಕ್ಕೆ

1. ಶಿವನಿಗೆ ಮತ್ತೊಂದು ಹೆಸರಿದು (3)
2. ನೂರು ವರ್ಷಗಳ ಅವಧಿ (4)
3. ನಯವಾದ ಅಕ್ಷಿ (3)
4. ಆಜ್ಞಾಪತ್ರ ಅಥವಾ ಅಪ್ಪಣೆ (3)
8. ನಿತ್ಯ ಬೇಕಾಗುವ ಕಾಯಿಪಲ್ಲೆ (4)
9. ಸಾವಿಲ್ಲದ ಎಂದರ್ಥ (3)
10. ಅವಸರ ಅಥವಾ ಗಡಿಬಿಡಿ (4)
11. ಗ್ರೀಸ್ ದೇಶದವನು (3)
12. ದುಃಖ ಅಥವಾ ನೋವು (3)
16. ಕಿವಿಯಿಂದ ಕಿವಿಗೆ ಬಂದ ನುಡಿ (4)
17. ಇರುಳಲ್ಲ, ಬೆಳಕಿರುವ ಸಮಯ (3)
18. ನೀರಿನಲ್ಲಿ ಉಂಟಾದ ಅಲೆ (3)
19. ನಿಜವಲ್ಲದ ವರ್ತಮಾನ (3)

ಸರಿಯುತ್ತರಗಳು

[illegible]

ತಾಯಿಯ ಪ್ರೀತಿ ಅತೀ ಶ್ರೇಷ್ಠವಾದದ್ದು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಒಂದು ಸಲ ರಾಜನ ಆಸ್ಥಾನಕ್ಕೆ ಇಬ್ಬರು ಮಹಿಳೆಯರು ಒಂದು ಮಗುವಿನ ಜೊತೆಯಲ್ಲಿ ನ್ಯಾಯಕ್ಕಾಗಿ ಬಂದಿದ್ದರು. ಅವರಿಬ್ಬರೂ, ಆ ಮಗು ತನ್ನದೆಂದು ಒಬ್ಬಳು, ತನ್ನದೆಂದು ಇನ್ನೊಬ್ಬಳು ಕಿತ್ತಾಡುತ್ತಿದ್ದರು. ಆ ಇಬ್ಬರು ಮಹಿಳೆಯರ ಗಂಡಂದಿರೂ ರಾಜನಿಗೋಸ್ಕರ ಯುದ್ಧದಲ್ಲಿ ಹೋರಾಡಿ ಮಡಿದಿದ್ದರು. ಇವರಿಗೆ ಇದರ ಬಗ್ಗೆ ಬೇರೆ ಯಾವ ಸಾಕ್ಷಿ ಆಧಾರಗಳೂ ಇರಲಿಲ್ಲ. ರಾಜ ತಮಗೇ ನ್ಯಾಯ ದೊರಕಿಸಿ ಕೊಡಬೇಕೆಂದು ಇಬ್ಬರೂ ಆಸ್ಥಾನಕ್ಕೆ ಬಂದಿದ್ದರು. ರಾಜನಿಗೀಗ ಧರ್ಮ ಸಂಕಟಕ್ಕೆ ಇಟ್ಟುಕೊಂಡಿತು.

ಸಾಕಷ್ಟು ತಲೆಕೆಡಿಸಿಕೊಂಡರೂ ಅವನಿಗೆ ಪರಿಹಾರ ದೊರೆಯಲಿಲ್ಲ. ರಾಜ ದಿಕ್ಕು ಕಾಣದೆ, ವಯಸ್ಸಾದ ಸಂತರೊಬ್ಬರ ಮೊರೆಹೊಕ್ಕ. ಸಂತರು ಮುಗುಳ್ನಗೆ ಬೀರುತ್ತಾ, ಇದು ಬಹಳ ಸುಲಭ, ಮಗುವನ್ನು ಇತ್ತ ಕೊಡಿ ಎಂದರು. ಮಗುವನ್ನು ರಾಜನ ಕೈಗೆ ಕೊಟ್ಟು ಸಂತರು, ಈ ಮಗುವನ್ನು ಸರಿಯಾಗಿ ಅರ್ಧಕ್ಕೆ ಸೀಳಿ, ಇಬ್ಬರಿಗೂ ಒಂದೊಂದು ಸಮಭಾಗವನ್ನು ಕೊಟ್ಟುಬಿಡಿ ಎಂದು ಹೇಳಿದರು .ಗಾಬರಿಯಾದ ರಾಜ, ಗುರುಗಳೇ ನೀವು ಇದೇನು ಹೇಳುತ್ತಿರುವಿರಿ? ಎಂದು ಕೇಳಲು, ಸಂತರು ಇದರಲ್ಲೇನು ಸಮಸ್ಯೆ? ಇಬ್ಬರೂ ಈ ಮಗುವನ್ನು ತಮ್ಮದೆನ್ನುತ್ತಿದ್ದಾರೆ. ಬೇರೆ ಯಾವ ಸಾಕ್ಷಿ ಆಧಾರಗಳೂ ಇಲ್ಲಾ, ನ್ಯಾಯ ದೊರಕಬೇಕಾದರೆ ಮಗುವನ್ನು ಎರಡು ಭಾಗ ಮಾಡಲೇಬೇಕು ಎಂದೆನ್ನುತ್ತಾ, ರಾಜನ ಸೊಂಟದಲ್ಲಿದ್ದ ಕತ್ತಿಯನ್ನು ಹೊರಗೆಳೆದರು. ಆಶ್ಚರ್ಯಚಕಿತನಾದ ರಾಜ ಚೇತರಿಸಿಕೊಳ್ಳುವ ಷ್ಟರಲ್ಲಿ, ಒಬ್ಬ ಹೆಂಗಸು ಮುಂದೆ ಬಂದು ಸಂತ ರನ್ನು ತಡೆಯುತ್ತಾ, ದಯವಿಟ್ಟು ಬೇಡ ಸ್ವಾಮಿ, ಆ ಮಗು ನನ್ನದಲ್ಲ ಅದು ಅವಳದ್ದೇ ಅವಳಿಗೇ ಕೊಟ್ಟುಬಿಡಿ ಎಂದು ಕಣ್ಣೀರಿಡುತ್ತಾ ಸಂತರನ್ನು ತಡೆದಳು. ಆಗ ಸಂತರು ತಮ್ಮನ್ನು ತಡೆದ ಮಹಿಳೆಗೆ ಮಗುವನ್ನು ಕೊಡುತ್ತಾ ತೆಗೆದುಕೋ ತಾಯಿ ಇದು ನಿನ್ನದೇ ಮಗು ಎಂದರು. ನಡೆದು ದ್ದೆಲ್ಲವನ್ನು ಆಶ್ಚರ್ಯದಿಂದ ನೋಡುತ್ತಿದ್ದ ರಾಜ ಗುರುಗಳೇ, ನನಗೊಂದು ಅರ್ಥವಾಗುತ್ತಿಲ್ಲ. ಆಕೆ ಆ ಮಗು ತನ್ನದಲ್ಲವೆಂದು ಸ್ಪಷ್ಟವಾಗಿ ಹೇಳಿದ ಮೇಲೂ ಆ ಮಗು ಅವಳದ್ದೇ ಎಂದು ನೀವು ಹೇಗೆ ತೀರ್ಮಾನಿಸಿದಿರಿ? ಎಂದು ಕೇಳಿದ.



ಆಗ ಸಂತರು, ನಿಜವಾದ ತಾಯಿಯು ತನ್ನ ಮಗುವಿಗೆ ನೋವಾಗುವುದನ್ನು ಎಂದೂ ಕೂಡ ಸಹಿಸಲಾರಳು. ಆದರೆ ತಾನು ತಾಯಿ ಎಂದು ಸುಳ್ಳು ಹೇಳಿಕೊಳ್ಳುವವಳು ಮಗು ತುಂಡಾಗುವುದನ್ನು ನೋಡಿ ಕೂಡಾ ಸುಮ್ಮನೆ ನಿಂತಿದ್ದಾಳೆ. ಮಗುವಿಗೆ ಏನಾದರೂ ಅವಳಿಗೆ ಏನೂ ಚಿಂತೆ ಇಲ್ಲ, ಅವಳು ತುಂಡಾದ ಮಗುವನ್ನು ಕೂಡಾ ಪಡೆಯಲು ತಯಾರಾಗೇ ನಿಂತಿದ್ದಾಳೆ. ಮಗುವಿಗೆ ಏನಾದರೇನು? ಅದು ಹೇಗೂ ಅವಳ ಮಗುವಲ್ಲ! ಆದರೆ ನಿಜವಾದ ತಾಯಿ, ಅದು ಕ್ಷೇಮವಾಗಿದ್ದರೆ ಸಾಕೆಂದು ಅದನ್ನು ಬಿಟ್ಟು ಕೊಡಲೂ ತಯಾರಿದ್ದಳು. ಇದರಿಂದಲೇ ಗೊತ್ತಾಗುವುದಿಲ್ಲವೇ, ನಿಜವಾದ ಮಗುವಿನ ತಾಯಿ ಯಾರೆಂದು? ಎಂದು ಹೇಳಿದರು ಸಂತರು. ನಮಗೆಲ್ಲ ನಮ್ಮ ತಾಯಿಯ ಬೆಲೆ ತಿಳಿಯು ವುದು ನಾವು ತಾಯಿಯ ಸ್ಥಾನಕ್ಕೆ ಬಂದಾಗಲೇ. ಮನೆಯಲ್ಲಿ ತಾಯಿ, ನಿಷ್ಠೂರವಾಗಿ ಮಾತನಾಡಿ ಹಠ ಹಿಡಿದರೂ ಅದರ ಬೆನ್ನ ಹಿಂದಿಗಯೇ ಅವಳಿಗೆ ನಮ್ಮ ಬಗ್ಗೆ ಅಪಾರವಾದ ಕಾಳಜಿ ಇರುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ, ನಾವು ಮಾಡುವ ತಪ್ಪುಗಳನ್ನು, ನಮ್ಮ ಸುಳ್ಳುಗಳನ್ನ ಮೊದಲು ಗಮನಿಸಿ ನಮ್ಮನ್ನು ಹಿಡಿಯುವುದೇ ತಾಯಿ. ಅವಳಲ್ಲಿ ನಮ್ಮ ತಪ್ಪುಗಳಿಗೆ ಎಂದಿಗೂ ಮೃದು ಧೋರಣೆ ಇರುವುದಿಲ್ಲ. ದಂಡಿಸಿ ಬೈದು ಬುದ್ಧಿ ಹೇಳಿನಮ್ಮನ್ನು ಸಮಾಜಮುಖಿಯಾಗಿಸುವುದರಲ್ಲಿ ತಾಯಿಯ ಪಾತ್ರ ಬಹಳ ದೊಡ್ಡದು. ಅವಳು ನಮ್ಮನ್ನು ಎಷ್ಟೇ ದಂಡಿಸಿದರೂ ಹೊರಗಿನ ಪ್ರಪಂಚದ ಯಾರಾದರೂ ನಮಗೆ ತೊಂದರೆ ಕೊಡುತ್ತಿದ್ದಾರೆ ಎಂದು ಗೊತ್ತಾದರೆ ಸಾಕು, ರೌದ್ರ ರೂಪ ತಾಳಿ ಅವರಿಗೆ ತಕ್ಕ ಶಾಸ್ತಿ ಕಲಿಸಲು ನಮ್ಮ ಬೆನ್ನ ಹಿಂದೆಯೇ ನಿಲ್ಲುತ್ತಾಳೆ.

ಇಂತಹ ತಾಯಿಯ ನೆರಳು ಆಶೀರ್ವಾದ ಜೀವನದಲ್ಲಿ ಇರುವವರೆಗೆ ನಮಗೆ ಯಾವ ದುಷ್ಟ ಶಕ್ತಿಯ ಭಯವೂ ಇರುವುದಿಲ್ಲ. ನೂರು ದೇವರುಗಳಿಗಿಂತ , ತಾಯಿ ದೇವರು ಮೇಲು. ತಾಯಿಯ ಮನಸ್ಸನ್ನು ಎಂದಿಗೂ ನೋಯಿಸಬೇಡಿ ಅವಳು ನಿಟ್ಟುಸಿರಿಟ್ಟರೆ ನಮಗೆ ಖಂಡಿತ ಒಳ್ಳೆಯದಾಗುವುದಿಲ್ಲ.

ದೈವದ ಕೃಪೆಯಲ್ಲಿ ಬದುಕು

ಜೀವಋಣಗಳ ಲೆಕ್ಕದಾದಿಯರಿಯದ ನಾವು।
ಆವುದನು ಸರಿಯೆನುವ ? ತಪ್ಪಾವುದೆನುವ ?
ಓವೊ ಬಿಡು ಕಡುಕಷ್ಟ ನೀತಿನಿರ್ಣಯದ ಹೊರೆ।
ದೈವವದ ಹೊರಲಿ ಬಿಡು - ಮಂಕುತಿಮ್ಮ

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ನಮ್ಮಗಳ ಜೀವನದಲ್ಲಿ ಬರುವ ಜೀವಋಣ ಭಾರಗಳ ಲೆಕ್ಕದ ದಾರಿಯನ್ನು ನಾವು ಅರಿಯಲಾಗು ವುದಿಲ್ಲ. ಜೀವಭಾರಗಳ ಲೆಕ್ಕವನ್ನು ನಮಗೆ ಅರಿ ಯಲು ಶಕ್ತಿ ಇಲ್ಲ ಎಂದ ಮೇಲೆ ಆ ಜೀವಭಾರ ಗಳನ್ನು ಸರಿಯೆನ್ನಲೂ, ತಪ್ಪೆನ್ನಲೂ ನಮಗೆ ಸಾಧ್ಯವೇ? ಜೀವಭಾರಗಳನ್ನು ಲೆಕ್ಕಹಾಕುವುದು ಬಲು ಕಷ್ಟ ಎಂದಾದ ಮೇಲೆ ನೀನು ನಿರುಮ್ಮಳನಾಗಿ ದೈವದ ಹೆಗಲಿಗೇರಿಸಿ ನೀನು ನಿಶ್ಚಿಂತನಾಗಿ ಬಾಳಲ್ಲಿ ಬಂದಿದ್ದನ್ನು ನೀನು ಸವೆಸುತ್ತಾ ನಿನ್ನ ಜೀವನವನ್ನು ಮಾಡು ಎಂದು ಈ ಪದ್ಯದಲ್ಲಿ ಆದೇಶಿಸಲಾಗಿದೆ.

ಒಬ್ಬ ವ್ಯಕ್ತಿ ತನ್ನ ಬದುಕಿನಲ್ಲಿ ನೋವು ನಲಿವು, ದುಃಖ ದುಮ್ಮಾನಗಳನ್ನು ಹೊಂದಿ ಸುಖ ಹಾಗೂ ಕಷ್ಟಗಳ ಜೋಕಾಲಿಯಲ್ಲಿ ಜೀವಿಸುತ್ತಲೇ ಇರುತ್ತಾನೆ. ಆತನ ಜೀವನದಲ್ಲಿಯ ಎಲ್ಲಾ ಘಟನೆಗಳಿಗೂ ಪೂರ್ವ ಸಂಸ್ಕಾರ, ಪೂರ್ವ ವಿಧಿತವಾದ ಹಾಗೂ ಈಗಿನ ನಡವಳಿಕೆಗಳೇ ಪ್ರಾಮುಖ್ಯವಾಗುತ್ತವೆ. ಮನುಷ್ಯನು ಆತನ ವೈಯ್ಯಕ್ತಿಕ ನಡವಳಿಕೆ, ನಡತೆಗಳೇ ಅವನ ಬಾಳಿನಲ್ಲಿ ಬರುವಂಥಹ ಫಲಿತಾಂಶವಾಗಿರುತ್ತವೆ. ಇಂಥಹ ಸುಖವಾಗಲಿ, ಕಷ್ಟಗಳಾಗಲಿ ಬರು ವಾಗ ಆತನು ತನ್ನ ಜೀವನದ ಹಿಂದಿನ ದಾರಿಗಳನ್ನು ನೋಡಲೇ ಬೇಕಾಗುತ್ತದೆ. ಆದರೆ ಆತನಿಗೆ ತನ್ನ ಹಿಂದಿನ ದಾರಿಗಳ ಅರಿವು ತಕ್ಷಣಕ್ಕೆ ಕಾಣ ಸಿಗುವುದಿಲ್ಲ. ಇಲ್ಲಿ ನಾವು ಪಡೆದುಕೊಂಡು ಗಳಿಸಿದ್ದೆಷ್ಟು ? ಇಲ್ಲಿ ನಾವುಗಳು ಗಳಿಸಿಕೊಂಡು ಕೂಡಿಸಿ ಅನುಭವಿಸಿದ್ದೆಷ್ಟು ? ಅನುಭವಿಸಿ ಕಳೆದುಕೊಂಡದ್ದೆಷ್ಟು ಎಂಬ ಲೆಕ್ಕಾಚಾರ ನಮ್ಮಗಳ ಬುದ್ಧಿಗೆ ಎಟುಕುವುದಿಲ್ಲ. ನಾವು ಈ ಮೂಲ ಸತ್ಯವನ್ನು ಅರಿಯುವ ಪ್ರಯತ್ನ ಪಟ್ಟರೂ ಸಹ ಅದರ ಲೆಕ್ಕ ಹಾಕಿ ಉತ್ತರ ಕಂಡುಕೊಳ್ಳುವುದು ಸಾಧ್ಯವಿಲ್ಲ. ಆದರೂ ನಾವು 'ಹಾಗೆ ಮಾಡಿದ್ದ ರಿಂದ ಹೀಗಾಯಿತು ಮತ್ತು ಹೀಗೆ ಮಾಡಿದ್ದಿದ್ದರೆ ಹಾಗೆ ಆಗುತ್ತಿತ್ತು' ಎಂದು ಎಲ್ಲ ಜೀವಿಗಳ ಕರ್ಮಗಳಿಗೆ ಒಂದು ವ್ಯರ್ಥ ವ್ಯಾಖ್ಯಾನವನ್ನು ಮಾಡುತ್ತಲೇ ಇರುತ್ತೇವೆ. ಇದು ಕೇವಲ ಅಜ್ಞಾನ. ಲೌಕಿಕ ಜೀವನದಲ್ಲಿ ಎಷ್ಟೇ ವ್ಯಾಖ್ಯಾನ ಮಾಡಿದರೂ, ಪಾರಮಾರ್ಥಿಕವಾಗಿ ನೋಡಿದಾಗ ನಮ್ಮೆಲ್ಲ ಊಹೆ, ಕಲ್ಪನೆ ಮತ್ತು ಅದರ ನುಗುಣವಾದ ವಿಮರ್ಶೆ ಎಲ್ಲ ಪೊಳ್ಳು ಎನಿಸು ತ್ತದೆ. ಆದುದರಿಂದ ಇಂಥಹ ವಿಶ್ಲೇಷಣೆಗಳನ್ನು ಆ ಭಗವಂತನ ತರ್ಕಕ್ಕೆ ಬಿಟ್ಟು ಬಿಡುವುದೇ ಸೂಕ್ತವಾಗುತ್ತದೆ. ಆದುದರಿಂದಲೇ ಈ ಪದ್ಯದಲ್ಲಿ 'ದೈವವದ ಹೊರಲಿ ಬಿಡು' ಎಂದು ಹೇಳಿರು ವುದು. ಆದುದರಿಂದ ಹಿಂದಿನ, ಇಂದಿನ, ಮುಂದಿನ ಭವಿಷ್ಯದ ವಿಚಾರ ಗಳ ಬಗ್ಗೆ ಹೆಚ್ಚು ಶ್ರಮಿಸದೆ 'ಇಂದಿಗಿಂದಿನ ಬದುಕು' ಎಂಬುದನ್ನು ನಾವು ಅರಿತು ಜೀವಿಸಬೇಕು. ಹಾಗಾಗಿದ್ದರಿಂದ ಹೀಗಾಯಿತು, ಹೀಗಾಗಿದ್ದ ರಿಂದ ಹಾಗಾಯಿತು ಎಂಬ ಧೋರಣೆಯನ್ನೇ ನಾವು ಹೊಂದಿರು ತ್ತೇವೆ. ಇದಕ್ಕೆಲ್ಲ ಕಾರಣ ಮನದಲ್ಲಿಯ ಆಸೆಗಳು. ಆಸೆ, ಅದಕ್ಕೊಂದು ಮತ್ತೊಂದು, ಮತ್ತೊಂದಕ್ಕೆ ಮಗದೊಂದು, ಹೀಗೆ ಆಸೆಗಳ ಸರಪಳಿಯು ಬಿಗಿಯುತ್ತಾ ಹೋಗುತ್ತದೆಯೇ ಹೊರತು ಕ್ಷೀಣಿಸುವುದೇ ಇಲ್ಲ. ಆದುದರಿಂದ ಅಗಣಿತ ಆಸೆಗಳ, ಅಪರಿಮಿತ ಬಯಕೆಗಳ ಎಣ್ಣೆಯಲ್ಲಿ ಬಿದ್ದ ನೊಣದ ಹಾಗೆ ಜೀವಿಸುವುದೇ ನಮ್ಮ ಗತಿಯಾಗಿದೆ. ಆದುದರಿಂದ ಎಲ್ಲಾ ಹಿಂದಿನ, ಭವಿಷ್ಯದ ಲೆಕ್ಕಾಚಾರಗಳನ್ನು ದೈವದ ಹೆಗಲಿಗೆ ಹಾಕಿ ನೀನು ನಿರುಮ್ಮಳನಾಗಿ ಜೀವನ ಮಾಡು ಎಂಬುದೇ ಈ ಪದ್ಯದ ಅರ್ಥವಾಗಿದೆ.

ನೀವೂ ಬರೆಯಬಹುದು

ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ವಿದೇಶಿ ಲೀಗ್ ಆಡಲು ಆರ್. ಅಶ್ವಿನ್ ಒಲವು

ದೆಹಲಿ: ಕೆಲ ದಿನಗಳ ಹಿಂದಷ್ಟೇ ಐಪಿಎಲ್‌ಗೆ ವಿದಾಯ ಹೇಳಿದ್ದ ಆರ್.ಅಶ್ವಿನ್ ಅವರು ವಿದೇಶಿ ಕ್ರಿಕೆಟ್ ಲೀಗ್ ಆಡಲು ನಿರ್ಧರಿಸಿದ್ದಾರೆ. ಯುಎಇ ಇಂಟರ್‌ನ್ಯಾಷನಲ್ ಲೀಗ್ ಟಿ20 ಆಡುವ ಸಾಧ್ಯತೆಯಿದೆ ಎಂದು ತಿಳಿದು ಬಂದಿದೆ. ಇದೇ ಸೆಪ್ಟೆಂಬರ್ 30 ರಂದು ಆಟಗಾರರ ಹರಾಜು ನಡೆಯಲಿದ್ದು, ಅಶ್ವಿನ್ ಹರಾಜಿಗೆ ತಮ್ಮ ಹೆಸರನ್ನು ನೋಂದಣಿ ಮಾಡಿದ್ದಾರೆ ಎಂದು ವರದಿಯಾಗಿದೆ. ಈ ಬಗ್ಗೆ ಅಶ್ವಿನ್ ಮಾಧ್ಯಮವೊಂದಕ್ಕೆ ಪ್ರತಿಕ್ರಿಯೆ ನೀಡಿದ್ದು, 'ಆಯೋಜಕರ ಜೊತೆ ಮಾತನಾಡುತ್ತಿದ್ದೇನೆ, ನಾನು ಈಗಾಗಲೇ ಐಎಲ್‌ಟಿ20 ಟೂರ್ನಿಯ ಆಟಗಾರರ ಹರಾಜಿನಲ್ಲಿ ಹೆಸರು ನೋಂದಾಯಿಸಿದ್ದೇನೆ, ನನ್ನನ್ನು ಯಾರಾದರೂ ಖರೀದಿಸುವ ವಿಶ್ವಾಸವಿದೆ' ಎಂದಿದ್ದಾರೆ. ಐಎಲ್‌ಟಿ20 ಟೂರ್ನಿಯಲ್ಲಿ ಈಗಾಗಲೇ ರಾಬಿನ್ ಉತ್ತಪ್ಪ, ಯೂಸುಫ್ ಪಠಾಣ್ ಹಾಗೂ ಅಂಬಟಿ ರಾಯುಡು ಪಾಲ್ಗೊಂಡು ಗಮನ ಸೆಳೆದಿದ್ದಾರೆ.

ವಿಶ್ವ ಬ್ಯಾಡ್ಮಿಂಟನ್: ಭಾರತ ಆತಿಥ್ಯ

ದೆಹಲಿ: ಮುಂದಿನ ವರ್ಷ ಆಗಸ್ಟ್‌ನಲ್ಲಿ ನಡೆಯಲಿರುವ ಪ್ರತಿಷ್ಠಿತ ಬ್ಯಾಡ್ಮಿಂಟನ್ ವಿಶ್ವ ಚಾಂಪಿಯನ್‌ಶಿಪ್‌ನ್‌ನ ಆತಿಥೇಯ ನಗರ ವಾಗಿ ದೆಹಲಿಯನ್ನು ಆಯ್ಕೆ ಮಾಡಲಾಗಿದೆ ಎಂದು ಬಿಡಬ್ಲ್ಯುಎಫ್ ಸೋಮವಾರ ಪ್ರಕಟಿಸಿದೆ. 17 ವರ್ಷಗಳ ನಂತರ ಭಾರತ ಎರಡನೇ ಬಾರಿಗೆ ಈ ಟೂರ್ನಿಯನ್ನು ಆಯೋಜಿಸುತ್ತಿದೆ. ಭಾರತ ಕೊನೆಯ ಬಾರಿಗೆ 2009ರಲ್ಲಿ ಈ ಟೂರ್ನಿಗೆ ಆತಿಥ್ಯ ವಹಿಸಿತ್ತು. ಆಗ ಪಂದ್ಯಾವಳಿ ಹೈದರಾಬಾದ್‌ನಲ್ಲಿ ನಡೆದಿತ್ತು. ಪ್ಯಾರಿಸ್‌ನಲ್ಲಿ ನಡೆದ 2025ರ ಚಾಂಪಿಯನ್‌ಶಿಪ್‌ಗಳ ಸಮಾರೋಪ ಸಮಾರಂಭದಲ್ಲಿ ಈ ಘೋಷಣೆ ಮಾಡಲಾಯಿತು. ಭಾರತೀಯ ಬ್ಯಾಡ್ಮಿಂಟನ್ ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿ ಸಂಜಯ್ ಮಿಶ್ರಾ ಈ ಕುರಿತು ಮಾತನಾಡಿ, ಪ್ಯಾರಿಸ್‌ನಲ್ಲಿ ಪ್ರದರ್ಶಿಸ ಲಾದ ಶ್ರೇಷ್ಠತೆ ಮತ್ತು ಭವ್ಯತೆಯನ್ನು ಭಾರತ ಎತ್ತಿಹಿಡಿಯುತ್ತದೆ ಎಂದು ಭರವಸೆ ನೀಡಿದರು.

ಅದೇ ಮಾನದಂಡಗಳನ್ನು ಎತ್ತಿಹಿಡಿಯಲು ಮತ್ತು ಮುಂದುವರಿಸಲು ಭಾರತವು ಶೇಕಡಾ 100ರಷ್ಟು ಸಿದ್ಧವಾಗಿದೆ. ಬ್ಯಾಡ್ಮಿಂಟನ್ ಕುಟುಂಬವನ್ನು ದೆಹಲಿಗೆ ಸ್ವಾಗತಿಸಲು ನಾವು ಎದುರು ನೋಡುತ್ತಿದ್ದೇವೆ ಎಂದು ಮಿಶ್ರಾ, ಬಿಎಐ ಪ್ರಕಟಣೆಯಲ್ಲಿ ಉಲ್ಲೇಖಿಸಿದ್ದಾರೆ.

ಪ್ಯಾರಿಸ್‌ನಲ್ಲಿ ನಡೆದ 2025ರ ಬಿಡಬ್ಲ್ಯುಎಫ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ, ಭಾರತ ಒಂದು ಕಂಚಿನ ಪದಕ ಮಾತ್ರ ಜಯಿಸಿತ್ತು. ಪುರುಷರ ಡಬಲ್ಸ್ ಜೋಡಿ ಸಾತ್ವಿಕ್‌ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಪದಕ ಜಯಿಸಿದ್ದರು.

ಒಂದು ವರ್ಷದ ನಾಲ್ಕೂ ಗ್ರ್ಯಾಂಡ್‌ಸ್ಲಾಮ್‌ಗಳಲ್ಲಿ ಕ್ವಾರ್ಟರ್‌ಗೇರಿದ ಹಿರಿಯ ಆಟಗಾರ
9ನೇ ಬಾರಿ ನಾಲ್ಕೂ ಸ್ಲಾಮ್‌ಗಳಲ್ಲಿ ಕ್ವಾರ್ಟರ್‌ಗೆ ಪ್ರವೇಶ | ಅಲ್ಕರಾಜ್ ಕೂಡ 8ರ ಘಟ್ಟಕ್ಕೆ

ಯುಎಸ್ ಕ್ವಾರ್ಟರ್ ಫೈನಲ್‌ಗೆ ಜೊಕೊ

ನ್ಯೂಯಾರ್ಕ್: 25ನೇ ಗ್ರ್ಯಾನ್‌ಸ್ಲಾಮ್ ಕಿರೀಟ ಗೆಲ್ಲುವತ್ತ ಮುನ್ನುಗ್ಗಿರುವ ನೊವಾಕ್ ಜೊಕೊವಿಚ್, ಯುಎಸ್ ಓಪನ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. ಜತೆಗೆ ದಾಖಲೆಯೊಂದನ್ನು ಕೂಡ ಬರೆದಿದ್ದಾರೆ. ಆಧುನಿಕ ಟೆನಿಸ್‌ನಲ್ಲಿ ಒಂದೇ ಋತುವಿನಲ್ಲಿ ನಾಲ್ಕೂ ಗ್ರ್ಯಾನ್‌ಸ್ಲಾಮ್‌ಗಳಲ್ಲಿ ಕ್ವಾರ್ಟರ್ ಫೈನಲ್‌ಗೇರಿದ ಅತ್ಯಂತ ಹಿರಿಯ ಆಟಗಾರ (38) ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಒಟ್ಟಾರೆ 64ನೇ ಬಾರಿ ಗ್ರ್ಯಾಂಡ್‌ಸ್ಲಾಮ್‌ಗಳಲ್ಲಿ ಕ್ವಾರ್ಟರ್ ಫೈನಲ್ ಗೇರಿದ್ದಾರೆ. ಅಷ್ಟು ಮಾತ್ರವಲ್ಲ ತಮ್ಮ ವೃತ್ತಿಜೀವನದಲ್ಲಿ ಒಂದು ವರ್ಷದ ಎಲ್ಲ ನಾಲ್ಕೂ ಸ್ಲಾಮ್‌ಗಳಲ್ಲಿ ಕ್ವಾರ್ಟರ್ ಫೈನಲ್‌ಗೇರಿದ ಸಾಧನೆಯನ್ನು 9ನೇ ಬಾರಿಗೆ ಮಾಡಿದ್ದಾರೆ. ಇದೂ ಕೂಡ ದಾಖಲೆ. ಇದುವರೆಗೆ ಅವರು ರೋಜರ್ ಫೆಡರರ್ (8 ಬಾರಿ) ಜೊತೆಗೆ ಈ ದಾಖಲೆ ಹಂಚಿಕೊಂಡಿದ್ದರು.

ಸೋಮವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ನಾಲ್ಕನೇ ಸುತ್ತಿನ ಹೋರಾಟದಲ್ಲಿ ಏಳನೇ ಶ್ರೇಯಾಂಕಿತ ಜೊಕೊವಿಚ್ ಅವರು ಜರ್ಮನಿಯ ಜಾನ್-ಲೆನಾರ್ಡ್ ಸ್ಟ್ರಫ್ ವಿರುದ್ಧ 6-3, 6-3, 6-2ರ ಅಂತರದಲ್ಲಿ ಸುಲಭ ಜಯ ಗಳಿಸಿದರು. 144 ವರ್ಷದ ಲೆನಾರ್ಡ್‌ಗೀಗ 35 ವರ್ಷ.

ಕಳೆದ ಪಂದ್ಯದಲ್ಲಿ ಬೆನ್ನು ನೋವನ್ನು ಮೀರಿನಿಂತು

ಜೊಕೊ ಗೆಲುವು ಸಾಧಿಸಿದ್ದರು.

ಈ ಗೆಲುವಿನೊಂದಿಗೆ 16ನೇ ಬಾರಿ ಅಮೆರಿಕ ಓಪನ್‌ನಲ್ಲಿ ನಾಲ್ಕನೇ ಸುತ್ತನ್ನು ದಾಟಿದಂತಾಯಿತು. ಗ್ರ್ಯಾಂಡ್‌ಸ್ಲಾಮ್ ಟೂರ್ನಿಗಳಲ್ಲಿ ಈ ಹಂತ ತಲುಪಿರುವುದು 64ನೇ ಸಲ ಕೂಡದಲ್ಲಿ ನಾಲ್ಕು ಬಾರಿ ಚಾಂಪಿಯನ್ ಆಗಿರುವ ಜೊಕೊ, ಕೊನೆಯದಾಗಿ 2023ರಲ್ಲಿ ಪ್ರಶಸ್ತಿ ಗೆದ್ದಿದ್ದರು. ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಜೊಕೊ, 4ನೇ ಶ್ರೇಯಾಂಕದ ಟೇಲರ್ ಫ್ರಿಜ್ ಸವಾಲು ಎದುರಿಸಲಿದ್ದಾರೆ. ಮತ್ತೊಂದೆಡೆ ಎರಡನೇ ಶ್ರೇಯಾಂಕಿತ, ಹೊಸ ತಲೆಮಾರಿನ ಅದ್ಭುತ ಆಟಗಾರ ಕಾರ್ಲೋಸ್ ಅಲ್ಕರಾಜ್ ಅವರು ಫ್ರಾನ್ಸ್‌ನ ಅರ್ಥರ್ ರಿಂಡರ್ನೆಕ್ ವಿರುದ್ಧ 7-6 (7/3), 6-3, 6-4ರ ಅಂತರದಲ್ಲಿ ಪ್ರಯಾಸದ ಗೆಲುವು ಸಾಧಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ಸಬಲೆಂಕಾ, ಕ್ರೆಜಿಕೋವಾಗೆ ಮುನ್ನಡೆ: ಮಹಿಳಾ ಸಿಂಗಲ್ಸ್‌ನಲ್ಲಿ ಅರಿನಾ ಸಬಲೆಂಕಾ, ಬಾರ್ಬೊರಾ ಕ್ರೆಜಿಕೋವಾ ಕೂಡ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಸಬಲೆಂಕಾ, ಕ್ರಿಸ್ಟಿನಾ ಬುಕ್ಸಾ ವಿರುದ್ಧ 6-1, 6-4 ಸುಲಭ ಜಯ ಗಳಿಸಿದರು. ಆದರೆ ಕ್ರೆಜಿಕೋವಾ ಅವರು ಟೇಲರ್ ಟೌನ್ಸೆಂಡ್ ವಿರುದ್ಧ ಮೊದಲ ಸೆಟ್ ಸೋಲು ಕಂಡರೂ ಆ ಬಳಿಕದ ಎರಡು ಸೆಟ್‌ನಲ್ಲಿ ತೀವ್ರ ಹೋರಾಟ ನಡೆಸಿ ಗೆಲುವು ಸಾಧಿಸಿದರು. ಕಳೆದ ಮೂರನೇ ಸುತ್ತಿನ ಪಂದ್ಯದಲ್ಲಿಯೂ ಅವರು ಕಠಿಣ ಹೋರಾಟದ ಬಳಿಕ ಗೆಲುವು ಕಂಡಿದ್ದರು.

ಜೊಕೊಗೆ ಗಾಯದ ಭೀತಿ

ಹಿಂದಿನ ಪಂದ್ಯದಲ್ಲಿ ಗಾಯದ ಸಮಸ್ಯೆಗೊಳಗಾಗಿದ್ದ ಜೊಕೊ ಈ ಪಂದ್ಯದಲ್ಲೂ ನೋವಿನಲ್ಲಿದ್ದರು. ಲೆನಾರ್ಡ್ ವಿರುದ್ಧ 1ನೇ ಸೆಟ್ ಮುಗಿದ ನಂತರ ಜೊಕೊಗೆ ಮೈದಾನದಲ್ಲೇ ಚಿಕಿತ್ಸೆ ನೀಡಲಾಯಿತು. ಅದರ ಬಳಿಕ ಹೋರಾಟ ಮುಂದುವರಿಸಿದ ಅವರು ಗೆಲುವು ಸಾಧಿಸಿ ತಮ್ಮ ತಾಕತ್ತನ್ನು ಮತ್ತೆ ಸಾಬೀತು ಮಾಡಿದರು.

ಕಾರ್ಟಿಂಗ್ ಚಾಂಪಿಯನ್‌ಶಿಪ್ | 3ನೇ ಸುತ್ತು ಗೆದ್ದ ಮುಂಬೈನ ಕಿಯಾನ್ ಶಾ

ಬೆಂಗಳೂರಿನ ರಿಷಿಕ್ ರೆಡ್ಡಿಗೆ 2ನೇ ಸ್ಥಾನ

ಚೆನ್ನೈ: ಮುಂಬೈನ 14 ವರ್ಷದ ಕಿಯಾನ್ ಶಾ ಅವರು ಮೆಕೊ ರಾಷ್ಟ್ರೀಯ ಕಾರ್ಟಿಂಗ್ ಚಾಂಪಿಯನ್‌ಶಿಪ್‌ನ ಮೂರನೇ ಸುತ್ತಿನಲ್ಲಿ ಜಯ ಗಳಿಸಿದ್ದಾರೆ. ಮದ್ರಾಸ್ ಇಂಟರ್‌ನ್ಯಾಷನಲ್ ಕಾರ್ಟಿಂಗ್ ಅರೆನಾದಲ್ಲಿ ನಡೆದ ಸ್ಪರ್ಧೆಯಲ್ಲಿ ಟೀಮ್ ರಾಯೊ ರೇಸಿಂಗ್‌ನ ಪರ ಸ್ಪರ್ಧಿಸಿದ ಕಿಯಾನ್ ಅವರು ರೇಸ್‌ನುದ್ದಕ್ಕೂ ಪ್ರಾಬಲ್ಯ ಮೆರೆದು ಜೂನಿಯರ್ ರೊಟಾಕ್ಸ್ ವಿಭಾಗದ ಫೈನಲ್‌ನಲ್ಲಿ ಗೆಲುವು ಸಾಧಿಸಿದರು.

ಕಿಯಾನ್ ರೇಸ್ ವಾರವನ್ನು ಉತ್ತಮವಾಗಿ ಆರಂಭಿಸಿದರು. ಎರಡೂ ಅಧಿಕೃತ ಅಭ್ಯಾಸ ಅವಧಿಗಳಲ್ಲಿ ಅಗ್ರಸ್ಥಾನ ಪಡೆದು, ಅತೀ ವೇಗದ ರೇಸರ್ ಆಗಿ ಹೊರಹೊಮ್ಮಿ ಪೋಲ್ ಪೊಸಿಷನ್ ಸಹ ಗಳಿಸಿದರು. ಅರ್ಹತಾ ಲ್ಯಾಪ್ ಅನ್ನು 50.530 ಸೆಕೆಂಡ್‌ಗಳಲ್ಲಿ ಮುಕ್ತಾಯಗೊಳಿಸಿದರು. 18 ರೇಸರ್‌ಗಳ ಪೈಕಿ 8 ಮಂದಿಯನ್ನು ಕಿಯಾನ್ ಕೇವಲ ಅರ್ಧ ಸೆಕೆಂಡ್ ಕಡಿಮೆ ಸಮಯದಲ್ಲಿ ಹಿಂದಿಕ್ಕಿದರು.

ಕಿಯಾನ್‌ಗೆ ಭಾರೀ ಪೈಪೋಟಿ ನೀಡಿದ ಚೆನ್ನೈನ ಶಿವಾನ್ ಕಾರ್ತಿಕ್ (50.672 ಸೆಕೆಂಡ್) ಹಾಗೂ ಎಶಾಂತ್ ವೆಂಕಟೇಶನ್ (50.731 ಸೆಕೆಂ

ಡ್) ಕ್ರಮವಾಗಿ 2 ಹಾಗೂ 3ನೇ ಸ್ಥಾನ ಪಡೆದರು.

'ನಾನು ಈ ರೇಸ್‌ಗೆ ಸಾಕಷ್ಟು ಸಿದ್ಧತೆ ನಡೆಸಿದ್ದೆ. ನನ್ನ ಸಂಪೂರ್ಣ ಗಮನ ಗೆಲ್ಲುವುದರ ಮೇಲೆಯೇ ಇತ್ತು. ನನಗೆ ಅತ್ಯುತ್ತಮ ಗುಣಮಟ್ಟದ ಕಾರ್ಟ್ ಸಿದ್ಧಪಡಿಸಿ ಕೊಟ್ಟ ನನ್ನ ತಂಡಕ್ಕೆ ಧನ್ಯವಾದ ಹೇಳಲು ಇಚ್ಛಿಸುತ್ತೇನೆ. ನನ್ನ ಪೋಷಕರೇ ನನ್ನ ಅತೀ ದೊಡ್ಡ ಶಕ್ತಿ. ಅವರ ಬೆಂಬಲವಿಲ್ಲದೆ ನನಗೆ ಗೆಲ್ಲಲು ಸಾಧ್ಯವಾಗುತ್ತಿರಲಿಲ್ಲ. ಅವರಿಗೂ ನಾನು ಧನ್ಯವಾದ ಹೇಳುತ್ತೇನೆ' ಎಂದು ಗೆಲುವಿನ ಬಳಿಕ ಕಿಯಾನ್ ಹೇಳಿದರು.

ವಿಜೇತರಿಗೆ 39.5, ರನ್ನರ್ ಅಪ್‌ಗೆ 19.77 ಕೋಟಿ ರೂ. ಬಹುಮಾನ
2023ರ ಪುರುಷರ ಏಕದಿನ ವಿಶ್ವಕಪ್‌ಗಿಂತ ಗರಿಷ್ಠ ಹಣ ಪ್ರಕಟಿಸಿದ ಐಸಿಸಿ

ಮಹಿಳಾ ಕ್ರಿಕೆಟ್ ವಿಶ್ವಕಪ್ ವಿಜೇತರಿಗೆ ವಿಶ್ವದಾಖಲೆಯ ಪ್ರಶಸ್ತಿ ಮೊತ್ತ

ದೆಹಲಿ: ಭಾರತ ಮತ್ತು ಶ್ರೀಲಂಕಾ ಆತಿಥ್ಯದಲ್ಲಿ ಸೆಪ್ಟೆಂಬರ್ 30ರಿಂದ ನವೆಂಬರ್ 2ರವರೆಗೆ ನಡೆಯಲಿ ರುವ 13ನೇ ಆವೃತ್ತಿಯ ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯ ಬಹುಮಾನ ಮೊತ್ತವನ್ನು ಐಸಿಸಿ ಸೋಮವಾರ ಪ್ರಕಟಿಸಿದೆ. ಇದರನ್ವಯ ಚಾಂಪಿಯನ್ ತಂಡ 39.5 ಕೋಟಿ ರೂ. (4.48 ಮಿಲಿಯನ್ ಡಾಲರ್) ಬಹುಮಾನ ಪಡೆಯಲಿದ್ದರೆ, ರನ್ನರ್ ಅಪ್ ತಂಡ 19.77 ಕೋಟಿ ರೂ. (3.5 ಮಿಲಿಯನ್) ಗಳಿಸಲಿದೆ. 2023ರ ಪುರುಷರ ಏಕದಿನ ವಿಶ್ವಕಪ್‌ಗಿಂತಲೂ ಅಧಿಕ ಮೊತ್ತವಾಗಿದೆ. ಒಟ್ಟಾರೆ 122.5 ಕೋಟಿ ರೂ. ಬಹುಮಾನ ಮೊತ್ತ ಹಂಚಿಕೆಯಾಗಲಿದೆ. ಇದು ಕ್ರಿಕೆಟ್ ವಿಶ್ವಕಪ್ ಇತಿಹಾಸದಲ್ಲೇ ದಾಖಲೆಯ ಪ್ರಶಸ್ತಿ ಮೊತ್ತವಾಗಿದೆ.

ಸೆಮಿಫೈನಲ್‌ನಲ್ಲಿ ಸೋತ 2 ತಂಡಗಳು ತಲಾ 9.88 ಕೋಟಿ ರೂ. ಪಡೆಯಲಿವೆ. 5 ಮತ್ತು 6ನೇ ಸ್ಥಾನ ಪಡೆದ ತಂಡಕ್ಕೆ 6 ಕೋಟಿ ರೂ., 7 ಮತ್ತು 8ನೇ ಸ್ಥಾನ ಪಡೆದ ತಂಡಕ್ಕೆ 2.5 ಕೋಟಿ ರೂ. ಸಿಗಲಿದೆ. ಯಾವುದೇ ತಂಡ ಪಂದ್ಯ ಗೆದ್ದರೂ ಅಥವಾ ಗೆಲ್ಲದಿದ್ದರೂ, ಪ್ರತಿ ತಂಡಕ್ಕೂ ಕನಿಷ್ಠ 2.5 ಕೋಟಿ ರೂಪಾಯಿ ಬಹುಮಾನ ಸಿಗಲಿದೆ. ಗುಂಪು ಹಂತದ ಪ್ರತಿ ಗೆಲುವಿಗೂ 30 ಲಕ್ಷ ರೂ. ಸಿಗಲಿದೆ.

ಈ ಘೋಷಣೆಯು ಮಹಿಳಾ ಕ್ರಿಕೆಟ್ ಪಾಲಿಗೆ ಅತ್ಯಂತ ಮಹತ್ವದ್ದಾಗಿದೆ. ಬಹುಮಾನದ ಮೊತ್ತದಲ್ಲಿನ ನಾಲ್ಕು ಪಟ್ಟು ಹೆಚ್ಚಳವು ಮಹಿಳಾ ಕ್ರಿಕೆಟ್‌ಗೆ ಒಂದು ಹೆಗ್ಗುರುತಿನ ಕ್ಷಣವಾಗಿದೆ. ಅದರ ದೀರ್ಘಕಾಲೀನ ಬೆಳವಣಿಗೆಗೆ ನಮ್ಮ ಸ್ಪಷ್ಟ ಬದ್ಧತೆಯನ್ನು ತೋರುತ್ತದೆ ದೆ ಎಂದು ಐಸಿಸಿ ಅಧ್ಯಕ್ಷ ಜಯ್ ಶಾ ತಿಳಿಸಿದ್ದಾರೆ. ಭಾರತ ಹಾಗೂ ಶ್ರೀಲಂಕಾಗಳ ಜಂಟಿ ಆತಿಥ್ಯದಲ್ಲಿ ವಿಶ್ವಕಪ್ ನಡೆಯಲಿದೆ. 8 ತಂಡಗಳು ಸೆಣಸಲಿರುವ ವಿಶ್ವಕಪ್‌ನ ಬಹುತೇಕ ಪಂದ್ಯಗಳು ಭಾರತದ ನಾಲ್ಕು ಕ್ರೀಡಾಂಗಣಗಳಲ್ಲಿ ನಡೆಯಲಿದ್ದು, ಪಾಕಿಸ್ತಾನದ ಪಂದ್ಯಗಳು ಶ್ರೀಲಂಕಾದ ಕೊಲಂಬೊದಲ್ಲಿ ಆಯೋಜಿಸಲಾಗುತ್ತಿದೆ.

ಫಿಟ್ನೆಸ್ ಪರೀಕ್ಷೆಯಲ್ಲಿ ಗಿಲ್, ರೋಹಿತ್, ಬುಮ್ರಾ ಪಾಸ್

ಬೆಂಗಳೂರು: ಇಲ್ಲಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ (ಸಿಒಇ) ಫಿಟ್ನೆಸ್ ಪರೀಕ್ಷೆಗೆ ಒಳಗಾದ ಏಕದಿನ ತಂಡದ ನಾಯಕ ರೋಹಿತ್ ಶರ್ಮಾ, ಟೆಸ್ಟ್ ಕ್ರಿಕೆಟ್ ತಂಡದ ನಾಯಕ ಶುಭಮನ್ ಗಿಲ್, ಜಸ್ಪ್ರೀತ್ ಬುಮ್ರಾ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಮುಂಬರುವ ಏಷ್ಯಾ ಕಪ್ ಟಿ20 ಟೂರ್ನಿಯಲ್ಲಿ ಭಾರತ ತಂಡದ ಉಪನಾಯಕರಾಗಿರುವ ಗಿಲ್ ಮತ್ತು ಬುಮ್ರಾ ಸೆ.4ರ ಮೊದಲು ದುಬೈಗೆ ತೆರಳಬೇಕು. ಹೀಗಾಗಿ ಅವರು ಫಿಟ್ನೆಸ್ ಪರೀಕ್ಷೆಗೆ ಒಳಗಾಗಿದ್ದರು.

ವಾಷಿಂಗ್ಟನ್ ಸುಂದರ್, ಯಶಸ್ವಿ ಜೈಸ್ವಾಲ್, ಮೊಹಮ್ಮದ್ ಸಿರಾಜ್ ಮತ್ತು ಶಾರ್ದೂಲ್ ಠಾಕೂರ್ ಅವರೂ ಇಲ್ಲಿ ಫಿಟ್ನೆಸ್ ಪರೀಕ್ಷೆಗೊಳಗಾಗಿದ್ದಾರೆ. ಸೂರ್ಯಕುಮಾರ್ ಯಾದವ್ ಮತ್ತು ಹಾರ್ದಿಕ್ ಪಾಂಡ್ಯ ಕಳೆದ ವಾರವೇ ಫಿಟ್ನೆಸ್ ಪರೀಕ್ಷೆಗೆ ಒಳಗಾಗಿ ತಮ್ಮ ಫಿಟ್ನೆಸ್ ಸಾಬೀತು ಮಾಡಿದ್ದರು. ಏಷ್ಯಾಕಪ್‌ನಲ್ಲಿ ಭಾರತ ಸೆ.9ರಂದು ತನ್ನ ಮೊದಲ ಪಂದ್ಯದಲ್ಲಿ ಯುಎಇಯನ್ನು ಎದುರಿಸಲಿದೆ.

ಕೊಹ್ಲಿ, ರೋಹಿತ್ ಆಸೀಸ್ ಸರಣಿಗೂ ಮುನ್ನ ನಡೆಯಲಿರುವ ಆಸ್ಟ್ರೇಲಿಯಾ 'ಎ' ತಂಡದ ವಿರುದ್ಧ ಸರಣಿಯಲ್ಲಿ ಭಾರತ ಎ' ಪರ ಆಡಲಿದ್ದಾರೆ ಎಂದು ಹೇಳಲಾಗುತ್ತಿದೆ. ಆಸೀಸ್‌ನಲ್ಲಿ ಭಾರತ ತಂಡ ಅಕ್ಟೋಬರ್ 19ರಿಂದ 3 ಏಕದಿನ ಪಂದ್ಯಗಳ ಸರಣಿ ಆಡಲಿದೆ. ವಿರಾಟ್ ಕೊಹ್ಲಿ ಪ್ರಸ್ತುತ ಇಂಗ್ಲೆಂಡ್‌ನಲ್ಲಿ ತಮ್ಮ ಕುಟುಂಬದೊಂದಿಗೆ ವಾಸಿಸುತ್ತಿರುವ ಕಾರಣ ಅವರು ಯಾವಾಗ ಫಿಟ್ನೆಸ್ ಪರೀಕ್ಷೆಗೆ ಒಳಗಾಗಲಿದ್ದಾರೆ ಎಂಬುದರ ಕುರಿತು ಯಾವುದೇ ಸ್ಪಷ್ಟತೆ ಇಲ್ಲ. ಜೂನ್ 3ರಂದು ಐಪಿಎಲ್ ಕೊನೆಗೊಂಡ ನಂತರ ಮತ್ತು ಮರುದಿನ ಬೆಂಗಳೂರಿನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿಜಯೋತ್ಸವ ಆಚರಿಸಿದ ನಂತರ ಕೊಹ್ಲಿ ಇಂಗ್ಲೆಂಡ್‌ಗೆ ಹಾರಿದ್ದರು. ಅಂದಿನಿಂದ ಅಲ್ಲೇ ವಾಸಿಸುತ್ತಿದ್ದಾರೆ.

ಏಷ್ಯಾಕಪ್ ಹಾಕಿ | ಕಜಾಕಸ್ತಾನದ ವಿರುದ್ಧ ಗೆಲುವು

ಭಾರತಕ್ಕೆ ಹ್ಯಾಟ್ರಿಕ್ ಗೆಲುವು

ರಾಜಗೀರ್ (ಬಿಹಾರ): ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಈಗಾಗಲೇ ಸೂಪರ್ ನಾಲ್ಕರ ಘಟ್ಟಕ್ಕೆ ಪ್ರವೇಶ ಪಡೆದಿರುವ ಆತಿಥೇಯ ಭಾರತ ತಂಡ ಮತ್ತೊಂದು ಗೆಲುವು ದಾಖಲಿಸಿದೆ. ಸೋಮವಾರ ನಡೆದ ಗುಂಪು ಹಂತದ ತನ್ನ ಅಂತಿಮ ಪಂದ್ಯದಲ್ಲಿ ಕಜಾಕಸ್ತಾನ ಎದುರು ಗೋಲುಗಳ ಸುರಿಮಳೆಗೈದು 15-0 ಅಂತರದ ಭರ್ಜರಿ ಗೆಲುವು ಸಾಧಿಸಿತು. ಇದು ಭಾರತಕ್ಕೆ ಒಲಿದ ಹ್ಯಾಟ್ರಿಕ್ ಗೆಲುವು. ಭಾರತ 9 ಅಂಕಗಳೊಂದಿಗೆ ಎ ಗುಂಪಿನ ಅಗ್ರಸ್ಥಾನದಲ್ಲಿದೆ. 'ಬಿ' ಗುಂಪಿನಲ್ಲಿ ಮಲೇಷ್ಯಾ ಕೂಡ ಹ್ಯಾಟ್ರಿಕ್ ಗೆಲುವು ಸಾಧಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯಿತು.

ಭಾರತ ಪರ ಅಭಿಷೇಕ್ ನಾಲ್ಕು ಗೋಲು ಬಾರಿಸಿದರೆ, ಸುಖ್‌ಜೀತ್ ಸಿಂಗ್ ಹ್ಯಾಟ್ರಿಕ್ ಗಳಿಸಿದರು. ಅಭಿಷೇಕ್ (5ನೇ, 8ನೇ, 20ನೇ ಮತ್ತು 59ನೇ), ಸುಖ್‌ಜೀತ್ ಸಿಂಗ್ (15ನೇ, 32ನೇ, 38ನೇ), ಜುಗ್ರಾಜ್ ಸಿಂಗ್ (24ನೇ, 31ನೇ, 47ನೇ), ನಾಯಕ ಹರ್ಮನ್‌ಪ್ರೀತ್ ಸಿಂಗ್ (26ನೇ), ಅಮಿತ್ ರೋಹಿದಾಸ್ (29ನೇ), ರಾಜಿಂದರ್ ಸಿಂಗ್ (32ನೇ), ಸಂಜಯ್ ಸಿಂಗ್ (54ನೇ) ಮತ್ತು ದಿಲ್‌ಪ್ರೀತ್ ಸಿಂಗ್ (55ನೇ) ನಿಮಿಷದಲ್ಲಿ ಗೋಲು ಗಳಿಸಿದರು.

ಭಾರತ ತಂಡ ಎರಡನೇ ಕ್ವಾರ್ಟರ್‌ನಲ್ಲಿ ನಾಲ್ಕು ಬಾರಿ ಗೋಲು ಗಳಿಸಿ ಕಜಾಕಸ್ತಾನ ತಂಡವನ್ನು ಸಂಪೂರ್ಣ ಒತ್ತಡಕ್ಕೆ ಸಿಲಿಕಿಸಿತು. ಅರ್ಧಾವಧಿಯಲ್ಲಿ 7-0 ಮುನ್ನಡೆ ಸಾಧಿಸಿತು. ಮೂರನೇ ಮತ್ತು ನಾಲ್ಕನೇ ಕ್ವಾರ್ಟರ್‌ನಲ್ಲಿಯೂ ಗೋಲುಗಳ ಸುರಿಮಳೆಗೈದಿತು.

ಟಾಕ್ಸಿಕ್‌ಗೆ ಹಾಲಿವುಡ್ ದಿಗ್ಗಜರ ಮೆಚ್ಚುಗೆ



ಯಶ್, ಕೆಜಿಎಫ್ ಯಶಸ್ಸಿನ ಬಳಿಕ ಟಾಕ್ಸಿಕ್‌ನಲ್ಲಿ ಅಬ್ಬರಿಸಲು ಸಿದ್ಧವಾಗುತ್ತಿದ್ದಾರೆ. ಟಾಕ್ಸಿಕ್ ಸೆಟ್ಟೇರಿದಾಗಿನಿಂದಲೂ ಕುತೂಹಲ ಮೂಡಿಸುತ್ತಿದೆ. ಈ ಹಿಂದೆಯೇ ಬಿಡುಗೆಯಾದ ಯಶ್ ಫಸ್ಟ್‌ಲುಕ್ ಪೋಸ್ಟರ್ ಹಾಗೂ ಗ್ಲಿಂಪ್ಸ್ ಅದ್ದೂರಿಯಾಗಿದ್ದು, ಇದನ್ನು ನೋಡಿ ಸಿನಿಪ್ರಿಯರು ಬಹುಪರಾಕ್ ಎಂದಿದ್ದಾರೆ. ಟಾಕ್ಸಿಕ್ ಪ್ಯಾನ್ ಇಂಡಿಯಾ ಮಾತ್ರವಲ್ಲ ಪ್ಯಾನ್ ವರ್ಲ್ಡ್ ಸಿನಿಮಾವಾಗಿ ಮೂಡಿಬರುತ್ತಿದೆ. ಕನ್ನಡದ ಜತೆಗೆ ಇಂಗ್ಲೀಷ್‌ನಲ್ಲಿಯೂ ಚಿತ್ರವನ್ನು ಚಿತ್ರೀಕರಿಸಲಾಗುತ್ತಿದೆ. ಇತ್ತ ಟಾಕ್ಸಿಕ್ ನೋಡಿ ಹಾಲಿವುಡ್ ಮಂದಿಯೇ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ನಟ ಅಕ್ಷಯ್ ಒಬೆರಾಯ್ ಕೂಡ ಟಾಕ್ಸಿಕ್ ಚಿತ್ರದಲ್ಲಿ ನಟಿಸುತ್ತಿದ್ದಾರೆ, ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದ ಅಕ್ಷಯ್, ಯಶ್ ಅವರ ಶ್ರಮವನ್ನು ಮೆಚ್ಚಿದ್ದರು, ಅವರ ಡೆಡಿಕೇಶನ್ ನೋಡಿಕೊಂಡಾಡಿದ್ದರು. ಟಾಕ್ಸಿಕ್ ಸಿನಿಮಾ ಭಾರತದದಲ್ಲಿ ಮಾತ್ರವಲ್ಲ ಹಾಲಿವುಡ್‌ನಲ್ಲಿಯೂ ಸದ್ದು ಮಾಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದರು. ಅಂದರೆ ಅಷ್ಟು ಯೋಜನಾಬದ್ಧವಾಗಿ ಸಿನಿಮಾ ಮೂಡಿಬರುತ್ತಿದೆ ಎಂದು ಅಕ್ಷಯ್ ಮೆಚ್ಚಿಕೊಂಡಾಡಿದ್ದರು. ಟಾಕ್ಸಿಕ್‌ನಲ್ಲಿ ಥ್ರಿಲ್ಲಿಂಗ್ ಜತೆಗೆ ಭರ್ಜರಿ ಆ್ಯಕ್ಷನ್ ಸನ್ನಿವೇಶಗಳಿದ್ದು, ಈ ಚಿತ್ರಕ್ಕೆ ಹಾಲಿವುಡ್‌ನ ಖ್ಯಾತ ಸಾಹಸ ನಿರ್ದೇಶಕ ಜೆಜೆಪೆರ್ರಿ, ಸಾಹಸ ನಿರ್ದೇಶನ ಮಾಡುತ್ತಿದ್ದಾರೆ. ಚಿತ್ರದಲ್ಲಿ ಹೈವೋಲ್ಟೇಜ್ ಸಾಹಸ ದೃಶ್ಯಗಳಿದ್ದು, ದೊಡ್ಡ ತಂಡವೇ ಸಾಹಸ ದೃಶಗಳನ್ನು ಚಿತ್ರೀಕರಿಸಿಕೊಳ್ಳುತ್ತಿದೆ. ಜೆಜೆಪೆರ್ರಿ ಕೂಡ ಟಾಕ್ಸಿಕ್ ಬಗ್ಗೆ ಅಪಾರ ನಿರೀಕ್ಷೆ ಹೊಂದಿದ್ದು, ಸಿನಿಮಾ ನೋಡಲು ತಾವು ಕಾತರರಾಗಿರುವುದಾಗಿ ಹೇಳಿದ್ದಾರೆ. ಡ್ರಗ್ಸ್ ಮಾಫಿಯಾ ಕುರಿತ ಕಥೆ ಇಲ್ಲಿದ್ದು, ಎಪ್ಪತ್ತು ಎಂಬತ್ತರ ದಶಕದಲ್ಲಿ ಸಿನಿಮಾ ಸಾಗಲಿದೆ. ಮಲೆಯಾಳಂ ಖ್ಯಾತ ನಿರ್ದೇಶಕಿ ಗೀತು ಮೋಹನ್‌ದಾಸ್ ಸಿನಿಮಾವನ್ನು ನಿರ್ದೇಶನ ಮಾಡುತ್ತಿದ್ದಾರೆ. ಬಾಲಿವುಡ್ ನಟಿ ಕಿಯಾರಾ ಅಡ್ವಾಣಿ, ನಯನಾ ತಾರಾ, ಹುಮಾ ಖುರೇಷಿ ಸೇರಿದಂತೆ ದೊಡ್ಡ ತಾರಾಬಳಗವೇ ಸಿನಿಮಾದಲ್ಲಿದೆ. ಟಾಕ್ಸಿಕ್ ಅದ್ದೂರಿ ವೆಚ್ಚದ ಸಿನಿಮಾವಾಗಿದ್ದು, ಕೆವಿಎನ್ ಪ್ರೊಕಡ್ಷನ್‌ನಲ್ಲಿ ನಿರ್ಮಾಣವಾಗುತ್ತಿದೆ. ಮುಂಬೈನಲ್ಲಿ ಬೀಡುಬಿಟ್ಟಿರುವ ಟಾಕ್ಸಿಕ್ ತಂಡ ಚಿತ್ರದ ಪ್ರಮುಖ ಸನ್ನಿವೇಶಗಳನ್ನು ಚಿತ್ರೀಕರಿಸಕೊಳ್ಳುತ್ತಿದೆ. ಟಾಕ್ಸಿಕ್ ಕನ್ನಡ, ಇಂಗ್ಲೀಷ್ ಜತೆಗೆ ಹಲವು ಭಾಷೆಗಳಲ್ಲಿ ತೆರೆಗೆ ಬರಲಿದೆ.

ಸುದೀಪ್ ಸಂಭ್ರಮ

ಕ್ರಿಸ್‌ಮಸ್‌ಗೆ ಮಾರ್ಕ್ ಫಿಕ್ಸ್

ಕಿಚ್ಚ ಸುದೀಪ್ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಈ ನಡುವೆಯೇ ಕಿಚ್ಚ ತಮ್ಮ ಸಿನಿಮಾಗಳ ಕುರಿತಂತೆ ಮಾಹಿತಿ ನೀಡಿದರು. ಸುದೀಪ್ ಬಿಲ್ಲ ರಂಗ ಭಾಷ ಸಿನಿಮಾದ ಜತೆಗೆ ಕೆ47 ಚಿತ್ರದಲ್ಲಿಯೂ ನಟಿಸುತ್ತಿದ್ದಾರೆ. ಸಿನಿಮಾದ ಆರಂಭದ ಸಮಯದಲ್ಲಿಯೇ ಚಿತ್ರ ಬಿಡುಗಡೆಯ ದಿನಾಂಕವನ್ನು ಘೋಷಿಸಿದ್ದರು. ಅಂತೆಯೇ ಕೆ47, ಡಿಸೆಂಬರ್ 25 ರ ಕ್ರಿಸ್‌ಮಸ್ ಹಬ್ಬದಂದು ತೆರೆಗೆ ಬರಲಿದೆ. ಇನ್ನು ಆ ದಿನವೇ ಅರ್ಜುನ್ ಜನ್ಯ ನಿರ್ದೇಶನದ 45 ಸಿನಿಮಾ ಕೂಡ ರಿಲೀಸ್ ಆಗುತ್ತಿದೆ. ಶಿವಣ್ಣ,

ಪ್ರತಿವರ್ಷ ನನ್ನ ಹುಟ್ಟುಹಬ್ಬದಂದು, ಅಪ್ಪ ಅಮ್ಮನ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಿದ್ದೆ. ಆದರೆ ಈಗ ಅಮ್ಮನಿಲ್ಲ. ಅಮ್ಮನಿಲ್ಲದೆ ಇರೋದು ತುಂಬಾ ಕಷ್ಟವಾಗುತ್ತಿದೆ. ಮನೆಯಲ್ಲಿ ನಾನು ಕೆಳಗೆ ಬರೋದೇ ಇಲ್ಲ, ಸದಾ ಮೇಲೆಯೇ ಇರುತ್ತೇನೆ. ಕೆಳಗೆ ಬಂದರೆ ದುಃಖ ಕಾಡುತ್ತದೆ. ಖಾಲಿ ಮನೆ, ಖಾಲಿ ಕುರ್ಚಿ ಎಲ್ಲವೂ ಬೇಸರ ತರಿಸುತ್ತದೆ.

ಉಪೇಂದ್ರ, ಹೀಗೆ ಮಲ್ಟಿಸ್ಟಾರ್ ಸಿನಿಮಾ ಇದಾಗಿದೆ. ಹೀಗಾಗಿ ದಿಗ್ಗಜರ ಚಿತ್ರಗಳು ಒಟ್ಟಿಗೆ ತೆರೆಗೆ ಬಂದರೆ ಬಾಕ್ಸ್ ಆಫೀಸ್‌ನಲ್ಲಿ ಕ್ಲಾಶ್ ಆಗಲಿದ್ದು, ಕಿಚ್ಚ ತಮ್ಮ ಚಿತ್ರ ಬಿಡುಗಡೆಯ ದಿನಾಂಕವನ್ನು ಮುಂದೂಡುತ್ತಾರೆ ಎನ್ನಲಾಗಿತ್ತು. ಆದರೆ ಸುದೀಪ್, ಕೆ47 ಸಿನಿಮಾ ಕ್ರಿಸ್‌ಮಸ್ ಹಬ್ಬಕ್ಕೆ ತೆರೆಗೆ ಬರೋದು ಫಿಕ್ಸ್ ಎಂದು ಹೇಳಿದ್ದಾರೆ. ಈ ಹಿಂದೆ ಮ್ಯಾಕ್ಸ್ ಸಿನಿಮಾವನ್ನು ನಿರ್ದೇಶನ ಮಾಡಿದ್ದ ವಿಜಯ್ ಕಾರ್ತಿಕೇಯನ್ ಕೆ47 ಚಿತ್ರಕ್ಕೂ ಆ್ಯಕ್ಷನ್ ಕಟ್ ಹೇಳಿದ್ದಾರೆ. ಅದ್ದೂರಿ ವೆಚ್ಚದ ಸಿನಿಮಾ ಇದಾಗಿದ್ದು ತಮಿಳುನಾಡಿನಲ್ಲಿ ಸಿನಿಮಾದ ಶೂಟಿಂಗ್ ನಡೆಯುತ್ತಿದೆ.

ಬರ್ತ್‌ಡೇಗೆ ಸರ್‌ಪ್ರೈಸ್

ಕಿಚ್ಚ ಸುದೀಪ್ ಅವರ ಹುಟ್ಟುಹಬ್ಬ ಈ ಬಾರಿ ವಿಶೇಷವಾಗಿರಲಿದೆ. ಕಿಚ್ಚನ ಹುಟ್ಟುಹಬ್ಬದ ಪ್ರಯುಕ್ತ ಅಭಿಮಾನಿಗಳಿಗೆ ಭರ್ಜರಿ ಉಡುಗೊರೆಯೂ ಸಿಗಲಿದೆ. ಸುದೀಪ್ ಅಭಿನಯದ ಕೆ47 ಚಿತ್ರದ ಟೈಟಲ್ ರಿವಿಲ್ ಆಗಲಿದೆ. ಅದರ ಜತೆಗೆ ಬಿಲ್ಲ ರಂಗ ಭಾಷ ಚಿತ್ರದ ಫಸ್ಟ್‌ಲುಕ್ ಪೋಸ್ಟರ್ ಕೂಡ ರಿಲೀಸ್ ಆಗಲಿದ್ದು, ಇದೆಲ್ಲದರ ಜತೆಗೆ ಬಿಗ್‌ಬಾಸ್ ಸೀಸನ್ 12ರ ಪ್ರೋಮೋ ಬಿಡುಗಡೆಯಾಗಲಿದೆ.

"ಪವರ್ ಫುಲ್ ಮಾರ್ಕ್

ಕಿಚ್ಚ ಸುದೀಪ್ ಅಭಿನಯದ 47 ನೇ ಸಿನಿಮಾದ ಟೈಟಲ್ ರಿವಿಲ್ ಆಗಿದ್ದು, ಮಾರ್ಕ್ ಶೀರ್ಷಿಕೆಯಲ್ಲಿ ಅದ್ದೂರಿಯಾಗಿ ಮೂಡಿಬರಲಿದೆ. ಮಾರ್ಕ್ ಆ್ಯಕ್ಷನ್ ಸಿನಿಮಾವಾಗಿದ್ದು ಕಿಚ್ಚ ಈ ಹಿಂದೆಂದೂ ಕಾಣದ ಹೊಸ ಗೆಟಪ್‌ನಲ್ಲಿ ಮಿಂಚಿದ್ದಾರೆ."

ಡೆವಿಲ್ ಸಿನಿಮಾಗೆ ಒಳ್ಳೆದಾಗಲಿ. ಎಲ್ಲರ ಕುಟುಂಬ, ಅಭಿಮಾನಿಗಳಿಗೆ ಅವರದ್ದೇ ಆದ ನೋವಿರುತ್ತದೆ. ಸರಕಾರ, ಕಾನೂನಿನ ಮುಂದೆ ನಾವು ಚಿಕ್ಕವರು. ಸೂರ್ಯ ಚಂದ್ರ ಎರಡು ಚೆಂದ, ಆದರೆ ಅದು ಆಯಾ ಜಾಗದಲ್ಲಿದ್ದರೆ ಚೆಂದ. ಯಾರದೋ ಮಾತು ಕೇಳಿ ಒಂದಾಗೋಕೆ ನಾನು ಮತ್ತು ದರ್ಶನ್ ಚಿಕ್ಕವರಲ್ಲ.

ಪೌರಾಣಿಕ ಪಾತ್ರ ಕಷ್ಟ

ನನಗೆ ಎಲ್ಲಾ ರೀತಿಯ ಪಾತ್ರಗಳನ್ನು ಮಾಡುವುದು ಖುಷಿ. ಆದರೆ ಪೌರಾಣಿಕ ಪಾತ್ರಗಳಲ್ಲಿ ನಟಿಸುವುದು ಕೊಂಚ ಕಷ್ಟ. ಯಾಕೆಂದರೆ ಪೌರಾಣಿಕ ಸಿನಿಮಾಗಳಲ್ಲಿ ಕುದುರೆ ಸವಾರಿ ಮಾಡಬೇಕಾಗುತ್ತದೆ, ಅದು ನನಗೆ ಭಯ. ನಾನು ಸಿನಿಮಾರಂಗಕ್ಕೆ ಬರುವ ಮೊದಲೇ ಕುದರೆ ಸವಾರಿ ಸೇರಿದಂತೆ ಎಲ್ಲವನ್ನೂ ಕಲಿತು ಬಂದಿದ್ದೆ. ತಮಿಳಿನ ಸಿನಿಮಾದ ಚಿತ್ರೀಕರಣ ನಡೆಯುತ್ತಿತ್ತು, ಅದರಲ್ಲಿ ಕುದುರೆ ಸವಾರಿಯ ಸನ್ನಿವೇಶವೂ ಇತ್ತು. ನಾನು ಕುದುರೆ ಮೇಲೆ ಕುಳಿತ್ತಿದ್ದೆ, ಈ ವೇಳೆ ಕುದುರೆ ರೊಚ್ಚಿಗೆದ್ದಿತು. ಪರಿಣಾಮ ನಾನು ಕೆಳಗೆ ಜಾರಿದೆ, ಕುದುರೆ ನನ್ನನ್ನು ಹಾಗೇ ಎಳೆದುಕೊಂಡು ಓಡಿತು. ಅಂದಿನಿಂದ ಕುದುರೆ, ಕುದುರೆಯ ಸವಾರಿ ಎಂದರೆ ಭಯ ಎನ್ನುತ್ತಾರೆ ಸುದೀಪ್.

ಒಂದು ದಿನದಲ್ಲಿ ನಾಲ್ಕು ಪ್ರದರ್ಶನಗಳಿರುತ್ತವೆ. ಹಾಗಾಗಿ ಜನ ಕನ್‌ಫ್ಯೂಸ್ ಆಗೊಲ್ಲ. ಅವರು ಯಾವ ಸಿನಿಮಾವನ್ನು ನೋಡಬೇಕು ಎಂದು ನಿರ್ಧರಿಸಿ ವೀಕ್ಷಿಸುತ್ತಾರೆ. ಹಾಗಾಗಿ ಸಿನಿಮಾಗಳು ಒಟ್ಟಿಗೆ ರಿಲೀಸ್ ಆದರೆ ಸಮಸ್ಯೆ ಇಲ್ಲ. ಎಲ್ಲರೂ ತಮ್ಮ ಸಿನಿಮಾಗಳಿಗೆ ಶ್ರಮವಹಿಸಿರುತ್ತಾರೆ, ಎಲ್ಲಾ ಸಿನಿಮಾಗಳಿಗೆ ಒಳ್ಳೆಯದಾಗಲಿ.

ಚಿಕ್ಕಣ್ಣನಿಗೆ ಕಂಕಣ ಭಾಗ್ಯ

ಹಾಸ್ಯ ನಟ ಚಿಕ್ಕಣ್ಣ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಂಡಾಗಲೆಲ್ಲ ಅವರಿಗೆ ಎದಿರಾಗುತ್ತಿದ್ದ ಪ್ರಶ್ನೆ, ನಿಮ್ಮ ಮದುವೆ ಯಾವಾಗ ಎಂಬುದು. ಅದಕ್ಕೆ ಈಗ ಉತ್ತರ ಸಿಕ್ಕಿದೆ. ಚಿಕ್ಕಣ್ಣನಿಗೆ ಕಂಕಣ ಭಾಗ್ಯ ಕೂಡಿಬಂದಿದೆ. ಹೌದು, ಚಿಕ್ಕಣ್ಣ, ಪಾವನಾ ಎಂಬುವವರನ್ನು ವಿವಾಹವಾಗಲು ನಿರ್ಧರಿಸಿದ್ದಾರೆ. ಈಗಾಗಲೇ ಇವರಿಬ್ಬರ ಮದುವೆಯ ಕುರಿತಂತೆ ಮಾತುಕತೆ ನಡೆದಿದ್ದು, ಮದುವೆಗೆ ಇಬ್ಬರ ಮನೆಯವರು ಸಮ್ಮತಿಸಿದ್ದಾರೆ. ಮಂಡ್ಯ ಜಿಲ್ಲೆಯ ಮಹದೇವಪುರ ಗ್ರಾಮದ ಪಾವನಾ ಉದ್ಯಮಿಯಾಗಿ ಗುರುತಿಸಿಕೊಂಡಿದ್ದಾರೆ. ಚಿಕ್ಕಣ್ಣ ಹಾಗೂ ಪಾವನಾ ಅವರ ನಿಶ್ಚಿತಾರ್ಥ ಶೀಘ್ರವೇ ನೆರವೇರಿಲಿದ್ದು, ಈ ವರ್ಷಾಂತ್ಯಕ್ಕೆ ವಿವಾಹ ಸಮಾರಂಭ ನೆರವೇರುವ ಸಾಧ್ಯತೆ ಇದೆ. ಕನ್ನಡದ ಬೇಡಿಕೆಯ ಹಾಸ್ಯ ನಟರಾಗಿರುವ ಚಿಕ್ಕಣ್ಣ, ಹಲವು ಕಾಮಿಡಿ ಶೋಗಳಲ್ಲಿ ಕಾಣಿಸಿಕೊಂಡು ಪ್ರೇಕ್ಷಕರನ್ನು ರಂಜಿಸಿದರು. ಯಶ್ ನಟನೆಯ ಕಿರಾತಕ ಚಿತ್ರದ ಮೂಲಕ ಸಿನಿಮಾರಂಗಕ್ಕೆ ಎಂಟ್ರಿಕೊಟ್ಟ ಚಿಕ್ಕಣ್ಣ, ಅದ್ಭುತ ಅಭಿನಯದ ಮೂಲಕ ಸಿನಿಪ್ರಿಯರ ಮನಗೆದ್ದರು. ಶಿವಣ್ಣ, ಸುದೀಪ್, ದರ್ಶನ್, ಪವರ್ ಸ್ಟಾರ್ ಪುನೀತ್, ರಾಜ್‌ಕುಮಾರ್ ಎಲ್ಲಾ ಸ್ಟಾರ್ ನಟರ ಸಿನಿಮಾಗಳಲ್ಲಿ ಅಭಿನಯಿಸಿರುವ ಚಿಕ್ಕಣ್ಣ, ಉಪಾಧ್ಯಕ್ಷ 2 ಚಿತ್ರದ ಮೂಲಕ ನಾಯಕನಾಗಿಯೂ ಬಣ್ಣಹಚ್ಚಿದರು. ಸದ್ಯ ಲಕ್ಷ್ಮಿಪುತ್ರ ಸಿನಿಮಾದಲ್ಲಿ ನಾಯಕನಾಗಿ ಅಭಿನಯಿಸುತ್ತಿದ್ದಾರೆ.

ಕಲ್ಯಾಣಿಗೆ ಒಲಿದ ಅದೃಷ್ಟ

ಕೂಲಿ ಸಿನಿಮಾದ ಕಲ್ಯಾಣಿ ಪಾತ್ರ ಎಲ್ಲರ ಅಚ್ಚುಮೆಚ್ಚಾಗಿದೆ, ಕಲ್ಯಾಣಿ ಪಾತ್ರ ಪವರ್ ಫಿಲ್ ಆಗಿ ಮೂಡಿಬಂದಿದೆ. ಕಲ್ಯಾಣಿಯಾಗಿ ಕಾಣಿಸಿಕೊಂಡ ರಚಿತಾ ರಾಮ್ ಆ ಪಾತ್ರಕ್ಕೆ ಜಿವತುಂಬಿ ನಟಿಸಿದರು. ಹಾಗಾಗಿ ಕಾಲಿವುಡ್‌ನಲ್ಲಿ ರಚ್ಚು, ಕಲ್ಯಾಣಿ ಅಂತಲೇ ಪ್ರಸಿದ್ಧಿ ಪಡೆದಿದ್ದಾರೆ. ಕೂಲಿಯ ಕಲ್ಯಾಣಿಗೆ ಈಗ ಅದೃಷ್ಟ ಒಲಿದಿದೆ. ನಿರ್ದೇಶಕ ಲೋಕೇಶ್ ಕನಕರಾಜ್ ಅಭಿನಯಿಸುತ್ತಿರುವ ಹೊಸ ಚಿತ್ರದಲ್ಲಿ ರಚ್ಚು ನಾಯಕಿಯಾಗಿ ಬಣ್ಣಹಚ್ಚಲಿದ್ದಾರೆ. ನಿರ್ದೇಶಕರಾಗಿ ಪ್ರಸಿದ್ಧಿ ಪಡೆದ, ಲೋಕೇಶ್ ಈಗ ನಾಯಕನಾಗಿಯೂ ಮಿಂಚಲು ಸಿದ್ಧವಾಗಿದ್ದಾರೆ. ಅರುಣ್ ಮಾತೇಶ್ವರನ್ ನಿರ್ದೇಶನದಲ್ಲಿ ಮೂಡಿಬರಲಿರುವ ಹೊಸ ಸಿನಿಮಾದಲ್ಲಿ ಲೋಕೇಶ್ ಹೀರೊ ಆಗಿ ಅಭಿನಯಿಸಲಿದ್ದಾರೆ. ಅದಕ್ಕಾಗಿ ತರಬೇತಿ ಪಡೆಯಲು ಮಲೇಷಿಯಾಗೂ ಹಾರಿದ್ದಾರೆ. ಸ್ಯಾಂಡಲ್‌ವುಡ್‌ನಲ್ಲಿ ಖ್ಯಾತಿ ಪಡೆದಿರುವ ರಚಿತಾ ಈಗ ಹೊಸ ಚಿತ್ರದ ಮೂಲಕ ತಮಿಳಿನಲ್ಲಿಯೂ ಕಮಾಲ್ ಮಾಡಲಿದ್ದಾರೆ. ಇದು ಹೈಬಜೆಟ್ ಸಿನಿಮಾವಾಗಿದ್ದು, ದಕ್ಷಿಣ ಭಾರತ ಸೇರಿದಂತೆ ವಿದೇಶದಲ್ಲಿಯೂ ಶೂಟಿಂಗ್ ನಡೆಯಲಿದೆ. ಇದು ಪ್ಯಾನ್ ಇಂಡಿಯಾ ಸಿನಿಮಾವಾಗಿ ನಿರ್ಮಾಣವಾಗಲಿದ್ದು, ಇನ್ನೇನು ಸಿನಿಮಾದ ಟೈಟಲ್ ರಿವಿಲ್ ಆಗಲಿದೆ. ಮುಂದಿನ ವರ್ಷಾಂತ್ಯಕ್ಕೆ ಚಿತ್ರ ರಿಲೀಸ್ ಆಗಲಿದೆ.